ಸೋಮವಾರ, ಆಗಸ್ಟ್ 2, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 214 | ಪುಟ 12

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ

ಫುಲ್ ಸ್ಟಾಕ್ ಡೆವಲಪರ್‌ಗೆ ಈಗ ಅವಕಾಶಗಳು ಹೇರಳವಾಗಿವೆ. ಪಿಯುಸಿ ನಂತರ ಇದಕ್ಕೆ ಬೇಕಾದ ಕೌಶಲಗಳಲ್ಲಿ ಪರಿಣತಿ ಪಡೆದುಕೊಂಡು ಅವಕಾಶ ಗಿಟ್ಟಿಸಬಹುದು



ಆಳ-ಅಗಲ
ಭಾರತದ ಬಗಲಲ್ಲಿ ಚೀನಾ ರೈಲು

ಕೋವಿಡ್: ಸಕ್ರಿಯ ಪ್ರಕರಣ ಏರಿಕೆ 8

ಈಗ ಬಳಸಿ ಬಿಸಾಡಿದ ಒಡೆದ ಮಡಕೆ: ಕಾಂಗ್ರೆಸ್ ವ್ಯಂಗ್ಯ 4

ಶಾಲೆ ತಕ್ಷಣ ಆರಂಭಿಸಿ: ರುಪ್ಸಾ ಆಗ್ರಹ 4

‘ಈಶ್ವರಪ್ಪಗೆ ವಿಆರ್‌ಎಸ್ ಕೊಡುತ್ತಿರುವ ಬಿಜೆಪಿ’ 4

ಸಂಕಷ್ಟ ಎದುರಾದರೆ ಬೆನ್ನಿಗೆ: ದೇವೇಗೌಡ • ಸಂಪುಟ ವಿಸ್ತರಣೆಗೆ ಮುನ್ನವೇ ಹೊಸ ಆಟ?

ಬೊಮ್ಮಾಯಿಗೆ ಗೌಡರ ಬಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರಕ್ಕೆ ಸಂಕಷ್ಟ ಎದುರಾದರೆ ತಮ್ಮ ಪಕ್ಷ ಬೆಂಬಲಕ್ಕೆ ನಿಲ್ಲಲಿದೆ’ ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ. ದೇವೇಗೌಡ ಘೋಷಿಸಿದರು. ಸಂಪುಟ ವಿಸ್ತರಣೆಯ ಕಸರತ್ತಿನ ನಡುವೆಯೇ ಈ ಹೇಳಿಕೆ ಹೊರಬಿದ್ದಿರುವುದು ಬಿಜೆಪಿ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಎಚ್‌.ಡಿ. ದೇವೇಗೌಡ ಅವರ ನಿವಾಸಕ್ಕೆ ಭಾನುವಾರ ಬೆಳಿಗ್ಗೆ ಭೇಟಿ ನೀಡಿದ ಬಸವರಾಜ ಬೊಮ್ಮಾಯಿ, ಗೌಡರ ಕಾಲಿಗೆ ಎರಗಿ ಆಶೀರ್ವಾದ ಪಡೆದರಲ್ಲದೇ, ಮಾತುಕತೆಯನ್ನೂ ನಡೆಸಿದರು. ಜೆಡಿಎಸ್ ಶಾಸಕ ಎಚ್‌.ಡಿ. ರೇವಣ್ಣ ಮತ್ತು ಬಿಜೆಪಿ ಶಾಸಕ ವಿ. ಸೋಮಣ್ಣ ಈ ವೇಳೆ ಜತೆಗಿದ್ದರು. ಆ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಗೌಡರು, ಬೊಮ್ಮಾಯಿ ನೇತೃತ್ವದ ಸರ್ಕಾರಕ್ಕೆ ಅನಿವಾರ್ಯ ಸಂದರ್ಭಗಳಲ್ಲಿ ‘ಸಹಕಾರ’ ನೀಡುವ ಭರವಸೆಯನ್ನು ಪ್ರಕಟಿಸಿದರು.

ಬಿ.ಎಸ್‌. ಯಡಿಯೂರಪ್ಪ ಅವರು ರಾಜೀನಾಮೆ ನೀಡುವ ಮೊದಲು ಹೂಡಿದ್ದ ಆಟದ ವೇಳೆ, ಬಿಜೆಪಿಯ ದೆಹಲಿ ಮಟ್ಟದ ಪ್ರಮುಖ ನಾಯಕರೊಬ್ಬರು ಗೌಡರನ್ನು ಭೇಟಿಯಾಗಿ ಚರ್ಚೆ ನಡೆಸಿದ್ದರು ಎಂಬ ಸುದ್ದಿ ಕೆಲ ದಿನಗಳಿಂದ ಹಬ್ಬಿತ್ತು. ಯಡಿಯೂರಪ್ಪ ಒಂದು ವೇಳೆ ರಾಜೀನಾಮೆಗೆ ನಿರಾಕರಿಸಿ, ವರಿಷ್ಠರ ವಿರುದ್ಧವೇ ಬಂಡಾಯವೆದ್ದು ಪಕ್ಷ ಒಡೆಯಲು ಮುಂದಾದರೆ ಜೆಡಿಎಸ್ ಬೆಂಬಲದಲ್ಲಿ ಬಿಜೆಪಿ ಸರ್ಕಾರ ರಚನೆಗೆ ಸಿದ್ಧತೆಗಳು ನಡೆದಿವೆ ಎಂಬ ಮಾಹಿತಿ ಬಿಜೆಪಿ ಪಡಸಾಲೆಯಲ್ಲಿ ಹರಿದಾಡುತ್ತಿತ್ತು. ಬೊಮ್ಮಾಯಿ–ಗೌಡರ ಭೇಟಿ ಹಾಗೂ ನಂತರದ ಬೆಳವಣಿಗೆಗಳು ಆ ಸುದ್ದಿಗಳನ್ನು ದೃಢೀಕರಿಸುವಂತೆ ಇವೆ ಎಂಬ ಚರ್ಚೆ ಕಮಲ ಪಾಳಯದಲ್ಲಿ ಈಗ ಗಂಭೀರ ವಿಷಯವಾಗಿ ಮಾರ್ಪಟ್ಟಿದೆ.

‘ಮುಖ್ಯಮಂತ್ರಿ ಬದಲಾವಣೆಗೂ ಮೊದಲೇ ಬೊಮ್ಮಾಯಿ ನಿವಾಸಕ್ಕೆ ಭೇಟಿ ನೀಡಿದ್ದ ಜೆಡಿಎಸ್ ಶಾಸಕ ಎಚ್‌.ಡಿ. ರೇವಣ್ಣ ಕೆಲ ಹೊತ್ತು ಚರ್ಚಿಸಿದ್ದರು. ಬೊಮ್ಮಾಯಿ ಅವರು ಮುಖ್ಯಮಂತ್ರಿಯಾದ ಬಳಿಕ ಯಡಿಯೂರಪ್ಪ ಹೊರತಾಗಿ ಬಿಜೆಪಿಯ ಯಾವುದೇ ನಾಯಕರ ಮನೆಗೆ ಭೇಟಿ ನೀಡಿಲ್ಲ. ಆದರೆ, ದೇವೇಗೌಡರನ್ನು ಭೇಟಿ ಮಾಡಿ ಚರ್ಚಿಸಿದ್ದಾರೆ. ಬಿಜೆಪಿ ವರಿಷ್ಠರ ಸೂಚನೆಯಂತೆಯೇ ಎಲ್ಲವೂ ನಡೆದಿದೆ’ ಎಂಬ ವ್ಯಾಖ್ಯಾನವೂ ಬಿಜೆಪಿಯೊಳಗೆ ನಡೆಯುತ್ತಿದೆ.

ಪೂರ್ಣ ಸಹಕಾರದ ಭರವಸೆ: ‘2023ಕ್ಕೂ ಮೊದಲೇ ವಿಧಾನಸಭಾ ಚುನಾವಣೆ ಎದುರಿಸಲು ಯಾರೂ ಸಿದ್ಧರಿಲ್ಲ. ಅದಕ್ಕೂ ಮುಂಚೆ ಚುನಾವಣೆಗೆ ಹೋಗಬೇಕು ಎಂಬ ಹೆಬ್ಬಯಕೆ ನಮಗೇನೂ ಇಲ್ಲ. ಈ ಸರ್ಕಾರ ಯಾವುದಾದರೂ ರೀತಿಯ ತೊಂದರೆಗೆ ಸಿಲುಕಿದರೆ ಸಹಕಾರ ನೀಡಲು ನಾವು ಸಿದ್ಧ’ ಎಂದು ದೇವೇಗೌಡ ಹೇಳಿದರು.

4ನೇ ಪುಟ ನೋಡಿ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ. ದೇವೇಗೌಡ ಅವರನ್ನು ಭಾನುವಾರ ಭೇಟಿಯಾಗಿ ಮಾತುಕತೆ ನಡೆಸಿದರು

ಸಹಕಾರದ ಭರವಸೆ: ಬೊಮ್ಮಾಯಿ

ದೇವೇಗೌಡರ ಭೇಟಿ ಬಳಿಕ ಪತ್ರಕರ್ತರ ಜತೆ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ‘ಅವರು ಹಿರಿಯರು ಮತ್ತು ಅನುಭವಿ ರಾಜಕಾರಣಿ. ರಾಜ್ಯದ ಹಿತಾಸಕ್ತಿಯ ವಿಚಾರದಲ್ಲಿ ನಾನು ಮತ್ತು ಅವರು ಯಾವಾಗಲೂ ಒಂದೇ ನಿಲುವು ಹೊಂದಿದವರು. ಆಶೀರ್ವಾದ ಪಡೆಯುವುದಕ್ಕಾಗಿ ಭೇಟಿಮಾಡಿದ್ದೆ. ರಾಜ್ಯದ ಹಿತಾಸಕ್ತಿಯ ವಿಚಾರದಲ್ಲಿ ಪೂರ್ಣ ಸಹಕಾರದ ಭರವಸೆಯನ್ನು ಅವರು ನೀಡಿದ್ದಾರೆ’ ಎಂದು ತಿಳಿಸಿದರು.

ಮುಖ್ಯಮಂತ್ರಿ ದಿಢೀರ್ ದೆಹಲಿಗೆ

ಬೆಂಗಳೂರು: ಮುಖ್ಯಮಂತ್ರಿ ಬೊಮ್ಮಾಯಿ ಭಾನುವಾರ ರಾತ್ರಿ ದಿಢೀರನೆ ದೆಹಲಿಗೆ ತೆರಳಿದ್ದು, ಸಂಪುಟ ವಿಸ್ತರಣೆ ಪ್ರಕ್ರಿಯೆ ಒಂದೆರಡು ದಿನಗಳಲ್ಲಿ ನಡೆಯುವ ಸಾಧ್ಯತೆ ಇದೆ. ಯಾರಿಗೆಲ್ಲಾ ಸಂಪುಟದಲ್ಲಿ ಅವಕಾಶ ದೊರಕಬಹುದು ಎಂಬ ಕುತೂಹಲ ಗರಿಗೆದರಿದೆ.

ಪ್ರಮಾಣವಚನ ಸ್ವೀಕರಿಸಿದ ಬಳಿಕ ದೆಹಲಿಗೆ ತೆರಳಿ ವರಿಷ್ಠರನ್ನು ಭೇಟಿ ಮಾಡಿದ್ದ ಬೊಮ್ಮಾಯಿ, ಶನಿವಾರ ಸಂಜೆಯಷ್ಟೇ ಬೆಂಗಳೂರಿಗೆ ಮರಳಿದ್ದರು. 24 ಗಂಟೆಗಳಲ್ಲೇ ಪುನಃ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಜತೆ ದೆಹಲಿಗೆ ತೆರಳಿದ ಅವರು, ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್. ಸಂತೋಷ್ ಜೊತೆ ತಡರಾತ್ರಿವರೆಗೂ ಚರ್ಚೆ ನಡೆಸಿದರು. ಪಕ್ಷದ ಅಧ್ಯಕ್ಷ ಜೆ.ಪಿ. ನಡ್ಡಾ ಅವರನ್ನು ಸೋಮವಾರ ಬೆಳಿಗ್ಗೆ ಭೇಟಿ ಮಾಡಿ, ಸಚಿವರ ಪಟ್ಟಿಗೆ ಒಪ್ಪಿಗೆ ಪಡೆದು ಬೊಮ್ಮಾಯಿ ಅವರು ಸಂಜೆ ವಾಪಸ್ ಬೆಂಗಳೂರಿಗೆ ಬರುವ ಸಾಧ್ಯತೆ ಇದೆ. ಹಿರಿಯ ಶಾಸಕರಾದ ಗೋವಿಂದ ಕಾರಜೋಳ, ಆರ್. ಅಶೋಕ ಮತ್ತು ಬಿ. ಶ್ರೀರಾಮುಲು ಅವರಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡಲಾಗುತ್ತದೆ ಎಂಬ ಮಾಹಿತಿ ಬಿಜೆಪಿ ಶಾಸಕಾಂಗ ಪಕ್ಷದ ಸಭೆ ನಡೆದ ದಿನವೇ ಪಕ್ಷದ ಮೂಲಗಳಿಂದ ಹೊರಬಿದ್ದಿತ್ತು.

4ನೇ ಪುಟ ನೋಡಿ

ಬಿಎಸ್‌ವೈ ಆಪ್ತ ಶಾಖೆಯ ಸಿಬ್ಬಂದಿಯೂ ಹೊರಗೆ

ಬೆಂಗಳೂರು: ಯಡಿಯೂರಪ್ಪ ಅವರ ಅವಧಿಯಲ್ಲಿ ಮುಖ್ಯಮಂತ್ರಿಯವರ ಸಚಿವಾಲಯದಲ್ಲಿ ಆಯಕಟ್ಟಿನ ಹುದ್ದೆಗಳಲ್ಲಿದ್ದ 19 ಮಂದಿಯನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಿ ಶನಿವಾರ ಆದೇಶ ಹೊರಡಿಸಲಾಗಿದೆ.

ತಮ್ಮೊಂದಿಗೆ ಅತ್ಯಂತ ನಿಕಟವಾಗಿದ್ದ ಹಲವರನ್ನು ಯಡಿಯೂರಪ್ಪ ಅವರು ಮುಖ್ಯಮಂತ್ರಿ ಸಚಿವಾಲಯಕ್ಕೆ ನೇಮಿಸಿಕೊಂಡಿದ್ದರು. ಯಡಿಯೂರಪ್ಪ ಅವರ ಮಗ ಬಿ.ವೈ. ವಿಜಯೇಂದ್ರ ಅವರ ಆಪ್ತರೂ ಹಲವು ಮಂದಿ ಸಚಿವಾಲಯದಲ್ಲಿದ್ದರು. ಬಹುತೇಕ ಎಲ್ಲರನ್ನೂ ಸಚಿವಾಲಯದಿಂದ ಹೊರ ಕಳುಹಿಸುವ ಆದೇಶ ಹೊರಡಿಸಲಾಗಿದೆ.

ಮುಖ್ಯಮಂತ್ರಿಯವರ ಕಾರ್ಯದರ್ಶಿಯಾಗಿದ್ದ ಐಎಎಸ್ ಅಧಿಕಾರಿ ಡಾ.ಎಸ್. ಸೆಲ್ವಕುಮಾರ್ ಅವರನ್ನು ಕೌಶಲ ಅಭಿವೃದ್ಧಿ ಮತ್ತು ಜೀವನೋಪಾಯ ಇಲಾಖೆಯ ಕಾರ್ಯದರ್ಶಿ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

4ನೇ ಪುಟ ನೋಡಿ

ಸಿಂಧುಗೆ ಒಲಿಂಪಿಕ್ ಪದಕ ‘ಡಬಲ್’

ಟೋಕಿಯೊ (ಪಿಟಿಐ): ಭಾರತದ ಪಿ.ವಿ. ಸಿಂಧು ಸತತ ಎರಡು ಒಲಿಂಪಿಕ್ ಕೂಟಗಳಲ್ಲಿ ಪದಕ ಜಯಿಸಿದ ಭಾರತದ ಮೊದಲ ಮಹಿಳಾ ಕ್ರೀಡಾಪಟುವೆಂಬ ಹೆಗ್ಗಳಿಕೆಗೆ ಪಾತ್ರರಾದರು.

ಭಾನುವಾರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಅವರು ಕಂಚಿನ ಪದಕ ಜಯಿಸಿದರು. 2016ರ ರಿಯೊ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಜಯಿಸಿದ್ದರು. ಈ ಸಾಧನೆ ಮಾಡಿದ ಭಾರತದ ದ್ವಿತೀಯ ಕ್ರೀಡಾಪಟುವಾಗಿದ್ದಾರೆ. ಕುಸ್ತಿಯಲ್ಲಿ ಸುಶೀಲ್ ಕುಮಾರ್ ‘ಪದಕ ಡಬಲ್’ ಸಾಧನೆ ಮಾಡಿದ್ದರು.

ಚೆನ್ ಯುಫಿ (ಚೀನಾ)	ಚಿನ್ನ
ತೈಜು ಯಿಂಗ್ (ಚೀನಾ ತೈಪೆ)	ಬೆಳ್ಳಿ

ಚಿನ್ನದ ಪದಕ ವಿಜೇತೆ ಚೀನಾದ ಚೆನ್ ಯೂಫಿ

ಬೆಳ್ಳಿ ಪದಕ ವಿಜೇತೆ ಚೀನಾ ತೈಪೆಯ ತೈಜು ಯಿಂಗ್

ಗೇಮ್ ವಿವರ

ಪಿ.ವಿ.ಸಿಂಧು (ಭಾರತ)	21	21
ಹೀ ಬಿಂಗ್‌ಜಿಯಾವೊ (ಚೀನಾ)	13	15
ಪಂದ್ಯದ ಅವಧಿ:	53 ನಿಮಿಷ	

ಒಲಿಂಪಿಕ್ಸ್ ಸಾಧನೆ

ವರ್ಷ	ಸ್ಥಳ	ಪದಕ
*2016	ರಿಯೊ ಡಿ ಜನೈರೊ	ಬೆಳ್ಳಿ
*2020	ಟೋಕಿಯೊ	ಕಂಚು

ಪಿ.ವಿ. ಸಿಂಧು

ಹಾಕಿ: ಭಾರತ ತಂಡ 3-1 ಗೋಲುಗಳಿಂದ ಬ್ರಿಟನ್ ತಂಡವನ್ನು ಸೋಲಿಸಿ, ಒಲಿಂಪಿಕ್ಸ್ ಹಾಕಿ ಪುರುಷರ ವಿಭಾಗದ ಸೆಮಿಫೈನಲ್ ಪ್ರವೇಶಿಸಿತು. ಈ ಸಾಧನೆ 49 ವರ್ಷಗಳ ನಂತರ ಸಾಧ್ಯವಾಗಿದೆ. 1980ರಲ್ಲಿ (ಮಾಸ್ಕೊ) ಚಿನ್ನ ಗೆದ್ದಿದ್ದರೂ ಆಗ ನಾಕೌಟ್ ಇರಲಿಲ್ಲ.

ಗುರ್ಜಂತ್ ಸಿಂಗ್

‘ಇ-ರುಪಿ’ ಇಂದು ಬಿಡುಗಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರವು ಅಭಿವೃದ್ಧಿಪಡಿಸಿರುವ ‘ಇ-ರುಪಿ’ಯನ್ನು (E-RUPI) ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಬಿಡುಗಡೆ ಮಾಡಲಿದ್ದಾರೆ.

ಈ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ಸರಣಿ ಟ್ವೀಟ್ ಮಾಡಿದ್ದಾರೆ. ‘ಡಿಜಿಟಲ್ ತಂತ್ರಜ್ಞಾನವು ಜನರ ಜೀವನವನ್ನು ಹಲವು ರೀತಿಯಲ್ಲಿ ಬದಲಿಸಿದೆ. ಜೀವನ ನಿರ್ವಹಣೆಯನ್ನು ಸರಳಗೊಳಿಸಿದೆ. ಭವಿಷ್ಯದ ಪಾವತಿ ರೂಪಗಳಲ್ಲಿ ಒಂದಾದ ಇ-ರುಪಿಯನ್ನು ಆಗಸ್ಟ್ 2ರ ಸಂಜೆ 4.30ಕ್ಕೆ ಬಿಡುಗಡೆ ಮಾಡಲಿದ್ದೇನೆ. ಇ-ರುಪಿಯು ತನ್ನ ಬಳಕೆದಾರರಿಗೆ ಹಲವು ರೀತಿಯಲ್ಲಿ ನೆರವಾಗಲಿದೆ’ ಎಂದು ಅವರು ಟ್ವೀಟ್ ಮಾಡಿದ್ದಾರೆ.

‘ಇ-ರುಪಿಯು ನಗದುರಹಿತ ಮತ್ತು ಸ್ಪರ್ಶರಹಿತ ಡಿಜಿಟಲ್ ಪಾವತಿಯಾಗಿದೆ. ಸೇವಾದಾರರನ್ನು ಮತ್ತು ಬಳಕೆದಾರರನ್ನು ಡಿಜಿಟಲ್ ರೂಪದಲ್ಲಿ ಸಂಪರ್ಕಿಸುತ್ತದೆ. ಹಲವು ಕಲ್ಯಾಣ ಕಾರ್ಯಕ್ರಮಗಳನ್ನು ಫಲಾನುಭವಿಗಳಿಗೆ ಯಾವುದೇ ಲೋಪವಿಲ್ಲದೆ ತಲುಪಿಸಲು ನೆರವಾಗುತ್ತದೆ’ ಎಂದು ಅವರು ಟ್ವೀಟ್ ಮಾಡಿದ್ದಾರೆ.

ಇನ್ನೊಂದು ಸುದ್ದಿ 9

ರಾಜ್ಯ ಕೋವಿಡ್ ಅಂಕಿ–ಅಂಶ

29,06,999	ಒಟ್ಟು ಸೋಂಕಿತರು (29,05,124 ನಿನ್ನೆಯ ವಿವರ)
24,144	ಸಕ್ರಿಯ ಪ್ರಕರಣಗಳು
28,46,244	ಗುಣಮುಖರಾದವರು
36,587	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	1,875
ಗುಣಮುಖ	1,502
ಸಾವು	25

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಪೆಗಾಸಸ್: ಸುಪ್ರೀಂ ಕೋರ್ಟ್‌ನಲ್ಲಿ ಆಗಸ್ಟ್ 5ರಂದು ವಿಚಾರಣೆ 8

ಇಂದಿನ ಪಾಡ್‌ಕಾಸ್ಟ್ ವಿಶೇಷ
ವಚನವಾಣಿ
ಕನ್ನಡ ಧ್ವನಿ
ಪ್ರತೀ ದಿನ: ದಿನದ ಸೂಕ್ತಿ, ಸಂಪಾದಕೀಯ, ಪ್ರಚಲಿತ
Prajavani.net/podcast

6 ಜಿಲ್ಲೆಯಲ್ಲಷ್ಟೇ ಶೇ 50 ಮಂದಿಗೆ ಲಸಿಕೆ

• ವರುಣ ಹೆಗಡೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಲಸಿಕೆ ವಿತರಣಾ ಅಭಿಯಾನವು ಪ್ರಾರಂಭವಾಗಿ ಆರೂವರೆ ತಿಂಗಳು ಕಳೆದರೂ ಒಂದು ಡೋಸ್ ಲಸಿಕೆ ಪಡೆದವರ ಪ್ರಮಾಣ 12 ಜಿಲ್ಲೆಗಳಲ್ಲಿ ಶೇ 40ಕ್ಕಿಂತ ಕಡಿಮೆಯಿದೆ.

ಅಧಿಕ ಸಂಖ್ಯೆಯಲ್ಲಿ ಸಾವು–ನೋವಿಗೆ ಕಾರಣವಾಗಿದ್ದ ಕೋವಿಡ್ ಎರಡನೇ ಅಲೆಯು ಒಂದು ತಿಂಗಳಿಂದೀಚೆಗೆ ನಿಯಂತ್ರಣಕ್ಕೆ ಬಂದಿದೆ. ಆದರೆ, ಈಗ ನೆರೆಯ ರಾಜ್ಯ ಕೇರಳದಲ್ಲಿ ಏರುಗತಿ ಪಡೆದಿದೆ. ರಾಜ್ಯದಲ್ಲಿ ಮೂರನೇ ಅಲೆಯು ಅಕ್ಟೋಬರ್ ಅಥವಾ ನವೆಂಬರ್ ತಿಂಗಳಲ್ಲಿ ಕಾಣಿಸಿಕೊಳ್ಳುವ ಬಗ್ಗೆ ಲೆಕ್ಕಾಚಾರ ಹಾಕಿದ್ದ ವೈದ್ಯಕೀಯ ತಜ್ಞರು, ಆ ವೇಳೆಗೆ ಶೇ 70ರಷ್ಟು ಮಂದಿಗೆ ಕೋವಿಡ್ ಲಸಿಕೆ ವಿತರಿಸಿರಬೇಕು ಎಂದು ಸಲಹೆ ಕೊಟ್ಟಿದ್ದರು.

ಪುರುಷರು-ಮಹಿಳೆಯರು ಪಡೆದ ಲಸಿಕೆಯ ಡೋಸ್‌ಗಳು



8ನೇ ಪುಟ ನೋಡಿ

ಪ್ರವಾಹ: ತುರ್ತು ಕಾಮಗಾರಿಗೆ ₹ 660 ಕೋಟಿ- ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರವಾಹದಿಂದ ಸಂತ್ರಸ್ತರಾದವರಿಗೆ ಯಡಿಯೂರಪ್ಪ ನೇತೃತ್ವದ ಸರ್ಕಾರದ ಅವಧಿಯಲ್ಲಿ ನೀಡುತ್ತಿದ್ದ ಮಾದರಿಯಲ್ಲಿಯೇ ಪರಿಹಾರ ನೀಡಲಾಗುವುದು. ಪ್ರವಾಹ ಹಾನಿ ಮತ್ತು ಬೆಳೆಹಾನಿ ಸಮೀಕ್ಷೆಗೆ ಕೇಂದ್ರ ತಂಡ ಕಳುಹಿಸುವಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಪತ್ರ ಬರೆಯಲಾಗಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ನೆರೆ ಸಂತ್ರಸ್ತರಿಗೆ ಪರಿಹಾರ ನೀಡುವ ಕುರಿತು ಆರ್ಥಿಕ ಇಲಾಖೆಯ ಅಧಿಕಾರಿಗಳ ಜೊತೆ ಗೃಹ ಕಚೇರಿ ಕೃಷ್ಣಾದಲ್ಲಿ ಭಾನುವಾರ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, ‘ತುರ್ತು ಕಾಮಗಾರಿಗೆ ₹ 660 ಕೋಟಿ ಬಿಡುಗಡೆ ಮಾಡಲು ಮತ್ತು ಮನೆ ಕುಸಿತ, ಬೆಳೆ ನಾಶ ಸಮೀಕ್ಷೆಯನ್ನು 15 ದಿನಗಳ ಒಳಗೆ ಮಾಡಲು ಸೂಚಿಸಲಾಗಿದೆ’ ಎಂದರು.

‘ಕೃಷ್ಣಾ ನದಿಪಾತ್ರ, ಬೆಳಗಾವಿ, ಉತ್ತರಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಪ್ರವಾಹದಿಂದ ವಸತಿ ಪ್ರದೇಶ, ಗದ್ದೆಗಳಲ್ಲಿ ನೀರು ನಿಂತಿದೆ. ಅದು ಇಳಿಯಬೇಕಿದೆ. ಮಳೆ, ಪ್ರವಾಹದಿಂದ ಹಾನಿಗೆ ಒಳಗಾದ ಸಂಪರ್ಕ ರಸ್ತೆ, ಸೇತುವೆಗಳ ದುರಸ್ತಿಗೆ ತಕ್ಷಣ ₹ 510 ಕೋಟಿ ಬಿಡುಗಡೆ ಮಾಡಲಾಗುವುದು’ ಎಂದು ಹೇಳಿದರು.

8ನೇ ಪುಟ ನೋಡಿ

ಚಿನಕುರಳಿ
ಪ್ರಕಾಶ್ ಶೆಟ್ಟಿ

ಮಂಡ್ಯ, ಮೈಸೂರು ಜಿಲ್ಲೆಗಳಲ್ಲಿ ಗಿರಣಿ ಮಾಲೀಕರ ವಿರುದ್ಧ ಎಫ್‌ಐಆರ್

ಗಿರಣಿಗಳಿಂದಲೇ ಎಂಎಸ್‌ಪಿ ಭತ್ತ ನಾಪತ್ತೆ!

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಬೆಂಬಲ ಬೆಲೆ ಯೋಜನೆ (ಎಂಎಸ್‌ಪಿ) ಅಡಿಯಲ್ಲಿ ಖರೀದಿಸಿ ದಾಸ್ತಾನು ಮಾಡಿದ್ದ ಭತ್ತ ಗಿರಣಿಗಳಿಂದಲೇ ಕಳ್ಳಸಾಗಣೆ ಆಗುತ್ತಿರುವುದು ಬಯಲಿಗೆ ಬಂದಿದೆ. 22,285 ಕ್ವಿಂಟಲ್ ಎಂಎಸ್‌ಪಿ ಭತ್ತ ನಾಪತ್ತೆ ಸಂಬಂಧ ಮಂಡ್ಯ ಜಿಲ್ಲೆಯ ಪಾಂಡವಪುರದಲ್ಲಿ ದಾಖಲಾಗಿರುವ ಪ್ರಕರಣ ಆಧರಿಸಿ, ರಾಜ್ಯದಾದ್ಯಂತ ತನಿಖೆ ನಡೆಸಲು ಆಹಾರ ಇಲಾಖೆಯ ತನಿಖಾ ದಳ ಮುಂದಾಗಿದೆ.

ರಾಜ್ಯ ಆಹಾರ ಮತ್ತು ನಾಗರಿಕ ಪೂರೈಕೆ ನಿಗಮ ಹಾಗೂ ತಾಲ್ಲೂಕು ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘಗಳ (ಟಿಎಪಿಸಿಎಂಎಸ್) ಸಗಟು ಉಗ್ರಾಣಗಳಿಂದ ಪಡಿತರ ಧಾನ್ಯ ಕಳ್ಳಸಾಗಣೆ ಹೆಚ್ಚಿರುವುದು, ಗಿರಣಿಗಳಿಂದ ಸಗಟು ಗೋದಾಮುಗಳಿಗೆ ಎಂಎಸ್‌ಪಿ ಅಕ್ಕಿ ಸಾಗಣೆಯಲ್ಲಿನ ಅಕ್ರಮದ ಬೆನ್ನಲ್ಲೇ ಗಿರಣಿಗಳಿಂದ ಭತ್ತವೂ ನಾಪತ್ತೆಯಾಗುತ್ತಿರುವುದು ಬಯಲಾಗಿದೆ. ಕೆಲವೆಡೆ ಅಕ್ಕಿ ಗಿರಣಿಗಳಲ್ಲೇ ಪಡಿತರ ಅಕ್ಕಿಯ ಅಕ್ರಮ ದಾಸ್ತಾನು ಪತ್ತೆಯಾಗಿದ್ದು, ಭತ್ತದ ಕಳ್ಳಸಾಗಣೆ ಮತ್ತು ಪಡಿತರ ಅಕ್ಕಿ ಕಳ್ಳಸಾಗಣೆ ನಡುವೆ ಪರಸ್ಪರ ನಂಟು ಇರುವ ಕುರಿತೂ ಅನುಮಾನ ವ್ಯಕ್ತವಾಗಿದೆ.

9ನೇ ಪುಟ ನೋಡಿ

3,700 ಕ್ವಿಂಟಲ್ ಸಾಗಣೆಯತ್ತ ಅನುಮಾನ

ಪಾಂಡವಪುರದ ಎಂ.ಆರ್. ರೈಸ್ ಮಿಲ್‌ನಿಂದ ಜೂನ್ ತಿಂಗಳ ಪಡಿತರ ವಿತರಣೆಗಾಗಿ ನೆಲಮಂಗಲ ಟಿಎಪಿಸಿಎಂಎಸ್ ಸಗಟು ಉಗ್ರಾಣಕ್ಕೆ 1,917.10 ಕ್ವಿಂಟಲ್ ಮತ್ತು ದೊಡ್ಡಬಳ್ಳಾಪುರ ಟಿಎಪಿಸಿಎಂಎಸ್ ಸಗಟು ಉಗ್ರಾಣಕ್ಕೆ 1,700 ಕ್ವಿಂಟಲ್ ಅಕ್ಕಿ ಹಂಚಿಕೆ ಮಾಡಲಾಗಿತ್ತು. ಭತ್ತ ಕಳ್ಳಸಾಗಣೆ ಆಗಿರುವುದರಿಂದ ಅಕ್ಕಿ ನಿಜವಾಗಿಯೂ ಪೂರೈಕೆಯಾಗಿದೆಯೇ ಅಥವಾ ಪಡಿತರ ಕಳ್ಳಸಾಗಣೆ ಜಾಲದ ಜತೆ ಅಧಿಕಾರಿಗಳು, ಸಾಗಣೆ ಗುತ್ತಿಗೆದಾರರು ಶಾಮೀಲಾಗಿ ಲೆಕ್ಕ ಹೊಂದಾಣಿಕೆ ಮಾಡಿರಬಹುದೇ ಎಂಬ ಅನುಮಾನ ವ್ಯಕ್ತವಾಗಿದೆ.

ನಿರಂತರ ತಪಾಸಣೆಗೆ ಸೂಚನೆ

‘ಅಕ್ಕಿ ಗಿರಣಿಗಳಿಂದಲೇ ಎಂಎಸ್‌ಪಿ ಭತ್ತ ಮತ್ತು ಅಕ್ಕಿ ಕಳ್ಳಸಾಗಣೆ ನಡೆಯುತ್ತಿದೆ ಎಂಬ ದೂರುಗಳು ಬರುತ್ತಿವೆ. ನಿಯಮಿತವಾಗಿ ತಪಾಸಣೆ ನಡೆಸಲು ಸೂಚಿಸಲಾಗಿದೆ. ಅಕ್ರಮ ಕಂಡುಬಂದಲ್ಲಿ ಕಠಿಣ ಕ್ರಮಕ್ಕೆ ನಿರ್ದೇಶನ ನೀಡಲಾಗಿದೆ’ ಎಂದು ಆಹಾರ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅನಿಲ್ ಕುಮಾರ್ ‘ಪ್ರಜಾವಾಣಿ’ಗೆ ತಿಳಿಸಿದರು.

ಶಾಸಕ ಎನ್‌.ಮಹೇಶ್ ಆ. 5ರಂದು ಬಿಜೆಪಿಗೆ

ಕೊಳ್ಳೇಗಾಲ: ಶಾಸಕ ಎನ್‌.ಮಹೇಶ್ ಅವರು ಆ.5ರಂದು ಬೆಂಗಳೂರಿನಲ್ಲಿ ಬಿಜೆಪಿಗೆ ಸೇರಲಿದ್ದಾರೆ.



2018ರ ಚುನಾವಣೆಯಲ್ಲಿ ಬಿಎಸ್‌ಪಿಯಿಂದ ಸ್ಪರ್ಧಿಸಿ ಗೆದ್ದಿದ್ದ ಮಹೇಶ್ ಅವರು, ಜೆಡಿಎಸ್ ಕಾಂಗ್ರೆಸ್ ಮೈತ್ರಿ ಸರ್ಕಾರದಲ್ಲಿ ನಾಲ್ಕು ತಿಂಗಳು ಶಿಕ್ಷಣ ಸಚಿವರಾಗಿದ್ದರು. ನಂತರ ರಾಜೀನಾಮೆ ನೀಡಿದ್ದರು. ಎಚ್‌.ಡಿ. ಕುಮಾರಸ್ವಾಮಿ ಅವರು ವಿಶ್ವಾಸಮತ ಯಾಚನೆ ಮಾಡುವಾಗ ಕಲಾಪಕ್ಕೆ ಗೈರಾಗಿದ್ದಕ್ಕಾಗಿ ಅವರನ್ನು ಬಿಎಸ್‌ಪಿಯಿಂದ ಉಚ್ಚಾಟಿಸಲಾಗಿತ್ತು. ಆ ಬಳಿಕ ಬಿಜೆಪಿಗೆ ಹತ್ತಿರವಾಗಿದ್ದರು.

ಬಿಜೆಪಿ ಎಸ್‌ಸಿ ಮೋರ್ಚಾ ಉಪಾಧ್ಯಕ್ಷ ಜಿ.ಎನ್‌.ನಂಜುಂಡಸ್ವಾಮಿ ಹಾಗೂ ಸ್ವತಃ ಮಹೇಶ್ ಅವರು ಭಾನುವಾರ ಇಲ್ಲಿ ಜಂಟಿ ಸುದ್ದಿಗೋಷ್ಠಿ ನಡೆಸಿ ಬಿಜೆಪಿ ಸೇರ್ಪಡೆ ವಿಚಾರ ಪ್ರಕಟಿಸಿದರು.

7 ಜಂಕ್ಷನ್‌ಗಳನ್ನು ಸಿಗ್ನಲ್ ಮುಕ್ತ ಮಾಡುವ ಮೇಲ್ಸೇತುವೆ ● ಗಡುವು ಮುಗಿದರೂ ಯೋಜನೆ ಪೂರ್ಣವಾಗಿಲ್ಲ

ಅಲ್ಲೇ ನಿಂತ ಈಜಿಪುರ ಮೇಲ್ಸೇತುವೆ ಕಾಮಗಾರಿ

● ವಿಜಯಕುಮಾರ್ ಎಸ್.ಕೆ.

ಸೋನಿ ಸಿಗ್ನಲ್ ಬಳಿ ಕಾಮಗಾರಿ ಸ್ಥಗಿತಗೊಂಡಿರುವುದು ಪ್ರಜಾವಾಣಿ ಚಿತ್ರ/ಅನೂಪ್ ರಾಘ ಟಿ.

ಬೆಂಗಳೂರು: ಅರ್ಧಕ್ಕೆ ನಿಂತ ಮೇಲ್ಸೇತುವೆ ಕಾಮಗಾರಿ, ರಸ್ತೆ ಮಧ್ಯದಲ್ಲಿ ದೃಷ್ಟಿ ಬೊಂಬೆಗಳಂತೆ ನಿಂತ ಪಿಲ್ಲರ್‌ಗಳು, ಸಂಚಾರ ದಟ್ಟಣೆ ಸೀಳಲು ವಾಹನ ಸವಾರರ ಹರಸಾಹಸ...

ಇದು ಕೋರಮಂಗಲದ 100 ಅಡಿ ಮುಖ್ಯ ರಸ್ತೆಯ ಸ್ಥಿತಿ. ಈಜಿಪುರ ವೃತ್ತದಿಂದ ಕೇಂದ್ರೀಯ ಸದನದ ತನಕ ಸುಮಾರು 2.5 ಕಿಲೋ ಮೀಟರ್ ಉದ್ದದ ಮೇಲ್ಸೇತುವೆ ನಿರ್ಮಾಣ ಕಾಮಗಾರಿ ವರ್ಷಾನುಗಟ್ಟಲೆ ಮುಂದುವರಿಯುತ್ತಲೇ ಇಲ್ಲ. ಕೇಂದ್ರೀಯ ಸದನದಿಂದ ಆರಂಭವಾಗಿ ಈಜಿಪುರ ಸಿಗ್ನಲ್ ದಾಟುವ ಈ ಮೇಲ್ಸೇತುವೆ ಬಿಬಿಎಂಪಿ ನಿರ್ಮಿಸುತ್ತಿರುವ ಎರಡನೇ ಅತೀದೊಡ್ಡ ಸೇತುವೆ.

ಸೋನಿ ಸಿಗ್ನಲ್ ಬಳಿ ಐದಾರು ಕಂಬಗಳ ಮೇಲೆ ಮೊದಲೇ ರೂಪಿಸಿದ (ಪ್ರೀಕಾಸ್ಟ್ ಸೆಗ್ಮೆಂಟ್) ಹೊದಿಕೆಗಳನ್ನು ಹೊದಿಸಲಾಗಿದೆ. ಉಳಿದ ಎಲ್ಲ ಕಂಬಗಳು ಮೇಲ್ಹಾವಣಿಗಾಗಿ ಕಾದು ನಿಂತಿವೆ. ಈಜಿಪುರ ಜಂಕ್ಷನ್, ಸೋನಿ ವರ್ಲ್ಡ್ ಜಂಕ್ಷನ್, ಕೇಂದ್ರೀಯ ಸದನ, ಕೋರಮಂಗಲ 8ನೇ ಮುಖ್ಯರಸ್ತೆ, ಕೋರಮಂಗಲ 60 ಅಡಿ ರಸ್ತೆಯ ವೃತ್ತ, 5ನೇ ಬ್ಲಾಕ್ 1–ಎ ಕ್ರಾಸ್ ಜಂಕ್ಷನ್, ಬಿಡಿಎ ಜಂಕ್ಷನ್‌ಗಳಲ್ಲಿ ಈಗ ಸಿಗ್ನಲ್ ದಾಟಲು ವಾಹನ ಸವಾರರು ಕಷ್ಟಪಡುತ್ತಿದ್ದಾರೆ. ಇದನ್ನು ತಪ್ಪಿಸಲು 2.5 ಕಿ.ಮೀ ಉದ್ದದ ಮೇಲ್ಸೇತುವೆ ನಿರ್ಮಾಣ ಯೋಜನೆಯನ್ನು ಬಿಬಿಎಂಪಿ ಆರಂಭಿಸಿತ್ತು.

ಕಾಮಗಾರಿಯ ಗುತ್ತಿಗೆಯನ್ನು ಸಿಂಪ್ಲೆಕ್ಸ್ ಇನ್‌ಫ್ರಾಸ್ಟ್ರಕ್ಚರ್ ಕಂಪನಿ ಪಡೆದಿದೆ. ಕಾರ್ಯಾದೇಶದ ಪ್ರಕಾರ 2017ರ ಮೇ 4ರಂದು ಆರಂಭವಾಗಿ 2019ರ ನವೆಂಬರ್ 4ಕ್ಕೇ ಕೆಲಸ ಪೂರ್ಣಗೊಳ್ಳಬೇಕಿತ್ತು. ಅಂದರೆ, ಸುಮಾರು ಒಂದೂವರೆ ವರ್ಷದ ಹಿಂದೆಯೇ ಈ ಸೇತುವೆ ಸಂಚಾರಕ್ಕೆ ಮುಕ್ತವಾಗಬೇಕಿತ್ತು. ಆದರೆ, 2021ರ ಜುಲೈ ಮುಗಿದರೂ ಕಾಮಗಾರಿ ಸದ್ಯಕ್ಕೆ ಪೂರ್ಣಗೊಳ್ಳುವ ಯಾವ ಲಕ್ಷಣಗಳೂ ಕಾಣಿಸುತ್ತಿಲ್ಲ.

ಕಾಂಗ್ರೆಸ್ ಸರ್ಕಾರ ಇದ್ದಾಗ ಆರಂಭವಾದ ಕಾಮಗಾರಿ, ಸರ್ಕಾರ ಬದಲಾದ ಬಳಿಕ ಕುಂಟುತ್ತಾ ಸಾಗಿತು.

‘ಕಾಮಗಾರಿ ಪುನರಾರಂಭವಾಗಿದೆ’

ಗುತ್ತಿಗೆ ಪಡೆದಿರುವ ಕಂಪನಿಯ ಲೋಪದಿಂದ ಕೆಲಸ ಸ್ಥಗಿತಗೊಂಡಿತ್ತು. ಸಮಸ್ಯೆಯನ್ನು ಅಧಿಕಾರಿಗಳು ಈಗ ಸರಿಪಡಿಸಿದ್ದು, ಕಾಮಗಾರಿ ಪುನರಾರಂಭವಾಗಿದೆ ಎಂದು ಶಾಸಕ ರಾಮಲಿಂಗಾರೆಡ್ಡಿ ಹೇಳಿದರು.

‘ಸರ್ಕಾರ ಬದಲಾದ ಕಾರಣ ಕಾಮಗಾರಿ ಸ್ಥಗಿತಗೊಳಿಸಲಾಗಿದೆ ಎಂದು ಹೇಳಲಾಗದು. ಗುತ್ತಿಗೆ ಪಡೆದಿರುವ ಕಂಪನಿ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಈಗ ಜಂಟಿ ಖಾತೆ ತೆರೆದಿದ್ದು, ಕೆಲಸ ಚುರುಕಾಗಿ ನಡೆಯಲಿದೆ. ಬೇರೆ ಸ್ಥಳದಲ್ಲಿ ಪ್ರೀಕಾಸ್ಟ್‌ಗಳನ್ನು ಸಿದ್ಧಪಡಿಸಿಕೊಂಡು ಇಲ್ಲಿ ಜೋಡಿಸಬೇಕಿದೆ. ಆ ಕೆಲಸ ಪ್ರಗತಿಯಲ್ಲಿದೆ’ ಎಂದರು.

ಕಾಂಗ್ರೆಸ್ ಸರ್ಕಾರ ಅಸ್ತಿತ್ವದಲ್ಲಿದ್ದಾಗ ಆರಂಭವಾದ ಕಾಮಗಾರಿ ಇನ್ನೂ ಪೂರ್ಣಗೊಂಡಿಲ್ಲ. ಅಧಿಕಾರಿಗಳಿಗೆ ಇಚ್ಛಾಶಕ್ತಿ ಇಲ್ಲ.
ಗೋಪಾಲಗಿರಿ, ಈಜಿಪುರ

ನಾಲ್ಕು ವರ್ಷಗಳಿಂದ ಕಾಮಗಾರಿ ನಡೆಯುತ್ತಿತ್ತು. ಸ್ಥಗಿತಗೊಂಡು ವರ್ಷ ಆಗಿದೆ. ಸರ್ಕಾರದ ಬೇಜಬ್ದಾರಿಯಿಂದ ತೊಂದರೆ ಅನುಭವಿಸಬೇಕಾಗಿದೆ.
ನಾರಾಯಣ, ಈಜಿಪುರ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಅಂಕಿ–ಅಂಶಗಳು

- ₹203.20 ಕೋಟಿ — ಯೋಜನಾ ವೆಚ್ಚ
- 2.5 ಕಿ.ಮೀ — ಮೇಲ್ಸೇತುವೆ ಉದ್ದ
- 66 — ನಿರ್ಮಾಣವಾಗಿರುವ ಕಂಬಗಳು

ಈಗ ಸಂಪೂರ್ಣವಾಗಿ ಸ್ಥಗಿತಗೊಂಡು ವರ್ಷವೇ ಕಳೆದಿದೆ. ರಸ್ತೆ ಮಧ್ಯದಲ್ಲಿ ಕಂಬಗಳನ್ನು ನಿಲ್ಲಿಸಿ ಬಿಬಿಎಂಪಿ ಅಧಿಕಾರಿಗಳು ಮಾಯವಾಗಿದ್ದಾರೆ ಎಂದು ಸ್ಥಳೀಯರು ಅಸಮಾಧಾನ ವ್ಯಕ್ತಪಡಿಸುತ್ತಾರೆ.

ಕಾಮಗಾರಿ ಸ್ಥಗಿತಗೊಂಡು ಸಾರ್ವಜನಿಕರಿಗೆ ಆಗಿರುವ ತೊಂದರೆ ಬಗ್ಗೆ ಕೋರಮಂಗಲದ ನಿವಾಸಿ ಆದಿನಾರಾಯಣ ಶೆಟ್ಟಿ ಎಂಬುವರು ಹೈಕೋರ್ಟ್ ಮೆಟ್ಟಿಲನ್ನೂ ಏರಿದ್ದಾರೆ. ಈ ಸಂಬಂಧ ಬಿಬಿಎಂಪಿಗೆ ಹೈಕೋರ್ಟ್ ನೋಟಿಸ್ ಕೂಡ ನೀಡಿದೆ.

ಗುತ್ತಿಗೆ ಪಡೆದಿರುವ ಕಂಪನಿ ಏಕಾಏಕಿ ಕೆಲಸ ನಿಲ್ಲಿಸಿತ್ತು. ಕಂಪನಿಯ ಅನ್ಯ ಸಮಸ್ಯೆಗಳು ಈ ಕಾಮಗಾರಿ ಮೇಲೆ ಪರಿಣಾಮ ಬೀರಿದ್ದವು. ಬಿಬಿಎಂಪಿ ಮತ್ತು ಕಂಪನಿಯ ಜಂಟಿ ಬ್ಯಾಂಕ್ ಖಾತೆಯನ್ನು ತೆರೆಯಲಾಗಿದೆ. ಬಿಡುಗಡೆಯಾದ ಹಣವನ್ನು ಇದೇ ಕೆಲಸಕ್ಕೆ ಉಪಯೋಗಿಸಬೇಕು ಎಂಬ ಷರತ್ತು ವಿಧಿಸಲಾಗಿದೆ ಎಂದು ಬಿಬಿಎಂಪಿ ಅಧಿಕಾರಿಗಳು ಹೇಳುತ್ತಾರೆ.

‘ರಾತ್ರಿ ವೇಳೆ ಕಾಮಗಾರಿ ನಿರ್ವಹಿಸಲಾಗುತ್ತಿದೆ. ಪೂರ್ಣಗೊಳ್ಳಲು ಇನ್ನೂ ಒಂದು ವರ್ಷ ಬೇಕು’ ಎಂದು ಬಿಬಿಎಂಪಿ ಮುಖ್ಯ ಎಂಜಿನಿಯರ್ (ಯೋಜನೆ) ಲೋಕೇಶ್ ತಿಳಿಸಿದರು.

ಸುದ್ದಿ 2 ನಿಮಿಷ

‘ಗಂಭೀರವಾಗಿದ್ದು ನಗಿಸುವ ಡುಂಡಿರಾಜ್: ಲಕ್ಷ್ಮಣ ರಾವ್ ಮೆಚ್ಚುಗೆ

ಬೆಂಗಳೂರು: ‘ಹಾಸ್ಯಗಾರರು ತಾವು ಗಂಭೀರವಾಗಿದ್ದು, ನೋಡುಗರನ್ನು ನಗಿಸುತ್ತಾರೆ. ಅದೇ ರೀತಿ, ಗಂಭೀರವಾಗಿ ಕಾಣಿಸುವ ಡುಂಡಿರಾಜ್, ಬರವಣಿಗೆಯ ಮೂಲಕ ಓದುಗರನ್ನು ರಂಜಿಸುತ್ತಾರೆ’ ಎಂದು ಕವಿ ಬಿ.ಆರ್. ಲಕ್ಷ್ಮಣ ರಾವ್ ಮೆಚ್ಚುಗೆ ವ್ಯಕ್ತಪಡಿಸಿದರು.

ಅಂಕಿತ ಪುಸ್ತಕ ಪ್ರಕಾಶನವು ಬುಕ್ ಬ್ರಹ್ಮದ ಸಹಯೋಗದಲ್ಲಿ ಆನ್‌ಲೈನ್ ವೇದಿಕೆಯಲ್ಲಿ ಭಾನುವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ ಎಚ್. ಡುಂಡಿರಾಜ್ ಅವರ ‘ಅಂ–ಕಿತಾಬ್ ಜಿಂದಾಬಾದ್’ ಕೃತಿ, ಕೇಶವರೆಡ್ಡಿ ಹಂದ್ರಾಳ ಅವರ ‘ಅಣು’ ಕಾದಂಬರಿ ಹಾಗೂ ಎಸ್.ಪಿ. ಪದ್ಮಪ್ರಸಾದ್ ಅವರ ‘ಅಂಗ್ಲರ ನಾಡಿನಲ್ಲಿ ಅಲೆಮಾರಿ’ ಪ್ರವಾಸ ಕಥನವನ್ನು ಬಿಡುಗಡೆ ಮಾಡಿದರು.

‘ಡುಂಡಿರಾಜ್ ಅವರು ಕನ್ನಡ ಭಾಷೆಯನ್ನು ಮುರಿದು, ಮತ್ತೆ ಕಟ್ಟುವ ಕ್ರಿಯೆಯೊಂದಿಗೆ ಓದುಗರು ಸಾಹಿತ್ಯಾನಂದವನ್ನು ಅನುಭವಿಸುವಂತೆ ಮಾಡುತ್ತಾರೆ’ ಎಂದರು.

ವಿಮರ್ಶಕ ಡಾ. ಎಚ್. ದಂಡಪ್ಪ ಮಾತನಾಡಿ ‘ಕೇಶವರೆಡ್ಡಿ ಹಂದ್ರಾಳ ಅವರ ‘ಅಣು’ ಕಾದಂಬರಿಯು ಬಡತನ, ಹಸಿವು, ಲೈಂಗಿಕತೆಯ ಶೋಷಣೆ ಸೇರಿದಂತೆ ವಿವಿಧ ವಸ್ತುಗಳನ್ನು ಅನಾವರಣ ಮಾಡುತ್ತವೆ. ‘ಅಂಗ್ಲರ ನಾಡಿನಲ್ಲಿ ಅಲೆಮಾರಿ’ ಕೃತಿಯು ಅರ್ಥ ಸಾಧ್ಯತೆಯನ್ನು ಹೆಚ್ಚಿಸುತ್ತದೆ’ ಎಂದರು.

ಲೇಖಕರಾದ ಎಚ್. ಡುಂಡಿರಾಜ್, ಕೇಶವರೆಡ್ಡಿ ಹಂದ್ರಾಳ ಹಾಗೂ ಎಸ್.ಪಿ. ಪದ್ಮಪ್ರಸಾದ್ ಇದ್ದರು.

‘ಜನರ ನೆರವಿಗೆ ಧಾವಿಸದ ಬಿಜೆಪಿ’

ಬೆಂಗಳೂರು: ‘ಕೋವಿಡ್ ನಿಯಂತ್ರಣಕ್ಕಾಗಿ ಲಾಕ್‌ಡೌನ್ ಜಾರಿ ಮಾಡಿದ ಸಂದರ್ಭದಲ್ಲಿ ಬಿಜೆಪಿ ಸರ್ಕಾರವು ಜನರ ನೆರವಿಗೆ ಧಾವಿಸಲಿಲ್ಲ’ ಎಂದು ವಿಧಾನ ಪರಿಷತ್ ಸದಸ್ಯ ಯು.ಬಿ. ವೆಂಕಟೇಶ್ ಆರೋಪಿಸಿದರು.

ಶ್ರೀನಗರದ ಕಾಳಪ್ಪ ಬ್ಲಾಕ್‌ನಲ್ಲಿ ಬಡವರಿಗೆ ಆಹಾರ ಪದಾರ್ಥ ಹಾಗೂ ತರಕಾರಿ ಕಿಟ್ ವಿತರಿಸಿ ಮಾತನಾಡಿದ ಅವರು, ‘ರಾಜ್ಯ ಸರ್ಕಾರ ನಿರ್ಲಕ್ಷ್ಯ ವಹಿಸಿದ ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷ ಮುಂದೆ ಬಂದು ಆಹಾರ ಪದಾರ್ಥ ಸೇರಿದಂತೆ ಕೆಲವು ಅಗತ್ಯ ವಸ್ತುಗಳನ್ನು ವಿತರಿಸಿ ಬಡವರಿಗೆ ನೆರವಾಯಿತು’ ಎಂದರು.

ಸಂಕಷ್ಟಕ್ಕೆ ಒಳಗಾದ ಜನರಿಗೆ ₹10 ಸಾವಿರ ನೆರವು ನೀಡಬೇಕು ಎಂದು ಕಾಂಗ್ರೆಸ್ ಪಕ್ಷ ಒತ್ತಾಯಿಸುತ್ತಾ ಬಂದಿದೆ. ಆದರೆ, ಕೆಲವರಿಗೆ ₹2 ಸಾವಿರದಿಂದ ₹3 ಸಾವಿರ ಮಾತ್ರ ಪರಿಹಾರ ಘೋಷಣೆ ಮಾಡಲಾಗಿದೆ. ಈ ಮೊತ್ತ ಬೆಂಗಳೂರಿನಂತಹ ನಗರದಲ್ಲಿ ವಾಸಿಸುವವರಿಗೆ ಸಾಕಾಗುತ್ತದೆಯೇ’ ಎಂದು ಅವರು ಪ್ರಶ್ನಿಸಿದರು. ‘ಎಲ್ಲರೂ ಕಡ್ಡಾಯವಾಗಿ ಲಸಿಕೆಯನ್ನು ಪಡೆಯಬೇಕು. ಲಸಿಕೆ ಸಿಗದೇ ಇದ್ದಲ್ಲಿ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರ ಮೂಲಕ ಲಸಿಕೆ ಕೊಡಿಸುವ ಕೆಲಸ ಮಾಡಲಾಗುವುದು’ ಎಂದರು.

ನಿಧನ ವಾರ್ತೆ

ತಿಮ್ಮಮ್ಮ

ಬೆಂಗಳೂರು: ಆಡುಗೋಡಿಯ ದೇವೇಗೌಡ ಬಡಾವಣೆಯ ನಿವಾಸಿ ತಿಮ್ಮಮ್ಮ (80) ನಿಧನರಾದರು ಅವರಿಗೆ ಪುತ್ರ, ಪುತ್ರಿಯರು ಇದ್ದಾರೆ. ಅವರು ತುಮಕೂರಿನ ಯಡಿಯೂರು ಹೋಬಳಿಯವರು.

IN THE COURT OF THE ADDITIONAL CITY CIVIL JUDGE, MAYO HALL, AT BANGALORE

P & SC No. 25039/2021

IN THE MATTER OF THE ESTATE OF LATE Mr. PRAKASH CHORDIA

Petitioners : 1. Smt. Nandita Chordia, Aged about 65 years, W/o Late Prakash Chordia
2. Smt. Aditya Chordia, Aged about 44 years, D/o Late Prakash Chordia **Rep by P.A. Holder / Mother Smt. Nandita Chordia**
3. Sri. Suvidh Chordia, Aged about 40 years S/o Late Prakash Chordia
All are presently residing at No.230, 3rd Main, 6th Cross, Defence Colony, Indiranagar, Bangalore - 560038.

-V/s-

Respondent : Nil

PUBLIC NOTICE

Notice is hereby given that, a petition has made to this Court under Section 370 & 372 OF THE INDIAN SUCCESSION ACT for grant of Succession Certificate. Be it known to all that no caveat has been entered and the said petition is posted for hearing **on 18/09/2021 at 11.00 A.M,** before the Hon'ble Court, Additional City Civil and Sessions Judge, Mayo Hall, Bengaluru (CCH-21). Any person/s claiming to have any interest may participate in the proceedings before the grant of Succession Certificate.

SCHEDULE

a) SHARES in TITAN COMPANY LIMITED.

FOLIO No.	TWP005243
No. of Shares / Debentures	4000
Certificate No.	649
Distinctive Nos. From	1972681
Distinctive Nos. to	1976680

b) MAHINDRA & MAHINDRA LTD, in REGD FOLIO NOS. M013377/M013378/M013379

By order of the Court, Deputy Registrar, City Civil Court, Mayo Hall Unit, Bangalore.

Advocates for Petitioners :
Hitesh Kumar Jain, Advocate
HM LEGAL
No.24/10, 1st Floor, Haudin Road, Ulsoor, Bengaluru-560042. M : 9844372444

SAD DEMISE



C. M. Ramachandran
22-07-1938 - 01-08-2021
With profound grief we regret to inform the sad demise of Sri C. M. Ramachandran on 01-08-2021 Cremation will be held at Summanahalli Crematorium, Bengaluru at 2.00 p.m. on 02-08-2021
In Grief
Family & Friends, 9945500555

ಕೋವಿಡ್ ನಿಯಂತ್ರಣ– ನಾಲ್ಕು ತಂಡಗಳನ್ನು ರಚಿಸಿದ ಮಹಾನಗರ ಪಾಲಿಕೆ

ಕೇರಳ, ಮಹಾರಾಷ್ಟ್ರದಿಂದ ಬರುವವರಿಗೆ ಕಡ್ಡಾಯ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇರಳ ಹಾಗೂ ಮಹಾರಾಷ್ಟ್ರದಿಂದ ಬರುವ ಪ್ರವಾಸಿಗರು ಕೊರೊನಾ ಸೋಂಕು ಹೊಂದಿಲ್ಲದ ದಾಖಲೆ ಪರಿಶೀಲಿಸಲು ಹಾಗೂ ಅವರನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಲು ಬಿಬಿಎಂಪಿ ನಾಲ್ಕು ವಿಶೇಷ ತಂಡಗಳನ್ನು ರಚಿಸಿದೆ.

‘ಕೇರಳ ಹಾಗೂ ಮಹಾರಾಷ್ಟ್ರದಿಂದ ನಗರಕ್ಕೆ ಬರುವವರು ಕೋವಿಡ್ ಹೊಂದಿಲ್ಲ ಎಂಬುದನ್ನು ದೃಢಪಡಿಸಬೇಕು. ಇದಕ್ಕಾಗಿ 72 ಗಂಟೆಗಳ ಈಚೆಗೆ ಮಾಡಿಸಿರುವ ಕೋವಿಡ್ ಪರೀಕ್ಷೆಯ ವರದಿ ಹಾಜರುಪಡಿಸುವುದು ಕಡ್ಡಾಯ. ಕೋವಿಡ್ ಲಸಿಕೆ ಹಾಕಿಸಿಕೊಂಡವರೂ ಕೋವಿಡ್ ಪರೀಕ್ಷೆಯ ವರದಿ ಹಾಜರುಪಡಿಸಬೇಕು’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ‘ಪ್ರಜಾವಾಣಿ’ಗೆ ತಿಳಿಸಿದರು.

‘ಕೇರಳ ಅಥವಾ ಮಹಾರಾಷ್ಟ್ರದಿಂದ ಕೋವಿಡ್ ಪರೀಕ್ಷೆಯ ವರದಿ ಇಲ್ಲದೆಯೇ ನಗರಕ್ಕೆ ಬರುವವರನ್ನು ಬಿಬಿಎಂಪಿ ಸಿಬ್ಬಂದಿಯೇ ಕೋವಿಡ್ ಪರೀಕ್ಷೆಗೆ ಒಳಪಡಿಸಲಿದ್ದಾರೆ. ಅವರಿಗೆ ಸೋಂಕು ಇಲ್ಲದಿರುವುದು ದೃಢಪಟ್ಟರೆ ಮಾತ್ರ ಅವರನ್ನು ಬಿಟ್ಟು ಕಳುಹಿಸಲಾಗುತ್ತದೆ. ಕೋವಿಡ್ ಪರೀಕ್ಷಾ ವರದಿ ಬರುವವರೆಗೂ ಅವರನ್ನು ಪ್ರತ್ಯೇಕ ವಾಸಕ್ಕೆ ಒಳಪಡಿಸಲಾಗುತ್ತದೆ. ಕೋವಿಡ್ ಪರೀಕ್ಷಾ ವರದಿ ಇಲ್ಲದವರು ಪರೀಕ್ಷೆಗೆ ಒಳಪಡಸಲು ಒಪ್ಪದಿದ್ದರೆ ಹಿಂದಕ್ಕೆ ಕಳುಹಿಸಬೇಕಾಗುತ್ತದೆ’ ಎಂದು ವಿಶೇಷ ಆಯುಕ್ತ (ಆರೋಗ್ಯ) ಡಿ.ರಂದೀಪ್ ತಿಳಿಸಿದರು.

‘ನಾಲ್ಕು ತಂಡಗಳು ಈ ಎರಡು ರಾಜ್ಯಗಳಿಂದ ಬರುವ ರೈಲುಗಳು ಹಾಗೂ ಬಸ್‌ಗಳ ಮೇಲೆ ನಿಗಾ ಇಡಲಿವೆ. ಮೆಜೆಸ್ಟಿಕ್ ಮತ್ತು ಯಶವಂತಪುರ ಬಸ್‌ನಿಲ್ದಾಣಗಳಿಗೆ ಹಾಗೂ ಮೈಸೂರು ರಸ್ತೆ, ಕೆಂಗೇರಿ ಶಾಂತಿನಗರಗಳ ಸ್ಯಾಟಲೈಟ್ ಬಸ್ ನಿಲ್ದಾಣಗಳಿಗೆ ಈ ಎರಡು ರಾಜ್ಯಗಳಿಂದ ಬರುವ ಬಸ್‌ಗಳ ಪ್ರಯಾಣಿಕರನ್ನು ಬಿಬಿಎಂಪಿ ತಂಡಗಳ ಸಿಬ್ಬಂದಿ ಪರಿಶೀಲನೆ ನಡೆಸಲಿದ್ದಾರೆ. ಯಶವಂತಪುರ, ಕಂಟೋನ್ಮೆಂಟ್, ಕೆ.ಆರ್.ಪುರ ಹಾಗೂ ಮೆಜೆಸ್ಟಿಕ್‌ನ ಸಂಗೊಳ್ಳಿ ರಾಯಣ್ಣ ನಗರ ರೈಲು ನಿಲ್ದಾಣಗಳಿಗೆ ಈ ಎರಡು ರಾಜ್ಯಗಳಿಂದ ಬರುವ ರೈಲುಗಳ ಪ್ರಯಾಣಿಕರನ್ನೂ ತಪಾಸಣೆಗೆ ಒಳಪಡಿಸಲಿದ್ದಾರೆ’ ಎಂದರು.

ಫಲಿತಾಂಶ ತಿಳಿಸುವುದು ಕಡ್ಡಾಯ: ಪ್ರಯೋಗಾಲಯಗಳು ಹಾಗೂ ಖಾಸಗಿ ಆಸ್ಪತ್ರೆಗಳು ಕೋವಿಡ್ ಪರೀಕ್ಷೆಯ ಫಲಿತಾಂಶವನ್ನು ಬಿಬಿಎಂಪಿಗೆ ನೀಡುವುದನ್ನು ಕಡ್ಡಾಯಗೊಳಿಸಲಾಗಿದೆ.

‘ಚಿಕಿತ್ಸೆ ನಿರ್ಧಾರ ಕೇಂದ್ರದಲ್ಲೇ ತಪಾಸಣೆ ಕಡ್ಡಾಯ’

ಕೋವಿಡ್ ದೃಢಪಟ್ಟ ಎಲ್ಲರೂ ಚಿಕಿತ್ಸೆ ನಿರ್ಧಾರ (ಟ್ರಯಾಜ್) ಕೇಂದ್ರಗಳಲ್ಲಿ (ಪಿಟಿಸಿ) ಅಥವಾ ಸಂಚಾರ ಟ್ರಯಾಜ್ ಘಟಕಗಳಲ್ಲಿ (ಎಂಟಿಯು) ಖುದ್ದಾಗಿ ವೈದ್ಯಕೀಯ ತಪಾಸಣೆಗೆ ಒಳಗಾಗುವುದನ್ನು ಬಿಬಿಎಂಪಿ ಕಡ್ಡಾಯಗೊಳಿಸಿದೆ.

ಕೆಲವು ಕೊರೊನಾ ಸೋಂಕಿತರು ಪಿಟಿಸಿ ಅಥವಾ ಎಂಟಿಯುವಿನಲ್ಲಿ ವೈದ್ಯಕೀಯ ತಪಾಸಣೆಗೆ ಒಳಗಾಗಲು ನಿರಾಕರಿಸುತ್ತಿರುವುದು ಕಂಡುಬಂದಿದೆ. ಸೋಂಕು ನಿಯಂತ್ರಣ ದೃಷ್ಟಿಯಿಂದ ಎಲ್ಲ ಕೊರೊನಾ ಸೋಂಕಿತರೂ ಕಡ್ಡಾಯವಾಗಿ ಪಿಟಿಸಿ ಅಥವಾ ಎಂಟಿಯುಗಳಲ್ಲಿ ವೈದ್ಯಕೀಯ ತಪಾಸಣೆಗೆ ಒಳಗಾಗಬೇಕು. ತಪ್ಪಿದರೆ ಅಂತಹವರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಮುಖ್ಯ ಆಯುಕ್ತರು ಆದೇಶದಲ್ಲಿ ತಿಳಿಸಿದ್ದಾರೆ.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	19.88 ಕೋಟಿ	3.16 ಕೋಟಿ
ಸಕ್ರಿಯ ಪ್ರಕರಣ	1.51 ಕೋಟಿ	4.08 ಲಕ್ಷ
ಗುಣಮುಖ	17.95 ಕೋಟಿ	3.08 ಕೋಟಿ
ಸಾವು	42.38 ಲಕ್ಷ	4.24 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	5.34 ಲಕ್ಷ	40,445
ಗುಣಮುಖ	3.71 ಲಕ್ಷ	35,909
ಸಾವು	8,903	421

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 51,898 ಅಮೆರಿಕ; 37,582 ಬ್ರೆಜಿಲ್; 26,033 ಬ್ರಿಟನ್

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): 54.49 ಅಮೆರಿಕ; 12.17 ಬ್ರೆಜಿಲ್; 7.41 ಬ್ರಿಟನ್

(*ರಾತ್ರಿ 12 ಗಂಟೆಯವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು: 1.32 ಲಕ್ಷ ಮಹಾರಾಷ್ಟ್ರ; 34,102 ತಮಿಳುನಾಡು; 25,054 ದೆಹಲಿ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 63.10 ಮಹಾರಾಷ್ಟ್ರ; 34.11 ಕೇರಳ; 25.61 ತಮಿಳುನಾಡು

ಪ್ರಜಾವಾಣಿ ಗ್ರಾಫಿಕ್ಸ್

ಖರೀದಿ ನಿಯಮ ಉಲ್ಲಂಘಿಸಿಲ್ಲ: ಎಚ್‌ಎನ್‌ಝುಡ್ ಅಪೆರಲ್ಸ್ ಸ್ಪಷ್ಟನೆ

ಬೆಂಗಳೂರು: ‘ಪಿಪಿಇ ಕಿಟ್ ಖರೀದಿಯಲ್ಲಿ ಅವ್ಯವಹಾರ ನಡೆದಿದೆ ಎಂದು ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷ ಆರೋಪಿಸಿದ್ದು, ಇದರಲ್ಲಿ ನಮ್ಮ ಕಂಪನಿ ಹೆಸರು ಉಲ್ಲೇಖಿಸಿರುವುದು ಸರಿಯಲ್ಲ. ಕಂಪನಿಯು ಯಾವುದೇ ನಿಯಮ ಉಲ್ಲಂಘಿಸಿಲ್ಲ’ ಎಂದು ಎಚ್ ಎನ್ ಝುಡ್ ಅಪೆರಲ್ಸ್ ಕಂಪನಿ ಸ್ಪಷ್ಟನೆ ನೀಡಿದೆ.

‘ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮವು (ಕೆಎಸ್‌ಎಂಎಸ್‌ಸಿಎಲ್) ಪಿಪಿಇ ಕಿಟ್‌ಗಳ ಖರೀದಿಗಾಗಿ ಏ.26ರಂದು ಟೆಂಡರ್ ಕರೆದಿತ್ತು. ಇದರಲ್ಲಿ 50ಕ್ಕೂ ಹೆಚ್ಚು ಸಂಸ್ಥೆಗಳು ಭಾಗವಹಿಸಿದ್ದವು. ಇದರಲ್ಲಿ ಅತಿ ಕಡಿಮೆ ದರ ನಮೂದಿಸಿದ ಮೂರು ಸಂಸ್ಥೆಗಳನ್ನು ಆಯ್ಕೆ ಮಾಡಲಾಗಿತ್ತು. ನಮ್ಮ ಸಂಸ್ಥೆಯೇ ಅತಿ ಕಡಿಮೆ ಅಂದರೆ, ₹498 ದರ ನಮೂದಿಸಿತ್ತು. ಉಳಿದ ಎರಡು ಸಂಸ್ಥೆಗಳು ಕ್ರಮವಾಗಿ ₹499, ₹501 ಎಂದು ನಮೂದಿಸಿದ್ದವು’ ಎಂದು ಕಂಪನಿಯ ಮುಖ್ಯಸ್ಥ ಉಮೇಶ್ ಪುತ್ರನ್ ಸ್ಪಷ್ಟಪಡಿಸಿದ್ದಾರೆ.

‘ಅರ್ಹತೆ ಇರುವ ಮೂರು ಸಂಸ್ಥೆಗಳ ಜೊತೆಗೆ ಮಾತ್ರ ಚರ್ಚಿಸಿ ಅಧಿಕಾರಿಗಳು ದರ ಕಡಿಮೆ ಮಾಡಿಸಬಹುದು. ಕೊನೆಗೆ, ₹400ಗೆ ಪಿಪಿಇ ಕಿಟ್ ವಿತರಿಸಲು ನಮ್ಮ ಸಂಸ್ಥೆಗೆ ಹೇಳಿದರು. ಅದಕ್ಕೆ ನಾವು ಒಪ್ಪಿಕೊಂಡಿದ್ದರಿಂದ ಅಧಿಕಾರಿಗಳು ಕಾರ್ಯಾದೇಶ ನೀಡಿದರು’ ಎಂದು ಹೇಳಿದ್ದಾರೆ.

‘ಕೆಆರ್‌ಎಸ್ ಪಕ್ಷದವರು ಸುದ್ದಿಗೋಷ್ಠಿಯಲ್ಲಿ ಪ್ರದರ್ಶಿಸಿದ ಪಿಪಿಇ ಕಿಟ್ ಕೂಡ ನಮ್ಮದಲ್ಲ. ನಮ್ಮ ಪಿಪಿಇ ಕಿಟ್‌ಗಳು ಐಎಫ್‌ಕ್ಯೂನಲ್ಲಿ ನಮೂದಿಸಿರುವ ಮಾನದಂಡಗಳನ್ನು ಹೊಂದಿದ್ದು, ಗುಣಮಟ್ಟದ್ದಾಗಿವೆ’ ಎಂದೂ ಅವರು ಹೇಳಿದ್ದಾರೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

EDUCATIONAL

Admission

ONE SITTING: B.Tech/ Diploma/ MBA/MCA/M.Sc/ M.Com/BBA/BCA/B.Sc/B.Com /LL.B/D.Pharm/ B.Pharm/ B.Ed. Recognised Govt. Genuine students need contact.Asha Institute, Bangalore. Ph:9448460103/ 7093438248

JOB OPPORTUNITIES

Graphic Designers

WANTED MALE/ Female Graphic Designer for HI- END Prepress Software for a Pvt Limited Company in around Rajajinagar Age below 40 years Contact: 9108458798/ 23384085

Marketing & Sales

WANTED MARKETING Executives For Private Limited Company Bangalore, Age Below 40 with Good Communication Skill fluent In English, Kannada, Hindi Contact: 9108458798/ 23384085

Multiple Vacancy

REQUIRED IMMEDIATELY HR, Administration, Manager, Accounts, Supervisor, technical Mechanical, Electronics, Electrical, Computer Engineers -7676760299/ 7676760399

Wanted

HIRING FOR reputed financial services company. Min Experience of 2 to 3 years in Stocks, Mutual funds, research. Apply before 14th August to fsinfo40@gmail.com

BUILDERS ESSENTIAL

Water Proofing Materials

LEAKAGE... LEAKAGE... Old/New-Building, Sump, Bathroom, Wallcrack, Skylight, Terrace Waterproofing done by New-Technology-9880916988

REAL ESTATE SELLING

Flat

Hebbal

FLAT FOR SALE 3-BHK Third Floor, Spacious Balconies 1675sqft .Beautiful Location Behind Manyata Tech-Park, Thanisandra, Flat NearingCompletion Call:9008576675

Sites

Jayanagar

SITE NO 868 WITH OLD HOUSE ON SALE 4 TBLOCK JAYANAGARA 38 A CROSS 40X52 SF CONTACT AGENT KRISHNAMURTHY-82773 05783

BUSINESS

Business to Business

Finance

NRI'S INVESTMENT And Finance AvailableOn LowInterest AgainstProperties, Land & Building,Sites,Flats, Converted& AgricultureLandsCall: 7411265189

Business

WANTED BUSINESS Partner, Lahab Veg Hotel, Investment Rs 5 Lakhs, Income 50:50. Contact: 8892501007/ 9606701007

PERSONAL

Change of Name

I, BASANAGOUDA Patil Residing @ No.40, Vinayaka Nilaya, 4th Cross,LIC Colony, Yeshwanthpur, Bangalore-560022 have changed my name to BASANAGOUDA N. PATIL vide affidavitdated 31.07.2021 Sworn before Notary:Chandrakala, Bangalore

EDUCATION SPECIAL

We are coming out with special offer for Admission Notice, Education Success Congratulation Ads
For details contact: Jerry: 9731810277
Vishal: 9845114560 Tanveer: 9886213331
E-mail: dhclassifieds@deccanherald.co.in

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

GM-Advertisement

ಗಾಳಿಯಿಂದ ಹರಡುತ್ತಿದೆಯೇ ಸೋಂಕು?

ಒಂದೇ ಅಪಾರ್ಟ್‌ಮೆಂಟ್‌ನಲ್ಲಿ 20ಕ್ಕೂ ಹೆಚ್ಚು ಕೋವಿಡ್ ಪಾಸಿಟಿವ್ ಪ್ರಕರಣ

ಪ್ರಜಾವಾಣಿ ವಾರ್ತೆ

ಕೋವಿಡ್ ಪ್ರಕರಣಗಳು ವರದಿಯಾಗಿದ್ದ ಮಹಾಲಕ್ಷ್ಮಿ ಬಡಾವಣೆಯಲ್ಲಿನ ಅಪಾರ್ಟ್‌ಮೆಂಟ್ ಅನ್ನು ಬಿಬಿಎಂಪಿ ಸಿಬ್ಬಂದಿಯು ಭಾನುವಾರ ಸೀಲ್‌ಡೌನ್ ಮಾಡಿದರು – ಪ್ರಜಾವಾಣಿ ಚಿತ್ರ



ಬೆಂಗಳೂರು: ನಗರದ ಮಹಾಲಕ್ಷ್ಮಿ ಬಡಾವಣೆಯಲ್ಲಿನ ಅಪಾರ್ಟ್‌ಮೆಂಟ್‌ನ ಬ್ಲಾಕ್ ಒಂದರಲ್ಲಿಯೇ 20ಕ್ಕೂ ಹೆಚ್ಚು ಕೋವಿಡ್ ಪ್ರಕರಣಗಳು ವರದಿಯಾಗಿದ್ದು, ಕೊರೊನಾ ಸೋಂಕು ಗಾಳಿಯ ಮೂಲಕ ಹರಡುತ್ತಿದೆಯೇ ಎಂಬ ಅನುಮಾನ ಮೂಡಿದೆ.

ಬಡಾವಣೆಯ ರಿನಯಸೆನ್ಸ್ ಟೆಂಪಲ್ ಬೆಲ್ಸ್ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ಜುಲೈ 24ರಂದು 20ಕ್ಕೂ ಹೆಚ್ಚು ಪ್ರಕರಣಗಳು ವರದಿಯಾಗಿದ್ದು, 18 ವರ್ಷದೊಳಗಿನ ಮೂವರಲ್ಲಿಯೂ ಸೋಂಕು ದೃಢಪಟ್ಟಿತ್ತು. ಎಲ್ಲ ವಯಸ್ಕರು ಕನಿಷ್ಠ ಒಂದು ಡೋಸ್ ಕೋವಿಡ್ ಲಸಿಕೆ ಪಡೆದಿದ್ದಾರೆ. ಕೋವಿಡ್ ದೃಢಪಟ್ಟ ಅನೇಕರು ಸೋಂಕಿನ ಸೌಮ್ಯ ಲಕ್ಷಣಗಳನ್ನು ಅಥವಾ ಸಾಮಾನ್ಯ ಜ್ವರ, ಶೀತದಂತಹ ಲಕ್ಷಣಗಳನ್ನು ಮಾತ್ರ ಹೊಂದಿದ್ದರು.

‘ಎಲ್ಲ ಪ್ರಕರಣಗಳು ಅಪಾರ್ಟ್‌ಮೆಂಟ್‌ನ ಬ್ಲಾಕ್ ‘‘ಎ’’ ನಲ್ಲಿ ಮಾತ್ರ ಕಂಡು ಬಂದಿವೆ. ಅದರಲ್ಲಿಯೂ, ಒಂದರ ಮೇಲೆ ಒಂದರಂತಿರುವ ನೇರ ಮಹಡಿಗಳಲ್ಲಿ ವಾಸಿಸುತ್ತಿರುವವರಲ್ಲಿಯೇ ಸೋಂಕು ಕಂಡು ಬಂದಿದೆ’ ಎಂದು ಅಪಾರ್ಟ್‌ಮೆಂಟ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಉಪಾಧ್ಯಕ್ಷ ಪವನ್ ಚಂದ್ರಶೇಖರ್ ಹೇಳಿದರು.

‘ಸಾಲು ಮಹಡಿಗಳಲ್ಲಿ ಒಂದು ಖಾಲಿ ಇತ್ತು. ಖಾಲಿ ಇರುವ ಮಹಡಿಯ ಮೇಲಿನ ಮನೆಗಳಲ್ಲಿರುವವರಿಗೆ ಯಾವುದೇ ಸೋಂಕು ತಗುಲಿಲ್ಲ’ ಎಂದ ಅವರು, ‘ಅಡುಗೆ ಮನೆಯಿಂದ ಹೊರ ಹೋಗುವ ಗಾಳಿ ಮತ್ತು ಒಂದೇ ದಿಕ್ಕಿನಲ್ಲಿ ಇರುವ ಕಿಟಕಿಗಳ ಮೂಲಕ ಹರಿದಾಡುವ ಗಾಳಿಯಿಂದ ಸೋಂಕು ಹರಡಿರುವ ಸಾಧ್ಯತೆ ಇದೆ. ಏಕೆಂದರೆ, ಇದೇ ಅಪಾರ್ಟ್‌ಮೆಂಟ್‌ನ ಬೇರೆ ಬ್ಲಾಕ್‌ನಲ್ಲಿರುವ ಯಾರಿಗೂ ಸೋಂಕು ತಗುಲಿಲ್ಲ’ ಎಂದು ಅವರು ಹೇಳಿದರು.

‘ಇದೇ ಅಪಾರ್ಟ್‌ಮೆಂಟ್‌ನ ‘‘ಬಿ’’ ಬ್ಲಾಕ್‌ನಲ್ಲಿರುವ 300 ಜನರಿಗೆ ಶನಿವಾರ ಕೋವಿಡ್ ಪರೀಕ್ಷೆ ಮಾಡಲಾಗಿದೆ. ಯಾರೊಬ್ಬರಲ್ಲಿಯೂ ಸೋಂಕು ದೃಢಪಟ್ಟಿಲ್ಲ’ ಎಂದು ಪಶ್ಚಿಮ ವಲಯದ ಜಂಟಿ ಆಯುಕ್ತ ಎನ್. ಶಿವಸ್ವಾಮಿ ತಿಳಿಸಿದರು.

ಮಾದರಿ ಸಂಗ್ರಹ ಅಗತ್ಯ

‘ಅಪಾರ್ಟ್‌ಮೆಂಟ್‌ನಲ್ಲಿನ ಗಾಳಿಯ ಮಾದರಿಯನ್ನು ಸಂಗ್ರಹಿಸದೇ, ಸೋಂಕು ಗಾಳಿಯ ಮೂಲಕ ಹರಡುತ್ತಿದೆ ಎಂದು ನಿಖರವಾಗಿ ಹೇಳುವುದು ಕಷ್ಟ’ ಎಂದು ನಿಮ್ಹಾನ್ಸ್‌ನ ಸಾಂಕ್ರಾಮಿಕ ರೋಗಗಳ ವಿಭಾಗದ ಪ್ರಾಧ್ಯಾಪಕ ಡಾ. ಪ್ರದೀಪ್ ಬದನೂರ್ ಹೇಳಿದರು.

‘ಗಾಳಿಯ ಮೂಲಕ ಸೋಂಕು ಹರಡುತ್ತಿದೆ ಎಂದು ಸಾಬೀತುಪಡಿಸುವುದು ಕಷ್ಟವಾಗುತ್ತದೆ. ಆದರೆ, ಈ ಹಿಂದಿನ ಅಧ್ಯಯನಗಳ ಪ್ರಕಾರ, ಉಗುಳಿನ ಹನಿಗಳು ಆರು ಅಡಿಯವರೆಗೆ ಹರಡುತ್ತವೆ ಎಂಬುದು ದೃಢಪಟ್ಟಿದೆ’ ಎಂದು ಮಲ್ಲೇಶ್ವರದ ಮಣಿಪಾಲ ಆಸ್ಪತ್ರೆಯ ಡಾ. ಬಸವರಾಜ ಕುಂಟೋಜಿ ಹೇಳಿದರು.

ನಗರದ ಕೋವಿಡ್ ಅಂಕಿ–ಅಂಶ

12,27,748	ಒಟ್ಟು ಪ್ರಕರಣಗಳು (12,27,339 ನಿನ್ನೆಯ ವಿವರ)
8,553	ಸಕ್ರಿಯ ಪ್ರಕರಣಗಳು
12,03,314	ಗುಣಮುಖರಾದವರು
15,880	ಒಟ್ಟು ಸಾವು

ಭಾನುವಾರದ ಏರಿಕೆ

ಹೊಸ ಪ್ರಕರಣ	409
ಗುಣಮುಖ	377
ಸಾವು	08

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

4 ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ವಿಧಾನಸಭಾ ಕ್ಷೇತ್ರಕ್ಕೊಂದು ದ್ವಿತೀಯ ಹಂತದ ಆಸ್ಪತ್ರೆ, ವಾರ್ಡ್‌ಗೊಂದು ಯುಪಿಎಚ್‌ಸಿ– ಬಿಬಿಎಂಪಿ ಬೇಡಿಕೆ

ಆರೋಗ್ಯ ಸೌಕರ್ಯ–ಭಾರ ಹೊರುವುದೇ ಸರ್ಕಾರ?

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ದೇಶದ ಇತರ ಮಹಾನಗರಗಳಿಗೆ ಹೋಲಿಸಿದರೆ ಬೆಂಗಳೂರು ಆರೋಗ್ಯ ಸೌಕರ್ಯದಲ್ಲಿ ಸಾಕಷ್ಟು ಮುಂಚೂಣಿಯಲ್ಲಿದೆ. ಆದರೆ, ಈ ನಗರದ ಆರೋಗ್ಯ ಸೌಕರ್ಯದಲ್ಲಿ ಸರ್ಕಾರಿ ವ್ಯವಸ್ಥೆಯ ಪಾಲೆಷ್ಟು ಎಂದು ನೋಡಿದರೆ ನಿರಾಶಾದಾಯಕ ಸ್ಥಿತಿ ಇದೆ. ಅದರಲ್ಲೂ ಸರ್ಕಾರದ ನೆರವಿನ ಅಗತ್ಯ ಹೆಚ್ಚು ಇರುವ ಪ್ರಾಥಮಿಕ ಹಾಗೂ ದ್ವಿತೀಯ ಹಂತದ ಆರೋಗ್ಯ ಸೌಕರ್ಯಗಳಲ್ಲಂತೂ ಮಹಾನಗರ ತೀರಾ ಹಿಂದುಳಿದಿದೆ.

ಕೋವಿಡ್ ಮೊದಲ ಅಲೆ ಕಾಣಿಸಿಕೊಂಡ ಬಳಿಕ ಪ್ರಾಥಮಿಕ ಹಂತದ ಆರೋಗ್ಯ ಸೌಕರ್ಯಗಳ ಬಲವರ್ಧನೆಗೆ ಬಿಬಿಎಂಪಿ ಪ್ರಸ್ತಾವ ಸಿದ್ಧಪಡಿಸಿತ್ತು. 57 ವಾರ್ಡ್‌ಗಳಲ್ಲಿ ಯುಪಿಎಚ್‌ಸಿಗಳನ್ನು ಮಂಜೂರು ಮಾಡುವಂತೆ ಕೋರಿ 2020ರ ಜು.29ರಂದು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿತ್ತು. ಇದಕ್ಕಾಗಿ ₹ 22.94 ಕೋಟಿ ಅನುದಾನಕ್ಕೆ ಬೇಡಿಕೆ ಸಲ್ಲಿಸಿತ್ತು. ಆದರೆ, ರಾಜ್ಯ ಸರ್ಕಾರ ಆರೋಗ್ಯ ಇಲಾಖೆ ಮೂಲಕ 57 ಕಡೆ ಜನಾರೋಗ್ಯ ಕೇಂದ್ರಗಳನ್ನು ಸ್ಥಾಪಿಸಲು 2021–22ನೇ ಸಾಲಿನ ಬಜೆಟ್‌ನಲ್ಲಿ ಕೇವಲ ₹ 10 ಕೋಟಿ ಅನುದಾನ ಒದಗಿಸಿತು.

ಕೋವಿಡ್ ಎರಡನೇ ಅಲೆಯ ವೇಳೆ ಉಂಟಾದ ಭಾರಿ ಸಾವು ನೋವುಗಳನ್ನು ಕಂಡ ಬಳಿಕ ಆರೋಗ್ಯ ಮೂಲ ಸೌಕರ್ಯದ ವಿಚಾರದಲ್ಲಿ ಬಿಬಿಎಂಪಿ ಆತ್ಮಾವಲೋಕನ ಮಾಡಿಕೊಂಡಿದೆ. ನಗರದಲ್ಲಿ ಮೂರೂ ಹಂತಗಳ ಆರೋಗ್ಯ ಸೇವೆ ಬಲವರ್ಧನೆಗೆ ಹೊಸ ಪ್ರಸ್ತಾವ ಸಿದ್ಧಪಡಿಸಿದೆ. ಆರೋಗ್ಯ ಮೂಲಸೌಕರ್ಯ ಹೆಚ್ಚಳಕ್ಕೆ ಅನುದಾನ ಒದಗಿಸುವಂತೆ ಸರ್ಕಾರಕ್ಕೆ ಇತ್ತೀಚೆಗೆ ಕೋರಿಕೆ ಸಲ್ಲಿಸಿದೆ.

ಆರೋಗ್ಯ ಸೌಕರ್ಯವರ್ಧನೆ-ಪ್ರಸ್ತಾವಗಳೇನು?: ನಗರದಲ್ಲಿ ತೃತೀಯ ಹಂತದ ಆರೈಕೆ ವ್ಯವಸ್ಥೆಯ ನಾಲ್ಕು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ಸ್ಥಾಪಿಸುವುದು, ಪ್ರತಿ ಕ್ಷೇತ್ರದಲ್ಲೂ (ಒಟ್ಟು 27) ತಲಾ 50ರಿಂದ 100 ಹಾಸಿಗೆಗಳ ಸಾಮರ್ಥ್ಯದ ದ್ವಿತೀಯ ಹಂತದ ಆಸ್ಪತ್ರೆಗಳನ್ನು ಸ್ಥಾಪಿಸುವುದು ಹಾಗೂ 57 ಯುಪಿಎಚ್‌ಸಿಗಳನ್ನು ಸ್ಥಾಪಿಸುವ ಪ್ರಸ್ತಾವನ್ನು ಸರ್ಕಾರಕ್ಕೆ ಪಾಲಿಕೆ ಸಲ್ಲಿಸಿದೆ. ಜೊತೆಗೆ ಮಕ್ಕಳ ಚಿಕಿತ್ಸೆಗಾಗಿ ಆಸ್ಪತ್ರೆಗಳಲ್ಲಿ ಹೆಚ್ಚುವರಿ ಹಾಸಿಗೆಗಳ ಸೌಕರ್ಯ ಕಲ್ಪಿಸುವುದು ಹಾಗೂ 31 ಕಡೆ ಕೋವಿಡ್ ಚಿಕಿತ್ಸೆ ನಿರ್ಧಾರ ಕೇಂದ್ರ (ಟ್ರಯಾಜ್ ಸೆಂಟರ್) ಸ್ಥಾಪನೆ ಹಾಗೂ ಯುಪಿಎಚ್‌ಸಿಗಳಲ್ಲಿ ಮಾನವ ಸಂಪನ್ಮೂಲ ಹೆಚ್ಚಳ ಮಾಡುವ ಅಂಶಗಳೂ ಇದರಲ್ಲಿವೆ.

ರಾಜರಾಜೇಶ್ವರಿನಗರ ವಲಯದ ಯಶವಂತಪುರದಲ್ಲಿ ಆರಂಭಿಸಿರುವ ಕೋವಿಡ್ ಆಸ್ಪತ್ರೆಯನ್ನೇ ತೃತೀಯ ಹಂತದ ಆಸ್ಪತ್ರೆಯನ್ನಾಗಿ ಪರಿವರ್ತಿಸಬಹುದು. ಇಲ್ಲಿ 300 ಹಾಸಿಗೆಗಳ ವ್ಯವಸ್ಥೆ ಕಲ್ಪಿಸಬಹುದು. ಇದಕ್ಕೆ ಹೆಚ್ಚುವರಿ ಅನುದಾನದ ಅಗತ್ಯವಿಲ್ಲ. ಪೂರ್ವ ವಲಯದಲ್ಲಿ ಶಾಂತಿನಗರ ಹೆರಿಗೆ ಮನೆಯ(ಮ್ಯಾಟರ್ನಿಟಿ ಹೋಮ್) ಪ್ರಾಂಗಣದಲ್ಲಿ ₹ 66 ಕೋಟಿ ವೆಚ್ಚದಲ್ಲಿ 300 ಹಾಸಿಗೆಗಳ ಹೊಸ ಆಸ್ಪತ್ರೆ ನಿರ್ಮಿಸಬಹುದು. ಪಶ್ಚಿಮ ವಲಯದ ಎಂ.ಸಿ ಬಡಾವಣೆಯಲ್ಲಿ ₹ 55 ಕೋಟಿ ವೆಚ್ಚದಲ್ಲಿ 250 ಹಾಸಿಗೆಗಳ ಹೊಸ ಆಸ್ಪತ್ರೆ ನಿರ್ಮಾಣ, ಬೊಮ್ಮನಹಳ್ಳಿ ವಲಯದಲ್ಲಿ ಪುಟ್ಟೇನಹಳ್ಳಿಯಲ್ಲಿ ಬನ್ನೇರುಘಟ್ಟ ರಸ್ತೆ ಬಳಿ ₹ 65 ಕೋಟಿ ವೆಚ್ಚದಲ್ಲಿ 300 ಹಾಸಿಗೆಗಳ ಹೊಸ ಆಸ್ಪತ್ರೆ ನಿರ್ಮಾಣ ಯೋಜನೆಗಳು ಬಿಬಿಎಂಪಿ ಮುಂದಿವೆ.

ತೃತೀಯ ಹಂತದ ಆಸ್ಪತ್ರೆಗಳಲ್ಲಿ ಸಾಮಾನ್ಯ ವೈದ್ಯಕೀಯ ವಿಭಾಗದ ಜೊತೆಗೆ ಮಕ್ಕಳ ಚಿಕಿತ್ಸೆ, ಸ್ತ್ರೀರೋಗ, ಪ್ರಸೂತಿ, ಮನೋರೋಗ, ನರರೋಗ, ಕ್ಯಾನ್ಸರ್ ಚಿಕಿತ್ಸೆ ಮುಂತಾದ ವಿಶೇಷ ಚಿಕಿತ್ಸಾ ಸೌಕರ್ಯಗಳಿರಬೇಕು. ಶಸ್ತ್ರಚಿಕಿತ್ಸೆ ಹಾಗೂ ಸೂಪರ್‌ಸ್ಪೆಷಾಲಿಟಿ ಸೇವೆಗಳು ಲಭ್ಯವಿರಬೇಕು. ಇವುಗಳ ಮೂಲಸೌಕರ್ಯಕ್ಕಾಗಿ ₹ 185 ಕೋಟಿ ಅನುದಾನ ಬೇಕು ಎಂಬುದು ಬಿಬಿಎಂಪಿಯ ಬೇಡಿಕೆ.

ತಳ ಹಂತಕ್ಕೆ ಹೆಚ್ಚುವರಿ ಸಿಬ್ಬಂದಿ: ತಳ ಹಂತದ ಆರೋಗ್ಯ ಸೇವೆಯ ಕೊರತೆ ನೀಗಿಸಲು 871 ಕಿರಿಯ ಆರೋಗ್ಯ ಸಹಾಯಕಿಯರು (ಎಎನ್‌ಎಂ), 330 ಕಿರಿಯ ಆರೋಗ್ಯ ಪರಿವೀಕ್ಷಕರು (ಜೆಎಚ್‌ಐ) ಹಾಗೂ 1622 ಆಶಾ ಕಾರ್ಯಕರ್ತೆಯರು ಸೇರಿ ಒಟ್ಟು 2,823 ಆರೋಗ್ಯ ಕಾರ್ಯಕರ್ತರ ಹುದ್ದೆಗಳನ್ನು ಸೃಷ್ಟಿಸುವ ಪ್ರಸ್ತಾವವನ್ನು ಪಾಲಿಕೆಯು ಸರ್ಕಾರದ ಮುಂದಿಟ್ಟಿದೆ. ಆರೋಗ್ಯ ಮೂಲಸೌಕರ್ಯ ವರ್ಧನೆ ಕುರಿತು ಬಿಬಿಎಂಪಿಯು ಸಲ್ಲಿಸಿರುವ ಪ್ರಸ್ತಾವನೆ ಹಣಕಾಸು ಇಲಾಖೆ ಮುಂದಿದೆ. ಶೀಘ್ರವೇ ಇದಕ್ಕೆ ಅನುಮೋದನೆ ಸಿಗುವ ನಿರೀಕ್ಷೆ ಇದೆ ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ) ಡಿ.ರಂದೀಪ್ ‘ಪ್ರಜಾವಾಣಿ’ಗೆ ತಿಳಿಸಿದರು.

ಆರೋಗ್ಯ ಸೌಕರ್ಯದ ವೃದ್ಧಿಸಿದರೆ ಕೋವಿಡ್‌ನಂತ ಸಾಂಕ್ರಾಮಿಕ ರೋಗಗಳನ್ನು ಮಣಿಸುವುದು ಸುಲಭ ಎಂಬುದು ಬಿಬಿಎಂಪಿಯ ನಿರೀಕ್ಷೆ. ಆದರೆ, ಈ ಎಲ್ಲ ಸೌಕರ್ಯಗಳಿಗೆ ₹ 714.94 ಕೋಟಿ ಅನುದಾನದ ಅಗತ್ಯವಿದೆ. ಜೊತೆಗೆ ವೈದ್ಯರು, ಶುಶ್ರೂಷಕರು, ಇತರ ಅರೆ ವೈದ್ಯಕೀಯ ಸಿಬ್ಬಂದಿ, ಕಚೇರಿ ಸಿಬ್ಬಂದಿ, ಸ್ವಚ್ಛತಾ ಸಿಬ್ಬಂದಿಯನ್ನು ನೇಮಿಸಬೇಕಾಗುತ್ತದೆ. ಸಿಬ್ಬಂದಿ ನೇಮಕ ಮತ್ತು ಆಸ್ಪತ್ರೆಗಳ ನಿರ್ವಹಣೆಗೆ, ಔಷಧ ಖರೀದಿಗೆ ₹ 527.33 ಕೋಟಿ ಹೆಚ್ಚುವರಿ ವೆಚ್ಚ ತಗಲುತ್ತದೆ. ಒಟ್ಟು ₹ 1242. 27 ಕೋಟಿ ಅನುದಾನವನ್ನು ಬಿಬಿಎಂಪಿ ನಿರೀಕ್ಷೆ ಮಾಡುತ್ತಿದೆ. ಇಷ್ಟೆಲ್ಲ ನಿರೀಕ್ಷೆಗಳ ಭಾರವನ್ನು ಈಡೇರಿಸುವಷ್ಟು ಅನುದಾನವನ್ನು ಸರ್ಕಾರ ಕೋವಿಡ್‌ನಂತಹ ಸಂಕಷ್ಟ ಕಾಲದಲ್ಲಿ ಒದಗಿಸುತ್ತದೆಯೇ ಎಂಬುದು ಯಕ್ಷ ಪ್ರಶ್ನೆ.

ಹೆಗ್ಗನಹಳ್ಳಿಯ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ –ಪ್ರಜಾವಾಣಿ ಚಿತ್ರ/ ಅನೂಪ್ ರಾಘ.ಟಿ.

ಯಾವ ಸೌಕರ್ಯ ಬಲವರ್ಧನೆಗೆ ಎಷ್ಟು ವೆಚ್ಚ?

ಸೌಕರ್ಯ	ಸಂಖ್ಯೆ	ವೆಚ್ಚ (₹ ಕೋಟಿಗಳಲ್ಲಿ)
ಪ್ರಾಥಮಿಕ ಆರೋಗ್ಯ ಕೇಂದ್ರಗಳ ನಿರ್ಮಾಣ	57	115.50
ದ್ವಿತೀಯ ಹಂತದ ಆಸ್ಪತ್ರೆ ನಿರ್ಮಾಣ	12	349.00
ತೃತೀಯ ಹಂತದ ಆಸ್ಪತ್ರೆ ನಿರ್ಮಾಣ	4	238.20
ಮಕ್ಕಳ ಚಿಕಿತ್ಸಾ ಕೇಂದ್ರಗಳ ಅಭಿವೃದ್ಧಿ	7	10.61
ಭೌತಿಕ ಚಿಕಿತ್ಸಾ ನಿರ್ಧಾರ ಕೇಂದ್ರಗಳ ಅಭಿವೃದ್ಧಿ	31	1.63

ಹೊಸ ಆರೋಗ್ಯ ಸೌಕರ್ಯ	ವಾರ್ಷಿಕ ನಿರ್ವಹಣಾ ವೆಚ್ಚ
ಸೌಕರ್ಯ	ವೆಚ್ಚ (₹ ಕೋಟಿ)
57 ಯುಪಿಎಚ್‌ಸಿ	11.80
ದ್ವಿತೀಯ ಹಂತದ 20 ಆಸ್ಪತ್ರೆ	97.80
ತೃತೀಯ ಹಂತದ 4 ಹೊಸ ಆಸ್ಪತ್ರೆ	400.00
ಮಕ್ಕಳ ಚಿಕಿತ್ಸೆಯ 7 ಆಸ್ಪತ್ರೆ	15.30
ಕ್ಷೇತ್ರ ಸಿಬ್ಬಂದಿ ವೇತನ	2.37

ದ್ವಿತೀಯ ಹಂತದ ಆಸ್ಪತ್ರೆ ಯೋಜನೆಗಳೇನು?

ದ್ವಿತೀಯ ಹಂತದ ಆಸ್ಪತ್ರೆಗಳು ಯುಪಿಎಚ್‌ಸಿಗಳಿಂದ ಶಿಫಾರಸುಗೊಂಡು ಬರುವ ರೋಗಿಗಳಿಗೆ ವಿಶೇಷ ತಜ್ಞರ ಸೇವೆ ಹಾಗೂ ಪ್ರಸೂತಿ ಸೇವೆಗಳನ್ನು ಒದಗಿಸಬೇಕು. ಇಲ್ಲಿ ಸಾಮಾನ್ಯ ವೈದ್ಯರು, ಅರಿವಳಿಕೆ ತಜ್ಞರು, ಸ್ತ್ರೀರೋಗ ತಜ್ಞರು ಹಾಗೂ ಮಕ್ಕಳ ಚಿಕಿತ್ಸಾ ತಜ್ಞರ ಸೇವೆ ಲಭ್ಯ ಇರಬೇಕು. ಒಳ ರೋಗಿ ವಿಭಾಗದಲ್ಲಿ 30 ಹಾಸಿಗೆಗಳಿರಬೇಕು. ಶಸ್ತ್ರಚಿಕಿತ್ಸಾ ಕೊಠಡಿ, ಹೆರಿಗೆ ಕೊಠಡಿ ಹಾಗೂ ರೋಗ ಪತ್ತೆ ಸೌಕರ್ಯಗಳನ್ನು ಹೊಂದಿರಬೇಕು. ಪ್ರತಿ ವಿಭಾಗಕ್ಕೊಂದು ಇಂತಹ ಆಸ್ಪತ್ರೆ ಹೊಂದಬೇಕು ಎಂಬುದು ಬಿಬಿಎಂಪಿ ಆಶಯ.

ಬಿಬಿಎಂಪಿ ಅಧೀನದಲ್ಲಿ ಈಗಾಗಲೇ ತಲಾ 150 ಹಾಸಿಗೆಗಳ ವ್ಯವಸ್ಥೆಯ ಆರು ಹಾಗೂ 300 ಹಾಸಿಗೆ ವ್ಯವಸ್ಥೆಯ ಒಂದು ಆಸ್ಪತ್ರೆ ಸೇರಿ ಒಟ್ಟು ಏಳು ರೆಫರಲ್ ಆಸ್ಪತ್ರೆಗಳಿವೆ. ಗೋವಿಂದರಾಜನಗರದಲ್ಲಿ ಸಂಗೊಳ್ಳಿರಾಯಣ್ಣ ಡಯಾಲಿಸಿಸ್ ಕೇಂದ್ರದ ನಿರ್ಮಾಣ ಕಾರ್ಯ ಪೂರ್ಣಗೊಂಡಿದೆ. 100 ಹಾಸಿಗೆ ಸೌಕರ್ಯಗಳಿರುವ ಇದನ್ನೇ ಆಸ್ಪತ್ರೆಯನ್ನಾಗಿ ಬಳಸಬಹುದು. ಪುಲಿಕೇಶಿನಗರ ಕ್ಷೇತ್ರದಲ್ಲಿ ಬಿಲಾಲ್‌ನಗರ, ಸರ್ವಜ್ಞನಗರ ಕ್ಷೇತ್ರದ ಎಚ್‌ಬಿಆರ್ ಬಡಾವಣೆ, ಆರ್.ಆರ್.ನಗರದ ಯಶವಂತಪುರ ಜನರಲ್ ಆಸ್ಪತ್ರೆ, ಮಹಾಲಕ್ಷ್ಮಿ ಬಡಾವಣೆಯ ನಂದಿನಿ ಬಡಾವಣೆಗಳಲ್ಲಿ ತಲಾ 100 ಹಾಸಿಗೆಗಳ ಸಾಮರ್ಥ್ಯದ ಆಸ್ಪತ್ರೆಗಳು, ಬ್ಯಾಟರಾಯನಪುರ ಕ್ಷೇತ್ರದ ಸಿಂಗಪುರದಲ್ಲಿ 70 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆ , ಚಿಕ್ಕಪೇಟೆಯ ಸಿದ್ದಯ ಆಸ್ಪತ್ರೆ ಪ್ರಾಂಗಣದಲ್ಲಿ 60 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆ ಹಾಗೂ ಪದ್ಮನಾಭನಗರದ ಬನಶಂಕರಿ ರೆಫರಲ್ ಆಸ್ಪತ್ರೆಯಲ್ಲಿ 50 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆಗಳ ಕಟ್ಟಡ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ.

ಚಾಮರಾಜಪೇಟೆ ಕ್ಷೇತ್ರದ ಬಾಬು ಜಗಜೀವನರಾಮ್ ನಗರದ ಆಸ್ಪತ್ರೆಯಲ್ಲಿ ₹ 13. 2 ಕೋಟಿ ವೆಚ್ಚದಲ್ಲಿ ಹೆಚ್ಚುವರಿ ಮಹಡಿ ನಿರ್ಮಿಸಿ 60 ಹಾಸಿಗೆ ಸೌಕರ್ಯ ಒದಗಿಸಲು ಯೋಜನೆ ರೂಪಿಸಲಾಗಿದೆ.

ಏಳು ಕಡೆ ಈಗಿರುವ ಆರೋಗ್ಯ ಕೇಂದ್ರಗಳ ಬಳಿಯೇ ಹೊಸ ಆಸ್ಪತ್ರೆ ನಿರ್ಮಿಸುವ ಚಿಂತನೆ ಇದೆ. ಐದು ಕಡೆ ಹೊಸತಾಗಿ ಆಸ್ಪತ್ರೆಗಳ ನಿರ್ಮಾಣವಾಗಬೇಕಿದ್ದು, ಇದಕ್ಕಾಗಿ ಜಾಗ ಹುಡುಕಲಾಗಿದೆ. ಬೊಮ್ಮನಹಳ್ಳಿ ಕ್ಷೇತ್ರದಲ್ಲಿ ಸಿಂಗಸಂದ್ರ, ದಾಸರಹಳ್ಳಿ ಕ್ಷೇತ್ರದಲ್ಲಿ ಅಬ್ಬಿಗೆರೆ, ಬಸವನಗುಡಿ ಕ್ಷೇತ್ರದ ವಿದ್ಯಾಪೀಠ ಯುಪಿಎಚ್‌ಸಿಗಳನ್ನು ಹಾಗೂ ಹೆಬ್ಬಾಳದ ಕ್ಷೇತ್ರದಲ್ಲಿ ಮುನಿರೆಡ್ಡಿಪಾಳ್ಯ ಹೆರಿಗೆ ಕೇಂದ್ರ ಮತ್ತು ವಿಜಯನಗರ ಕ್ಷೇತ್ರದ ಆಜಾದ್‌ನಗರ ಹೆರಿಗೆ ಕೇಂದ್ರಗಳನ್ನು ತಲಾ 100 ಹಾಸಿಗೆಗಳ ಆಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಇದೆ. ಪ್ರತಿ ಆಸ್ಪತ್ರೆಗೆ ತಲಾ ₹ 22 ಕೋಟಿಯಂತೆ ಒಟ್ಟು ₹ 110 ಕೋಟಿ ಅನುದಾನದ ಅಗತ್ಯವಿದೆ.

ಬೆಂಗಳೂರು ದಕ್ಷಿಣ ಕ್ಷೇತ್ರದ ಕೋಣನಕುಂಟೆ ಯುಪಿಎಚ್‌ಸಿ ಪ್ರಾಂಗಣದಲ್ಲಿ, ಮಹದೇವಪುರ ಕ್ಷೇತ್ರದ ಕುಂದಲಹಳ್ಳಿ ಗೇಟ್, ಯಶವಂತಪುರ ಕ್ಷೇತ್ರದ ಉಳ್ಳಾಲು, ಬಿಟಿಎಂ ಬಡಾವಣೆ ಕ್ಷೇತ್ರದ ಹಳೆ ಪಾಸ್‌ಪೋರ್ಟ್ ಕಚೇರಿ ಬಳಿ ಹಾಗೂ ಮಲ್ಲೇಶ್ವರ ಕ್ಷೇತ್ರದ ಸ್ಯಾಂಕಿ ಕೆರೆ ಬಳಿ ತಲಾ 100 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆ ನಿರ್ಮಿಸಲು ಒಟ್ಟು ₹ 110 ಕೋಟಿ ವೆಚ್ಚದ ಯೋಜನೆ ಸಿದ್ಧವಾಗಿದೆ.

ಆರೋಗ್ಯ ಸೌಕರ್ಯ: ಕೊರತೆಗಳೇನು?

ಆರೋಗ್ಯ ಸೇವಾ ಕ್ಷೇತ್ರದ ಬೇಡಿಕೆಗಳು ಹಾಗೂ ಸೌಕರ್ಯಗಳ ನಡುವಿನ ಕೊರತೆಗಳನ್ನು ಕೋವಿಡ್ ಎರಡನೇ ಅಲೆ ಜಗಜ್ಜಾಹೀರು ಮಾಡಿತು. ನಗರದಲ್ಲಿ ಪ್ರಾಥಮಿಕ, ದ್ವಿತೀಯ ಹಂತದ ಹಾಗೂ ತೃತೀಯ ಹಂತದ ಆರೋಗ್ಯ ಸೇವೆಯ ಬಲವರ್ಧನೆಯ ಅಗತ್ಯವಿದೆ ಎಂದು ಬಿಬಿಎಂಪಿ ಪ್ರತಿಪಾದಿಸಿದೆ.

ಪ್ರಾಥಮಿಕ ಆರೋಗ್ಯ ಸೇವೆ: ಭಾರತದ ಮಾನದಂಡಗಳ ಪ್ರಕಾರ ಪ್ರತಿ 50 ಸಾವಿರ ಜನರಿಗೆ ತಲಾ ಒಂದು ನಗರ ಪ್ರಾಥಮಿಕ ಆರೋಗ್ಯ ಕೇಂದ್ರ (ಯುಪಿಎಚ್‌ಸಿ) ಇರಬೇಕು. ಆದರೆ, 1.30 ಕೋಟಿ ಜನಸಂಖ್ಯೆಗೆ ಇರುವುದು 140 ಯುಪಿಎಚ್‌ಸಿಗಳು ಮಾತ್ರ. ಅಂದರೆ, 92 ಸಾವಿರ ಜನರಿಗೆ ತಲಾ ಒಂದು ಯುಪಿಎಚ್‌ಸಿ ನಗರದಲ್ಲಿದೆ. 57 ವಾರ್ಡ್‌ಗಳಲ್ಲಿ ಯುಪಿಎಚ್‌ಸಿಯೇ ಇಲ್ಲ. ಈ ಕೊರತೆಯಿಂದಾಗಿ ಸಾಂಕ್ರಾಮಿಕ ರೋಗ ತಡೆಗಟ್ಟುವ, ನಿಯಂತ್ರಿಸುವ ಹಾಗೂ ಈ ಬಗ್ಗೆ ಜಾಗೃತಿ ಮೂಡಿಸುವ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ.

ದ್ವಿತೀಯ ಹಂತ ಆಸ್ಪತ್ರೆಗಳು: ಯುಪಿಎಚ್‌ಸಿಗಳಿಂದ ಹೆಚ್ಚಿನ ಚಿಕಿತ್ಸೆಗೆ ಶಿಫಾರಸುಗೊಳ್ಳುವವರ ಚಿಕಿತ್ಸೆಗೆ ಸರ್ಕಾರಿ ವ್ಯವಸ್ಥೆಯ ದ್ವಿತೀಯ ಹಂತದ ಆಸ್ಪತ್ರೆಗಳ ಸಂಖ್ಯೆಯೂ ತೀರಾ ಕಡಿಮೆ ಇದೆ. ಸರ್ಕಾರದ ಮಾನದಂಡಗಳ ಪ್ರಕಾರ 1.2 ಲಕ್ಷ ಜನಸಂಖ್ಯೆಗೆ ತಲಾ ಒಂದು ದ್ವಿತೀಯ ಹಂತದ ಆಸ್ಪತ್ರೆ ಇರಬೇಕು. ನಗರದ ಜನಸಂಖ್ಯೆಗೆ 108 ದ್ವಿತೀಯ ಹಂತದ ಆಸ್ಪತ್ರೆಗಳ ಅಗತ್ಯವಿದೆ. ಆದರೆ, ಬಿಬಿಎಂಪಿ ಅಧೀನದಲ್ಲಿ ಕೇವಲ 7 ರೆಫರಲ್ ಆಸ್ಪತ್ರೆಗಳಿವೆ. ಈ ಕೊರತೆಯಿಂದಾಗಿ ನಗರದ ದೊಡ್ಡ ಆಸ್ಪತ್ರೆಗಳ ಮೇಲೆ ಹೆಚ್ಚಿನ ಒತ್ತಡ ಬೀಳುತ್ತಿದೆ.

ತೃತೀಯ ಹಂತದ ಆಸ್ಪತ್ರೆಗಳು: ರೋಗಿಗಳ ಚಿಕಿತ್ಸೆ ಸಕಲ ಸೌಕರ್ಯ ಹೊಂದಿರಬೇಕಾದ ಇಂತಹ ಯಾವುದೇ ಆಸ್ಪತ್ರೆಗಳನ್ನೂ ಬಿಬಿಎಂಪಿ ನಡೆಸುತ್ತಿಲ್ಲ. ವೈದ್ಯಕೀಯ ಪ್ರವಾಸೋದ್ಯಮ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ಬೆಂಗಳೂರಿನಲ್ಲಿ ಖಾಸಗಿ ವಲಯದಲ್ಲಿ ಇಂತಹ ಆಸ್ಪತ್ರೆಗಳು ಸಾಕಷ್ಟು ಸಂಖ್ಯೆಯಲ್ಲಿವೆ. ಸರ್ಕಾರಿ ವಲಯದ ವಿಕ್ಟೋರಿಯಾ ಆಸ್ಪತ್ರೆ, ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಗಳ ಮೇಲೆ ಒತ್ತಡ ಸೃಷ್ಟಿಯಾಗುತ್ತಿದೆ.

‘ಸಾಂಕ್ರಾಮಿಕ ನಿರ್ವಹಣೆಗೆ ಸೌಕರ್ಯ ಅಗತ್ಯ’

ಗುಣಮಟ್ಟದ ಹಾಗೂ ಸುಲಭವಾಗಿ ಕೈಗೆಟಕುವಂತಹ ಆರೋಗ್ಯ ಸೇವೆಯನ್ನು ಬೆಂಗಳೂರಿನ ಎಲ್ಲ ನಾಗರಿಕರಿಗೂ ಒದಗಿಸುವುದು ನಮ್ಮ ಉದ್ದೇಶ. ಏನೆಲ್ಲ ಆರೋಗ್ಯ ಸೌಕರ್ಯಗಳನ್ನು ಹೊಸದಾಗಿ ನಿರ್ಮಿಸಬೇಕು, ಇವುಗಳ ಸಿದ್ಧತೆ ಯಾವ ಹಂತದಲ್ಲಿದೆ, ಇದಕ್ಕೆ ಎಷ್ಟು ಅನುದಾನ ಅಗತ್ಯ ಎಂಬ ವಿವರವಾದ ಪ್ರಸ್ತಾವವನ್ನು ಸರ್ಕಾರಕ್ಕೆ ಸಲ್ಲಿಸಿದ್ದೇವೆ. ಅನುದಾನದ ನಿರೀಕ್ಷೆಯಲ್ಲಿದ್ದೇವೆ. ಕೋವಿಡ್‌ನಂತಹ ಸಾಂಕ್ರಾಮಿಕ ರೋಗಗಳನ್ನು ಸಮರ್ಥವಾಗಿ ಎದುರಿಸಲು ಆರೋಗ್ಯ ಸೌಕರ್ಯವನ್ನು ಬಲಪಡಿಸಲೇಬೇಕಾದ ಅನಿವಾರ್ಯ ಇದೆ.

ಗೌರವ್ ಗುಪ್ತ, ಮುಖ್ಯ ಆಯುಕ್ತ, ಬಿಬಿಎಂಪಿ

ಸಂಕ್ಷಿಪ್ತ ಸುದ್ದಿ

ಪೊಲೀಸ್ ಜೊತೆ ಮಹಿಳೆ ವಾಗ್ವಾದ

ಬೆಂಗಳೂರು: ಚಿಕ್ಕಪೇಟೆಯಲ್ಲಿ ಮಹಿಳೆಯೊಬ್ಬರು ಪೊಲೀಸ್ ಸಿಬ್ಬಂದಿ ಜೊತೆಗೆ ವಾಗ್ವಾದ ನಡೆಸಿ, ಅವರ ಕೈಗೆ ಕಚ್ಚಿರುವ ಘಟನೆ ಭಾನುವಾರ ನಡೆದಿದೆ.

‘ಪಾದಚಾರಿ ಮಾರ್ಗದಲ್ಲಿ ಇಡಲಾಗಿದ್ದ ಅಂಗಡಿಗಳನ್ನು ಪೊಲೀಸರು ತೆರವು ಮಾಡಿಸು-ತ್ತಿದ್ದಾಗ, ‘ಯಾಕೆ ಜನರಿಗೆ ಈ ರೀತಿ ತೊಂದರೆ ಮಾಡುತ್ತೀರಾ? ಎಂದು ಮಹಿಳೆ ಪ್ರಶ್ನಿಸಿದ್ದರು. ಪೊಲೀಸ್ ಹಾಗೂ ಮಹಿಳೆ ನಡುವೆ ವಾಗ್ವಾದ ನಡೆಯಿತು. ಈ ವೇಳೆ ಮಹಿಳೆ ತನ್ನ ಮೊಬೈಲ್‌ನಲ್ಲಿ ವಿಡಿಯೊ ಚಿತ್ರೀಕರಿಸಲು ಮುಂದಾದಾಗ ಪೊಲೀಸ್ ಸಿಬ್ಬಂದಿ ಮೊಬೈಲ್ ಕಸಿದುಕೊಂಡರು’. ‘ಮೊಬೈಲ್ ನೀಡಲು ಪೊಲೀಸರು ನಿರಾಕರಿಸಿದಾಗ ಆಕ್ರೋಶಗೊಂಡ ಮಹಿಳೆ, ಪೊಲೀಸ್ ಸಿಬ್ಬಂದಿಯ ಕೈಗೆ ಕಚ್ಚಿದ್ದಾರೆ. ಮಹಿಳೆಯನ್ನು ಪೊಲೀಸರು ವಶಕ್ಕೆ ಪಡೆದರು’ ಎಂದು ಮೂಲಗಳು ತಿಳಿಸಿವೆ.

ಅಗ್ನಿ ಅವಘಡ

ಬೆಂಗಳೂರು: ಬ್ಯಾಂಕ್ ಆಫ್ ಬರೋಡಾದ ಕೆ.ಆರ್.ಮಾರುಕಟ್ಟೆಯ ಶಾಖೆಯ ಕಟ್ಟಡದಲ್ಲಿ ಭಾನುವಾರ ಬೆಂಕಿ ಅವಘಡ ಸಂಭವಿಸಿದೆ.

‘ಎರಡು ಅಗ್ನಿಶಾಮಕ ವಾಹನಗಳು ಬೆಂಕಿ ನಂದಿಸಿದವು. ಬ್ಯಾಂಕ್‌ನಲ್ಲಿದ್ದ ಕಂಪ್ಯೂಟರ್ ಹಾಗೂ ಇತರ ವಸ್ತುಗಳು ಬೆಂಕಿಗಾಹುತಿಯಾಗಿವೆ. ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಕಾಣಿಸಿಕೊಂ-ಡಿರುವುದಾಗಿ ಶಂಕಿಸಲಾಗಿದೆ’ ಎಂದು ಪೊಲೀಸರು ತಿಳಿಸಿದರು.

ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ವಿಶ್ವವಿ-ದ್ಯಾಲಯದ ಜ್ಞಾನಭಾರತಿ ಆವರಣ-ದಲ್ಲಿರುವ ಕಾನೂನು ಕಾಲೇಜಿನಲ್ಲಿ ಪ್ರಸಕ್ತ ಸಾಲಿನ ಬಿ.ಎ., ಎಲ್.ಎಲ್.ಬಿ. (ಆನರ್ಸ್) ಪದವಿಯ ಮೊದಲ ಸೆಮಿಸ್ಟರ್ ಕೋರ್ಸ್‌ನ ಪ್ರವೇಶಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸಾಮಾನ್ಯ ವರ್ಗಕ್ಕೆ 20 ವರ್ಷ ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಕ್ಕೆ ಹಾಗೂ ಇತರೆ ಹಿಂದುಳಿದ ವರ್ಗ ಮತ್ತು ವಿದೇಶಿ ವಿದ್ಯಾರ್ಥಿಗಳಿಗೆ ಗರಿಷ್ಠ 22 ವರ್ಷ ವಯೋಮಿತಿ ನಿಗದಿ ಪಡಿಸಲಾಗಿದೆ.

ಅರ್ಜಿ ಶುಲ್ಕ– ಸಾಮಾನ್ಯ ಮತ್ತು ಇತರೆ ಅಭ್ಯರ್ಥಿಗಳಿಗೆ ₹850, ಪರಿಶಿಷ್ಟ ಜಾತಿ, ಪಂಗಡ ಮತ್ತು ಪ್ರವರ್ಗ 1 ಅಭ್ಯರ್ಥಿಗಳಿಗೆ ₹550.

ಅರ್ಜಿ ಸಲ್ಲಿಕೆಗೆ ಕೊನೆಯ ದಿನ ಆ.12. ಅರ್ಜಿ ನಮೂನೆ ಮತ್ತು ವಿವರಗಳಿಗೆ ವಿಶ್ವವಿದ್ಯಾಲಯದ ಅಧಿಕೃತ ವೆಬ್‌ಸೈಟ್ www.bangaloreuniversity.ac.in ಅಥವಾ www.ulcbangalore.com ಸಂಪರ್ಕಿಸಬಹುದು.

ಮಾಹಿತಿಗೆ: 080-22961172.

ಜ್ಯೋತಿಪಾಳ್ಯದಲ್ಲಿ ಭೂಮಿ ಪೂಜೆ ನೆರವೇರಿಸಿದ ಶಾಸಕ ಎ.ಮಂಜುನಾಥ್

‘ಅಜ್ಜಿ ಕಲಿಕಾ ಕೇಂದ್ರ’ ಕಾಮಗಾರಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಮಾಗಡಿ: ತಾಲ್ಲೂಕಿನ ಜ್ಯೋತಿಪಾಳ್ಯದ ಹದ್ದಿನ ಕಲ್ಲು ಬೆಟ್ಟದ ತಪ್ಪಲಿನ ವನಸಿರಿಯ ನಡುವೆ ಅಜ್ಜಿ ಕಲಿಕಾ ಕೇಂದ್ರದ ಕಟ್ಟಡಕ್ಕೆ ಭಾನುವಾರ ಭೂಮಿಪೂಜೆ ನೆರವೇರಿತು.

ಗ್ರಾಮೀಣ ಮಕ್ಕಳಿಗೆ ಪಠ್ಯೇತರ ಕೌಶಲ ಅಭಿವೃದ್ಧಿ ಕಲೆಗಳನ್ನು ಕಲಿಸುವ ಅಜ್ಜಿ ಕಲಿಕಾ ಕೇಂದ್ರವು ದೆಹಲಿಯ ನಿವೃತ್ತ ಕಲಾಶಿಕ್ಷಕಿ ಸಬಿಹಾ ಹಷ್ಮಿ ಮತ್ತು ತಂಡದವರಿಂದ ಆರಂಭವಾಗಲಿದೆ.

ಅಜ್ಜಿ ಕಲಿಕಾ ಕೇಂದ್ರದ ಕಟ್ಟಡಕ್ಕೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಶಾಸಕ ಎ.ಮಂಜುನಾಥ್, ‘ಅಜ್ಜಿ ಕಲಿಕಾ ಕೇಂದ್ರದಲ್ಲಿ ಸ್ಥಳೀಯ ಯುವಜನತೆಗೆ ಅಜ್ಜಿ ಕಲಿಕಾ ಗ್ರಂಥಾಲಯ ಹಾಗೂ ಸಂಶೋಧನಾ ಕೇಂದ್ರವಿರಲಿದೆ. ಮಕ್ಕಳಿಗೆ ಓದುವ ಹವ್ಯಾಸ ಮತ್ತು ಕಂಪ್ಯೂಟರ್ ತರಬೇತಿ, ಕ್ರಿಯಾತ್ಮಕ ಚಟುವಟಿಕೆಗಳಾದ ಕಥಾಲೇಖನ, ಚಿತ್ರಕಲೆ, ರೇಖಾ ವಿನ್ಯಾಸ, ಸ್ಕ್ರೀನ್ ಪ್ರಿಂಟಿಂಗ್, ಕೊಲಾಜ್ ತಯಾರಿಕೆ, ಬಟ್ಟೆ ಮತ್ತು ರಟ್ಟಿನಿಂದ ಪುನರ್ ಬಳಕೆಯ ಕರಕುಶಲ ವಸ್ತು ತಯಾರಿಕೆ ಹಾಗೂ ಜೇಡಿಮಣ್ಣಿನಿಂದ ವಿವಿಧ ನಮೂನೆಯ ಕೌಶಲಯುಕ್ತ ವಸ್ತು ತಯಾರಿಕೆಗೆ ತರಬೇತಿ ದೊರೆಯುತ್ತಿರುವುದು ತುಂಬಾ ಸಂತೋಷ ತಂದಿದೆ’ ಎಂದರು.

‘ಅಜ್ಜಿ ಕಲಿಕಾ ಕೇಂದ್ರಕ್ಕೆ ಬೇಕಾದ ಸಕಲ ಸವಲತ್ತುಗಳನ್ನು ಒದಗಿಸಿಕೊಟ್ಟು, ಇದೊಂದು ಅಂತರರಾಷ್ಟ್ರೀಯ ಮಟ್ಟದ ಕಲಿಕಾ ಕೇಂದ್ರವಾಗುವಂತೆ ಅಭಿವೃದ್ಧಿಪ-ಡಿಸಲಾಗುವುದು. ಅಜ್ಜಿ ಕಲಿಕಾ ಕೇಂದ್ರ ಕೆಂಪೇಗೌಡರ ನಾಡಿಗೆ ಕಳಸಪ್ರಾಯ-ವಾಗಲಿದೆ. ಜ್ಯೋತಿ ಪಾಳ್ಯದ ಗ್ರಾಮದ ಸಂಪರ್ಕ ರಸ್ತೆಗೆ ಒಂದು ತಿಂಗಳ ಒಳಗೆ ಕಾಂಕ್ರೀಟ್ ಹಾಕಿಸಿಕೊಡುವೆ. ಅಜ್ಜಿ ಕಲಿಕಾ ಕೇಂದ್ರದಲ್ಲಿನ ಸವಲತ್ತುಗಳನ್ನು ಬಳಸಿಕೊಳ್ಳಲು ತಾಲ್ಲೂಕಿನ ಯುವಜನತೆ ಮುಂದಾಗಬೇಕು’ ಎಂದರು.

ಅಕ್ಷರ ವಂಚಿತ ಸಮುದಾಯಗಳ ಬಾಲಕಿಯರಿಗೆ ಕೇಂದ್ರದಲ್ಲಿ ವಿಶೇಷವಾಗಿ ಒತ್ತು ನೀಡುತ್ತಿರುವುದು ಮೆಚ್ಚುಗೆಯಾಯಿತು. 40 ವರ್ಷಗಳ ಕಾಲ ಕಲಾ ಶಿಕ್ಷಕಿಯಾಗಿ ಸೇವೆ ಸಲ್ಲಿಸಿ ತಮ್ಮ ಅಪಾರ ಅನುಭವವನ್ನು ಮಾಗಡಿ ಸೀಮೆಯ ಮಕ್ಕಳಿಗೆ ಕಲಿಸುತ್ತಿರುವ ಸಬಿಹಾ ಹಷ್ಮಿ ಅವರನ್ನು ತಾಲ್ಲೂಕಿನ ಜನತೆಯ ಪರವಾಗಿ ಅಭಿನಂದಿಸುತ್ತೇ-ನೆ. ನಮ್ಮಿಂದ ಆಗುವ ಎಲ್ಲಾ ನೆರವನ್ನು ಕೇಂದ್ರಕ್ಕೆ ನೀಡುತ್ತೇನೆ. ತಾಲ್ಲೂಕಿನ ಯುವಜನತೆ ಕಲಿಕಾ ಕೇಂದ್ರಕ್ಕೆ ಬರಬೇಕು’ ಎಂದರು.

ಪ್ರಗತಿಪರ ಚಿಂತಕ ಕಲ್ಕೆರೆ ಶಿವಣ್ಣ ಮಾತನಾಡಿ, ‘ಉತ್ತರ ಪ್ರದೇಶದ ಆಲಿಗಡದಲ್ಲಿ ಜನಿಸಿದ ಸಬಿಹಾ ಹಷ್ಮಿ ಅವರು ಗ್ರಾಮೀಣ ಭಾಗದ ಬಾಲಕಿಯರಿಗೆ ಕರಕುಶಲ ಕಲೆಗಳನ್ನು ಕಲಿಸಿ ಭಾರತೀಯ ಭಾವೈಕ್ಯ ಪರಂಪರೆಯನ್ನು ಮುಂದುವರೆಸುತ್ತಿ-ರುವುದು ಸಂತಸ ತಂದಿದೆ. ನಾವೆಲ್ಲರೂ ಸಬಿಹಾ ಹಷ್ಮಿ ಅವರ ನೆರವಿಗೆ ನಿಂತು ಅಜ್ಜಿ ಕಲಿಕಾ ಕೇಂದ್ರದ ಸವಲತ್ತುಗಳನ್ನು ಬಳಸಿಕೊಳ್ಳೋಣ’ ಎಂದರು.

ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್ (ಟಿಪಿಎಂಎಲ್) ಸಂಸ್ಥೆಯ ನಿರ್ದೇಶಕರಾದ ಪಾರೂಲ್ ಷಾ ಅವರು ಅಜ್ಜಿ ಕಲಿಕಾ ಕೇಂದ್ರದ ಸಂಸ್ಥಾಪಕ ಟ್ರಸ್ಟಿ ಸಬಿಹಾ ಹಷ್ಮಿ ಅವರೊಂದಿಗೆ ಅಜ್ಜಿ ಕಲಿಕಾ ಕೇಂದ್ರದ ಅಭಿವೃದ್ಧಿ ಬಗ್ಗೆ ಚರ್ಚಿಸಿದರು. ಮ್ಯಾನೇಜಿಂಗ್ ಟ್ರಸ್ಟಿಗಳಾದ ಡಾ.ಪ್ರಸನ್ನ ಶಂಕರ್, ಮಂಜು ಬಾಲಸುಬ್ರಮಣ್ಯ, ಎಜುಕೇಟರ್ ಸುಜ ಸ್ವಾಮಿನಾಥನ್, ಟ್ರಸ್ಟಿ ಸಚ್ಚಿನ್ ತಿವಾರಿ, ಆರ್ಟ್ ಎಜುಕೇಟರ್ ಗಂಗಾಜೋಷಿ, ಟ್ರಸ್ಟಿ ಹಾಗೂ ಸಾಮಾಜಿಕ ಕಾರ್ಯಕರ್ತೆ ಶಬನಂ ಹಷ್ಮಿ, ಬಾಚೇನಹಟ್ಟಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷೆ ಜಯಮ್ಮ ಕೆಂಚಪ್ಪ, ಮರಲಗೊಂಡಲದ ವಿ.ವೆಂಕಟೇಶ್, ಗೋವಿಂದಪ್ಪ, ರಂಗೇಗೌಡ, ರಾಮಣ್ಣ, ಬಾಪುರಾವ್, ಪ್ರೇಮಾಬಾಯಿ, ಪಲ್ಲವಿ, ಸುಷ್ಮಾ, ಅಂಗನವಾಡಿ ಕಾರ್ಯಕರ್ತೆ ಪ್ರಮೀಳಾ, ಕಲಿಕಾ ಕೇಂದ್ರದ ವಿಜಯಸಿಂಹ, ಶೈಲೇಶ್, ಕರ್ನಾಟಕ ರಾಜ್ಯ ರೈತ ಹಿತರಕ್ಷಣಾ ಸಮಿತಿ ರಾಜ್ಯ ಘಟಕದ ಅಧ್ಯಕ್ಷ ಅಳಲಕುಪ್ಪೆ ಗುಡ್ಡೇಗೌಡ ಹಾಗೂ ಜ್ಯೋತಿಪಾಳ್ಯ, ಮರಲಗೊಂಡಲ, ರಂಗನಾಥ ಪುರ, ವೆಂಗಳಪ್ಪನ ತಾಂಡ್ಯದ ನಿವಾಸಿಗಳು ಇದ್ದರು. ಕಲಿಕಾಕೇಂದ್ರದ ಆವರಣದಲ್ಲಿ ಶಾಸಕ ಎ.ಮಂಜುನಾಥ್ ಇತರರು ಸಸಿಗಳನ್ನು ನೆಟ್ಟು ನೀರೆರೆದರು.

ಮಾಗಡಿ ತಾಲ್ಲೂಕಿನ ಜ್ಯೋತಿಪಾಳ್ಯದ ಹದ್ದಿನ ಕಲ್ಲು ಬೆಟ್ಟದ ತಪ್ಪಲಿನಲ್ಲಿ ಅಜ್ಜಿ ಕಲಿಕಾ ಕೇಂದ್ರದ ಕಟ್ಟಡಕ್ಕೆ ಶಾಸಕ ಎ.ಮಂಜುನಾಥ್ ಭೂಮಿ ಪೂಜೆ ನೆರವೇರಿಸಿದರು. ಕೇಂದ್ರದ ಸಂಸ್ಥಾಪಕಿ ಸಬಿಹಾ ಹಷ್ಮಿ, ಸಾಮಾಜಿಕ ಕಾರ್ಯಕರ್ತೆ ಶಬನಂ ಹಷ್ಮಿ, ಪ್ರಗತಿಪರ ಚಿಂತಕ ಕಲ್ಕೆರೆ ಶಿವಣ್ಣ ಇದ್ದರು

ವಾಹನ ಕಳವು: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧ ಭಾಗಗಳಲ್ಲಿ ದ್ವಿಚಕ್ರ ವಾಹನ ಕದಿಯುತ್ತಿದ್ದ ಇಬ್ಬರು ಆರೋಪಿಗಳನ್ನು ಚಂದ್ರಾ ಬಡಾವಣೆ ಪೊಲೀಸರು ಬಂಧಿಸಿದ್ದಾರೆ.

ಮೊಹಮ್ಮದ್ ಆಸೀಫ್ ಮತ್ತು ಮೊಹಮ್ಮದ್ ತಹೀರ್ ಬಂಧಿತ ಆರೋಪಿಗಳು.

‘ಜುಲೈ 24ರಂದು ಠಾಣಾ ವ್ಯಾಪ್ತಿಯ ಮನೆಯೊಂದರ ಬಳಿ ನಿಲ್ಲಿಸಿದ್ದ ದ್ವಿಚಕ್ರ ವಾಹನವನ್ನು ಆರೋಪಿಗಳು ಕದ್ದಿದ್ದರು. ಈ ಸಂಬಂಧ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಆರೋಪಿಗಳಿಂದ ₹3.49 ಲಕ್ಷ ಬೆಲೆ ಬಾಳುವ ಆರು ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ತಿಳಿಸಿದರು.

ಆಟೊ–ಸ್ಕೂಟರ್ ಜಪ್ತಿ: ವಿಜಯನಗರ ಹಾಗೂ ಪುಟ್ಟೇನಹಳ್ಳಿ ಠಾಣಾ ವ್ಯಾಪ್ತಿಗಳಲ್ಲಿ ಆಟೊ ಮತ್ತು ಸ್ಕೂಟರ್ ಕದ್ದಿದ್ದ ಆರೋಪಿಯನ್ನು ವಿಜಯನಗರ ಪೊಲೀಸರು ಬಂಧಿಸಿದ್ದಾರೆ.

ಅಭಿಷೇಕ್ ಬಂಧಿತ ಆರೋಪಿ.

ಮಾರಕಾಸ್ತ್ರ ಜಪ್ತಿ: ಆರೋಪಿಗಳ ಸೆರೆ

ಬೆಂಗಳೂರು: ಪಶ್ಚಿಮ ವಿಭಾಗದ ಪೊಲೀಸರು ಎರಡು ಪ್ರಕರಣಗಳಲ್ಲಿ ಏಳು ಮಂದಿಯನ್ನು ಬಂಧಿಸಿದ್ದಾರೆ. ಚಾಮರಾಜಪೇಟೆಯ ಮೊಮೀನ್ ಪಾಷಾ, ಅನ್ವರ್ ಪಾಷಾ, ಬ್ಯಾಟರಾಯನಪುರದ ಶಾಮಣ್ಣ ಗಾರ್ಡನ್‌ನ ಕೌಶಿಕ್, ವೀರ, ಜೈಕಾರ್, ರಾಜು, ಕಾರ್ತಿಕ್ ಬಂಧಿತ ಆರೋಪಿಗಳು.

‘ಚಾಮರಾಜಪೇಟೆ ಹಾಗೂ ಬ್ಯಾಟರಾಯನಪುರ ಠಾಣಾ ವ್ಯಾಪ್ತಿಗಳಲ್ಲಿ ರೌಡಿ ಮನೆಗಳ ಮೇಲೆ ಕಾರ್ಯಾಚರಣೆ ನಡೆಸಲಾಯಿತು. ಈ ವೇಳೆ ಚಾಮರಾಜಪೇಟೆ ವ್ಯಾಪ್ತಿಯಲ್ಲಿ ಇಬ್ಬರು ಮತ್ತು ಬ್ಯಾಟರಾಯನಪುರ ವ್ಯಾಪ್ತಿಯಲ್ಲಿ ಐದು ಮಂದಿ ಸಿಕ್ಕಿಬಿದ್ದರು. ಆರೋಪಿಗಳಿಂದ ಮಾರಕಾಸ್ತ್ರಗಳನ್ನು ಜಪ್ತಿ ಮಾಡಿ, ಶಸ್ತ್ರಾಸ್ತ್ರ ಕಾಯ್ದೆಯಡಿ ಎರಡು ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

4 ದಿಕ್ಕುಗಳಲ್ಲಿ ಸೈಕ್ಲಿಂಗ್ ಪಥ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ನಾಲ್ಕೂ ದಿಕ್ಕುಗಳಲ್ಲಿ ಅತ್ಯುತ್ತಮವಾದ ಸೈಕ್ಲಿಂಗ್ ಪಥಗಳನ್ನು ನಿರ್ಮಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡಿರುವ ಭಾರತೀಯ ಕ್ರೀಡಾ ಪಟುಗಳನ್ನು ಬೆಂಬಲಿಸಿ ಬಿಜೆಪಿ ಯುವ ಮೋರ್ಚಾ ಆಯೋಜಿಸಿದ್ದ ಸೈಕ್ಲಿಂಗ್ ಜಾಥಾಕ್ಕೆ ವಿಧಾನಸೌಧದ ಮುಂಭಾಗದಲ್ಲಿ ಭಾನುವಾರ ಬೆಳಿಗ್ಗೆ ಚಾಲನೆ ನೀಡಿ ಅವರು ಮಾತನಾಡಿದರು.

ಶಿವರಾಮ ಕಾರಂತ ಬಡಾವಣೆಯಲ್ಲಿ ಸೈಕ್ಲಿಂಗ್ ಪಥ ನಿರ್ಮಿಸಬೇಕು ಎಂಬ ಬೇಡಿಕೆಯನ್ನು ಸಂಸದ ಪಿ.ಸಿ. ಮೋಹನ್ ಮುಂದಿಟ್ಟಿದ್ದಾರೆ. ಶಿವರಾಮ ಕಾರಂತ ಬಡಾವಣೆಯೂ ಸೇರಿದಂತೆ ನಗರದ ನಾಲ್ಕೂ ದಿಕ್ಕುಗಳಲ್ಲಿ ಸೈಕ್ಲಿಂಗ್ ಪಥ ನಿರ್ಮಿಸಲಾಗುವುದು ಎಂದು ಪ್ರಕಟಿಸಿದರು.

ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡಿರುವ ಕ್ರೀಡಾಪಟುಗಳನ್ನು ಬೆಂಬಲಿಸಿ ಬಿಜೆಪಿ ಯುವ ಮೋರ್ಚಾ ವತಿಯಿಂದ ಭಾನುವಾರ ಆಯೋಜಿಸಿದ್ದ ಸೈಕ್ಲಿಂಗ್ ಜಾಥಾದಲ್ಲಿ ಸಂಸದ ಡಿ.ವಿ. ಸದಾನಂದ ಗೌಡ, ಬಿಜೆಪಿ ಯುವ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷರೂ ಆಗಿರುವ ಸಂಸದ ತೇಜಸ್ವಿ ಸೂರ್ಯ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಂಸದ ಪಿ.ಸಿ. ಮೋಹನ್ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ಸಂಸದ ಡಿ.ವಿ. ಸದಾನಂದ ಗೌಡ, ಬಿಜೆಪಿ ಯುವ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷರೂ ಆಗಿರುವ ಸಂಸದ ತೇಜಸ್ವಿ ಸೂರ್ಯ, ಶಾಸಕ ಡಾ.ಕೆ. ಸುಧಾಕರ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಪ್ರಜಾವಾಣಿ LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರ ಪ್ರಸಾರ
ಸಂವಾದ
ಸಂಪುಟ ರಚನೆ ಮತ್ತು ಮಹಿಳಾ ಪ್ರಾತಿನಿಧ್ಯ
ಸಂವಾದದಲ್ಲಿ ಭಾಗವಹಿಸುವವರು

ಆರ್. ಪ್ರಮೀಳಾ ನಾಯ್ಡು, ಅಧ್ಯಕ್ಷೆ, ಕರ್ನಾಟಕ ರಾಜ್ಯ ಮಹಿಳಾ ಆಯೋಗ
ಆರ್.ಮಂಜುಳಾ ನಾಯ್ಡು, ಪ್ರಧಾನ ಕಾರ್ಯದರ್ಶಿ, ಕೆಪಿಸಿಸಿ
ಜ್ಯೋತಿ ಅನಂತಸುಬ್ಬರಾವ್, ಸಿಪಿಐ ರಾಜ್ಯ ಸಮಿತಿ ಸದಸ್ಯೆ
ಸಿ.ಜಿ. ಮಂಜುಳಾ, ಹಿರಿಯ ಪತ್ರಕರ್ತೆ, ಲೇಖಕಿ
ಸೋಮವಾರ, 2-8-2021 ಸಮಯ- ಬೆಳಿಗ್ಗೆ 11ರಿಂದ 12

ಸೈಲೆನ್ಸರ್ ವಿರೂಪ: ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ಕಶ ಶಬ್ದ ಉಂಟು ಮಾಡುವ ಹಾಗೂ ವಿರೂಪಗೊಳಿಸಿರುವ ಸೈಲೆನ್ಸರ್ ಅಳವಡಿಸಿರುವ ವಾಹನಗಳ ವಿರುದ್ಧ ಸಾರಿಗೆ ಇಲಾಖೆ ಅಧಿಕಾರಿಗಳು ಭಾನುವಾರ ಕಾರ್ಯಾಚರಣೆ ನಡೆಸಿ, 40ಕ್ಕೂ ಹೆಚ್ಚು ವಾಹನಗಳ ಮಾಲೀಕರಿಗೆ ನೋಟಿಸ್ ನೀಡಿದ್ದಾರೆ.

‘ದೇವನಹಳ್ಳಿ ಹಾಗೂ ನೆಲಮಂಗಲ–ಹಾಸನ ಮಾರ್ಗದ ಟೋಲ್ ಗೇಟ್‌ಗಳ ಬಳಿ 300 ದ್ವಿಚಕ್ರ ವಾಹನಗಳು ಹಾಗೂ 60 ಕಾರುಗಳ ತಪಾಸಣೆ ನಡೆಸಲಾಯಿತು. ಈ ವೇಳೆ ದೋಷಪೂರಿತ ಸೈಲೆನ್ಸರ್‌ಗಳನ್ನು ಅಳವಡಿಸಿದ್ದ 40ಕ್ಕೂ ಹೆಚ್ಚು ವಾಹನಗಳು ಪತ್ತೆಯಾದವು’ ಎಂದು ಸಾರಿಗೆ ಅಧಿಕಾರಿಯೊಬ್ಬರು ತಿಳಿಸಿದರು.

ಸಾರಿಗೆ ಇಲಾಖೆಯ ಹೆಚ್ಚುವರಿ ಮುಖ್ಯ ಆಯುಕ್ತ ನರೇಂದ್ರ ಹೋಳ್ಕರ್ ಹಾಗೂ ಜಂಟಿ ಆಯುಕ್ತ ಹಾಲಪ್ಪಸ್ವಾಮಿ ನೇತೃತ್ವದಲ್ಲಿ ತಂಡ ರಚಿಸಲಾಗಿತ್ತು.

ಸಮಾವೇಶದಲ್ಲಿ ರಾಜ್ಯ ಸಂಯುಕ್ತ ಕಟ್ಟಡ ಕಾರ್ಮಿಕರ ಸಂಘ ಅಧ್ಯಕ್ಷ ಪಿ.ಎಸ್‌.ಷಣ್ಮುಗಂ ಮಾತನಾಡಿದರು

‘ಅನ್ಯಾಯದ ಮೇಲೆ ಬಂಡವಾಳಶಾಹಿ ವ್ಯವಸ್ಥೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾರ್ಮಿಕ ವರ್ಗಕ್ಕೆ ಸೇರಿರುವ ನಾವುಗಳು ಅನ್ಯಾಯದ ಮೇಲೆ ನಿಂತಿರುವ ಈಗಿನ ಬಂಡವಾಳ ಶಾಹಿ ವ್ಯವಸ್ಥೆಯ ವಿರುದ್ಧ ಸಿಡಿದೇಳುವ ಅವಶ್ಯಕತೆ ಇದೆ’ ಎಂದು ಎಐಯುಟಿಯುಸಿ ಸಂಘಟನೆಯ ರಾಜ್ಯ ಉಪಾಧ್ಯಕ್ಷ ಕೆ.ವಿ.ಭಟ್ ತಿಳಿಸಿದರು.

ರಾಜ್ಯ ಸಂಯುಕ್ತ ಕಟ್ಟಡ ಕಾರ್ಮಿಕರ ಸಂಘವು ಭಾನುವಾರ ಹಮ್ಮಿಕೊಂಡಿದ್ದ ಬೆಂಗಳೂರು ಪೂರ್ವ ವಲಯದ ಸಮಾವೇಶದಲ್ಲಿ ಅವರು ಮಾತನಾಡಿದರು.

‘ಸಂಘಟನೆಯನ್ನು ಮತ್ತಷ್ಟು ಬಲಿಷ್ಠಗೊಳಿಸುವ ಜವಾಬ್ದಾರಿ ಎಲ್ಲ ಸದಸ್ಯರ ಮೇಲಿದೆ. ಅದನ್ನು ಕಾರ್ಯರೂಪಕ್ಕೆ ತರಲು ಕಾರ್ಮಿಕರಿಗೆ ಕ್ರಾಂತಿಕಾರಿ ಹಾಗೂ ಹೋರಾಟದ ವಿಚಾರಗಳ ಅವಶ್ಯಕತೆ ಇದೆ’ ಎಂದರು.

ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಪಿ.ಎಸ್.ಷಣ್ಮುಗಂ,‘ಕಾರ್ಮಿಕ ಕಾಯ್ದೆಗಳ ಮೂಲಕ ಕಾರ್ಮಿಕರ ವಿರೋಧಿ ನೀತಿಗಳನ್ನು ಜಾರಿಗೆ ತರಲಾಗುತ್ತಿದೆ. ನಿರಂತರ ಹೋರಾಟಗಳಿಂದ ಇದನ್ನು ತಡೆಯಬೇಕು’ ಎಂದು ಹೇಳಿದರು.

ಉಪಾಧ್ಯಕ್ಷ ಗೋವಿಂದರಾಜನ್, ‘ಕಾರ್ಮಿಕರ ಒಗ್ಗಟ್ಟು ಇಂದಿನ ಬಂಡವಾಳಶಾಹಿ ಪರಿಸ್ಥಿತಿಯಲ್ಲಿ ಅಗತ್ಯ’ ಎಂದರು.

'ಸಚಿವ ಸ್ಥಾನಕ್ಕೆ ಕ್ಷೇತ್ರ ಮರೆತ ಬಿಜೆಪಿ ಶಾಸಕರು'

ಹುಬ್ಬಳ್ಳಿ: 'ಪ್ರವಾಹ ಸಂದರ್ಭದಲ್ಲೂ ಬಿಜೆಪಿ ಶಾಸಕರು ತಮ್ಮ ಕ್ಷೇತ್ರ ಮರೆತು ಸಚಿವ ಸ್ಥಾನಕ್ಕಾಗಿ ಬೆಂಗಳೂರಲ್ಲಿ ಕೂತು ಕಬ್ಬಾಡುತ್ತಿದ್ದಾರೆ' ಎಂದು ವಿಧಾನ ಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಿಸಿದರು.

ನಗರದ ವಿಮಾನ ನಿಲ್ದಾಣದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಪ್ರವಾಹದ ಈ ತುರ್ತು ಸಂದರ್ಭದಲ್ಲಿ ಎಲ್ಲವನ್ನೂ ಮುಖ್ಯಮಂತ್ರಿ ಒಬ್ಬರೇ ನಿಭಾಯಿಸಲು ಸಾಧ್ಯವಿಲ್ಲ. ಕೂಡಲೇ ಸಚಿವ ಸಂಪುಟ ರಚನೆಯಾಗಬೇಕು' ಎಂದು ಆಗ್ರಹಿಸಿದರು.

'ಕೋವಿಡ್ ಮೊದಲ, ಎರಡನೇ ಅಲೆ ನಿಯಂತ್ರಿಸುವಲ್ಲಿ ಸರ್ಕಾರ ವಿಫಲವಾಗಿದೆ. ಇದೀಗ ಮೂರನೇ ಅಲೆಯನ್ನು ಸಮರ್ಥವಾಗಿ ಎದುರಿಸಲು ಮುಂಜಾಗ್ರತಾ ಕ್ರಮಕೈಗೊಳ್ಳಬೇಕು' ಎಂದರು.

ಸರ್ಕಾರ ಅನುಮತಿ ನೀಡದೇ ಇದ್ದರೆ ಇನ್ನೊಂದು ವಾರದಲ್ಲಿ ತರಗತಿ ಆರಂಭಿಸುವ ಎಚ್ಚರಿಕೆ

ಶಾಲೆ ತಕ್ಷಣ ಆರಂಭಿಸಿ: ರುಪ್ಸಾ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರ ಮಕ್ಕಳ ಹಿತದೃಷ್ಟಿಯಿಂದ ಶಾಲೆಗಳನ್ನು ಕೂಡಲೇ ಆರಂಭಿಸಬೇಕು. ಶಾಲೆ ಆರಂಭಿಸಲು ಸರ್ಕಾರ ಅನುಮತಿ ನೀಡದೇ ಇದ್ದರೆ ಇನ್ನೊಂದು ವಾರದಲ್ಲಿ ತರಗತಿ ಆರಂಭಿಸಲಾಗುವುದು' ಎಂದು ಮಾನ್ಯತೆ ಪಡೆದ ಅನುದಾನರಹಿತ ಖಾಸಗಿ ಶಾಲೆಗಳ ಸಂಘ (ರುಪ್ಸಾ ಕರ್ನಾಟಕ) ಎಚ್ಚರಿಕೆ ನೀಡಿದೆ.

ಈ ಕುರಿತು ಪ್ರತ್ಯೇಕ ಸುದ್ದಿಗೋಷ್ಠಿಯಲ್ಲಿ ಭಾನುವಾರ ಮಾತನಾಡಿದ ರುಪ್ಸಾ ಅಧ್ಯಕ್ಷ ಲೋಕೇಶ್ ತಾಳಿಕೋಟೆ ಮತ್ತು ಹಾಲನೂರ್ ಎಸ್. ಲೇಪಾಕ್ಷ್, 'ಶಾಲೆಗಳನ್ನು ಆರಂಭಿಸುವಂತೆ ನಾವು ಮಾಡಿದ ಮನವಿಗೆ ಸ್ಪಂದಿಸಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ನಮ್ಮನ್ನು ಮಾತುಕತೆಗೆ ಆಹ್ವಾನಿಸಿದ್ದಾರೆ. ಶಾಲೆಗಳನ್ನು ಯಾವುದೇ ವಿಳಂಬ ಮಾಡದೆ ಆರಂಭಿಸುವಂತೆ ನಾವು ಈಗಾಗಲೇ ಬೇಡಿಕೆ ಇಟ್ಟಿದ್ದೇವೆ' ಎಂದರು.

'ಐಸಿಎಂಆರ್, ರಾಜ್ಯ ಸರ್ಕಾರ ರಚಿಸಿದ್ದ ಕಾರ್ಯಪಡೆ ಮತ್ತು ಡಾ. ದೇವಿಶೆಟ್ಟಿ ನೇತೃತ್ವದ ತಜ್ಞರ ಸಮಿತಿ ಶಾಲೆಗಳನ್ನು ಆರಂಭಿಸುವಂತೆ ಹೇಳಿದೆ. ಶಾಲೆ ಆರಂಭಿಸಲು ಜುಲೈ 30ರ ಗಡುವು ನೀಡಿ 10 ದಿನಗಳ ಮೊದಲೇ ಸರ್ಕಾರ ಮತ್ತು ಇಲಾಖೆಯ ಗಮನಕ್ಕೆ ತಂದಿದ್ದರೂ ಯಾವುದೇ ಕ್ರಮ ವಹಿಸಿಲ್ಲ. ಮುಖ್ಯಮಂತ್ರಿಯನ್ನು ಭೇಟಿ ಮಾಡಿ ಶಾಲೆ ಆರಂಭಿಸುವ ಬಗ್ಗೆ ಚರ್ಚೆ ಮಾಡುತ್ತೇವೆ. ಹೊಸ ಮುಖ್ಯಮಂತ್ರಿಗೆ ಗೌರವ ಕೊಟ್ಟು, ಮತ್ತಷ್ಟು ಕಾಲಾವಕಾಶ ಕೊಡಲು ನಿರ್ಧರಿಸಿದ್ದೇವೆ' ಎಂದು ಲೇಪಾಕ್ಷ್ ಹೇಳಿದರು.

ಮುಖ್ಯಾಂಶಗಳು
- ಜೂನ್ 30ರಿಂದಲೇ ಶಾಲೆ ಆರಂಭಿಸಿದ್ದರೆ 50 ಬೋಧನ ದಿನ ಸಿಗುತ್ತಿತ್ತು
- ಆರ್‌ಟಿಇ ಹಣ ಬಿಡುಗಡೆ ಮಾಡಿದ್ದರೂ ಶಾಲೆಗಳ ಖಾತೆಗೆ ಜಮೆ ಆಗಿಲ್ಲ
- ಶಿಕ್ಷಕರಿಗೆ ಘೋಷಿಸಿರುವ ₹ 5,000 ಪ್ಯಾಕೇಜ್ ಖಾತೆಗೆ ಜಮೆ ಮಾಡಲು ಒತ್ತಾಯ

'ರಾಜ್ಯದಲ್ಲಿ ಕೊರೊನಾ ಇಳಿಕೆ ಆಗುತ್ತಿದ್ದಂತೆ, ಶಾಲೆಗಳನ್ನು ಆರಂಭಿಸಲು ಹಿಂದಿನ ಶಿಕ್ಷಣ ಸಚಿವರ ಜೊತೆ ಹಲವು ಬಾರಿ ಮನವಿ ಮಾಡಿದ್ದೆವು. ಜೂನ್ ತಿಂಗಳಿನಲ್ಲಿಯೇ ಶಾಲೆ ಆರಂಭಿಸಿದ್ದರೆ ಕನಿಷ್ಠ 50 ಬೋಧನ ದಿನಗಳು ಸಿಗುತ್ತಿತ್ತು. ಸೋಂಕು ಹೆಚ್ಚಾದರೆ ಆನ್‌ಲೈನ್ ಪಾಠ ಮುಂದುವರಿಸುವಂತೆ ಸೂಚಿಸಿದ್ದೆವು. ಆದರೆ, ಸಚಿವರು ಒಪ್ಪಿಗೆ ನೀಡಲಿಲ್ಲ' ಎಂದು ಲೋಕೇಶ್ ಅಸಮಾಧಾನ ವ್ಯಕ್ತಪಡಿಸಿದರು.

'ಮಾನ್ಯತೆ ನವೀಕರಣಕ್ಕೆ ಅರ್ಜಿ ಸಲ್ಲಿಸಿದ ಶಾಲೆಗಳ ವಸ್ತುಸ್ಥಿತಿ ಪರಿಗಣಿಸಿ ಯಾವುದೇ ಹೊಸ ನಿಯಮ ವಿಧಿಸದೆ ಮತ್ತು ಶುಲ್ಕ ಇಲ್ಲದೆ ಕೇಂದ್ರ ಸರ್ಕಾರದ ಮಾದರಿಯಲ್ಲಿ ಸಾಮಾನ್ಯ ಕಡತದೊಂದಿಗೆ ಅನುಮತಿ ನೀಡಬೇಕು. 2019–20ನೇ ಸಾಲಿನ ಆರ್‌ಟಿಇ ಹಣ ಸರ್ಕಾರ ಬಿಡುಗಡೆ ಮಾಡಿದ್ದರೂ ಶಾಲೆಗಳ ಖಾತೆಗೆ ಜಮೆ ಮಾಡಬೇಕು. ಖಾಸಗಿ ಶಾಲೆಗಳ ಕ್ರಮ ತೆಗೆದುಕೊಳ್ಳಬೇಕು. 2020–21ನೇ ಸಾಲಿನ ಆರ್‌ಟಿಇ ಹಣ ಬಿಡುಗಡೆ ಮಾಡಬೇಕು. ಖಾಸಗಿ ಶಾಲೆಗಳ ಶಿಕ್ಷಕರಿಗೆ ಸರ್ಕಾರ ಘೋಷಿಸಿರುವ ₹ 5,000 ಪ್ಯಾಕೇಜ್ ಕೂಡಲೇ ಖಾತೆಗೆ ಜಮೆ ಮಾಡಬೇಕು' ಎಂದೂ ರುಪ್ಸಾ ಒತ್ತಾಯಿಸಿದೆ.

ಸುದ್ದಿ 2 ನಿಮಿಷ

ಸೆ.30ರೊಳಗೆ ಮೀಸಲಾತಿ ನೀಡಿ: ಬಸವ ಜಯಮೃತ್ಯುಂಜಯ ಶ್ರೀ

ಅಥಣಿ (ಬೆಳಗಾವಿ): 'ಪಂಚಮಸಾಲಿ ಸಮಾಜಕ್ಕೆ ಸೆಪ್ಟೆಂಬರ್ 30ರ ಒಳಗಾಗಿ ಮೀಸಲಾತಿ ನೀಡಬೇಕು. ಇಲ್ಲವಾದರೆ ಅಕ್ಟೋಬರ್ 1ರಂದು ಜೆ. ಎಚ್. ಪಟೇಲ್ ಜಯಂತಿಯಂದು ಬೆಂಗಳೂರು ಫ್ರೀಡಂಪಾರ್ಕ್‌ನಲ್ಲಿ ಹೋರಾಟ ಮುಂದುವರಿಸಲಾಗುವುದು' ಎಂದು ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಎಚ್ಚರಿಸಿದರು.

'ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ನೀಡಲಾಗುವುದು ಎಂದು ಮಾತು ನೀಡಿದ್ದರು. ಸರ್ಕಾರ ಮಾತು ಕೊಟ್ಟಂತೆ ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿಯನ್ನು ಈಗಿನ ಮುಖ್ಯಮಂತ್ರಿ ಬೊಮ್ಮಾಯಿ ನೀಡಬೇಕು' ಎಂದು ಸ್ವಾಮೀಜಿ ಭಾನುವಾರ ಒತ್ತಾಯಿಸಿದರು.

'ಕೇಂದ್ರ ಬಿಜೆಪಿ ವರಿಷ್ಠರು ಪಂಚಮಸಾಲಿ ಜನಾಂಗಕ್ಕೆ ಮುಖ್ಯಮಂತ್ರಿ ಸ್ಥಾನದ ಅವಕಾಶ ಕಲ್ಪಿಸಿ ಕೊಡುತ್ತಾರೆಂದು ನಾಡಿನ ಸಮಾಜ ಬಾಂಧವರು ನಂಬಿದ್ದರು. ಆದರೆ ಕಾಣದ ಕೈಗಳ ಒತ್ತಡದಿಂದ ಕೈತಪ್ಪಿ ಹೋಗಿದೆ. ಆಗಿರುವ ಅನ್ಯಾಯವನ್ನು ಸರಿಪಡಿಸಿಕೊಡುತ್ತಾರೆಂದು ನಂಬಿದ್ದೇವೆ. ಒಂದು ವೇಳೆ ಕಡೆಗಣಿಸಿದರೆ ಮುಂದಿನ ದಿನಗಳಲ್ಲಿ ಸಮಾಜದವರು ತಮ್ಮ ಅಸಮಾಧಾನವನ್ನು ಚುನಾವಣೆ ಸಂದರ್ಭದಲ್ಲಿ ತೋರಿಸುವ ಸಾಧ್ಯತೆಗಳಿವೆ' ಎಂದು ಸ್ವಾಮೀಜಿ ಹೇಳಿದರು.

ಯತ್ನಾಳ ಮಾತನಲ್ಲಿ ಸತ್ಯವಿದೆ: 'ಯಡಿಯೂರಪ್ಪ ಅವರ ವಿಚಾರದಲ್ಲಿ ಧರ್ಮ ಗುರುಗಳು ರಾಜಕೀಯ ಮಾಡಿರುವುದು ಸತ್ಯ. ಪಂಚಮಸಾಲಿಗಳಿಗೆ 2ಎ ಕೊಡುತ್ತೇನೆ ಎಂದು ಮೋಸ ಮಾಡಿದವರೇ ಪಂಚಮಸಾಲಿಗಳು ಮುಖ್ಯಮಂತ್ರಿಯಾಗುವುದನ್ನು ಹಾಳು ಮಾಡಿದ್ದಾರೆ' ಎಂದು ಪರೋಕ್ಷವಾಗಿ ಯತ್ನಾಳ ಯಡಿಯೂರಪ್ಪನವರ ಮೇಲೆ ಮಾಡಿರುವ ಆರೋಪವನ್ನು ಸಮರ್ಥಿಸಿಕೊಂಡರು.

ಸಚಿವರಿಗೆ ನಿಂದನೆ: ಪ್ರಕರಣ ದಾಖಲು

ಯಾದಗಿರಿ: ಆರ್.ಶಂಕರ್ ಅವರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಸಂದರ್ಭದಲ್ಲಿ ಪ್ರವಾಹ ಪರಿಸ್ಥಿತಿ ವೀಕ್ಷಣೆಗೆಂದು ಜಿಲ್ಲೆಗೆ ಭೇಟಿ ನೀಡಿದ್ದಾಗ ಅವರನ್ನು ಅವಾಚ್ಯ ಪದಗಳಿಂದ ನಿಂದಿಸಿದ ಆರೋಪದ ಮೇಲೆ ರೈತ ಬಸಪ್ಪ ಮಲ್ಲಯ್ಯ ಬಂಗಿ ವಿರುದ್ಧ ಶಹಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿವರ: ಕೃಷ್ಣಾ ನದಿ ಪ್ರವಾಹದಿಂದ ಶಹಾಪುರ ತಾಲ್ಲೂಕಿನ ಕೊಳ್ಳೂರು (ಎಂ) ಸೇತುವೆ ಮುಳುಗಡೆ ಆಗಿರುವುದನ್ನು ವೀಕ್ಷಿಸಲು ಆರ್.ಶಂಕರ್ ಜುಲೈ 24ರಂದು ಗ್ರಾಮಕ್ಕೆ ಬಂದಿದ್ದರು. ಆಗ ರೈತ ಬಸಪ್ಪ ಮಲ್ಲಯ್ಯ ಬಂಗಿ 'ಬೆಳೆ ಪರಿಹಾರ ಸಿಕ್ಕಿಲ್ಲ' ಎಂದು ಅವಾಚ್ಯ ಪದಗಳಿಂದ ನಿಂದಿಸಿದ್ದರು. ಆ ನಂತರ ಪೊಲೀಸರು ಪರಿಶೀಲಿಸಿದಾಗ, ಬಸಪ್ಪ ಅವರಿಗೆ ಬೆಳೆ ಪರಿಹಾರ ಸಿಕ್ಕಿರುವುದು ಗೊತ್ತಾಗಿತ್ತು.

'ಪರಿಹಾರ ಸಿಕ್ಕಿದ್ದರೂ ದುರುದ್ದೇಶದಿಂದ ಬಸಪ್ಪ ಅವಾಚ್ಯ ಪದಗಳನ್ನು ಬಳಸಿ ಬೈದಾಡಿದ್ದಾರೆ' ಎಂದು ಆರೋಪಿಸಿ ಜುಲೈ 30ರಂದು ಶಹಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಈ ಪ್ರಕರಣದ ಕುರಿತು ತನಿಖೆ ನಡೆಸಿ, ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸಿ.ಬಿ.ವೇದಮೂರ್ತಿ ತಿಳಿಸಿದ್ದಾರೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು	ಹೊರಹರಿವು
			(ಕ್ಯುಸೆಕ್‌ಗಳಲ್ಲಿ)	
ಕೆ ಆರ್ ಎಸ್*	124.80	115.15	12,865	5,298
ಹಾರಂಗಿ	2,859	2,855.44	4,100	4,260
ಕಬಿನಿ	2284.00	2,279.77	3,500	3,300
ಹೇಮಾವತಿ	2,922	2,919.28	6,951	5,500
ಲಿಂಗನಮಕ್ಕಿ	1,819	1,807.50	18,879	-
ಸೂಪಾ (ಮೀ)	564	552.02	13,876	2,511
ಮಾಣಿ	594	582.18	3469	-
ತುಂಗಭದ್ರಾ	1,633	1632.05	25.806	51.066
ಮಲಪ್ರಭಾ	2079.5	2,075.00	7,458	1,694
ಘಟಪ್ರಭಾ	2175	2,173.30	13,026	14,939
ಭದ್ರಾ	186	182.4	7,842	3,143
ಆಲಮಟ್ಟಿ (ಮೀ)	519.6	516.99	3,87,207	4,02,901
ನಾರಾಯಣಪುರ (ಮೀ)	492.25	489.62	3,20,000	2,71,900

* ನೆಲಮಟ್ಟದಿಂದ

ಈಗ ಬಳಸಿ ಬಿಸಾಡಿದ ಒಡೆದ ಮಡಕೆ: ಕಾಂಗ್ರೆಸ್ ವ್ಯಂಗ್ಯ

'ಈಶ್ವರಪ್ಪಗೆ ವಿಆರ್‌ಎಸ್ ಕೊಡುತ್ತಿರುವ ಬಿಜೆಪಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೆ.ಎಸ್. ಈಶ್ವರಪ್ಪ ಅವರಿಗೆ ಬಿಜೆಪಿ ಬಲವಂತವಾಗಿ ಸ್ವಯಂ ನಿವೃತ್ತಿ ಯೋಜನೆ (ವಿಆರ್‌ಎಸ್) ನೀಡುತ್ತಿದೆ' ಎಂದು ಕಾಂಗ್ರೆಸ್ ವ್ಯಂಗ್ಯವಾಡಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸಂಪುಟದಲ್ಲಿ ಈಶ್ವರಪ್ಪ ಅವರನ್ನು ಕೈಬಿಡಲಾಗುತ್ತಿದೆ ಎಂದು ಹೇಳಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಟ್ವೀಟ್ ಮಾಡಿರುವ ರಾಜ್ಯ ಕಾಂಗ್ರೆಸ್, ಈ ರೀತಿ ವ್ಯಂಗ್ಯವಾಡಿದೆ.

'ನಾನು ಹಿರಿಯ ಎನ್ನುತ್ತಾ ಸ್ಥಾನಮಾನಕ್ಕೆ ಅಂಗಲಾಚುತ್ತಿರುವ ಈಶ್ವರಪ್ಪನವರಿಗೆ ರಿಟೈರ್ಡ್ ಆಗುವ ಮುಂಚೆಯೇ ಬಿಜೆಪಿ ಬಲವಂತವಾಗಿ ವಿಆರ್‌ಎಸ್ ಕೊಡುತ್ತಿದೆ! ಬಿಜೆಪಿಗೆ ಈಶ್ವರಪ್ಪ ಈಗ ಬಳಸಿ ಬಿಸಾಡಿದ ಒಡೆದ ಮಡಕೆ!' ಎಂದು ಕಾಂಗ್ರೆಸ್ ಹೇಳಿದೆ.

'ಈಶ್ವರಪ್ಪನವರೇ, ಕಾಂಗ್ರೆಸ್ ಪಕ್ಷದ ಬಗ್ಗೆ ಮಾತಾಡುವ ಮುಂಚೆ ನಿಮ್ಮ ಸ್ಥಾನ ಮತ್ತು ಮಾನ ಉಳಿಸಿಕೊಳ್ಳುವುದನ್ನು ನೋಡಿ!' ಎಂದೂ ಸಲಹೆ ನೀಡಿದೆ.

'ರಾಯಣ್ಣ ಬ್ರಿಗೇಡ್‌ನಲ್ಲಿ ಪಾಲ್ಗೊಳ್ಳುವುದಿಲ್ಲ'

ವಿಜಯಪುರ: 'ಇನ್ನು ಮುಂದೆ ಸಂಗೊಳ್ಳಿ ರಾಯಣ್ಣ ಬ್ರಿಗೇಡ್ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದಿಲ್ಲ, ನನ್ನ ಜೀವನದಲ್ಲಿ ಆ ದಿಕ್ಕಿನತ್ತ ಕಾಲಿಡುವುದಿಲ್ಲ' ಎಂದು ಶಾಸಕ ಕೆ.ಎಸ್.ಈಶ್ವರಪ್ಪ ಪ್ರಮಾಣ ಮಾಡಿದರು.

'ರಾಯಣ್ಣ ಬ್ರಿಗೇಡ್ ಚಟುವಟಿಕೆ ನಿಲ್ಲಿಸಬೇಕು ಎಂದು ಈ ಹಿಂದೆಯೇ ಗೃಹ ಸಚಿವ ಅಮಿತ್ ಶಾ ಅವರು ನನ್ನನ್ನು ದೆಹಲಿಗೆ ಕರೆಯಿಸಿ ಸೂಚನೆ ನೀಡಿದ್ದಾರೆ. ಹೀಗಾಗಿ ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿ ಆ ಕಡೆ ತಲೆಹಾಕುವುದಿಲ್ಲ' ಎಂದು ನಗರದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಪಕ್ಷ ನೀಡುವ ಜವಾಬ್ದಾರಿಯನ್ನು ನಿರ್ವಹಿಸಲು ಸಿದ್ಧನಿದ್ದೇನೆ. ಉಪ ಮುಖ್ಯಮಂತ್ರಿಯಾಗು ಎಂದರೆ ಆಗುತ್ತೇನೆ. ಇಲ್ಲವೇ, ಸಚಿವನಾಗು ಎಂದರೆ ಆಗುತ್ತೇನೆ. ಅದೂ ಇಲ್ಲ, ಪಕ್ಷದ ಜವಾಬ್ದಾರಿ ನಿರ್ವಹಿಸು ಎಂದರೆ ಅದನ್ನೂ ಮಾಡಲು ಸಿದ್ಧನಿದ್ದೇನೆ' ಎಂದು ಹೇಳಿದರು.

ಬಾಗಲಕೋಟೆ ವರದಿ: 'ಮುಖ್ಯಮಂತ್ರಿ ಅಭ್ಯರ್ಥಿಯಾಗಿದ್ದ ಡಾ.ಜಿ.ಪರಮೇಶ್ವರ್ ಅವರನ್ನು ಚುನಾವಣೆಯಲ್ಲಿ ಸೋಲಿಸಿ ತುಳಿದವರು, ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆಗೆ ಅನ್ಯಾಯ ಮಾಡಿದವರು ಈಗ ಬಿಜೆಪಿಗೆ ಬುದ್ಧಿ ಹೇಳುತ್ತಿದ್ದಾರೆ. ರಾಜ್ಯದಲ್ಲಿ ದಲಿತರನ್ನು ಮುಖ್ಯಮಂತ್ರಿ ಮಾಡಿ ಎಂದು ಬಿಜೆಪಿಗೆ ಬುದ್ಧಿ ಹೇಳುವ ನೈತಿಕತೆ ಕಾಂಗ್ರೆಸ್ ಮುಖಂಡರಿಗೆ ಇಲ್ಲ' ಎಂದು ಶಾಸಕ ಕೆ.ಎಸ್.ಈಶ್ವರಪ್ಪ ಬಾದಾಮಿಯಲ್ಲಿ ಲೇವಡಿ ಮಾಡಿದರು.

ಮುಖ್ಯಮಂತ್ರಿ ದಿಢೀರ್ ದೆಹಲಿಗೆ

ಒಂದನೇ ಪುಟದಿಂದ

ಆದರೆ, ಉಪ ಮುಖ್ಯಮಂತ್ರಿಗಳ ಸಂಖ್ಯೆಯನ್ನು ನಾಲ್ಕು ಅಥವಾ ಐದಕ್ಕೇರಿಸುವ ಕುರಿತು ಆ ಪಕ್ಷದ ವರಿಷ್ಠರ ಹಂತದಲ್ಲಿ ಚರ್ಚೆ ನಡೆದಿದೆ ಎಂಬ ಮಾಹಿತಿ ಲಭಿಸಿದೆ.

ಸಮತೋಲನಕ್ಕೆ ಕಸರತ್ತು: 2023ರ ಚುನಾವಣೆಯನ್ನು ಗುರಿಯಾಗಿ ಇಟ್ಟುಕೊಂಡು ಸಂಪುಟ ರಚಿಸಲು ಬಿಜೆಪಿ ವರಿಷ್ಠರು ಪ್ರಯತ್ನಿಸುತ್ತಿದ್ದಾರೆ. ಶುದ್ಧಹಸ್ತರು, ದಕ್ಷರು ಮತ್ತು ಪಾರದರ್ಶಕ ಆಡಳಿತ ನೀಡುವವರಿಗೆ ಆದ್ಯತೆ ನೀಡಬೇಕು ಎಂಬ ಚರ್ಚೆ ಪಕ್ಷದೊಳಗೆ ನಡೆಯುತ್ತಿದೆ.

2019ರಲ್ಲಿ ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾದ ಬಳಿಕವೂ ಸಂಪುಟ ರಚನೆಗೆ ವರಿಷ್ಠರು ಮುಕ್ತ ಅವಕಾಶ ನೀಡಿರಲಿಲ್ಲ. ಆಗ ಸಂಪುಟ ಸೇರಿದವರಲ್ಲಿ ಹೆಚ್ಚಿನವರು ವರಿಷ್ಠರ ಆಯ್ಕೆಯೇ ಆಗಿದ್ದರು. ಸಿ.ಎನ್. ಅಶ್ವತ್ಥನಾರಾಯಣ ಹಾಗೂ ಚುನಾವಣೆಯಲ್ಲಿ ಸೋತಿದ್ದ ಲಕ್ಷ್ಮಣ ಸವದಿ ಅವರನ್ನು ಉಪ ಮುಖ್ಯಮಂತ್ರಿಯನ್ನಾಗಿ ಮಾಡುವ ಮೂಲಕ ತಮ್ಮ ಆಯ್ಕೆಯೇ ಅಂತಿಮ ಎಂಬ ಸಂದೇಶ ರವಾನಿಸಿದ್ದರು. ಈ ಬಾರಿಯೂ ಅದೇ ಮಾರ್ಗ ಅನುಸರಿಸಲಾಗುತ್ತಿದೆ ಎಂದು ಹೇಳಲಾಗುತ್ತಿದೆ.

'ಬಹುತೇಕ ಎಲ್ಲ ಸಚಿವರನ್ನೂ ಬಿಜೆಪಿ ವರಿಷ್ಠರೇ ಆಯ್ಕೆಮಾಡುವ ಸಾಧ್ಯತೆ ಇದೆ. ಅದರ ನಡುವೆಯೇ ಸರ್ಕಾರವನ್ನು ಸುಲಭವಾಗಿ ಮುನ್ನಡೆಸಿಕೊಂಡು ಹೋಗುವುದಕ್ಕೆ ಅನುಕೂಲವಾಗುವಂತೆ ತಮ್ಮ ಆಯ್ಕೆಯ ಕೆಲವರನ್ನು ಸಚಿವರನ್ನಾಗಿ ಮಾಡುವಂತೆ ವರಿಷ್ಠರನ್ನು ಮನವೊಲಿಸಲು ಬಸವರಾಜ ಬೊಮ್ಮಾಯಿ ಪ್ರಯತ್ನಿಸುತ್ತಿದ್ದಾರೆ' ಎಂದು ಬಿಜೆಪಿ ಮೂಲಗಳು ಹೇಳಿವೆ.

ಮತ್ತೆ ಲಿಂಗಾಯತರೇ ಮುಖ್ಯಮಂತ್ರಿ ಆಗಿರುವುದರಿಂದ ಸಂಪುಟದಲ್ಲಿ ಆ ಸಮುದಾಯದ ಪ್ರಾತಿನಿಧ್ಯ ಕುಗ್ಗುವ ಸಾಧ್ಯತೆ ಇದೆ. ಪಂಚಮಸಾಲಿ ಸಮುದಾಯದಲ್ಲಿ ಹೊಸಮುಖಗಳಿಗೆ ಅವಕಾಶ ನೀಡಲೂಬಹುದು ಎಂಬ ಚರ್ಚೆಯೂ ನಡೆದಿದೆ.

ಹಿರಿಯರು, ಕಿರಿಯರು, ಮೂಲದಿಂದ ಪಕ್ಷದಲ್ಲಿ ಬೆಳೆದವರು, ವಲಸಿಗರು ಎಲ್ಲರನ್ನೂ ಸರಿದೂಗಿಸಿಕೊಂಡು ಸಂಪುಟ ರಚಿಸಬೇಕಾದ ಸವಾಲು ಬಿಜೆಪಿ ವರಿಷ್ಠರ ಮುಂದಿದೆ. ಕಾಂಗ್ರೆಸ್, ಜೆಡಿಎಸ್ ತೊರೆದವರ ಪೈಕಿ ಹೆಚ್ಚು ಮಂದಿಗೆ ಅವಕಾಶ ನಿರಾಕರಿಸಿದರೆ ಅವರು ಇಲ್ಲಿಯೂ ಬಂಡೇಳಬಹುದು ಎಂಬ ಸಣ್ಣ ಆತಂಕವೂ ಪಕ್ಷದ ವರಿಷ್ಠರನ್ನು ಕಾಡುತ್ತಿದೆ. ಕೆಲವು ಅಚ್ಚರಿಯ ಆಯ್ಕೆಗಳೊಂದಿಗೆ ಎಲ್ಲವನ್ನೂ ಸರಿದೂಗಿಸುವ ಪ್ರಯತ್ನವೂ ನಡೆಯುತ್ತಿದೆ.

'ಸಿಗಂದೂರು ವಿಷಯಕ್ಕೆ ಕೈಹಾಕಿ ಅಧಿಕಾರ ಕಳೆದುಕೊಂಡರು'

ಶಿವಮೊಗ್ಗ: 'ಸಿಗಂದೂರು ಕ್ಷೇತ್ರದ ವಿಷಯಕ್ಕೆ ಕೈ ಹಾಕಿ ಯಡಿಯೂರಪ್ಪ ಅವರು ಅಧಿಕಾರ ಕಳೆದುಕೊಂಡರು' ಎಂದು ಮಾಜಿ ಶಾಸಕ ಬೇಳೂರು ಗೋಪಾಲಕೃಷ್ಣ ಹೇಳಿದರು.

'ಸಿಗಂದೂರು ದೇವಸ್ಥಾನ ವಿಷಯಕ್ಕೆ ಕೈ ಹಾಕಿದರೆ ಯಡಿಯೂರಪ್ಪ ಅವರು ಅಧಿಕಾರ ಕಳೆದುಕೊಳ್ಳುತ್ತಾರೆ ಎಂದು ಆರು ತಿಂಗಳ ಹಿಂದೆಯೇ ಹೇಳಿದ್ದೆ. ಅದು ಈಗ ನಿಜವಾಗಿದೆ. ಇನ್ನೂ 3 ಜನ ಇದ್ದಾರೆ. ಅವರು ಸಹ ಅಧಿಕಾರ ಕಳೆದುಕೊಳ್ಳಲಿದ್ದಾರೆ' ಎಂದರು. 'ನಾನು ಯಾವುದೇ ಪಕ್ಷದಲ್ಲಿ ಇರಬಹುದು. ಆದರೆ, ನಮ್ಮ ಈಡಿಗ ಸಮುದಾಯಕ್ಕೆ ಸಚಿವ ಸ್ಥಾನ ನೀಡಬೇಕು' ಎಂದರು.

ಮುಖ್ಯಮಂತ್ರಿ ಆಗಬೇಕೆಂದು ಗಡ್ಡಬಿಟ್ಟದ್ದಲ್ಲ: ಸಿ.ಟಿ.ರವಿ

ಚಿಕ್ಕಮಗಳೂರು: 'ಮುಖ್ಯಮಂತ್ರಿ ಆಗಬೇಕು ಎಂಬ ಕಾರಣಕ್ಕೆ ನಾನು ಗಡ್ಡಬಿಟ್ಟಿದ್ದಲ್ಲ, ಕಾಲೇಜು ದಿನಗಳಿಂದಲೂ ನಿರಂತರವಾಗಿ ಗಡ್ಡಬಿಟ್ಟಿದ್ದೇನೆ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಹೇಳಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಮೈಲಾರಲಿಂಗರ ಭವಿಷ್ಯದ ಬಗ್ಗೆ ಗೊತ್ತಿಲ್ಲ. ಅವರು ಹೇಳಿರುವುದು ನಿಜವಾದರೆ, ಮುಖ್ಯಮಂತ್ರಿ ಆಗುವ ಆಕಾಂಕ್ಷೆ ಇರುವವರೆಲ್ಲರೂ ಗಡ್ಡಬಿಡಲು ಪ್ರಾರಂಭಿಸಬಹುದು' ಎಂದರು.

ಬೊಮ್ಮಾಯಿಗೆ ಗೌಡರ ಬಲ

ಒಂದನೇ ಪುಟದಿಂದ

'ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆ ಇದೆ. 2022ರಲ್ಲಿ ಅದು ಮುಗಿಯಲಿದೆ. ಆ ಬಳಿಕ ವಿಧಾನಸಭಾ ಚುನಾವಣೆ ಬರಲಿದೆ. ಎರಡು ವರ್ಷಗಳ ಅವಧಿಯಲ್ಲಿ ಬೊಮ್ಮಾಯಿ ಸರ್ಕಾರಕ್ಕೆ ಜೆಡಿಎಸ್‌ನಿಂದ ಯಾವ ರೀತಿಯ ತೊಂದರೆಯೂ ಆಗದು' ಎಂದು ಭರವಸೆ ನೀಡಿದರು.

'ಯಡಿಯೂರಪ್ಪ ಅವರನ್ನು ದೂರ ಇಟ್ಟು ಸರ್ಕಾರ ನಡೆಸುವುದು ಕಷ್ಟ. ಯಡಿಯೂರಪ್ಪ ಅವರ ಆಶೀರ್ವಾದವೂ ಬಸವರಾಜ ಬೊಮ್ಮಾಯಿ ಅವರಿಗೆ ಇದೆ. ಬಿಜೆಪಿಯ ವರಿಷ್ಠರ ಬೆಂಬಲ, ಆಶೀರ್ವಾದವೂ ಮುಖ್ಯಮಂತ್ರಿಗೆ ಇದೆ. ಅವರಿಗೆ ಯಾವುದೇ ರೀತಿಯ ತೊಂದರೆ ಆಗುವುದಿಲ್ಲ. ಯಡಿಯೂರಪ್ಪ ಅವರನ್ನು ದೂರ ಇಟ್ಟು ಬೊಮ್ಮಾಯಿ ಆಡಳಿತ ನಡೆಸುತ್ತಾರಾ ಎಂಬುದು ತಮಗೆ ತಿಳಿದಿಲ್ಲ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಬಿಎಸ್‌ವೈ ಆಪ್ತ ಶಾಖೆಯ ಸಿಬ್ಬಂದಿಯೂ ಹೊರಗೆ

ಒಂದನೇ ಪುಟದಿಂದ

ಕರ್ನಾಟಕ ವಿದ್ಯುತ್ ನಿಗಮದ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಯಲ್ಲಿದ್ದ ಐಎಎಸ್ ಅಧಿಕಾರಿ ವಿ. ಪೊನ್ನುರಾಜ್ ಅವರನ್ನು ಮುಖ್ಯಮಂತ್ರಿಯವರ ಕಾರ್ಯದರ್ಶಿಯನ್ನಾಗಿ ನೇಮಿಸಲಾಗಿದೆ. ಪೊನ್ನುರಾಜ್ ಅವರಿಗೆ ವಿದ್ಯುತ್ ನಿಗಮದ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಯನ್ನೂ ಹೆಚ್ಚುವರಿಯಾಗಿ ನೀಡಲಾಗಿದೆ.

ಹಿಂದಿನ ಸರ್ಕಾರದಲ್ಲಿ ಮುಖ್ಯಮಂತ್ರಿಯವರ ಸಲಹೆಗಾರರಾಗಿದ್ದ ನಿವೃತ್ತ ಐಎಎಸ್ ಅಧಿಕಾರಿ ಎಂ. ಲಕ್ಷ್ಮೀನಾರಾಯಣ ಅವರನ್ನು ಬಿಡುಗಡೆ ಮಾಡಲಾಗಿದೆ. ವಿಶೇಷ ಕರ್ತವ್ಯಾಧಿಕಾರಿಯಾಗಿದ್ದ ಡಾ.ಎ. ಲೋಕೇಶ್, ವಿಶೇಷಾಧಿಕಾರಿಗಳಾಗಿದ್ದ ಎಚ್.ಎಸ್. ಸತೀಶ್, ಟಿ.ಎಂ. ಸುರೇಶ್, ಉಪ ಕಾರ್ಯದರ್ಶಿಯಾಗಿದ್ದ ಎ.ಆರ್. ರವಿ ಸೇರಿದಂತೆ ಹಲವು ಅಧಿಕಾರಿಗಳನ್ನು ಕರ್ತವ್ಯದಿಂದ ಬಿಡುಗಡೆ ಮಾಡಿದ್ದು, ಮೂಲ ಸ್ಥಾನಕ್ಕೆ ವರದಿ ಮಾಡಿಕೊಳ್ಳುವಂತೆ ನಿರ್ದೇಶನ ನೀಡಲಾಗಿದೆ.

ಮುಖ್ಯಮಂತ್ರಿಯವರ ಮಾಧ್ಯಮ ಸಮನ್ವಯ ಅಧಿಕಾರಿಗಳಾಗಿದ್ದ ಎಸ್. ಶಾಂತಾರಾಂ, ಜಿ.ಎಸ್. ಸುನೀಲ್, ಸಾಂಸ್ಕೃತಿಕ ಸಮನ್ವಯ ಅಧಿಕಾರಿಯಾಗಿದ್ದ ಗಣೇಶ್ ಯಾಜಿ ಅವರನ್ನೂ ಹುದ್ದೆಯಿಂದ ಕೈಬಿಡಲಾಗಿದೆ.

ಯಡಿಯೂರಪ್ಪ ಅವಧಿಯಲ್ಲಿದ್ದವರಲ್ಲಿ ಮುಖ್ಯಮಂತ್ರಿಯವರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ಇ.ವಿ. ರಮಣ ರೆಡ್ಡಿ ಸೇರಿದಂತೆ ಕೆಲವು ಅಧಿಕಾರಿಗಳನ್ನು ಮಾತ್ರ ಮುಂದುವರಿಸಲಾಗಿದೆ.

ಮಂಗಗಳ ಹತ್ಯೆ: 15ಕ್ಕೂ ಹೆಚ್ಚು ಮಂದಿ ವಶಕ್ಕೆ

ಪ್ರಜಾವಾಣಿ ವಾರ್ತೆ

ಹಾಸನ: ಬೇಲೂರು ತಾಲ್ಲೂಕಿನ ಚೌಡನಹಳ್ಳಿ ಗ್ರಾಮದ ಬಳಿ ನಡೆದಿದ್ದ ಮಂಗಗಳ ಮಾರಣಹೋಮ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ಚುರುಕುಗೊಳಿಸಿರುವ ಪೊಲೀಸ್ ಮತ್ತು ಅರಣ್ಯ ಇಲಾಖೆ, 15ಕ್ಕೂ ಹೆಚ್ಚು ಮಂದಿಯನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದೆ.

ಪ್ರಕರಣದಲ್ಲಿ ಅರಸೀಕೆರೆಯ ದಂಪತಿಯ ಕೈವಾಡ ಇರಬಹುದೆಂಬ ಅನುಮಾನ ದಟ್ಟವಾಗಿದೆ. ಮಂಗ ಹಿಡಿಯುವುದರಲ್ಲಿ ಪಳಗಿದ್ದ ಅವರನ್ನು ಕೆಲ ದಿನಗಳ ಹಿಂದೆ ಸಂಪರ್ಕಿಸಿದ ಗ್ರಾಮಸ್ಥರು, 'ನಮ್ಮೂರಲ್ಲಿ ಕೋತಿ ಹಾವಳಿ ಹೆಚ್ಚಾಗಿದೆ. ಹೇಗಾದರೂ ಮಾಡಿ ಅವುಗಳಿಗೆ ಕಡಿವಾಣ ಹಾಕಬೇಕು' ಎಂದು ಹೇಳಿದ್ದಾರೆ.

ದಂಪತಿಯನ್ನು ಗ್ರಾಮಕ್ಕೆ ಕರೆಸಿಕೊಂಡಿದ್ದಾರೆ. ಮಂಗಗಳು ಸಾಮೂಹಿಕವಾಗಿ ಒಂದೆಡೆ ಬರಲಿ ಎಂಬ ಕಾರಣಕ್ಕೆ ದಂಪತಿ, ನಿತ್ಯವೂ ಅವುಗಳಿಗೆ ಆಹಾರ ಹಾಕಲು ಆರಂಭಿಸಿದ್ದಾರೆ. ಬಳಿಕ ಈ ಕೃತ್ಯ ಎಸಗಿದ್ದಾರೆ ಎನ್ನಲಾಗಿದೆ.

ಮೈಸೂರಿನಲ್ಲಿ ಭಾನುವಾರ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಏರ್ಪಡಿಸಿದ್ದ ಸಮಾರಂಭದಲ್ಲಿ ವಿನಯ್ (ಸಾಹಿತಿ ಡಾ.ಬಿ. ಎಸ್.ಸ್ವಾಮಿ ಪರವಾಗಿ), ಜಾನಪದ ವಿದ್ವಾಂಸರಾದ ಡಾ.ಕುರುವ ಬಸವರಾಜ್, ಡಾ.ಎಚ್.ಟಿ.ಪೋತೆ, ಸಾಹಿತಿ ಪ್ರೊ.ಬಿ.ಆರ್. ಪೊಲೀಸ ಪಾಟೀಲ ಮತ್ತು ಪರಿಸರ ಪ್ರೇಮಿ ಪಿ.ಡಿ.ವಾಲೀಕಾರ ಅವರಿಗೆ 'ಗೊರುಚ ದತ್ತಿನಿಧಿ' ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಪರಿಷತ್ ಅಧ್ಯಕ್ಷ ಗೊ.ರು.ಚನ್ನಬಸಪ್ಪ, ತೋಂಟದ ಸಿದ್ಧರಾಮ ಸ್ವಾಮೀಜಿ, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಾಹಿತಿ ಪ್ರೊ.ಮಲೆಯೂರು ಗುರುಸ್ವಾಮಿ, ಪರಿಷತ್ ನಗರ ಅಧ್ಯಕ್ಷ ಮ.ಗು.ಸದಾನಂದಯ್ಯ ಇದ್ದಾರೆ –ಪ್ರಜಾವಾಣಿ ಚಿತ್ರ

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಕಾರ್ಯಕ್ರಮ

8 ಸಾಧಕರಿಗೆ 'ಗೊರುಚ ದತ್ತಿನಿಧಿ' ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಮೈಸೂರು: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಕೊಡ ಮಾಡುವ 'ಗೊರುಚ ದತ್ತಿನಿಧಿ' ಪ್ರಶಸ್ತಿಯನ್ನು ಎಂಟು ಸಾಧಕರಿಗೆ, ನಗರದಲ್ಲಿ ಭಾನುವಾರ ನಡೆದ ಸಮಾರಂಭದಲ್ಲಿ ಪ್ರದಾನ ಮಾಡಲಾಯಿತು.

2019 ಹಾಗೂ 2020ನೇ ಸಾಲಿನ 'ಗೊರುಚ ಶರಣ ಪ್ರಶಸ್ತಿ'ಯನ್ನು ಕ್ರಮವಾಗಿ ಡಾ.ಸಿ.ವೀರಣ್ಣ, ಡಾ.ಬಸವರಾಜ ಸಾದರ, 'ಗೊರುಚ ಜಾನಪದ ಪ್ರಶಸ್ತಿ'ಯನ್ನು ಡಾ.ಬಿ. ಎಸ್.ಸ್ವಾಮಿ, ಡಾ.ಎಚ್.ಟಿ.ಪೋತೆ, 'ಗೊರುಚ ಶರಣ ಸಾಹಿತ್ಯ ಗ್ರಂಥ ಪ್ರಶಸ್ತಿ'ಯನ್ನು ಪ್ರೊ.ಬಿ.ಆರ್. ಪೊಲೀಸ ಪಾಟೀಲ, ಡಾ.ಬಸವರಾಜ ಸಬರದ, 'ಗೊರುಚ ಜಾನಪದ ಸಾಹಿತ್ಯ ಗ್ರಂಥ ಪ್ರಶಸ್ತಿ'ಯನ್ನು ಪಿ.ಡಿ. ವಾಲೀಕಾರ ಹಾಗೂ ಡಾ.ಕುರುವ ಬಸವರಾಜ್ ಅವರಿಗೆ ಪ್ರದಾನ ಮಾಡಲಾಯಿತು.

ಅನಾರೋಗ್ಯದ ಕಾರಣ ವೀರಣ್ಣ, ಬಿ.ಎಸ್.ಸ್ವಾಮಿ, ಬಸವರಾಜ ಸಾದರ ಹಾಗೂ ಬಸವರಾಜ ಸಬರದ ಗೈರುಹಾಜರಾಗಿದ್ದರು. ಬಿ.ಎಸ್.ಸ್ವಾಮಿ ಪರವಾಗಿ ಅವರ ಮೊಮ್ಮಗ ವಿನಯ್ ಪ್ರಶಸ್ತಿ ಸ್ವೀಕರಿಸಿದರು.

ಗೊರುಚ ಶರಣ ಮತ್ತು ಜಾನಪದ ಪ್ರಶಸ್ತಿಗಳು ತಲಾ ₹25 ಸಾವಿರ ಹಾಗೂ ಗೊರುಚ ಗ್ರಂಥ ಪ್ರಶಸ್ತಿಗಳು ತಲಾ ₹ 10 ಸಾವಿರ ನಗದು ಬಹುಮಾನ ಒಳಗೊಂಡಿವೆ.

ನಿಧನ ವಾರ್ತೆ

ಎಸ್.ಎಂ.ಆನಂದ್

ಹಾಸನ: ಕಾಂಗ್ರೆಸ್ ಮುಖಂಡ, ವಿಧಾನ ಪರಿಷತ್ ಮಾಜಿ ಸದಸ್ಯ ಎಸ್.ಎಂ.ಆನಂದ್ (72) ಭಾನುವಾರ ನಿಧನರಾದರು.

ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದ ಅವರನ್ನು ಬೆಂಗಳೂರಿನ ಆಸ್ಟರ್ ಆರ್‌ವಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆಗೆ ಸ್ಪಂದಿಸಲಿಲ್ಲ.

ಅವರಿಗೆ ಪತ್ನಿ, ಇಬ್ಬರು ಪುತ್ರಿಯರು ಇದ್ದಾರೆ. ಬಿಟ್ಟಗೌಡನಹಳ್ಳಿಯಲ್ಲಿ ಅಂತ್ಯಕ್ರಿಯೆ ನಡೆಯಿತು.

ವೃತ್ತಿಯಲ್ಲಿ ವಕೀಲರಾಗಿದ್ದ ಆನಂದ್, ಮೂರು ದಶಕಗಳ ಹಿಂದೆ ಕಾಂಗ್ರೆಸ್ ಸೇರಿ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದರು. 2004ರಿಂದ 2010ರವರೆಗೆ ವಿಧಾನ ಪರಿಷತ್ ಸದಸ್ಯರಾಗಿದ್ದರು. 1996ರಲ್ಲಿ ಹಾಸನ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಪರಾಭವಗೊಂಡಿದ್ದರು.

ಹಾಸನ ನಗರಾಭಿವೃದ್ಧಿ ಪ್ರಾಧಿಕಾರ, ರಾಜ್ಯ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ಅಧ್ಯಕ್ಷರಾಗಿ ಮತ್ತು ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷರಾಗಿ ಕೆಲಸ ಮಾಡಿದ್ದರು. ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಯೂ ಆಗಿದ್ದರು.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಯತ್ತತಾ ಸಂಸ್ಥೆ)
ಡಾ. ಎಂ.ಹೆಚ್. ಮರಿಗೌಡ ರಸ್ತೆ, ಬೆಂಗಳೂರು-560 029.
ದೂರವಾಣಿ: 91-80-26560722 (Director), 26094000 ಫ್ಯಾಕ್ಸ್: 080-26560723

No.: KMIO/SME(1)/Tender/BM Needles/262/2021-22 Date: 31.07.2021

ಅಲ್ಪಾವಧಿ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಈ ಕೆಳಗಿನ ವೈದ್ಯಕೀಯ ಸಲಕರಣೆಗಳ ಪೂರೈಕೆಗಾಗಿ **ದ್ವಿ-ಲಕೋಟೆ ಪದ್ಧತಿಯಲ್ಲಿ** ಆನ್‌ಲೈನ್ ಮುಖಾಂತರ ಟೆಂಡರುಗಳನ್ನು ಆಹ್ವಾನಿಸಲಾಗಿದೆ.

Sl. No.	Tender No. & Date	Name of the Equipment / Works
1	No.: KMIO/SME(1)/Tender/BM Needles/ 262/ 2021-22, dated: 31.07.2021	Procurement of Bone Marrow Needles to KMIO.
2	No.: KMIO/SME(1)/Tender/Electrical/ 263/ 2021-22, dated: 31.07.2021	Providing Repairs / Services / Reconditioning of Fire Hydrant System at Anikethana Building.
3	No.: KMIO/SME(1)/Tender/TV/264/ 2021-22, dated: 31.07.2021	Procurement of 43" Television to KMIO.
4	No.: KMIO/SME(1)/Tender/KadapaSlab/ 265/2021-22, dated: 31.07.2021	Disposal of Kadapa Slab on As is where is Basis at KMIO.
5	No.: KMIO/SME(1)/Tender/Scrap266/ 2021-22, dated: 31.07.2021	Disposal of Scrap on As is where is Basis at KMIO.
6	No.: KMIO/SME(1)/Tender/CW/1-5 OT/ 267/2021-22, dated: 31.07.2021	Ancillary Supporting Servicing works in civil, Electrical, Clean Room Wall Flooring Vinyl Works with Room Windows to make Modular O.T. Fully Functional.

ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಆನ್‌ಲೈನ್‌ನಲ್ಲಿ ಬಿಡ್ ದಾಖಲೆಗಳ ಲಭ್ಯತೆ ದಿನಾಂಕ: **03.08.2021 ರಿಂದ 11.08.2021.** ಬಿಡ್ ದಾಖಲೆಗಳನ್ನು ವೆಬ್‌ಸೈಟ್ **https://eproc.karnataka.gov.in** ನಿಂದ ನೋಡಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ-ಪೋರ್ಟಲ್ ಶುಲ್ಕ ರೂ. 500/-ನ್ನು ಪಾವತಿಸಿ ಬಿಡ್‌ನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಸಲ್ಲಿಸಬಹುದಾಗಿದೆ. ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ ಮತ್ತು ಸಮಯ: **11.08.2021 ರಂದು ಮಧ್ಯಾಹ್ನ 3:00** ಗಂಟೆಯವರೆಗೆ. ಟೆಂಡರ್ ಸ್ವೀಕರಿಸುವ ಪ್ರಾಧಿಕಾರವು ಯಾವುದೇ ಕಾರಣ ನೀಡದೆ ಟೆಂಡರನ್ನು ಸ್ವೀಕರಿಸುವ / ತಿರಸ್ಕರಿಸುವ / ರದ್ದುಪಡಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.

ಸಹಿ/-
ನಿರ್ದೇಶಕರು

DIPR/DDU/1014/2021-22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಒಳನೋಟ

ಭೂಕುಸಿತ: ಆಹ್ವಾನಿಸಿದ ಆಪತ್ತು

ಬೆಂಗಳೂರು:'ಧರೆ ಕುಸಿದು ತಲ್ಲಣಿಸಿದ ಬದುಕು' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಭಾನುವಾರ (ಆ.1) ಪ್ರಕಟವಾದ 'ಒಳನೋಟ' ವರದಿಗೆ ರಾಜ್ಯದ ವಿವಿಧ ಭಾಗಗಳ ಓದುಗರು ಸ್ಪಂದಿಸಿ, ಪ್ರತಿಕ್ರಿಯಿಸಿದ್ದಾರೆ. ಆಯ್ದ ಅಭಿಪ್ರಾಯಗಳು ಇಲ್ಲಿವೆ.

ಭೂಕುಸಿತ–ಅಭಿವೃದ್ಧಿಯ ಪ್ರಸಾದ

ಅಣೆಕಟ್ಟೆಗಳು ಹಾಗೂ ನದಿ ಜೋಡಣೆಯಂತಹ ಅವೈಜ್ಞಾನಿಕ ಯೋಜನೆಗಳು, ಜೆಸಿಬಿ ಎಂಬ ಪೆಡಂಭೂತ ಭೂಕುಸಿತಕ್ಕೆ ಕಾರಣಗಳು. ಪಶ್ಚಿಮ ಘಟ್ಟಗಳಂತಹ ಸೂಕ್ಷ್ಮ ಭೂ ಪ್ರದೇಶಗಳ ಬಗ್ಗೆ ವೈಜ್ಞಾನಿಕ ಅಧ್ಯಯನವಿಲ್ಲದೆ, ರಾಜಕಾರಣಿಗಳು, ಅಧಿಕಾರಿಗಳ ಧನದಾಹಕ್ಕಾಗಿ ಪ್ರಕೃತಿ, ಜೀವವೈವಿಧ್ಯ ಬಲಿಯಾಗುತ್ತಿರುವುದು ವಿಪರ್ಯಾಸ. ಪ್ರಕೃತಿ ಮಾತೆ ನಮಗೆ ತಿದ್ದಿಕೊಳ್ಳಲು ನೀಡಿರುವ ಅವಕಾಶಗಳನ್ನು ಬಳಸಿಕೊಳ್ಳಬೇಕು.

ಎಸ್.ಶಿಶುಪಾಲ, ದಾವಣಗೆರೆ

ಬೇಕಿದೆ ಶಾಶ್ವತ ಪರಿಹಾರ

ಪ್ರತಿ ವರ್ಷದಂತೆ ಈ ಮಳೆಗಾಲದಲ್ಲೂ ಭೂಕುಸಿತ ಉಂಟಾಗಿದೆ. ಇದು, ಸರ್ಕಾರಕ್ಕೆ ಸಾಮಾನ್ಯ ಎನಿಸಿದೆ. ಅನಾಹುತವಾದಾಗ ಸ್ವಲ್ಪ ಹಣಕಾಸಿನ ನೆರವು ನೀಡಿದರೆ, ಎಲ್ಲವೂ ಸರಿಯಾಗುತ್ತದೆ ಎನ್ನುವುದು ಸರ್ಕಾರದ ನಂಬಿಕೆ. ಅಲ್ಲಿನ ಜನರಿಗೆ ಶಾಶ್ವತ ಪರಿಹಾರವೇ ಇಲ್ಲವಾಗಿದೆ. ಭೂಕುಸಿತದಿಂದ ರೈತರ ಬೆಳೆಗಳೂ ಹಾಳಾಗುತ್ತವೆ. ಸಂತ್ರಸ್ತರಿಗೆ ಭದ್ರವಾದ ನೆಲೆ ಸಿಗಬೇಕು.

ಅಶೋಕ್, ಹಾಸನ

ಸರ್ಕಾರ ನೆರವಿಗೆ ಬರಲಿ

ಭೂಕುಸಿತದಿಂದ ಯಾವ ರೀತಿಯ ಅಪಾಯಗಳಿಗೆ ಸಿಲುಕುತ್ತಾರೆ ಎನ್ನುವುದಕ್ಕೆ ಕಳಚೆಯಂತಹ ಪ್ರದೇಶವೇ ನಿದರ್ಶನ. ಸೂರು ಕಳೆದುಕೊಂಡಿರುವ ಕುಟುಂಬಗಳಿಗೆ ಸರ್ಕಾರದಿಂದ ನೆರವಿನ ಅಗತ್ಯವಿದೆ. ಇಂತಹ ಪ್ರದೇಶದಲ್ಲಿ ಜನರು ನಿರಾಂತಕವಾಗಿ ಜೀವನ ನಡೆಸಲು ಹಾಗೂ ಕೃಷಿಯೇತರ ಚಟುವಟಿಕೆಗಳನ್ನು ಕೈಗೊಳ್ಳಲು ಎಲ್ಲ ರೀತಿಯ ಬೆಂಬಲವನ್ನು ಸರ್ಕಾರ ನೀಡಬೇಕು.

ಗಂಗಾಂತರಂಗ, ಚಿತ್ರದುರ್ಗ

ಸ್ವಾರ್ಥಕ್ಕೆ ಕಡಿವಾಣ ಬೇಕು

ಬೀಸುವ ಗಾಳಿಯನ್ನು ತಡೆದು ವಿದ್ಯುತ್ ಉತ್ಪಾದಿಸುವ, ಹರಿಯುವ ನೀರನ್ನು ತಡೆದು ಅಣೆಕಟ್ಟು ಕಟ್ಟುವ, ದಟ್ಟ ಕಾನನದ ನಡುವೆ ವೇಗವಾಗಿ ಹರಿಯುವ ನದಿಯ ದಿಕ್ಕನ್ನು ಬದಲಿಸುವಂತಹ ಮನುಷ್ಯನ ಸ್ವಾರ್ಥಕ್ಕೆ ತಡೆಯೇ ಇಲ್ಲವಾಗಿದೆ. ಈ ಕಾರಣಕ್ಕೆ ಪ್ರಕೃತಿಯು ಆಗಾಗ ತನ್ನ ಶಕ್ತಿ ಪ್ರದರ್ಶಿಸುತ್ತದೆ. ಪ್ರಕೃತಿಯನ್ನು ತನ್ನ ಸ್ವಾರ್ಥಕ್ಕೆ ವಿಕೃತಿಗೊಳಿಸುವ ಮನಸ್ಥಿತಿ ಬದಲಾಗಬೇಕು.

ಮಲ್ಲಪ್ಪ, ರಾಣೆಬೆನ್ನೂರು

ತಜ್ಞರ ತಂಡ ರಚಿಸಿ

ನೈಸರ್ಗಿಕ ಸಂಪತ್ತಿನಿಂದ ಕೂಡಿರುವ ಮಲೆನಾಡು ಮತ್ತು ಪಶ್ಚಿಮ ಘಟ್ಟಗಳು ಹಲವಾರು ವರ್ಷಗಳಿಂದ ಪರಿಹಾರವಾಗದ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿವೆ. ಮಳೆಯಿಂದಲೇ ಬದುಕುತ್ತಿದ್ದ ಪಶ್ಚಿಮಘಟ್ಟ ಇಂದು ಮಳೆಯಿಂದಲೇ ನಲುಗುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಪ್ರಾಕೃತಿಕ ವಿಕೋಪಗಳು ಹೆಚ್ಚಾಗಿ ಸಂಭವಿಸುತ್ತಿರುವುದು ಆತಂಕಕಾರಿ ಬೆಳವಣಿಗೆ. ಅರಣ್ಯದಲ್ಲಿ ನಡೆಯುತ್ತಿರುವ ಎಲ್ಲ ರೀತಿಯ ದಂಧೆ ನಿಲ್ಲಬೇಕು. ಇವುಗಳ ಅಧ್ಯಯನಕ್ಕಾಗಿ ತಜ್ಞರ ತಂಡವೊಂದನ್ನು ರಚಿಸಬೇಕು.

ಅರ್ಚನಾ, ಬೆಂಗಳೂರು

ಮಾನವನ ದಾಳಿ ನಿಲ್ಲಲಿ

ಅರಣ್ಯ ಪ್ರದೇಶಗಳಲ್ಲಿ ಅಕ್ರಮ ಗಣಿಗಾರಿಕೆ ಹಾಗೂ ಅವೈಜ್ಞಾನಿಕ ಕಾಮಗಾರಿಗಳಿಗೆ ಕಡಿವಾಣ ಬೀಳಲಿ. ಮಾನವ ತನ್ನ ಹಿತಾಸಕ್ತಿ ಸಾಧಿಸಲು ಪ್ರಾಕೃತಿಕ ಸಿರಿಯನ್ನು ನಾಶಪಡಿಸುತ್ತಿರುವುದು ಬೇಸರದ ಸಂಗತಿ. ಭೂ ತಾಯಿಯ ಒಡಲು ಬಗೆಯುವಿಕೆ, ಕಾನನಗಳ ಹನನದಿಂದಾಗಿ ಭೂಮಿ ಸಡಿಲಗೊಂಡು, ಭೂಕುಸಿತದಂತಹ ಅವಘಡಗಳು ಸಂಭವಿಸುತ್ತಿವೆ. ಮಾನವನ ದಾಳಿಯನ್ನು ಮೊದಲು ತಡೆಯಬೇಕು.

ಸೋಮಶೇಖರ, ವಿಜಯನಗರ

ಪ್ರಜಾವಾಣಿ ಸೋಮವಾರ, 2 ಆಗಸ್ಟ್ 2021

ಶಿಕ್ಷಣ

ಜ್ಞಾನ ಅಂದರೆ ಮಾಹಿತಿ ಅಲ್ಲ; ಮೌಲ್ಯ

ವಿಷಯವನ್ನು ತಿಳಿಯುವುದರ ಹೊರತಾದ ಅತ್ಯುತ್ತಮ ವಿಚಾರವೆಂದರೆ ಅದು ಎಲ್ಲಿ ಲಭ್ಯ ಎಂಬುದನ್ನು ತಿಳಿಯುವುದು
-ಸ್ಯಾಮುಯೆಲ್ ಜಾನ್ಸನ್

ಐಟಿ ಉದ್ಯಮ ಮತ್ತು ನವೋದ್ಯಮಗಳಲ್ಲಿ ತಂತ್ರಜ್ಞಾನದಲ್ಲಿ ಪರಿಣತಿ ಪಡೆದ ಫುಲ್ ಸ್ಟ್ಯಾಕ್ ಡೆವಲಪರ್‌ಗೆ ಈಗ ಅವಕಾಶಗಳು ಹೇರಳವಾಗಿವೆ. ಪಿಯುಸಿ ಉತ್ತೀರ್ಣರಾದವರು ಇದಕ್ಕೆ ಬೇಕಾದ ಕಂಪ್ಯೂಟರ್ ಕೋರ್ಸ್ ಮತ್ತು ಇತರ ಕೌಶಲಗಳಲ್ಲಿ ಪರಿಣತಿ ಪಡೆದುಕೊಂಡು ಅವಕಾಶ ಗಿಟ್ಟಿಸಬಹುದು.

ಫುಲ್ ಸ್ಟ್ಯಾಕ್ ಡೆವಲಪರ್ ವೃತ್ತಿ ಅವಕಾಶ ವಿಪುಲ

ಪ್ರತೀಕ್ ಶುಕ್ಲಾ

ಕಾರ್ಪೊರೇಟ್ ಮತ್ತು ಸ್ಟಾರ್ಟ್‌ಅಪ್ ಕ್ಷೇತ್ರಗಳಲ್ಲಿ ಸದ್ಯಕ್ಕೆ ಫುಲ್ ಸ್ಟ್ಯಾಕ್ ಡೆವಲಪರ್‌ಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಉದ್ಯೋಗ ಅವಕಾಶಗಳು ಲಭ್ಯವಾಗುತ್ತಿವೆ. ತಂತ್ರಜ್ಞಾನ ಕಂಪನಿಗಳು ಹೆಚ್ಚಿನ ವೆಚ್ಚ ಮತ್ತು ಸಮಯ ಉಳಿಸಲು ಸಣ್ಣ, ಸಣ್ಣ ತಂಡಗಳತ್ತ ಹೆಚ್ಚು ಗಮನ ನೀಡುತ್ತಿರುವುದು ಕಳೆದ ಒಂದು ವರ್ಷದಿಂದ ಫುಲ್ ಸ್ಟ್ಯಾಕ್ ಡೆವಲಪರ್‌ಗಳಿಗೆ ಬೇಡಿಕೆ ಜಾಸ್ತಿಯಾಗಲು ಕಾರಣ. ಸ್ಟಾರ್ಟ್‌ಅಪ್‌ಗಳು ಮಾತ್ರವಲ್ಲ, ಮುಖ್ಯವಾಹಿನಿಯ ಐಟಿ ಉದ್ಯಮದ ಉತ್ಪನ್ನ ಆಧಾರಿತ ಕಂಪನಿಗಳಲ್ಲಿ ಕೂಡ ಇಂತಹ ಉದ್ಯೋಗಗಳಿಗೆ ಹೆಚ್ಚಿನ ಬೇಡಿಕೆ ಇದೆ. ಉದ್ಯಮದ ವರದಿಗಳ ಪ್ರಕಾರ, ಕಳೆದ ಒಂದು ವರ್ಷದಲ್ಲಿ ಇಂತಹ ಬಹುಬಗೆಯ ಕೌಶಲಗಳನ್ನು ಹೊಂದಿರುವ ವೃತ್ತಿಪರರಿಗೆ ಶೇ 30ರಷ್ಟು ಬೇಡಿಕೆ ಹೆಚ್ಚಿದೆ.

ದತ್ತಾಂಶ, ಸರ್ವರ್, ಸಿಸ್ಟಮ್ ಎಂಜಿನಿಯರಿಂಗ್ ಮತ್ತು ಗ್ರಾಹಕರಿಗೆ ಸಂಬಂಧಿಸಿದ ಎಲ್ಲ ಕೆಲಸ ಕಾರ್ಯಗಳನ್ನು ವ್ಯವಸ್ಥಿತವಾಗಿ ನಿರ್ವಹಿಸುವ ಕುಶಲ ತಂತ್ರಜ್ಞರೇ ಫುಲ್ ಸ್ಟ್ಯಾಕ್ ಡೆವಲಪರ್. ಮಾಹಿತಿ ತಂತ್ರಜ್ಞಾನ ಕಂಪನಿಯಲ್ಲಿ ಈ ತಂತ್ರಜ್ಞರ ಕೆಲಸವೆಂದರೆ ಯಾವುದೇ ಎಂಜಿನಿಯರಿಂಗ್ ತಂಡದ ಕೆಲಸ ಕಾರ್ಯಗಳಿಗೆ ಹೊಸ ಮೌಲ್ಯವನ್ನು ಸೇರ್ಪಡೆ ಮಾಡುವುದು. ಇಂತಹ ತಂತ್ರಜ್ಞರು ವೈವಿಧ್ಯಮಯ ಕೌಶಲ ಮತ್ತು ಸ್ವತಂತ್ರವಾಗಿ ಕೆಲಸ ಮಾಡುವ ಸಾಮರ್ಥ್ಯ ಹೊಂದಿರುವುದರಿಂದ ಯಾವುದೇ ಒಂದು ಯೋಜನೆಯಲ್ಲಿ ಕೆಲಸ ಮಾಡುವಾಗ ಕಾರ್ಯಾಚರಣೆಯ ವೆಚ್ಚ ಕಡಿಮೆ ಮಾಡಲು ಸಾಧ್ಯ.

ಪಿಯುಸಿಯಲ್ಲಿ ಉತ್ತೀರ್ಣ ಆದವರು ಈ ಅಲ್ಪಾವಧಿ ಕೋರ್ಸ್ ಮಾಡಬಹುದು

ಫುಲ್ ಸ್ಟ್ಯಾಕ್ ವೆಬ್ ಡೆವಲಪರ್‌ಗಳ ಕಾರ್ಯವೇನು?

ತಂತ್ರಜ್ಞಾನಗಳ ನೆರವು ಪಡೆದು ಮತ್ತು ವಿಶೇಷ ಪರಿಣತಿಯ ಮೂಲಕ ಉತ್ಪನ್ನವೊಂದನ್ನು ಮೊದಲಿನಿಂದ ಕೊನೆಯವರೆಗೆ ಸಮಗ್ರವಾಗಿ ತಯಾರಿಸುವುದು ಅಥವಾ ನಿಗದಿಪಡಿಸಿದ ಕೆಲಸ - ಕಾರ್ಯಗಳನ್ನು ಹೆಚ್ಚು ವ್ಯವಸ್ಥಿತವಾಗಿ ನಿರ್ವಹಿಸುವ ಪರಿಣತಿ ಇವರಿಗಿರುತ್ತದೆ. ಒಂದು ನಿರ್ದಿಷ್ಟ ಯೋಜನೆಯನ್ನು ಕಾರ್ಯಗತಗೊಳಿಸಲು ಅಗತ್ಯವಾದ ಬಹಳಷ್ಟು ತಂತ್ರಜ್ಞಾನಗಳನ್ನು ಫುಲ್ ಸ್ಟ್ಯಾಕ್ ವಿವರಿಸುತ್ತದೆ. ಈ ಬಗೆಯ ಡೆವಲಪರ್‌ಗೆ ಮೂರು ಹಂತದ ಅಪ್ಲಿಕೇಷನ್ ಸಿಸ್ಟಮ್ ಮಾದರಿಯ ಸಂಪೂರ್ಣ ಮಾಹಿತಿ ಇರುತ್ತದೆ. ಅಪ್ಲಿಕೇಷನ್ ಅಥವಾ ಉತ್ಪನ್ನದ ಫ್ರಂಟ್‌ಎಂಡ್ ಮತ್ತು ಬ್ಯಾಕ್‌ಎಂಡ್ ಘಟಕಗಳನ್ನು ನಿರ್ಮಿಸಲು ಬೇಕಾದ ಎಲ್ಲಾ ತಾಂತ್ರಿಕ ಭಾಷೆಗಳನ್ನು ಕೂಡ ಈ ತಂತ್ರಜ್ಞರು ಅರಿತಿರುತ್ತಾರೆ.

ಸ್ಟ್ಯಾಕ್ ಡೆವಲಪರ್‌ಗೆ ಈ ಕೆಳಕಂಡ ಪ್ರೋಗ್ರಾಮಿಂಗ್ ಜ್ಞಾನ ಅಗತ್ಯ...

1. **ಪ್ರಸ್ತುತಿ ಹಂತ:** ಇದು ಬಳಕೆದಾರರ ಸಂಪರ್ಕ ಸಾಧನದ ಜೊತೆ ವ್ಯವಹರಿಸುವ ಅಪ್ಲಿಕೇಷನ್‌ನ ಪ್ರಮುಖ ಭಾಗವಾಗಿದೆ. ಫುಲ್ ಸ್ಟ್ಯಾಕ್ ಡೆವಲಪರ್ ಎಚ್‌ಟಿಎಂಎಲ್5, ಸಿಎಸ್‌ಎಸ್3 ಮತ್ತು ಜಾವಾಸ್ಕ್ರಿಪ್ಟ್‌ನಂತಹ ತಂತ್ರಜ್ಞಾನಗಳಲ್ಲಿ ವಿಶೇಷ ಪರಿಣತಿ ಹೊಂದಿರಬೇಕು. ಆ್ಯಂಗುಲರ್ ಮತ್ತು ರಿಯಾಕ್ಟ್ ಜೆಎಸ್‌-ನಂತಹ ಫ್ರೇಮ್‌ವರ್ಕ್ ಬಗ್ಗೆ ಸಂಪೂರ್ಣ ತಿಳಿವಳಿಕೆ ಹೊಂದಿರುವುದು ಅವಶ್ಯಕ.
2. **ಬ್ಯುಸಿನೆಸ್ ಲಾಜಿಕ್ ಹಂತ:** ಇದು ದತ್ತಾಂಶ (ಡೇಟಾ) ಊರ್ಜಿತಗೊಳಿಸುವುದರ ಜತೆ ವ್ಯವಹರಿಸುವ ಯಾವುದೇ ಅಪ್ಲಿಕೇಷನ್‌ನ ಬ್ಯಾಕ್‌ಎಂಡ್ ಭಾಗವಾಗಿದೆ. ಡೆವಲಪರ್‌ಗಳು ಪಿಎಚ್‌ಪಿ, ಪೈಥಾನ್, ಜಾವಾ ಮುಂತಾದ ತಂತ್ರಜ್ಞಾನಗಳ ಬಗ್ಗೆ ಜ್ಞಾನವನ್ನು ಹೊಂದಿರಬೇಕು. ಜಾಂಗೊ, ಫ್ಲಾಸ್ಕ್ ಮತ್ತು ಇತರ ತಾಂತ್ರಿಕ ತಿಳಿವಳಿಕೆಯೂ ಹೆಚ್ಚುವರಿ ಪರಿಣತಿ ನೀಡುತ್ತದೆ.
3. **ಡೇಟಾಬೇಸ್ ಹಂತ:** ಇದು ಅಪ್ಲಿಕೇಷನ್‌ನ ಡೇಟಾಬೇಸ್ ನಿರ್ವಹಣಾ ಘಟಕವಾಗಿದ್ದು, ಅಪ್ಲಿಕೇಷನ್ ಡೇಟಾಗೆ ಪ್ರವೇಶ ಕಲ್ಪಿಸುತ್ತದೆ. ಡೆವಲಪರ್‌ಗಳು ಈ ಉದ್ದೇಶಕ್ಕಾಗಿ ವ್ಯಾಪಕವಾಗಿ ಬಳಸಲಾಗುವ ಎಂವೈಎಸ್‌ಕ್ಯುಎಲ್, ಮೊಂಗೊಡಿಬಿ, ಓರಾಕಲ್, ಎಸ್‌ಕ್ಯುಎಲ್‌ಸರ್ವರ್ ನಂತಹ ವಿವಿಧ ಡಿಬಿಎಂಎಸ್ ತಂತ್ರಜ್ಞಾನಗಳ ಬಗ್ಗೆ ಜ್ಞಾನ ಹೊಂದಿರಬೇಕು. ವಾರ್ನಿಷ್, ಮೆಮ್‌ಕ್ಯಾಚ್ಡ್, ರೆಡಿಸ್‌ನಂತಹ ಕ್ಯಾಷಿಂಗ್ ಕಾರ್ಯವಿಧಾನಗಳ ಹೆಚ್ಚುವರಿ ಜ್ಞಾನವು ಬೇಕಾಗುತ್ತದೆ.

ಫುಲ್ ಸ್ಟ್ಯಾಕ್ ಡೆವಲಪರ್‌ಗಳ ಪರಿಣತಿ ಹೆಚ್ಚಿಸಲು ಸಹಾಯ ಮಾಡುವ ಇತರ ತಾಂತ್ರಿಕ ಕೌಶಲಗಳು ಹೀಗಿವೆ:

- ಮೂಲ ವಿನ್ಯಾಸ ಮಾಡುವ ಸಾಮರ್ಥ್ಯ ಮತ್ತು ಸರ್ವರ್‌ಗಳನ್ನು ನಿರ್ವಹಿಸುವ ಜ್ಞಾನ ಅಗತ್ಯ.
- ಲಿನಕ್ಸ್‌ನಲ್ಲಿನ ಉತ್ತಮ ಅನುಭವವು ಸರ್ವರ್‌ಗಳನ್ನು ನಿರ್ವಹಿಸಲು ನೆರವಿಗೆ ಬರುತ್ತದೆ.
- ಇತ್ತೀಚಿನ ಕೋಡ್ ಅನ್ನು ಹೇಗೆ ಪಡೆಯುವುದು, ಕೋಡ್‌ನ ಭಾಗಗಳನ್ನು ನವೀಕರಿಸುವುದು ಹೇಗೆ ಮತ್ತು ಯಾವುದೇ ಸಮಸ್ಯೆ ಇಲ್ಲದೆ ಇತರ ಡೆವಲಪರ್‌ಗಳ ಕೋಡ್‌ನಲ್ಲಿ ಬದಲಾವಣೆಗಳನ್ನು ಮಾಡುವುದು ಹೇಗೆ ಎಂಬುದನ್ನು ಅರ್ಥಮಾಡಿಕೊಳ್ಳಲು ಫುಲ್ ಸ್ಟ್ಯಾಕ್ ಡೆವಲಪರ್‌ಗಳಿಗೆ ಗಿಟ್‌ನ ತಿಳಿವಳಿಕೆಯು ಸಹಾಯ ಮಾಡುತ್ತದೆ.
- ಅಂತರ್ಜಾಲ ತಾಣಗಳ ಸೇವೆಗಳ ಅಥವಾ ಎಪಿಐ ತಿಳಿವಳಿಕೆ.
- ಆರ್‌ಇಎಸ್‌ಟಿ ಮತ್ತು ಎಸ್‌ಒಎಪಿ ಸೃಷ್ಟಿಸುವ ಮತ್ತು ಅವುಗಳನ್ನು ಬಳಸುವ ಜ್ಞಾನ
- ಗುಣಮಟ್ಟದ ಯುನಿಟ್ ಪರೀಕ್ಷೆಗಳನ್ನು ಬರೆಯುವ ಸಾಮರ್ಥ್ಯ
- ದಾಖಲೆಗಳು ಮತ್ತು ಅವುಗಳನ್ನು ಸರಿಯಾದ ಪ್ರಮಾಣದಲ್ಲಿ ನಿಯೋಜಿಸಲು ಸ್ವಯಂಚಾಲಿತ ಪ್ರಕ್ರಿಯೆಗಳ ತಿಳಿವಳಿಕೆ
- ಪ್ರತಿಯೊಂದು ಹಂತವು ತನ್ನದೇ ಆದ ದೋಷಗಳನ್ನು ಹೊಂದಿರುವುದರಿಂದ ಸುರಕ್ಷತಾ ಕ್ರಮಗಳ ಕಾಳಜಿಗಳ ಅರಿವು

ಅರ್ಹತೆ: ಪಿಯುಸಿ ಉತ್ತೀರ್ಣರಾದವರು ಈ ಕೋರ್ಸ್‌ಗಳನ್ನು ಮಾಡಿಕೊಳ್ಳಬಹುದು.

ಪರಿಣತ ಫುಲ್ ಸ್ಟ್ಯಾಕ್ ಡೆವಲಪರ್‌ಗಳಿಗೆ ವಾರ್ಷಿಕ ಸಂಬಳವು ವರ್ಷಕ್ಕೆ ಸರಾಸರಿ ರೂ 6.25 ಲಕ್ಷದಿಂದ ರೂ 14.22 ಲಕ್ಷದವರೆಗೆ ಇರುತ್ತದೆ.

(ಲೇಖಕರು: ಮಸಾಯ್ ಸ್ಕೂಲ್‌ನ ಸಿಇಒ ಮತ್ತು ಸಹ-ಸಂಸ್ಥಾಪಕ)

ರೈಲ್ವೆಯಲ್ಲಿ ನೇಮಕಾತಿ ಹೇಗೆ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿ. ಪ್ರದೀಪ್ ಕುಮಾರ್

1. ನಾನು ಈಗ 2ನೇ ಸೆಮಿಸ್ಟರ್ ಎಂಜಿನಿಯರಿಂಗ್ (ಇಸಿ) ಮಾಡುತ್ತಿದ್ದೀನಿ. ರೈಲ್ವೇಸ್ ನೇಮಕಾತಿ ಪರೀಕ್ಷೆ ಮತ್ತು ತಯಾರಿ ಬಗ್ಗೆ ಮಾಹಿತಿ ನೀಡಿ.

ಶ್ರೇಯಸ್ ದೇಶ್‌ಪಾಂಡೆ, ಬೆಂಗಳೂರು

ರೈಲ್ವೇಸ್ ಹುದ್ದೆಗಳ ನೇಮಕಾತಿ, ಮೂರು ಹಂತದ ಪರೀಕ್ಷೆಗಳ ಮೂಲಕ ನಡೆಯುತ್ತದೆ.

1. ಕಂಪ್ಯೂಟರ್ ಆಧಾರಿತ ಪರೀಕ್ಷೆ ಹಂತ-1: ಎಲ್ಲಾ ಹುದ್ದೆಗಳಿಗೆ ಅನ್ವಯ.
2. ಕಂಪ್ಯೂಟರ್ ಆಧಾರಿತ ಪರೀಕ್ಷೆ, ಹಂತ-2: ಆಯಾ ಹುದ್ದೆಗಳಿಗೆ ಅನ್ವಯವಾಗುವ ಪರೀಕ್ಷೆ.
3. ವೈದ್ಯಕೀಯ ಪರೀಕ್ಷೆ/ ದಾಖಲೆಗಳ ಪರಿಶೀಲನೆ.

ಈ ಎಲ್ಲಾ ಪರೀಕ್ಷೆಗಳನ್ನು 21 ವಲಯಗಳಲ್ಲಿರುವ ರೈಲ್ವೆ ನೇಮಕಾತಿ ಮಂಡಳಿ ನಡೆಸುತ್ತದೆ ಮತ್ತು ಅರ್ಹತೆಯ ಆಧಾರದ ಮೇಲೆ ನೇಮಕಾತಿ ಆಗುತ್ತದೆ. ಆದರೆ, ಕೆಲವೊಮ್ಮೆ ಕೆಳಹಂತದ ಹುದ್ದೆಗಳಿಗೆ ಅರ್ಹತೆಯ ಆಧಾರದ ಮೇಲೆ ನೇರ ನೇಮಕಾತಿ ಆಗುವುದೂ ಇದೆ.

ಪರೀಕ್ಷೆಯ ಮಾದರಿ, ವಿಷಯಸೂಚಿಕೆ ಮತ್ತು ಹೆಚ್ಚಿನ ವಿವರಗಳಿಗಾಗಿ ಗಮನಿಸಿ: http://rrcb.gov.in/

2. ನಾನು 2ನೇ ಪಿಯುಸಿ ಮುಗಿಸಿ ಪ್ಯಾರಾಮೆಡಿಕಲ್ ಮಾಡಿ ಯುಪಿಎಸ್‌ಸಿ ಪರೀಕ್ಷೆ ಬರೆಯಬಹುದಾ?

ಹೆಸರು, ಊರು ತಿಳಿಸಿಲ್ಲ.

ಯುಪಿಎಸ್‌ಸಿ ಪರೀಕ್ಷೆಯನ್ನು ಪ್ಯಾರಾಮೆಡಿಕಲ್ ಸೇರಿದಂತೆ ಯಾವುದೇ ಪದವಿಯ ನಂತರ ಬರೆಯಬಹುದು.

3. ನಾನು ಈಗಷ್ಟೇ ದ್ವಿತೀಯ ಪಿಯುಸಿ ಸೇರಿದ್ದೇನೆ. ನನಗೆ ವಿಎಚ್‌ಎಕ್ಸ್, ಅನಿಮೇಷನ್, ಗೇಮ್ ಡಿಸೈನಿಂಗ್‌ನಲ್ಲಿ ಮುಂದುವರಿಯಬೇಕು ಎಂದು ಆಸಕ್ತಿ ಇದೆ. ದ್ವಿತೀಯ ಪಿಯುಸಿ ನಂತರ ಯಾವ ಕೋರ್ಸ್ ಮಾಡಿದರೆ ಉತ್ತಮ?

ಪ್ರಜ್ವಲ್, ಊರು ತಿಳಿಸಿಲ್ಲ.

ಈ ಸೃಜನಾತ್ಮಕ ಕ್ಷೇತ್ರಗಳಲ್ಲಿ ಆಸಕ್ತಿಯಿದ್ದರೆ ಈ ಕ್ಷೇತ್ರದ ಸ್ಪೆಷಲೈಜೇಷನ್ ಅಂದರೆ ವಿಎಚ್‌ಎಕ್ಸ್, ಅನಿಮೇಷನ್, ಗೇಮ್ ಡಿಸೈನಿಂಗ್ ಮತ್ತು ಡೆವೆಲಪ್‌ಮೆಂಟ್ ಇರುವ ಬಿಎಸ್‌ಸಿ ಕೋರ್ಸ್ ಮಾಡಬಹುದು. ಈ ಕ್ಷೇತ್ರಗಳಲ್ಲಿ ಸಾಕಷ್ಟು ವೈವಿಧ್ಯತೆಗಳಿವೆ ಮತ್ತು ಅದರಂತೆ ಉದ್ಯೋಗದ ಅವಕಾಶಗಳಿವೆ. ಹಾಗಾಗಿ, ನಿಮಗೆ ಯಾವ ಸ್ಪೆಷಲೈಜೇಷನ್‌ನಲ್ಲಿ ಆಸಕ್ತಿಯಿದೆ ಎಂದು ತಿಳಿದು, ಅದರಂತೆ ಕೋರ್ಸ್ ಮತ್ತು ಕಾಲೇಜು ಆಯ್ಕೆ ಮಾಡಬಹುದು.

4. ನಾನು ಎನ್‌ಐಡಿ ಸ್ನಾತಕೋತ್ತರ ಸಂದರ್ಶನವನ್ನು ಮುಗಿಸಿದ್ದೇನೆ. ನಾನು ಎಸ್‌ಟಿ ವರ್ಗಕ್ಕೆ ಸೇರಿದ್ದು ಒಂದು ವೇಳೆ ಪಾಸಾದರೆ ವಿದ್ಯಾರ್ಥಿ ವೇತನದ ಬಗ್ಗೆ ಮಾಹಿತಿ ನೀಡಿ. ಇದಕ್ಕೆ ಉದ್ಯೋಗದ ಅವಕಾಶ ಹೇಗಿದೆ?

ಹೆಸರು ತಿಳಿಸಿಲ್ಲ, ತುಮಕೂರು

ಅರ್ಹತೆ, ಆದಾಯದ ಆಧಾರದ ಮೇಲೆ ಎನ್‌ಐಡಿ ಮತ್ತು ಫೋರ್ಡ್ ಫೌಂಡೇಷನ್ ಸ್ಕಾಲರ್‌ಶಿಪ್ ಸೌಲಭ್ಯಗಳಿವೆ. ಹೆಚ್ಚಿನ ಮಾಹಿತಿಗಾಗಿ ಎನ್‌ಐಡಿ ಸಂಸ್ಥೆಯಲ್ಲಿ ವಿಚಾರಿಸಿ. ಹಾಗೂ, ನಿಮ್ಮ ವರ್ಗಕ್ಕೆ ಮತ್ತು ಎನ್‌ಐಡಿ ವಿದ್ಯಾರ್ಥಿಗಳಿಗೆ ಅನ್ವಯವಾಗುವ ಕೇಂದ್ರ ಸರ್ಕಾರದ ವಿದ್ಯಾರ್ಥಿ ವೇತನ, ಪುಸ್ತಕಗಳು, ಉಚಿತ ಕಂಪ್ಯೂಟರ್ ಮತ್ತು ಸ್ಕಾಲರ್‌ಶಿಪ್ ಯೋಜನೆಗಳಿವೆ. ಹೆಚ್ಚಿನ ಮಾಹಿತಿಗಾಗಿ ಗಮನಿಸಿ: http://socialjustice.nic.in/SchemeList/Send/27?mid = 24541

ಎನ್‌ಐಡಿ ಸ್ನಾತಕೋತ್ತರ ಕೋರ್ಸ್ ನಂತರ ಡಿಸೈನ್ ಸಂಬಂಧಿತ ಉದ್ಯೋಗಾವಕಾಶಗಳು ಅನೇಕ ಕ್ಷೇತ್ರಗಳಲ್ಲಿ ಲಭ್ಯ. ಉದಾಹರಣೆಗೆ ಫ್ಯಾಷನ್, ಟೆಕ್ಸ್‌ಟೈಲ್, ಲೆದರ್, ಅಪರೆಲ್, ಪ್ರಾಡಕ್ಟ್, ಸೆರಾಮಿಕ್, ಫರ್ನಿಚರ್ ಇತ್ಯಾದಿ. ಎನ್‌ಐಡಿ ಸಂಸ್ಥೆಯಲ್ಲಿ ಪ್ಲೇಸ್‌ಮೆಂಟ್ ಸೆಲ್ ಸಹಾ ಕಾರ್ಯ ನಿರ್ವಹಿಸುತ್ತಿದೆ.

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 33

441. ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮ ಯಾವಾಗ ನಡೆಯಿತು?
ಎ) 1857
ಬಿ) 1919
ಸಿ) 1942
ಡಿ)1905

442. ಶಿಕ್ಷಣವು ಮೂಲಭೂತ ಹಕ್ಕು ಎಂದು ತಿಳಿಸಿದ ಸಂವಿಧಾನದ ತಿದ್ದುಪಡಿ
ಎ) 42
ಬಿ) 86
ಸಿ) 73
ಡಿ) 74

443. ವ್ಯಕ್ತಿಯೊಬ್ಬನು ಭವಿಷ್ಯದಲ್ಲಿ ಕಾರು ಖರೀದಿಸಲು ಪ್ರತೀ ತಿಂಗಳು ನಿಯಮಿತವಾಗಿ ಉಳಿತಾಯ ಮಾಡಲು ಈ ಬ್ಯಾಂಕ್ ಖಾತೆಯನ್ನು ತೆರೆಯಬೇಕು
ಎ) ಚಾಲ್ತಿ ಖಾತೆ
ಬಿ) ಉಳಿತಾಯ ಖಾತೆ
ಸಿ) ಆವರ್ತ ಠೇವಣಿ ಖಾತೆ
ಡಿ) ನಿಶ್ಚಿತ ಠೇವಣಿ ಖಾತೆ

444. 1935ರ ಭಾರತ ಸರ್ಕಾರದ ಕಾಯ್ದೆಯು ಒಂದು ಮುಖ್ಯ ದಾಖಲೆಯಾಗಿದೆ. ಏಕೆಂದರೆ ಅದು
ಎ) ಪ್ರಾಂತ್ಯಗಳಲ್ಲಿ ದ್ವಿ ಸರ್ಕಾರವನ್ನು ಜಾರಿಗೆ ತಂದಿತು
ಬಿ) ನಿಯಂತ್ರಣ ಮಂಡಳಿಯನ್ನು ನೇಮಿಸಿತು
ಸಿ) ಮತೀಯ ಆಧಾರದ ಪ್ರತ್ಯೇಕ ಚುನಾವಣಾ ಕ್ಷೇತ್ರಗಳನ್ನು ಸ್ಥಾಪಿಸಿತು
ಡಿ) ಅಖಿಲ ಭಾರತೀಯ ಒಕ್ಕೂಟ ವ್ಯವಸ್ಥೆಗೆ ಅವಕಾಶ ಮಾಡಿಕೊಟ್ಟಿತು

445. ಗೋವಾ ಪೋರ್ಚುಗೀಸರಿಂದ ವಿಮೋಚನೆಗೊಂಡ ವರ್ಷ
ಎ) 1954
ಬಿ) 1963
ಸಿ) 1961
ಸಿ) 1971

446. ಕರ್ನಾಟಕ ಪೊಲೀಸ್ ಅಕಾಡೆಮಿ ಎಲ್ಲಿದೆ?
ಎ) ಬೆಂಗಳೂರು
ಬಿ) ಚನ್ನಪಟ್ಟಣ
ಸಿ) ಕಲಬುರ್ಗಿ
ಡಿ) ಮೈಸೂರು

447. ದಕ್ಷಿಣ ಏಷ್ಯಾ ಪ್ರಾದೇಶಿಕ ಸಹಕಾರ ಸಂಸ್ಥೆಯ ಆಡಳಿತ ಕಚೇರಿ ಎಲ್ಲಿದೆ?
ಎ) ಬ್ಯಾಂಕಾಕ್
ಬಿ) ಕಠ್ಮಂಡು
ಸಿ) ಕೊಲೊಂಬೊ
ಡಿ) ದೆಹಲಿ

448. 'ಬೋನ್ಸಾಯ್' ಎಂಬ ಶಬ್ದ ಈ ಕೆಳಗಿನ ಯಾವುದಕ್ಕೆ ಸಂಬಂಧಿಸಿದೆ?
ಎ) ಭತ್ತದ ಕೃಷಿ
ಬಿ) ತೋಟಗಾರಿಕೆ
ಸಿ) ಜಾಗತಿಕ ತಾಪಮಾನ ಏರಿಕೆ
ಡಿ) ಮಣ್ಣಿನ ಸವಕಳಿ

449. ಪ್ರಸಿದ್ಧ ನಾಟಕ 'ತುಘಲಕ್' ಕರ್ತೃ
ಎ) ಗಿರೀಶ್ ಕಾರ್ನಾಡ್
ಬಿ) ಯು.ಆರ್.ಅನಂತಮೂರ್ತಿ
ಸಿ) ಎಸ್.ಎಲ್.ಭೈರಪ್ಪ
ಡಿ) ಪೂರ್ಣಚಂದ್ರ ತೇಜಸ್ವಿ

450. ಚಿಟ್ಟಾಣಿ ರಾಮಚಂದ್ರ ಹೆಗಡೆ ಯಾವ ಕ್ಷೇತ್ರದಲ್ಲಿ ಹೆಸರು ಮಾಡಿದ್ದಾರೆ?
ಎ) ತಬಲಾ
ಬಿ) ಭರತನಾಟ್ಯ
ಸಿ) ಶಾಸ್ತ್ರೀಯ ಗಾಯನ
ಡಿ) ಯಕ್ಷಗಾನ

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 32ರ ಉತ್ತರ: 426. ಸಿ, 427. ಎ, 428. ಬಿ, 429. ಬಿ, 430. ಡಿ, 431. ಸಿ, 432. ಸಿ, 433. ಡಿ, 434. ಎ, 435. ಸಿ, 436. ಎ, 437. ಡಿ, 438. ಸಿ, 439. ಡಿ

ಪ್ರಜಾವಾಣಿ ನೋಡಿಯೊ
'ಆನ್‌ಲೈನ್‌ನಲ್ಲಿ ಕ್ರಿಯಾತ್ಮಕ ಪಾಠ ಹೇಗೆ?'
ಈ ವಿಡಿಯೊವನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
prajavani.netನಲ್ಲೂ ವಿಡಿಯೊ ಲಭ್ಯ

ವಿದ್ಯಾರ್ಥಿ ವೇತನ ಕೈಪಿಡಿ

ಐಐಟಿ ಗಾಂಧಿನಗರ ಡಿಪಾರ್ಟ್‌ಮೆಂಟ್ ಆಫ್ ಮ್ಯಾಥ್‌ಮೆಟಿಕ್ಸ್ ಇನ್‌ಸ್ಟಿಟ್ಯೂಟ್ ಪೋಸ್ಟ್‌ಡಾಕ್ಟೊರಲ್ ಫೆಲೋಶಿಪ್ 2021
ವಿವರ: ಪಿಎಚ್‌ಡಿ ಪದವಿ ಪಡೆದವರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಅರ್ಹತೆ: ವಿಶ್ಲೇಷಣೆಯಲ್ಲಿ ಪರಿಣತಿ ಹೊಂದಿರಬೇಕು. ಕಂಪ್ಯೂಟೇಷನಲ್ ಮ್ಯಾಥ್‌ಮೆಟಿಕ್ಸ್ ಸಹ ಗೊತ್ತಿರಬೇಕು. ತರಗತಿಗಳಲ್ಲಿ ಪಾಠ ಮಾಡಿ ಗೊತ್ತಿರಬೇಕು.
ಆರ್ಥಿಕ ಸಹಾಯ: ತಿಂಗಳಿಗೆ ₹ 60 ಸಾವಿರದವರೆಗೆ ಮತ್ತು ₹ 10 ಸಾವಿರ ಎಚ್‌ಆರ್‌ಎ
ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ: 15 ಆಗಸ್ಟ್, 2021
ಅರ್ಜಿ ಸಲ್ಲಿಸುವ ವಿಧಾನ: ಇ-ಮೇಲ್ ಮೂಲಕ ಮಾತ್ರ
ಹೆಚ್ಚಿನ ಮಾಹಿತಿಗೆ: www.b4s.in/praja/MPF5

ಐಐಎಸ್‌ಇಆರ್ ಮೊಹಾಲಿ ಪೋಸ್ಟ್-ಡಾಕ್ಟೊರಲ್ ಫೆಲೋಶಿಪ್ 2021
ವಿವರ: ಪಿಎಚ್‌ಡಿ ಪದವೀಧರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಲ್ಟ್ರಾ ಫಾಸ್ಟ್ ನ್ಯಾನೊ ಪ್ರೊಸೆಸಿಂಗ್ ವಿಷಯದ ಕುರಿತು ನಡೆಯುತ್ತಿರುವ ಸಂಶೋಧನೆ ಇದಾಗಿದೆ.
ಅರ್ಹತೆ: ಪಿಎಚ್‌ಡಿ ಪಡೆದಿರುವ 35 ವರ್ಷದ ಒಳಗಿನವರು ಅರ್ಜಿ ಸಲ್ಲಿಸಬಹುದಾಗಿದೆ. ಭೌತಶಾಸ್ತ್ರದಲ್ಲಿ ಪಿಎಚ್‌ಡಿ ಪಡೆದಿರಬೇಕು.
ಆರ್ಥಿಕ ಸಹಾಯ: ಭಾರತ ಸರ್ಕಾರದ ನಿಯಮಾನುಸಾರ
ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ: 14 ಆಗಸ್ಟ್, 2021
ಅರ್ಜಿ ಸಲ್ಲಿಕೆ ವಿಧಾನ: ಇ-ಮೇಲ್ ಮೂಲಕ ಮಾತ್ರ
ಹೆಚ್ಚಿನ ಮಾಹಿತಿಗೆ: www.b4s.in/praja/RMP6

ಕೃಪೆ: buddy4study.com

ಪಿಯುಸಿ ಕಾಮರ್ಸ್ ನಂತರ ಏನು ಓದಬಹುದು?

ಸಾಂದರ್ಭಿಕ ಚಿತ್ರ

ಸಿದ್ಧಾಂತ್ ಎಂ.ಜೆ.

ದ್ವಿತೀಯ ಪಿಯುಸಿ ಅದರಲ್ಲೂ ವಾಣಿಜ್ಯ (ಕಾಮರ್ಸ್) ತೆಗೆದುಕೊಂಡು ಉತ್ತೀರ್ಣರಾದವರಿಗೆ ಮುಂದೆ ವಿವಿಧ ವಿಷಯಗಳನ್ನು ತೆಗೆದುಕೊಂಡು ಪದವಿ ಓದಲು, ಉನ್ನತ ಅಧ್ಯಯನ ಮಾಡಲು ಸಾಕಷ್ಟು ಅವಕಾಶಗಳಿವೆ. ಸಾಂಪ್ರದಾಯಿಕ ಮೂರು ವರ್ಷಗಳ ಬಿ.ಕಾಂ. ಪದವಿ ಎಲ್ಲರಿಗೂ ಗೊತ್ತಿರುವಂಥದ್ದೇ. ಹಾಗೆಯೇ ವಾಣಿಜ್ಯ ಬಿಟ್ಟು ಕಲಾ ಪದವಿಯನ್ನೂ ಪಡೆಯಬಹುದು, ಮ್ಯಾನೇಜ್‌ಮೆಂಟ್‌ಗೆ ಸಂಬಂಧಿಸಿದ ಕೋರ್ಸ್‌ಗಳನ್ನೂ ಮಾಡಬಹುದು.

ಈಗ ಪಿಯುಸಿ ನಂತರ ವಾಣಿಜ್ಯ ಪದವಿ ಬಿಟ್ಟು ಬೇರೆ ಬೇರೆ ಕೋರ್ಸ್‌ಗಳತ್ತ ಗಮನ ಹರಿಸೋಣ.

ಬ್ಯುಸಿನೆಸ್ ಅರ್ಥಶಾಸ್ತ್ರದಲ್ಲಿ ಬಿಎ ಪದವಿಯನ್ನು ಓದಬಹುದು. ಇದು ನೇರವಾಗಿ ಕಾಮರ್ಸ್‌ಗೆ ಸಂಬಂಧಪಟ್ಟಿಲ್ಲ. ಆದರೆ ಬ್ಯುಸಿನೆಸ್ ಮತ್ತು ಹಣಕಾಸು ನಿರ್ವಹಣೆಯಲ್ಲಿ ಹೆಚ್ಚು ಅವಕಾಶಗಳಿವೆ.

ಅದೇ ರೀತಿ ಪಿಯುಸಿಯಲ್ಲಿ ಗಣಿತ, ಅರ್ಥಶಾಸ್ತ್ರ ಮತ್ತು ಲೆಕ್ಕಶಾಸ್ತ್ರ ಓದಿ ಉತ್ತೀರ್ಣರಾದರೆ ಅರ್ಥಶಾಸ್ತ್ರದಲ್ಲಿ ಬಿಎ ಮಾಡಬಹುದು. ನಂತರ ಅದರಲ್ಲೇ ಎಂಎ, ಎಂಬಿಎ ಮಾಡಬಹುದು.

ಬಿಬಿಎ: ಮುಂದೆ ಬ್ಯುಸಿನೆಸ್ ಮತ್ತು ಮ್ಯಾನೇಜ್‌ಮೆಂಟ್ ಓದಲು ನಿರ್ಧಾರ ಮಾಡಿದವರು ಬಿಬಿಎ ಓದಬಹುದು. ಇದರಿಂದ ಎಂಬಿಎಗೆ ಒಳ್ಳೇ ನೆಲಗಟ್ಟು ಸಿಕ್ಕಂತಾಗುತ್ತದೆ.

ಬಿಸಿಎ: ಈ ಕೋರ್ಸ್‌ಗೆ ಪ್ರವೇಶ ಪರೀಕ್ಷೆಯನ್ನು ಕೆಲವು ಕಾಲೇಜುಗಳು ನಡೆಸುತ್ತಿವೆ. ಈ ಪದವಿ ಮಾಡುವುದರಿಂದ ಐಟಿ ಉದ್ಯಮದಲ್ಲಿ ಉದ್ಯೋಗ ಗಿಟ್ಟಿಸಬಹುದು. ಹಾಗೆಯೇ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಕನ್ಸಲ್ಟೆಂಟ್ ಆಗಿ ಸ್ವಂತ ಉದ್ಯಮ ಆರಂಭಿಸಬಹುದು. ಎಂಸಿಎ ಮಾಡಿದರಂತೂ ಭವಿಷ್ಯದಲ್ಲಿ ಉತ್ತಮವಾದ ವೃತ್ತಿಗೆ ಸೇರಬಹುದು.

ಬಿಎಎಫ್: ಪಿಯುಸಿಯಲ್ಲಿ ಅಕೌಂಟನ್ಸಿ ಮತ್ತು ಫೈನಾನ್ಸ್ ಓದಿದವರು ಈ ಕೋರ್ಸ್ ಮಾಡಿದರೆ ತೆರಿಗೆ, ಲೆಕ್ಕಪತ್ರ ಶೋಧನೆ, ಬ್ಯುಸಿನೆಸ್ ಲಾ, ಕಾಸ್ಟ್ ಅಕೌಂಟಿಂಗ್ ಮೊದಲಾದ ವಿಷಯಗಳಲ್ಲಿ ಪರಿಣತಿ ಸಾಧಿಸಿ ಹಣಕಾಸು ಮತ್ತು ಲೆಕ್ಕಪತ್ರ ಶೋಧನೆ ಕ್ಷೇತ್ರದಲ್ಲಿ ವೃತ್ತಿ ಆರಂಭಿಸಬಹುದು.

ಬಿಬಿಐ: ಬ್ಯಾಂಕಿಂಗ್ ಮತ್ತು ವಿಮೆಯಲ್ಲಿ ಈ ಪದವಿ ಪಡೆದು ಹಣಕಾಸಿನಲ್ಲಿ ಎಂಬಿಎ ಮಾಡಿದರೆ ಒಳ್ಳೆಯ ವೃತ್ತಿ ಅವಕಾಶಗಳಿವೆ.

ಐಸಿಡಬ್ಲುಎಐ: ಈ ಸಂಸ್ಥೆಯು ವಿವಿಧ ಪರೀಕ್ಷೆಗಳ ಮೂಲಕ ಅಭ್ಯರ್ಥಿಗಳಿಗೆ ಪ್ರವೇಶ ನೀಡುತ್ತದೆ. ಇಲ್ಲಿ ಓದಿ ಸರ್ಟಿಫಿಕೇಟ್ ಪಡೆದವರು ಅಕೌಂಟಿಂಗ್ ಮ್ಯಾನೇಜ್‌ಮೆಂಟ್‌ನಲ್ಲಿ ಉತ್ತಮ ಅವಕಾಶ ಪಡೆಯಬಹುದು.

ಸಿಎಸ್: ಕಂಪನಿ ಸೆಕ್ರೇಟರಿ ಫೌಂಡೇಶನ್ ಪ್ರೋಗ್ರಾಮ್‌ಗೆ ಸೇರಿಕೊಂಡರೆ ಬಿಕಾಂ ಓದುತ್ತಲೆ ಮುಂದೆ ವಿವಿಧ ಪರೀಕ್ಷೆಗಳನ್ನು ಎದುರಿಸಿ ಸಿಎಸ್ ಪದವಿ ಪಡೆಬಹುದು. ನಂತರ ಕಾರ್ಪೊರೇಟ್ ಉದ್ಯೋಗ ಪಡೆದು ಒಳ್ಳೆಯ ವೇತನ ತೆಗೆದುಕೊಳ್ಳಬಹುದು.

ಈ ಕೋರ್ಸ್‌ಗಳಲ್ಲದೇ ಸಾಕಷ್ಟು ಡಿಪ್ಲೊಮಾ ಕೋರ್ಸ್‌ಗಳಿದ್ದು ಪಿಯುಸಿ ನಂತರ ಅದಕ್ಕೂ ಸೇರಿಕೊಳ್ಳಬಹುದು. ಮೇಲೆ ಹೇಳಿದ ಕೆಲವು ಪದವಿ ಕೋರ್ಸ್‌ಗಳು ದೆಹಲಿ, ಮುಂಬೈ, ಚೆನ್ನೈನಂತಹ ನಗರಗಳಲ್ಲಿ ಒಳ್ಳೆಯ ಕಾಲೇಜುಗಳಲ್ಲಿ ಲಭ್ಯ. ನ್ಯಾಕ್, ಯುಜಿಸಿ ಮಾನ್ಯತೆ ಪಡೆದ ಕಾಲೇಜುಗಳಲ್ಲಿ ಪ್ರವೇಶ ಪಡೆದರೆ ಮುಂದೆ ಹೆಚ್ಚಿನ ಓದಿಗೆ, ಉದ್ಯೋಗಕ್ಕೆ ಅನುಕೂಲ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಕೋವಿಡ್: ಬೆಲೆ ತೆತ್ತಿದ್ದೇವೆ ಇನ್ನು ನಿರ್ಲಕ್ಷ್ಯ ಬೇಡ

ಕರ್ನಾಟಕದ ಜೊತೆ ಗಡಿ ಹಂಚಿಕೊಂಡಿರುವ ಕೇರಳದಲ್ಲಿ ಕೋವಿಡ್ ಪ್ರಕರಣಗಳು ಏರುಗತಿ ಪಡೆದುಕೊಂಡಿವೆ. ಇನ್ನೊಂದು ಗಡಿ ರಾಜ್ಯ ಮಹಾರಾಷ್ಟ್ರದಲ್ಲಿ ಕೋವಿಡ್ ಪ್ರಕರಣಗಳು ಗಣನೀಯವಾಗಿಯೇ ಇವೆ. ಕೇರಳದಲ್ಲಿ ಶನಿವಾರ 20 ಸಾವಿರಕ್ಕೂ ಹೆಚ್ಚಿನ ಪ್ರಕರಣಗಳು ವರದಿಯಾಗಿವೆ. ಮಹಾರಾಷ್ಟ್ರದಲ್ಲಿ ಆರು ಸಾವಿರಕ್ಕಿಂತ ಹೆಚ್ಚಿನ ಪ್ರಕರಣಗಳು ವರದಿಯಾಗಿವೆ. ಕರ್ನಾಟಕ ಸೇರಿದಂತೆ ದೇಶದ ಹತ್ತು ರಾಜ್ಯಗಳ 46 ಜಿಲ್ಲೆಗಳಲ್ಲಿ ಕೋವಿಡ್ ಪಾಸಿಟಿವಿಟಿ ದರ ಶೇಕಡ 10ಕ್ಕಿಂತ ಹೆಚ್ಚಿದೆ. ಅಂದರೆ, ಕೋವಿಡ್ ಪರೀಕ್ಷೆಗೆ ಒಳಗಾಗುವ ಪ್ರತೀ 100 ಜನರ ಪೈಕಿ 10ಕ್ಕಿಂತ ಹೆಚ್ಚಿನ ಜನರಲ್ಲಿ ಕೋವಿಡ್ ದೃಢವಾಗುತ್ತಿದೆ. ಈ ಜಿಲ್ಲೆಗಳಲ್ಲಿ 'ಜನರ ಓಡಾಟ ಮತ್ತು ಜನಸಂದಣಿ ಕಡಿಮೆ ಮಾಡಲು ಕಠಿಣ ನಿರ್ಬಂಧಗಳ ಅಗತ್ಯ ಇದೆ' ಎಂದು ಕೇಂದ್ರ ಆರೋಗ್ಯ ಸಚಿವಾಲಯವು ರಾಜ್ಯಗಳಿಗೆ ಸೂಚನೆ ನೀಡಿದೆ. 46 ಜಿಲ್ಲೆಗಳ ಪರಿಸ್ಥಿತಿ ಹೀಗಿದ್ದರೆ, ಇನ್ನೂ 53 ಜಿಲ್ಲೆಗಳಲ್ಲಿ ಕೋವಿಡ್ ದೃಢ ಪ್ರಮಾಣವು ಶೇಕಡ 5ರಿಂದ 10ರವರೆಗೆ ಇದೆ. 'ಈ ಹಂತದಲ್ಲೇ ನಿರ್ಬಂಧಗಳನ್ನು ವಿಧಿಸದೆ ಇದ್ದರೆ ಮುಂದೆ ಪರಿಸ್ಥಿತಿ ಗಂಭೀರವಾಗಲಿದೆ' ಎಂದು ಕೇಂದ್ರವು ರಾಜ್ಯಗಳನ್ನು ಎಚ್ಚರಿಸಿದೆ. ಕೊರೊನಾ ವೈರಾಣುವಿನ ಪ್ರಕರಣಗಳು ದೇಶದಲ್ಲಿ ಅಲ್ಲಲ್ಲಿ ಕಾಣಿಸಿಕೊಳ್ಳುತ್ತಿದ್ದ 2020ರ ಮಾರ್ಚ್ ತಿಂಗಳಲ್ಲಿ ದೇಶದಾದ್ಯಂತ ತಾನೇ ಲಾಕ್‌ಡೌನ್ ವಿಧಿಸಿದ್ದ ಕೇಂದ್ರ ಸರ್ಕಾರವು ಈಗ ಲಾಕ್‌ಡೌನ್ ಜಾರಿಗೆ ತರುವ ಅಥವಾ ಕೆಲವು ನಿರ್ಬಂಧಗಳನ್ನು ಮಾತ್ರ ಜಾರಿಗೊಳಿಸುವ ತೀರ್ಮಾನವನ್ನು ರಾಜ್ಯಗಳೇ ಕೈಗೊಳ್ಳಬಹುದು ಎಂದು ಹೇಳಿದೆ. ಕರ್ನಾಟಕ ಸೇರಿದಂತೆ ಕೆಲವು ರಾಜ್ಯಗಳು ನಿರ್ಬಂಧಗಳನ್ನು ಜಾರಿಗೆ ತರುವ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ನೀಡಿವೆ. ಸಾಂಕ್ರಾಮಿಕವನ್ನು ನಿಯಂತ್ರಿಸಲು ಇಡೀ ರಾಜ್ಯಕ್ಕೆ ಅನ್ವಯವಾಗುವ ಸೂತ್ರವನ್ನು ಜಾರಿಗೆ ತರುವ ಬದಲು, ಆಯಾ ಪ್ರದೇಶಗಳ ಪರಿಸ್ಥಿತಿಯನ್ನು ಅವಲೋಕಿಸಿ, ಅಲ್ಲಿಗೆ ಸೀಮಿತವಾದ ನಿರ್ಬಂಧಗಳನ್ನು ಜಾರಿಗೆ ತರುವುದು ಹೆಚ್ಚು ಸೂಕ್ತವೂ ಹೌದು.

ಕೊರೊನಾ ಎರಡನೇ ಅಲೆಯ ಸಂದರ್ಭದಲ್ಲಿ ತಾವು ಅನುಭವಿಸಿರಬಹುದಾದ ಸಂಕಷ್ಟಗಳನ್ನು ನೆನಪಿಗೆ ತಂದುಕೊಂಡು, ಇನ್ನು ಮುಂದೆ ಮತ್ತೆ ಅಂತಹ ಪರಿಸ್ಥಿತಿಗೆ ಸಿಲುಕದಂತೆ ನೋಡಿಕೊಳ್ಳುವ ಹೊಣೆ ಎಲ್ಲರ ಮೇಲಿದೆ

ಕರ್ನಾಟಕದಲ್ಲಿ ವರದಿಯಾಗುತ್ತಿರುವ ಪ್ರಕರಣಗಳ ಸಂಖ್ಯೆಯಲ್ಲಿ ಅಲ್ಪಪ್ರಮಾಣದ ಏರಿಕೆ ಈಚಿನ ದಿನಗಳಲ್ಲಿ ಕಂಡುಬಂದಿದೆ. ಮುಖ್ಯವಾಗಿ, ಬೆಂಗಳೂರು ನಗರ, ದಕ್ಷಿಣ ಕನ್ನಡ, ಹಾಸನ, ಮೈಸೂರು, ಕೊಡಗು ಮತ್ತು ಉಡುಪಿ ಜಿಲ್ಲೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಕರಣಗಳು ವರದಿಯಾಗುತ್ತಿವೆ. ಕೋವಿಡ್‌ನ ಮೊದಲ ಅಲೆಯ ಅಬ್ಬರ ತಗ್ಗಿದ ನಂತರದಲ್ಲಿ, 'ಕೋವಿಡ್ ಹೊರಟುಹೋಯಿತು' ಎಂದು ಭಾವಿಸಿದವರು ಇದ್ದರು. ಆದರೆ, ಧುತ್ತೆಂದು ಎದುರಾದ ಎರಡನೆಯ ಅಲೆಯು ದೇಶದ ಮೇಲೆ ಭಾರಿ ಏಟು ನೀಡಿದೆ. ಈಗ ಪ್ರಕರಣಗಳ ಸಂಖ್ಯೆಯಲ್ಲಿ ಆಗುತ್ತಿರುವ ಹೆಚ್ಚಳವು ಮೂರನೆಯ ಅಲೆಯ ಮುನ್ಸೂಚನೆ ಎಂಬ ಅಭಿಪ್ರಾಯಗಳು ಇವೆ. ಎರಡನೆಯ ಅಲೆಯ ಸಂದರ್ಭದಲ್ಲಿ ಆಗಿರುವ ಜೀವಹಾನಿಯನ್ನು ಗಮನಿಸಿ, ಅದರಿಂದ ಪಾಠಗಳನ್ನು ಕಲಿತು ಒಂದಿಷ್ಟು ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಸರ್ಕಾರವು ವೈದ್ಯಕೀಯ ಆಮ್ಲಜನಕದ ಲಭ್ಯತೆಯನ್ನು ಹೆಚ್ಚುಮಾಡಬೇಕು. ರೋಗಿಗಳು ಹಾಸಿಗೆಯ ಮೇಲೆ ಮಲಗಿದ ನಂತರದಲ್ಲಿ ಆಮ್ಲಜನಕಕ್ಕಾಗಿ ಹುಡುಕಾಡುವ ಸ್ಥಿತಿ ಎದುರಾಗಬಾರದು. ಕೆಲವು ಔಷಧಗಳಿಂದ ಕೋವಿಡ್ ಚಿಕಿತ್ಸೆ ಸಾಧ್ಯವಿಲ್ಲವೆಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಸ್ಪಷ್ಟವಾಗಿ ಹೇಳಿದ ನಂತರವೂ ಅವೇ ಔಷಧಿಗಳನ್ನು ಕೆಲವು ಆಸ್ಪತ್ರೆಗಳು ಕೋವಿಡ್ ರೋಗಿಗಳಿಗೆ ನೀಡುತ್ತಿದ್ದುದು, ಆ ಔಷಧಿಗಳಿಗೆ ವಿಪರೀತ ಬೇಡಿಕೆ ಸೃಷ್ಟಿಯಾಗಿ ಅವು ಅಕ್ರಮವಾಗಿ ಅತಿಯಾದ ಬೆಲೆಗೆ ಮಾರಾಟವಾಗುತ್ತಿದ್ದುದು ಕೂಡ ಎರಡನೆಯ ಅಲೆಯ ಸಂದರ್ಭದಲ್ಲಿ ಆಗಿದ್ದಿದೆ. ಸಂಬಂಧವಿಲ್ಲದ ಔಷಧಗಳನ್ನು ನೀಡುವುದರಿಂದ ಕಾಯಿಲೆ ಉಪಶಮನ ಆಗದು ಎಂದು ವಿಜ್ಞಾನ ಹೇಳುತ್ತದೆ. ಹಾಗಾಗಿ, ವೈಜ್ಞಾನಿಕವಾದ, ಪುರಾವೆಗಳ ಮೇಲೆ ನಿಂತಿರುವ ಚಿಕಿತ್ಸಾ ಕ್ರಮವೊಂದನ್ನು ಸರ್ಕಾರಗಳು ತಜ್ಞರ ನೇತೃತ್ವದಲ್ಲಿ ಆದಷ್ಟು ಬೇಗ ಸಿದ್ಧಪಡಿಸಬೇಕು ಮತ್ತು ಆ ಚಿಕಿತ್ಸಾ ಕ್ರಮವು ಸಂಬಂಧಪಟ್ಟ ಎಲ್ಲರ ಅರಿವಿಗೂ ಬರುವಂತೆ ನೋಡಿಕೊಳ್ಳಬೇಕು. ಸೋಂಕಿಗೆ ಒಳಗಾದವರ ಬಂಧುಗಳು ಅನಗತ್ಯ ಔಷಧಿಗಳಿಗಾಗಿ ಅಲ್ಲಿ-ಇಲ್ಲಿ ಅಲೆಯುವ ಸಂದರ್ಭ ಯಾವ ಕಾರಣಕ್ಕೂ ಎದುರಾಗಬಾರದು. ರೋಗಿಗಳಿಗೆ ಚಿಕಿತ್ಸೆ ನೀಡುವಾಗ ಅತ್ಯಂತ ಅಗತ್ಯವಾಗಿರುವ ಪಲ್ಸ್ ಆಕ್ಸಿಮೀಟರ್, ಆಮ್ಲಜನಕದ ಸಾಂದ್ರಕದಂತಹ ಉಪಕರಣಗಳು ಗ್ರಾಮ ಪಂಚಾಯಿತಿ ಮಟ್ಟದಲ್ಲಿಯೂ ಲಭ್ಯವಿರುವಂತೆ ಆಗಬೇಕು. ರೋಗಿಗಳನ್ನು ಪತ್ತೆ ಮಾಡುವ ಕೆಲಸ, ಪರೀಕ್ಷಿಸುವುದು ಹಾಗೂ ಅವರನ್ನು ಇತರರಿಂದ ಪ್ರತ್ಯೇಕ ಇರಿಸುವ ಕಾರ್ಯ ಚುರುಕಾಗಿ ನಡೆಯಬೇಕು. ಇವೆಲ್ಲವುಗಳ ಜೊತೆಯಲ್ಲೇ, ಕೋವಿಡ್ ಲಸಿಕೆ ನೀಡುವ ಕೆಲಸ ವೇಗ ಪಡೆದುಕೊಳ್ಳಬೇಕು.

ಇವೆಲ್ಲ ಆಳುವ ವರ್ಗದ ಕಡೆಯಿಂದ ಆಗಬೇಕಿರುವ ಕೆಲಸಗಳು. ಸಾರ್ವಜನಿಕರು ಕೂಡ ಈ ವಿಚಾರದಲ್ಲಿ ಸರ್ಕಾರಗಳ ಜೊತೆ ಕೈಜೋಡಿಸಲೇಬೇಕು. ಕೋವಿಡ್ ಪ್ರಕರಣಗಳ ಸಂಖ್ಯೆ ಜಾಸ್ತಿಯಾಗಿ, ನಿರ್ಬಂಧಗಳು ತೀರಾ ಬಿಗಿಯಾದರೆ ಆರ್ಥಿಕ ಚಟುವಟಿಕೆಗಳಿಗೆ ಪೆಟ್ಟು ಬೀಳುತ್ತದೆ. ಆಗ ಜನರ ಬದುಕು ಇನ್ನಷ್ಟು ಕಷ್ಟಕ್ಕೆ ಸಿಲುಕುತ್ತದೆ. ಹಾಗಾಗಿ, ಜನ ಗುಂಪುಗೂಡುವುದನ್ನು ತಡೆಯಲೇಬೇಕು. ಮುಖಗವಸು ಧರಿಸದೆ ಸಾರ್ವಜನಿಕ ಸ್ಥಳಗಳಲ್ಲಿ ಸಂಚರಿಸಬಾರದು. ಕೋವಿಡ್ ತಡೆ ಶಿಷ್ಟಾಚಾರಗಳಲ್ಲಿ ಯಾವುದನ್ನೂ ನಿರ್ಲಕ್ಷಿಸಬಾರದು. ಎರಡನೆಯ ಅಲೆಯ ಸಂದರ್ಭದಲ್ಲಿ ತಾವು ಅನುಭವಿಸಿರಬಹುದಾದ ಸಂಕಷ್ಟಗಳನ್ನು ನೆನಪಿಗೆ ತಂದುಕೊಂಡು, ಇನ್ನು ಮುಂದೆ ಮತ್ತೆ ಅಂತಹ ಪರಿಸ್ಥಿತಿಗೆ ಸಿಲುಕದಂತೆ ನೋಡಿಕೊಳ್ಳುವ ಹೊಣೆ ಎಲ್ಲರ ಮೇಲಿದೆ. ಕೋವಿಡ್ ವಿಚಾರವಾಗಿ ಭಾರಿ ಬೆಲೆ ತೆತ್ತಾಗಿದೆ; ನಿರ್ಲಕ್ಷ್ಯ ವಹಿಸಿದರೆ ಮತ್ತೆ ಉರುಳಿಗೆ ಕೊರಳೊಡ್ಡುವ ಸ್ಥಿತಿ ಬರುತ್ತದೆ.

ದಿನದ ಟ್ವೀಟ್

ಹೆಮ್ಮೆಯ ಹೆಣ್ಣುಮಗಳು

ಹೆಣ್ಣುಮಕ್ಕಳು ಟೆನ್ಷನ್‌ಗೆ ಕಾರಣರಾಗುವವರಲ್ಲ, ಒಬ್ಬೊಬ್ಬರೂ ಟೆನ್ ಸನ್ಸ್‌ಗೆ (10 ಗಂಡುಮಕ್ಕಳಿಗೆ) ಸಮನಾದವರು. ಮತ್ತೊಮ್ಮೆ ಮತ್ತೊಂದು ಪದಕವನ್ನು ಗೆದ್ದಿರುವವಳೂ ಹೆಣ್ಣುಮಗಳು. ನಾವು ನಿಮ್ಮ ಬಗ್ಗೆ ಹೆಮ್ಮೆಪಡುತ್ತೇವೆ ಪಿ.ವಿ.ಸಿಂಧು.
#Tokyo2020 #Olympics

ದೀಪ್ ಉಪಾಧ್ಯಾಯ್, ನಾಗರಿಕ

ಕಿಡಿನುಡಿ

ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದಾಗ 'ಬೇಹುಗಾರಿಕೆಯ ಜೇಮ್ಸ್ ಬಾಂಡ್'ನಂತೆ ವರ್ತಿಸಿದೆ. ಆದರೆ, ಈಗ ಸುಳ್ಳುಗಳ ಮೂಲಕ ಸಂಸತ್ತಿನ ಸಮಯ ಹಾಳು ಮಾಡುತ್ತಿದೆ. ಅವರು ಸರ್ಕಾರದಲ್ಲಿದ್ದಾಗ ಗೂಢಚರ್ಯೆ ನಡೆಸುತ್ತಾರೆ. ಅಧಿಕಾರವಿಲ್ಲದಾಗ ಗೂಢಚರ್ಯೆಯ ಆರೋಪ ಮಾಡುತ್ತಾರೆ.

ಮುಖ್ತಾರ್ ಅಬ್ಬಾಸ್ ನಖ್ವಿ, ಕೇಂದ್ರ ಸಚಿವ ಹಾಗೂ ರಾಜ್ಯಸಭೆಯಲ್ಲಿ ಸದನದ ಉಪನಾಯಕ

25 ವರ್ಷಗಳ ಹಿಂದೆ

ಶುಕ್ರವಾರ, 2-8-1996

• ಆಲಮಟ್ಟಿ: ದೆಹಲಿಗೆ ಪಟೇಲ್ ನೇತೃತ್ವದ ಸಚಿವರ ನಿಯೋಗ

ಬೆಂಗಳೂರು, ಆಗಸ್ಟ್ 1– ಆಲಮಟ್ಟಿ ಅಣೆಕಟ್ಟೆ ವಿವಾದ ಕುರಿತಂತೆ ದೆಹಲಿಯಲ್ಲಿ ಆಗಸ್ಟ್ 6ರಂದು ನಡೆಯಲಿರುವ ಮುಖ್ಯಮಂತ್ರಿಗಳ ಸಭೆಯಲ್ಲಿ ಜೆ.ಎಚ್. ಪಟೇಲ್ ಅವರ ಜತೆ ತಾವು, ಉಪಮುಖ್ಯಮಂತ್ರಿ ಹಾಗೂ ಕಾನೂನು ಸಚಿವರು ಭಾಗವಹಿಸಲಿರುವುದಾಗಿ ಭಾರಿ ನೀರಾವರಿ ಸಚಿವ ಕೆ.ಎನ್. ನಾಗೇಗೌಡ ಇಂದು ವಿಧಾನಪರಿಷತ್ತಿನಲ್ಲಿ ಹೇಳಿದರು.

ಕೃಷ್ಣಾ ನದಿ ವಿವಾದದ ಬಗ್ಗೆ ಆಂಧ್ರದ ಹೈಕೋರ್ಟಿನಲ್ಲಿ ಆಗಸ್ಟ್ 21ರಂದು ನಡೆಯುವ ವಿಚಾರಣೆ ದಿನ ಹಾಜರಾಗಿ ನ್ಯಾಯಾಲಯದ ವ್ಯಾಪ್ತಿ ಕುರಿತು ಪ್ರಶ್ನಿಸುವುದಾಗಿ ಅವರು ಪ್ರಕಟಿಸಿದರು.

50 ವರ್ಷಗಳ ಹಿಂದೆ

ಸೋಮವಾರ, 2-8-1971

• ಮೈಸೂರಿನ ಕಾವೇರಿ ಯೋಜನೆ ತಡೆದರೆ ಮಾತ್ರ ಮಾತುಕತೆ

ಸೇಲಂ, ಆಗಸ್ಟ್ 1– ಮೈಸೂರು ರಾಜ್ಯ ಕೈಗೊಂಡಿರುವ ಹೇಮಾವತಿ ಮತ್ತಿತರ ಕಾವೇರಿ ಯೋಜನೆಗಳ ನಿರ್ಮಾಣ ಕಾರ್ಯ ನಿಲ್ಲಿಸಲು ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳುವವರೆಗೆ ಕಾವೇರಿ ಜಲವಿವಾದದ ಬಗ್ಗೆ ಯಾವುದೇ ಮಾತುಕತೆಗೂ ತಮಿಳುನಾಡು ಸರ್ಕಾರ ಒಪ್ಪಿಕೊಳ್ಳುವುದಿಲ್ಲವೆಂದು ಮುಖ್ಯಮಂತ್ರಿ ಕರುಣಾನಿಧಿಯವರು ಇಂದು ಇಲ್ಲಿ ತಿಳಿಸಿದರು.

'ವಿವಾದವನ್ನು ಮಾತುಕತೆ ಮೂಲಕ ಇತ್ಯರ್ಥಗೊಳಿಸಲಾಗುವುದು. ಎಲ್ಲ ಪ್ರಯತ್ನಗಳೂ ವಿಫಲಗೊಂಡಲ್ಲಿ ವಿವಾದವನ್ನು ಪಂಚಾಯಿತಿಗೊಪ್ಪಿಸಬಹುದು ಎಂದು ಪ್ರಧಾನ ಮಂತ್ರಿಯವರು ಹಾಗೂ ಕೇಂದ್ರ ನೀರಾವರಿ ಸಚಿವರು ಈ ಹಿಂದೆ ಅನೇಕ ಬಾರಿ ತಿಳಿಸಿದ್ದರು' ಎಂದು ಕರುಣಾನಿಧಿಯವರು ಅಖಿಲ ಭಾರತ ಖಾದಿ, ಸ್ವದೇಶಿ ಮತ್ತು ಕೈಮಗ್ಗದ ಪ್ರದರ್ಶನ ಉದ್ಘಾಟಿಸುತ್ತ ನುಡಿದರು.

• ರಾಜ್ಯದಲ್ಲಿ ಕೈಗಾರಿಕಾ ಬೆಳವಣಿಗೆ ಅತೃಪ್ತಿಕರ– ಕೆಂಗಲ್

ಬೆಂಗಳೂರು, ಆಗಸ್ಟ್ 1– ಮೈಸೂರು ರಾಜ್ಯದ ಕೈಗಾರಿಕೆಗಳ ಬಂಡವಾಳ ಹೂಡಿಕೆ, ಬೆಳವಣಿಗೆಯ ಪ್ರಮಾಣದ ಬಗ್ಗೆ ಕೇಂದ್ರದ ರೈಲ್ವೆಮಂತ್ರಿ ಕೆ. ಹನುಮಂತಯ್ಯನವರು ಇಂದು ಇಲ್ಲಿ ಅತೃಪ್ತಿ ವ್ಯಕ್ತಪಡಿಸಿದರು.

ಸಾಮೂಹಿಕ ಜವಾಬ್ದಾರಿಯ ಆಶಯಕ್ಕೆ ವಿರುದ್ಧವಾಗಿ ವ್ಯಕ್ತಿಕೇಂದ್ರಿತ ಪ್ರವೃತ್ತಿ ಪ್ರಮುಖವಾಗುತ್ತಿದೆ

ಸಂಸದೀಯ ನಡಾವಳಿಯ ಸಂರಕ್ಷಣೆ

ವಿಶ್ಲೇಷಣೆ

ಬರಗೂರು ರಾಮಚಂದ್ರಪ್ಪ

ಕರ್ನಾಟಕದ ನೂತನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪ್ರಮಾಣವಚನ ಸ್ವೀಕರಿಸಿದ ದಿನವೇ ಕೆಲವು 'ಜನಪರ' ಕಾರ್ಯಕ್ರಮಗಳನ್ನು ಘೋಷಿಸಿದ್ದಾರೆ. ಸಚಿವ ಸಂಪುಟದ ರಚನೆಯೇ ಆಗಿಲ್ಲದಿರುವಾಗ, ಒಬ್ಬ ಸಚಿವರಾದರೂ ಅಧಿಕಾರ ಸ್ವೀಕಾರ ಮಾಡಿಲ್ಲದಿರುವಾಗ ಹೀಗೆ ಕಾರ್ಯಕ್ರಮಗಳನ್ನು ಘೋಷಣೆ ಮಾಡಿದವರಲ್ಲಿ ಇವರೇ ಮೊದಲಿಗರಲ್ಲ. ನನಗೆ ತಕ್ಷಣ ನೆನಪಿಗೆ ಬರುವುದು ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ದಿನವೇ ಹಿಂದುಳಿದವರು, ಅಲ್ಪಸಂಖ್ಯಾತರು ಮತ್ತು ಒಟ್ಟು ಬಡವರ ಪರವಾದ ಬಹುಮುಖ್ಯ ಕಾರ್ಯಕ್ರಮಗಳನ್ನು ಘೋಷಣೆ ಮಾಡಿದ್ದು.

ಅಂದೇ ನಡೆದ ಸುದ್ದಿವಾಹಿನಿ ಚರ್ಚೆಯೊಂದರಲ್ಲಿ ನಾನು ಹೀಗೆ ಹೇಳಿದ್ದೆ: 'ಸಿದ್ದರಾಮಯ್ಯ ಅವರು ಘೋಷಿಸಿದ ಕಾರ್ಯಕ್ರಮಗಳು ಜನಪರವಾಗಿವೆ. ಆದರೆ ಮುಖ್ಯಮಂತ್ರಿಯವರ ಜೊತೆಗೆ ಒಬ್ಬ ಸಚಿವರೂ ಸರ್ಕಾರಕ್ಕೆ ಸೇರ್ಪಡೆಯಾಗಿಲ್ಲದಿರುವಾಗ ಈ ಕಾರ್ಯಕ್ರಮಗಳನ್ನು ಸಚಿವ ಸಂಪುಟದ ನಿರ್ಣಯಗಳೆಂದು ತಿಳಿಯಲಾಗದು. ಸಚಿವ ಸಂಪುಟ ರಚನೆಯಾದ ನಂತರ ಅಧಿಕೃತ ಒಪ್ಪಿಗೆಯೊಂದಿಗೆ ಇಂತಹ ಕಾರ್ಯಕ್ರಮಗಳನ್ನು ಘೋಷಿಸುವುದು ಸಂಸದೀಯ ಪ್ರಜಾಪ್ರಭುತ್ವದ ನಿಜ ವಿಧಾನ'. ನನ್ನ ಈ ಮಾತುಗಳನ್ನು ಅಂದಿನ ಚರ್ಚೆಯಲ್ಲಿ ಭಾಗವಹಿಸಿದ್ದ ಡಿ.ಬಿ.ಚಂದ್ರೇಗೌಡರು ಸಮರ್ಥಿಸಿದ್ದು ಮಾತ್ರವಲ್ಲ, 'ಸಚಿವ ಸಂಪುಟವೇ ಇಲ್ಲದಿರುವಾಗ ಸರ್ಕಾರದ ಮುಖ್ಯ ನಿರ್ಣಯಗಳನ್ನು ಒಬ್ಬ ವ್ಯಕ್ತಿಯೇ ಕೈಗೊಳ್ಳುವುದು ಸಂವಿಧಾನಕ್ಕೆ ವಿರುದ್ಧ' ಎಂದು ಹೇಳಿದರು. ಅಂದು ನಾವಿಬ್ಬರೂ ಸಿದ್ದರಾಮಯ್ಯನವರ ಕಾರ್ಯಕ್ರಮಗಳನ್ನು ವಿರೋಧಿಸಿರಲಿಲ್ಲ. ಸಂವಿಧಾನದತ್ತ ಸಂಸದೀಯ ನಡಾವಳಿಯನ್ನು ಅನುಸರಿಸುವುದು ಅಗತ್ಯ ಎಂದು ಪ್ರತಿಪಾದಿಸಿದ್ದೆವು.

ಅದೇ ರೀತಿ ಬಸವರಾಜ ಬೊಮ್ಮಾಯಿಯವರ ಕಾರ್ಯಕ್ರಮ ಘೋಷಣೆಯ ಹಿಂದಿರುವ ಸದುದ್ದೇಶವನ್ನು ಇಲ್ಲಿ ಪ್ರಶ್ನಿಸುತ್ತಿಲ್ಲ. ಆದರೆ ಸಿದ್ದರಾಮಯ್ಯನವರಾಗಲಿ, ಬಸವರಾಜ ಬೊಮ್ಮಾಯಿಯವರಾಗಲಿ ಅಥವಾ ಯಾವುದೇ ಮುಖ್ಯಮಂತ್ರಿಯಾಗಲಿ, ಆರ್ಥಿಕ ಭಾರದ ಮತ್ತು ನೀತಿ ಆಧಾರಿತ ಕಾರ್ಯಕ್ರಮಗಳನ್ನು ಏಕವ್ಯಕ್ತಿ ನಿರ್ಣಯದ ಮೂಲಕ ಪ್ರಕಟಿಸುವುದು ಸಂಸದೀಯ ನಡಾವಳಿಯೆ ಎಂದು ಪ್ರಶ್ನಿಸಿಕೊಳ್ಳಬೇಕಾಗಿದೆ.

ಸಂವಿಧಾನದ 74 ಮತ್ತು 75ನೇ ವಿಧಿಗಳು ಪ್ರಧಾನಿ ಮತ್ತು ಅವರ ಸಚಿವ ಸಂಪುಟ ರಚನೆಯ ವಿಧಾನವನ್ನು, 163 ಮತ್ತು 164ನೇ ವಿಧಿಗಳು ರಾಜ್ಯಗಳ ಮುಖ್ಯಮಂತ್ರಿ ಮತ್ತು ಅವರ ಸಚಿವ ಸಂಪುಟ ರಚನೆಯ ವಿವರಗಳನ್ನು ಸ್ಪಷ್ಟವಾಗಿ ತಿಳಿಸಿವೆ. ಜವಾಬ್ದಾರಿಗಳನ್ನೂ ವಿವರಿಸಿವೆ. ಇಲ್ಲಿ ಪ್ರಧಾನಿ ಅಥವಾ ಮುಖ್ಯಮಂತ್ರಿ ಮಾತ್ರವೇ ಕಾರ್ಯಾಂಗವಾಗುವುದಿಲ್ಲ. ಸಚಿವ ಸಂಪುಟದ ಸಾಮೂಹಿಕ ಜವಾಬ್ದಾರಿಯ ಆಶಯವನ್ನು ಸಂವಿಧಾನ ಪ್ರತಿಪಾದಿಸಿದೆ. ಯಾವುದೇ ಪ್ರಮುಖ ಕಾರ್ಯಕ್ರಮಗಳು ಸಚಿವ ಸಂಪುಟದ ನಿರ್ಣಯಗಳಾದಾಗ, ಶಾಸಕಾಂಗದಲ್ಲೂ ಅಗತ್ಯ ಚರ್ಚೆಗೆ ಒಳಗಾಗಿ ಒಪ್ಪಿತವಾದಾಗ ಸಂಸದೀಯ ಸಾಮೂಹಿಕ ಜವಾಬ್ದಾರಿಯು ಅರ್ಥಪೂರ್ಣವಾಗುತ್ತದೆ. ಸಂವಿಧಾನಾತ್ಮಕವಾಗುತ್ತದೆ.

ಸಂಸದೀಯ ನಡಾವಳಿಗೆ ಸಂಬಂಧಿಸಿದ ಇನ್ನಷ್ಟು ಪ್ರಶ್ನೆಗಳನ್ನು ನಾವು ಕೇಳಿಕೊಳ್ಳಬೇಕಾಗಿದೆ. ಸಂವಿಧಾನದ ಪ್ರಕಾರ ಲೋಕಸಭೆ ಸದಸ್ಯರು ಪ್ರಧಾನಿಯನ್ನು, ವಿಧಾನಸಭೆ ಸದಸ್ಯರು ಮುಖ್ಯಮಂತ್ರಿಯನ್ನು ಆಯ್ಕೆ ಮಾಡಬೇಕು. ಆದರೆ ಇತ್ತೀಚೆಗೆ ಚುನಾವಣೆಗೆ ಮುಂಚೆಯೇ ಪ್ರಧಾನಿ ಮತ್ತು ಮುಖ್ಯಮಂತ್ರಿ ಅಭ್ಯರ್ಥಿಯನ್ನು ಬಿಂಬಿಸುವ ಪ್ರವೃತ್ತಿ ಬೆಳೆಯುತ್ತಿದೆ. ಕೆಲವು ಪಕ್ಷಗಳ ಈ ಪ್ರವೃತ್ತಿಯು ಸಂಸದರು ಮತ್ತು ಶಾಸಕರ ಸಂವಿಧಾನಾತ್ಮಕ ಆಯ್ಕೆ ಹಕ್ಕನ್ನು ಕಿತ್ತುಕೊಳ್ಳುತ್ತದೆ. ಈ ಪ್ರವೃತ್ತಿಯನ್ನು ಪ್ರಶ್ನಿಸಬೇಕಾದ ಮಾಧ್ಯಮ ವ್ಯಕ್ತಿಗಳಲ್ಲೇ ಅನೇಕರು 'ನಿಮ್ಮ ಪಕ್ಷದ ಪ್ರಧಾನಿಮುಖ ಯಾರು, ಮುಖ್ಯಮಂತ್ರಿಮುಖ ಯಾರು' ಎಂದು ಕೇಳುವುದು ಪ್ರಜಾಪ್ರಭುತ್ವದ ಅಣಕವೂ ಆಗುತ್ತದೆ. ಇನ್ನು ಪಕ್ಷಗಳ ಹೈಕಮಾಂಡ್‌ಗಳು ಮುಖ್ಯಮಂತ್ರಿಯ ಹೇರಿಕೆ ಮಾಡುತ್ತಿರುವ ವಿಧಾನವು ಸಂಸದೀಯ ಹಕ್ಕನ್ನೇ ಅಪಹಾಸ್ಯಗೊಳಿಸುತ್ತಿದೆ.

ತಮ್ಮ ಪಕ್ಷದ ನೇತೃತ್ವದ ಸರ್ಕಾರ ರಚನೆಯಾಗುವ ಸಂದರ್ಭದಲ್ಲಿ 'ಹೈಕಮಾಂಡ್' ತನ್ನ ಶಾಸಕರ ಅಭಿಪ್ರಾಯವನ್ನು ಕ್ರೋಡೀಕರಿಸುವಷ್ಟರ ಮಟ್ಟಿಗಾದರೂ ಪ್ರಜಾಸತ್ತಾತ್ಮಕವಾಗಿರಬೇಕು. ಇತ್ತೀಚೆಗೆ ಅದಕ್ಕೂ ಅವಕಾಶ ನೀಡದೆ ಮುಖ್ಯಮಂತ್ರಿಯನ್ನು ಹೈಕಮಾಂಡ್‌ಗಳೇ ನೇಮಿಸುವ ಕೆಟ್ಟ ಚಾಳಿಯಿಂದ ಶಾಸಕರಿಗೆ ಅಭಿಪ್ರಾಯ ಹೇಳುವ ಹಕ್ಕೂ ಇಲ್ಲದಂತಾಗುತ್ತಿದೆ. ಹೆಸರು ಹೇಳಿ ಹತ್ತು ನಿಮಿಷದಲ್ಲಿ ಹೌದೆನ್ನಿಸಿ ಅದಕ್ಕೆ 'ಸರ್ವಾನುಮತ'ದ ಹಣೆಪಟ್ಟಿ ಅಂಟಿಸುವ ವಿಧಾನ ವಿಜೃಂಭಿಸುತ್ತಿದೆ.

ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿ ಆಯ್ಕೆಯಾದಾಗ ಖರ್ಗೆಯವರೂ ಸ್ಪರ್ಧಿಸಿ ಶಾಸಕರ ಮತದಾನ ನಡೆದದ್ದು ವಿಶೇಷವಾದರೂ ಇತ್ತೀಚೆಗೆ ಕೆಲವು ಶಾಸಕರು 'ಸಿದ್ದರಾಮಯ್ಯನವರೇ ಮುಂದಿನ ಮುಖ್ಯಮಂತ್ರಿ' ಎಂದು ಘೋಷಿಸುತ್ತಿರುವುದು ವಿಪರ್ಯಾಸ. ಕಡೆಗೆ ಹೈಕಮಾಂಡ್ ತೀರ್ಮಾನ ಎಂದು ಎಲ್ಲ ಪಕ್ಷದವರೂ ತಿಪ್ಪೆ ಸಾರಿಸುವುದೂ ಉಂಟು.

ಪ್ರಾದೇಶಿಕ ಪಕ್ಷಗಳ ಅಧಿಕಾರವಿದ್ದರೆ ಹೈಕಮಾಂಡ್ ಕಾಟವಿರುವುದಿಲ್ಲ ಎಂಬ ತಪ್ಪು ಕಲ್ಪನೆಯೂ ಕೆಲವರಲ್ಲಿದೆ. ರಾಷ್ಟ್ರೀಯ ಪಕ್ಷವಾದರೆ ದೇಶದ ರಾಜಧಾನಿಯಲ್ಲಿ, ಪ್ರಾದೇಶಿಕ ಪಕ್ಷವಾದರೆ ರಾಜ್ಯಗಳ ರಾಜಧಾನಿಯಲ್ಲಿ ಹೈಕಮಾಂಡ್‌ಗಳಿರುವುದು ಕಟುವಾಸ್ತವ. ಹಿಂದೆ ಜಯಲಲಿತಾ, ಕರುಣಾನಿಧಿ, ಈಗ ಮಮತಾ ಬ್ಯಾನರ್ಜಿ, ಎಂ.ಕೆ.ಸ್ಟಾಲಿನ್, ಮಾಯಾವತಿ, ದೇವೇಗೌಡರಾದಿಯಾಗಿ ಆಯಾ ರಾಜ್ಯದ ಪ್ರಾದೇಶಿಕ ಪಕ್ಷಗಳ ಹೈಕಮಾಂಡ್‌ಗಳು ಚೆನ್ನಾಗಿಯೇ ಚಾಲ್ತಿಯಲ್ಲಿವೆ. ಇದು ಎಲ್ಲ ಪಕ್ಷಗಳ ಆಂತರಿಕ ಪ್ರಜಾಪ್ರಭುತ್ವದ ಪ್ರಶ್ನೆ.

ಮಂತ್ರಿಮಂಡಲ ರಚನೆಯಲ್ಲೂ ಹೈಕಮಾಂಡ್ ಹಾವಳಿಯು ಅತಿಯಾಗಿ ಬೆಳೆಯುತ್ತಿದೆ. ಪಕ್ಷದ ಸಿದ್ಧಾಂತ (ಇದ್ದರೆ) ಮತ್ತು ಸರ್ಕಾರದ ಹಿತದೃಷ್ಟಿಯಿಂದ ಹೈಕಮಾಂಡ್‌ಗಳು ಸಲಹೆ ಕೊಡುವುದನ್ನು ಒಪ್ಪಬಹುದು; ಆದೇಶ ಮಾಡುವುದನ್ನಲ್ಲ. ಆದೇಶದ ಅತಿರೇಕಕ್ಕೆ ಅತ್ಯುಗ್ರ ಉದಾಹರಣೆಯೆಂದರೆ, ಯಡಿಯೂರಪ್ಪನವರಿಗೆ ಒಂದು ಹಂತದಲ್ಲಿ ಮಂತ್ರಿಮಂಡಲ ರಚನೆಗೆ ಅವಕಾಶ ನೀಡದೆ ತಡೆಗೋಡೆಯಾದ ಹೈಕಮಾಂಡ್ ನಡೆ. ಇದನ್ನು ಸ್ವತಃ ಯಡಿಯೂರಪ್ಪನವರೇ ತಮ್ಮ ರಾಜೀನಾಮೆ ಘೋಷಣೆಯ ಭಾಷಣದಲ್ಲಿ ಹೇಳಿದ್ದಾರೆ.

ಸಂಸದೀಯ ನಡಾವಳಿಯ ನಯವಾದ ಉಲ್ಲಂಘನೆಗೆ ಮತ್ತೊಂದು ಸಾಕ್ಷಿಯೆಂದರೆ, ರಾಜ್ಯಸಭೆ ಮತ್ತು ವಿಧಾನ ಪರಿಷತ್ತಿಗೆ ಸದಸ್ಯರ ನಾಮಕರಣ ವಿಧಾನ. ಸಂವಿಧಾನದ 80ನೇ ವಿಧಿಯ ಪ್ರಕಾರ ರಾಜ್ಯಸಭೆಗೆ ರಾಷ್ಟ್ರಪತಿಯವರೂ 171ನೇ ವಿಧಿಯ ಪ್ರಕಾರ ವಿಧಾನಪರಿಷತ್ತಿಗೆ ರಾಜ್ಯಪಾಲರೂ ಸಚಿವ ಸಂಪುಟದ ಶಿಫಾರಸಿನಂತೆ ವಿವಿಧ ಕ್ಷೇತ್ರಗಳ ತಜ್ಞರನ್ನು ನಾಮಕರಣ ಮಾಡುತ್ತಾರೆ.

ಸಂವಿಧಾನದ ಪ್ರಕಾರ, ಸಾಹಿತ್ಯ, ವಿಜ್ಞಾನ, ಕಲೆ, ಸಮಾಜಸೇವೆ, ಸಹಕಾರಿ ವಲಯವೇ ಮುಂತಾದ ಕ್ಷೇತ್ರಗಳ ಪರಿಣತರನ್ನು ನಾಮಕರಣ ಮಾಡಬೇಕು. ಅವರು ಯಾವುದೇ ಪಕ್ಷಕ್ಕೆ ಸೇರಿರಬೇಕಿಲ್ಲ. ಹಾಗೆಂದು ಪಕ್ಷದವರನ್ನು- ಪರಿಣತರಾಗಿದ್ದರೆ- ನಾಮಕರಣ ಮಾಡಬಾರದೆಂದೂ ಇಲ್ಲ. ಇತ್ತೀಚೆಗೆ ಕಾಂಗ್ರೆಸ್ ಮತ್ತು ಬಿಜೆಪಿ ನೇತೃತ್ವದ ಸರ್ಕಾರಗಳು ತಂತಮ್ಮ ಪಕ್ಷದ ಸದಸ್ಯರಲ್ಲೇ ಪರಿಣತಿಯನ್ನು ಸಂಶೋಧಿಸಿ ನಾಮಕರಣ ಮಾಡಿಸಿದ್ದೇ ಹೆಚ್ಚು! ಅಪರೂಪಕ್ಕೆ ಒಂದಿಬ್ಬರು ಪಕ್ಷರಹಿತರ ನಾಮಕರಣವಾಗಿರುವುದೂ ಉಂಟು. ಆದರೆ ಒಟ್ಟಾರೆ ನೋಡಿದಾಗ ಪಕ್ಷವೇ ಪ್ರಮುಖ ಮಾನದಂಡವಾಗುತ್ತಿರುವುದು ಒಂದು ವಿಪರ್ಯಾಸ.



ಹೀಗೆ ಒಂದಲ್ಲ ಒಂದು ರೀತಿಯಲ್ಲಿ ಸಂಸದೀಯ ನಡಾವಳಿಗೆ ವಿರುದ್ಧವಾದ ನಡೆಗಳಿಗೆ ನಮ್ಮ ಸಂದರ್ಭವು ಸಾಕ್ಷಿಯಾಗುತ್ತಿದೆ. ಸಾಮೂಹಿಕ ಜವಾಬ್ದಾರಿಯ ಸಂವಿಧಾನಾತ್ಮಕ ಆಶಯಕ್ಕೆ ವಿರುದ್ಧವಾಗಿ ವ್ಯಕ್ತಿಕೇಂದ್ರಿತ ಪ್ರವೃತ್ತಿ ಪ್ರಮುಖವಾಗುತ್ತಿದೆ. ಎಲ್ಲ 'ಇಸಂ'ಗಳನ್ನೂ ಮೀರಿ 'ಹೀರೊಯಿಸಂ' ಮುನ್ನೆಲೆಗೆ ಬಂದಿದೆ. ಈ ದಿಸೆಯಲ್ಲಿ ಡಾ. ಅಂಬೇಡ್ಕರ್ ಅವರು 1949ರ ನವೆಂಬರ್ 25ರಂದು ಸಂವಿಧಾನ ಸಭೆಯಲ್ಲಿ ಮಾಡಿದ ಭಾಷಣದಲ್ಲಿ ಉಲ್ಲೇಖಿಸಿದ ಜಾನ್ ಸ್ಟುವರ್ಟ್ ಮಿಲ್ ಅವರ ಮಾತು ಮುಖ್ಯವಾಗುತ್ತದೆ: 'ಯಾವ ಮಹಾನ್ ವ್ಯಕ್ತಿಯೇ ಆಗಲಿ, ಅವರ ಪಾದದಡಿಯಲ್ಲಿ ಸ್ವಾತಂತ್ರ್ಯವನ್ನು ಚೆಲ್ಲಬಾರದು. ನಮ್ಮ ಯಾವುದೇ ಸಂಸ್ಥೆಗಳನ್ನು ಬುಡಮೇಲು ಮಾಡುವ ಅಧಿಕಾರವನ್ನು ಏಕವ್ಯಕ್ತಿಗೆ ಕೊಡಬಾರದು'.

ಮಿಲ್ ಅವರ ಈ ಮಾತು ಸಾಮೂಹಿಕ ಸಂಸದೀಯ ಹೊಣೆಗಾರಿಕೆಗೆ ಉತ್ತಮ ಉದಾಹರಣೆಯಾಗಿದೆ.

❦ ಸುಭಾಷಿತ ❦

ಕನಸನ್ನು ನನಸಾಗಿಸಿಕೊಳ್ಳಲು ಅಸಾಧ್ಯವಾಗುವಂತೆ ಮಾಡುವ ಒಂದೇ ಒಂದು ಸಂಗತಿಯಿದೆ. ಅದೆಂದರೆ: ಸೋಲಿನ ಭಯ.

-ಪಾಲೊ ಕೊಎಲೊ

ಚುರುಮುರಿ

ಸೋತವರಾರು?

• ಸುಮಂಗಲಾ

'ಒಲಿಂಪಿಕ್ಸಿನಲ್ಲಿ ಸಿಂಧು ಇನ್ನೂ ಚೆನ್ನಾಗಿ ಬ್ಯಾಟು ಬೀಸಿದ್ದರೆ ಚಿನ್ನದ ಪದಕವೇ ಸಿಗ್ತಿತ್ತು, ನಮ್ಮ ಬಾಕ್ಸರುಗಳು ಎದುರಿನವರನ್ನು ಸರಿಯಾಗಿ ಚಚ್ಚಲಿಲ್ಲ, ಕರ್ಣಾರ್ಜುನರಂಥ ಬಿಲ್ವಿದ್ಯೆಗಾರರ ಮಹಾನ್ ಚರಿತ್ರೆಯ ನಾಡಿನ ನಮ್ಮವರ ಬಾಣ ಪದಕದ ಗುರಿ ತಲುಪಲಿಲ್ಲ' ಎಂದೆಲ್ಲ ಬೆಕ್ಕಣ್ಣ ಗೊಣಗೊಣ ಎನ್ನುತ್ತಿತ್ತು.

'ಅಲ್ಲಲೇ... ಸಿಎಂಪಿಕ್ಸ್ ದೊಡ್ಡದು ಅಂತಿದ್ದವನು ಅದ್ಯಾವಾಗ ಒಲಿಂಪಿಕ್ಸ್ ನೋಡಾಕೆ ಶುರು ಮಾಡಿದೆ' ಎಂದೆ.

'ಸಿಎಂಪಿಕ್ಸ್‌ದು ಒಂದು ಗ್ರ್ಯಾನ್ ಸ್ಲಾಮ್ ಮುಗೀತು... ಇನ್ನು ಟೆಸ್ಟ್ ಮ್ಯಾಚುಗಳು ಶುರುವಾಗ್ತವೆ. ಅದರ ಮಜಾ ತಗಳ್ಳಕ್ಕೆ ತುಸು ಕಾಯಬಕು' ಎಂದಿತು.

ಮತ್ತ ಕೊನೇದಿನ ನಿಮ್ಮ ಯೆಡ್ಯೂರಜ್ಜಾರು ಕಣ್ಣೀರಧಾರೆ ಹರಿಸಿದ್ದು ಗ್ರ್ಯಾನ್ ಸ್ಲಾಮ್‌ನಾಗೆ ಸೋತಿದ್ದಕ್ಕೇನು' ಎಂದು ಕಿಚಾಯಿಸಿದೆ.

'ಅವರೆಲ್ಲಿ ಸೋತಾರ...? ಪಂದ್ಯ ಬಿಟ್ಟುಕೊಟ್ಟಾರ! ಇಡೀ ಪ್ರಪಂಚದಾಗೆ ಎಲ್ಲ ಶೋಕಕ್ಕಿಂತ ಮಿಗಿಲಾದದ್ದು ಕುರ್ಚಿತ್ಯಾಗ ಶೋಕ ತಿಳಕೋ' ಎಂದು ನೊಂದು ನುಡಿಯಿತು.

'ಹ್ಞೂಂ ಮತ್ತ, ನೋಡೀಯಿಲ್ಲೋ ನಿಮ್ಮ ಕುಮಾರಣ್ಣನೂ ದೋಸ್ತಿ ಸರ್ಕಾರದಾಗೆ ನಾ ಬರೀ ಗುಮಾಸ್ತನಾಗಿದ್ದೆ ಅಂತ ನಿನ್ನೆ ಕಣ್ಣಿಗೆ ಕರ್ಚೀಪು ಒತ್ತಿಕೆಂಡು ವದ್ದಾಡಿ ಹೇಳಾಕಹತ್ತಿದ್ದರು' ಎಂದೆ.

'ಸಿಎಂ ಗುಮಾಸ್ತರಾದರು ಅಂತ್ಹೇಳಿ ಗುಮಾಸ್ತರು ಸಿಎಂ ಆಗಾಕೆ ಆಗಂಗಿಲ್ಲ...' ಬೆಕ್ಕಣ್ಣ ಹೊಸ ಗಾದೆ ಹೊಸೆಯಿತು.

'ಮತ್ತ ಗ್ರ್ಯಾನ್ ಸ್ಲಾಮ್‌ನಾಗೆ ಗೆದ್ದವರು ಯಾರು? ಮಠಾಧಿಪತಿಗಳಾ ಅಥವಾ ನಮ್ಮ ಹೊಸ ಸಿಎಮ್ಮಾ?

'ಎಲ್ಲದೀ ನೀ... ಗೆದ್ದಿದ್ದು ಕಮಲಕ್ಕನ ಹೈಕಮಾಂಡು. ಉಳಿದವರಿಗೆ ಬೆಳ್ಳಿ, ಕಂಚು ಸಿಕ್ಕರೆ ಅಷ್ಟೇ ಪುಣ್ಯ'.

'ಮತ್ತ ಅಜ್ಜಾರೂ ಸೋತಿಲ್ಲ ಅಂತಿ, ಹಂಗಾರೆ ಸೋತವರು ಯಾರು?'

'ಸೋತವರು ನೀವು! ಪಂದ್ಯದಾಗೆ ಕ್ವಾಲಿಫೈ ಹಂತದೊಳಗೇ ನೀವು ಶ್ರೀಸಾಮಾನ್ಯರು ಮತ್ತು ನಿಮ್ಮ ಪ್ರಜಾಪ್ರಭುತ್ವ ಮುಗ್ಗರಿಸಿ ಬಿದ್ದದ. ನಿಮಗೆ ಗೊತ್ತೇ ಆಗದ ಹಂಗೆ ನಾಮ ಬಿದ್ದಿರತೈತಿ, ತಿಳಕೋರಿ' ಎನ್ನುತ್ತ ಬೆಕ್ಕಣ್ಣ ಪಕಪಕನೆ ನಕ್ಕಿತು!

ಸಂಗತ

ಇಲ್ಲ, ನನಗೆ ಹೆಚ್ಚು ವಯಸ್ಸಾಗಿಲ್ಲ!

ನಿವೃತ್ತಿಯು ನಮ್ಮ ಅಸ್ಮಿತೆ ಬಯಸಿದಂತೆ ಕೆಲಸ ಮಾಡುವುದಕ್ಕೆ ಸಿಗುವ ಅವಕಾಶ

• ಮಲ್ಲಿಕಾರ್ಜುನ ಹೆಗ್ಗಳಗಿ

ಇಸ್ರೇಲ್‌ನ ಮೊದಲ ಪ್ರಧಾನಿ ಡೇವಿಡ್ ಬೆನ್ ಗುರಿಯನ್ ವಯಸ್ಸಾಯಿತು ಎನ್ನುವ ಕಾರಣಕ್ಕೆ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ ಬಳಿಕ, ದೇಶದ ದೊಡ್ಡ ಮರುಭೂಮಿಯೊಂದರಲ್ಲಿ ನಡೆಯುತ್ತಿದ್ದ ಸಾಮೂಹಿಕ ಕೃಷಿ ಕಾರ್ಯದಲ್ಲಿ ತೊಡಗಿದರು. ರೈತರಿಗೆ ವೈಜ್ಞಾನಿಕ ಕೃಷಿ, ಹೈನುಗಾರಿಕೆಗೆ ಮಾರ್ಗದರ್ಶನ ಮಾಡಿದರು. ಕೃಷಿಕರೊಂದಿಗೆ ಕೃಷಿಕರಾಗಿ ಬದುಕಿದರು. ಯಾವುದೇ ಅಧಿಕಾರ ಇಲ್ಲದೇ, ಪುಟ್ಟ ದೇಶ ಇಸ್ರೇಲ್ ಅನ್ನು ಹೈಟೆಕ್ ಕೃಷಿಯಲ್ಲಿ ಜಗತ್ತಿಗೇ ಮಾದರಿಯಾಗಿ ರೂಪಿಸಿದರು. ಅವರು 'ಇಸ್ರೇಲ್ ಪಿತಾಮಹ' ಎಂದು ಹೆಸರು ಪಡೆದದ್ದು ನಿವೃತ್ತಿಯ ನಂತರ ಎಂಬುದು ಗಮನಾರ್ಹ.

ವಯಸ್ಸಾಯಿತು ಎನ್ನುವ ಕಾರಣಕ್ಕೆ ಬಿ.ಎಸ್. ಯಡಿಯೂರಪ್ಪ ಅವರಿಂದ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಪಡೆಯಲಾಯಿತು ಎಂಬ ಮಾತಿದೆ. 'ರಾಜ್ಯಪಾಲನಾಗಿ ನೇಮಕಗೊಂಡು ರಾಜಭವನದಲ್ಲಿ ಆರಾಮದಾಯಕ ಜೀವನ ನಡೆಸಲಾರೆ. ಜನರ ನಡುವೆ ಇದ್ದು ಕೆಲಸ ಮಾಡುತ್ತೇನೆ' ಎಂದು ಅವರು ಆತ್ಮವಿಶ್ವಾಸದಿಂದ ಹೇಳಿದ್ದನ್ನು ಕೇಳಿ ಗುರಿಯನ್ ನೆನಪಾದರು.

ವಯಸ್ಸಾಗುವುದು ಒಂದು ಸಹಜ ಕ್ರಿಯೆ. ನಿವೃತ್ತಿ ಎಂಬುದು ನಾವೇ ಕಟ್ಟಿಕೊಳ್ಳುವ ಬಂಧನ. ಜಾಣ್ಮೆಯಿಂದ ಅದನ್ನು ಕಳಚಿಕೊಂಡು ಹೊಸ ಇನಿಂಗ್ಸ್‌ನತ್ತ ಹೆಜ್ಜೆ ಹಾಕಬೇಕು. ನಮ್ಮ ಅಸ್ಮಿತೆ ಬಯಸಿದಂತೆ ಕೆಲಸ ಮಾಡುವುದಕ್ಕೆ ನಿವೃತ್ತಿಯ ನಂತರ ಅವಕಾಶ ದೊರೆಯುತ್ತದೆ.

ಸರ್ಕಾರಿ ನೌಕರರು, ಸಂಘಟಿತ ಕಾರ್ಮಿಕರು 60ನೇ ವಯಸ್ಸಿಗೆ ನಿವೃತ್ತಿ ಹೊಂದುತ್ತಾರೆ. ಉಳಿದವರಿಗೆ ನಿವೃತ್ತಿಯೂ ಇಲ್ಲ, ಪಿಂಚಣಿಯೂ ಇಲ್ಲ. ಆದರೆ ಇವರೆಲ್ಲ ಪಿಂಚಣಿ ಪಡೆಯುವವರಿಗಿಂತ ಹೆಚ್ಚು ಆರೋಗ್ಯ ಹಾಗೂ ಕ್ರಿಯಾಶೀಲತೆಯಿಂದ ಇರುತ್ತಾರೆ. ಯಾಕೆಂದರೆ ನಿವೃತ್ತಿಯ ಬಗ್ಗೆ ಇವರು ಯೋಚನೆಯನ್ನೇ ಮಾಡುವುದಿಲ್ಲ.

ನಿವೃತ್ತರು ಕೆಲಸ ಮಾಡಬಾರದು, ಸುಖವಾಗಿ ಉಂಡು, ಹಾಯಾಗಿ ಮಲಗಿ ದಿನ ಕಳೆಯಬೇಕು ಎಂದು ಕೆಲವರು ಸಲಹೆ ಮಾಡುತ್ತಾರೆ. ಆದರೆ ಸುಖಲೋಲುಪತೆಯು ಜೀವನದ ಮುಖ್ಯ ಅಳತೆಗೋಲಲ್ಲ. ಆಸಕ್ತಿಯ ಕೆಲಸಗಳಲ್ಲಿ ತೊಡಗುವುದೊಂದೇ ಸಂತೋಷದ ಹಾದಿ.

ನಮ್ಮ ಹಳ್ಳಿಗಳಲ್ಲಿ ಒಂದು ಸುತ್ತು ಹಾಯ್ದುಬಂದರೆ ದನ ಮೇಯಿಸುವ, ಹಾಲು ಕರೆಯುವ, ಬಟ್ಟೆ ಹೊಲೆಯುವ, ಜಮೀನಿನಲ್ಲಿ ಕೆಲಸ ಮಾಡುವ ವಯಸ್ಸಾದ ಬಹಳಷ್ಟು ಜನರು ಕಣ್ಣಿಗೆ ಬೀಳುತ್ತಾರೆ. ಅವರ ಆರೋಗ್ಯ ಮತ್ತು ಉತ್ಸಾಹದ ಗುಟ್ಟು ದುಡಿಮೆ.

ಜಪಾನ್ ಹಾಗೂ ಇನ್ನು ಕೆಲವು ದೇಶಗಳಲ್ಲಿ ನಿವೃತ್ತಿಗೆ ವಯಸ್ಸನ್ನು ನಿಗದಿಪಡಿಸಿಲ್ಲ. ಶರೀರದ ಸದೃಢತೆಯೇ ನಿವೃತ್ತಿಯ ಮಾನದಂಡವಾಗಿದೆ.

ನಮ್ಮ ನೆರೆಮನೆಯ ಅಜ್ಜಿ ಖಾಲಿ ಜಾಗ ಕಂಡಲ್ಲೆಲ್ಲ ಗಿಡ ನೆಡುತ್ತಾರೆ. ಸದ್ದುಗದ್ದಲವಿಲ್ಲದೆ ಮರಗಳನ್ನು ಬೆಳೆಸಿ 'ವನದೇವಿ' ಎಂಬ ಗೌರವಕ್ಕೆ ಪಾತ್ರರಾಗಿದ್ದಾರೆ. 'ಗಿಡ ನೆಡುವುದೇ ನನಗೆ ಪೂಜೆ' ಎನ್ನುತ್ತಾರೆ.

'ಸೂಪರ್‌ಮ್ಯಾನ್' ಚಲನಚಿತ್ರದ ನಾಯಕ ಕ್ರಿಸ್ಟೊಫರ್ ರೀವ್, ಕುದುರೆಯಿಂದ ಬಿದ್ದು ತೀವ್ರ ಗಾಯಗೊಂಡು ಪಾರ್ಶ್ವವಾಯುವಿಗೆ ತುತ್ತಾದರು. ಕ್ರಮೇಣ ಆರೋಗ್ಯವನ್ನು ಮರಳಿ ಪಡೆದುಕೊಂಡ ರೀವ್, ಜನಸೇವೆಗಾಗಿ ಪ್ರತಿಷ್ಠಾನವೊಂದನ್ನು ಆರಂಭಿಸಿದರು. ಜಗತ್ತಿನೆಲ್ಲೆಡೆ ಪಾರ್ಶ್ವವಾಯುಪೀಡಿತರಿಗೆ ಸಹಾಯ, ಸಾಂತ್ವನ ನೀಡುತ್ತ ಧನ್ಯತೆಯನ್ನು ಅನುಭವಿಸಿದರು.

'ಭಾರತ ಬಿಟ್ಟು ತೊಲಗಿ' ಚಳವಳಿ ಆರಂಭಿಸಿದಾಗ ಗಾಂಧೀಜಿ ಮತ್ತು ಕಸ್ತೂರಬಾ ಅವರಿಗೆ ಸುಮಾರು 73ವರ್ಷವಾಗಿತ್ತು. ಅವರನ್ನು ರಕ್ತದೊತ್ತಡ, ಮಧುಮೇಹ ಬಾಧಿಸುತ್ತಿದ್ದವು. ದೇಶದ ಸ್ವಾತಂತ್ರ್ಯದ ಭವ್ಯ ಕನಸು ಹೊಂದಿದ್ದ ಈ ವೃದ್ಧ ದಂಪತಿಗೆ ವಯಸ್ಸು ಎಳ್ಳಷ್ಟೂ ಕಾಡಲಿಲ್ಲ.

60 ವರ್ಷದ ಗಡಿ ದಾಟಿದವರು ತಮ್ಮ ಕಥೆ ಮುಗಿಯಿತು ಎಂದು ನಿರಾಶರಾಗುವುದು ಉಚಿತವಲ್ಲ. ಜಗತ್ತು ಒಂದು ದೊಡ್ಡ ವೇದಿಕೆ. ಇದನ್ನು ಅಲ್ಲಮಪ್ರಭು ಬಯಲು ಎಂದು ಕರೆದಿದ್ದಾರೆ. ಈ ಬದುಕೆಂಬ ಬಯಲಿನಲ್ಲಿ ಕೊನೆಯ ಕ್ಷಣದವರೆಗೂ ಉತ್ಸಾಹದಿಂದ ಆಟ ಆಡಬೇಕು.

ನಿವೃತ್ತಿಯ ನಂತರ ಓದುವ, ಬರೆಯುವ, ಮಕ್ಕಳಿಗೆ ಪಾಠ, ಕಥೆ ಹೇಳುವ ಹವ್ಯಾಸ ರೂಢಿಸಿಕೊಳ್ಳಬೇಕು. ಅನೇಕ ವಯಸ್ಕರಿಗೆ ಮೊಬೈಲ್, ಕಂಪ್ಯೂಟರ್ ಆಪರೇಟ್ ಮಾಡಲು ಬರುವುದಿಲ್ಲ. ನಮಗ್ಯಾಕೆ ಎಂದು ನಿರಾಸಕ್ತಿಯಿಂದ, ಇಂದು ತೀರಾ ಅವಶ್ಯವಾಗಿರುವ ಈ ತಂತ್ರಜ್ಞಾನವನ್ನು ಅರಿತುಕೊಳ್ಳುವುದಿಲ್ಲ. ಬದುಕಿನುದ್ದಕ್ಕೂ ಕಲಿಯುತ್ತಲೇ ಇರಬೇಕು ಎನ್ನುವ ಮಾತಿನಲ್ಲಿ ಬಹುದೊಡ್ಡ ಶಕ್ತಿ ಅಡಗಿದೆ.

ಜಮಖಂಡಿಯ ನಿವೃತ್ತ ಶಿಕ್ಷಕ ಡಿ.ಎ.ಬಾಗಲಕೋಟ ತಮ್ಮ 75ನೇ ವಯಸ್ಸಿನಲ್ಲಿ ಪಿಎಚ್.ಡಿ ಅಧ್ಯಯನ ಮಾಡಿ ಡಾಕ್ಟರೇಟ್ ಪಡೆದಿದ್ದಾರೆ. ಈಗ ಅವರು ವಿದ್ಯಾರ್ಥಿಗಳನ್ನು ಹುಡುಕಿಕೊಂಡು ಹೋಗಿ ಕನ್ನಡ ಸಾಹಿತ್ಯದ ಪಾಠ ಮಾಡುತ್ತಿದ್ದಾರೆ.

ಈಚೆಗೆ ವಯಸ್ಕರ ಕ್ರಿಯಾಶೀಲತೆ ಬಗ್ಗೆ ಒಂದು ಅಧ್ಯಯನ ವರದಿ ಪ್ರಕಟವಾಗಿದೆ. ನಿವೃತ್ತಿಯ ನಂತರ ಬೇರೆ ಉದ್ಯೋಗದಲ್ಲಿ ತೊಡಗುವ ಕೆಲಸಗಾರರು ಹೆಚ್ಚು ಕೆಲಸ ಮಾಡುತ್ತಾರೆ. ಸಂಸ್ಥೆಯ ಬೆಳವಣಿಗೆಗೆ ಅವರ ಅನುಭವ ಹೆಚ್ಚಿಗೆ ಲಭಿಸುತ್ತದೆ ಎಂದು ವರದಿ ತಿಳಿಸಿದೆ.

ನಿವೃತ್ತಿಯ ಕಲ್ಪನೆಯೇ ಒಂದು ನಕಾರಾತ್ಮಕ ಆಯಾಮ. ಅದು ಅನವಶ್ಯಕವಾಗಿ ಆತಂಕ, ನಿರಾಶೆಯನ್ನು ಸೃಷ್ಟಿಸುತ್ತದೆ. ಬದುಕು ಒಂದು ಅಖಂಡ ಪ್ರವಾಹ. ಪ್ರತಿಕ್ಷಣವೂ ಅದು ಹರಿಯುತ್ತದೆ. ಹರಿದು ಹೋದ ಕ್ಷಣವನ್ನು ಎಂದೂ ಮರಳಿ ಪಡೆಯಲಾಗದು. ನಿರಂತರ ಹರಿಯುವ ಈ ಬದುಕಿನ ಪ್ರವಾಹ ನಿಲ್ಲಬಾರದು. ಏಕೆಂದರೆ, ಹರಿಯುವಿಕೆಯೇ ಜೀವನ.

ವಾಚಕರ ವಾಣಿ

ನಿಯಮಾವಳಿ ರಚನೆ: ಆಭಾಸ ಮರುಕಳಿಸದಿರಲಿ

ಶಾಲೆಗಳ ಪುನರಾರಂಭಕ್ಕೆ ತಜ್ಞರಿಂದ ಮಾರ್ಗಸೂಚಿಗಳ ಚಿಂತನೆ ಆರಂಭವಾಗಿದೆ. ಆದರೆ ಇವು ಸಾಮಾನ್ಯವಾಗಿ ವಾಸ್ತವಾಂಶಕ್ಕೆ ಹತ್ತಿರವಿಲ್ಲದ ವಿಚಿತ್ರ ಪಥ್ಯಗಳಂತೆ ಇರುವುದು ಮಾತ್ರ ವಿಪರ್ಯಾಸ. ವಿದ್ಯಾಗಮ, ಅರ್ಧದಿನದ ಶಾಲೆ, ದಿನ ಬಿಟ್ಟು ದಿನದ ಶಾಲೆ ಮೊದಲಾದ ವಿಫಲ ಪ್ರಯೋಗಗಳ ಬದಲು, ಬಿಸಿಯೂಟ ಸಹಿತ ಪೂರ್ಣ ಪ್ರಮಾಣದ ಸಹಜ ಶಾಲೆಯನ್ನು ಕೋವಿಡ್ ಮಾರ್ಗಸೂಚಿಗಳ ಅರಿವು ಮಕ್ಕಳಲ್ಲಿ ಸದಾ ಜಾಗೃತವಾಗಿರುವಂತೆ ನೋಡಿಕೊಂಡು ನಡೆಸುವುದು ಸೂಕ್ತ. ಇದು, ದುಡಿಯಲು ಮನೆ ಬಿಟ್ಟು ಹೋಗುವ ಪೋಷಕರ ಅರ್ಧ ತಲೆಬಿಸಿಯನ್ನು ಕಡಿಮೆ ಮಾಡುತ್ತದೆ.

ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಪೂರ್ಣ ಪ್ರಮಾಣದಲ್ಲಿ ಆರಂಭಿಸುವ ಕಾರ್ಯವು ಆಡಳಿತದ ಆದ್ಯತೆಯಾಗಲಿ. ಸ್ವಯಂಪ್ರೇರಿತ ಮಾರ್ಗಸೂಚಿಗಳ ಪರಿಪಾಲನೆ ಮಾತ್ರ ಭಾರತೀಯ ಪರಿಸ್ಥಿತಿಗೆ ಸೂಕ್ತವಾಗಿದ್ದು, ವಿಚಿತ್ರ ನಿಯಮಾವಳಿಗಳಿಂದ ಏನೂ ಉಪಯೋಗವಾಗದು. ಆದ್ದರಿಂದ ನಿಯಮಾವಳಿಗಳನ್ನು ರೂಪಿಸುವಾಗ ಈ ಹಿಂದಿನ ಆಭಾಸಗಳು ಮರುಕಳಿಸದಂತೆ ಎಚ್ಚರ ವಹಿಸುವ ಅಗತ್ಯ ಇದೆ.

ಡಾ. ರಾಮಚಂದ್ರ ಕೆ., ಕನ್ಯಾನ

ಬಂದಿ ಆಗಬಯಸದವರಿಗೆ...

ಔಪಚಾರಿಕ ಶಿಕ್ಷಣಕ್ಕೆ ಪರ್ಯಾಯವಾಗಿ ಶಿಕ್ಷಣ ಮುಂದುವರಿಸಲು ರಾಷ್ಟ್ರೀಯ ಮುಕ್ತ ಶಿಕ್ಷಣ ಸಂಸ್ಥೆಯು (ಎನ್‌ಐಒಎಸ್) ನಿಜಕ್ಕೂ ಆಶಾಕಿರಣವಾಗಿದೆ. ಡಾ. ಎಚ್.ಬಿ.ಚಂದ್ರಶೇಖರ್ ಅವರು ಅಭಿಪ್ರಾಯಪಟ್ಟಿರುವಂತೆ (ಸಂಗತ, ಜುಲೈ 31), ಅರ್ಧಕ್ಕೆ ಶಾಲೆ ತೊರೆಯುವವರಿಗೆ ಇದು ಭರವಸೆಯ ಕಿರಣ. ಶಾಲೆ ತೊರೆಯದ ಮಕ್ಕಳು ಕೂಡ ತಮ್ಮಿಚ್ಛೆಯಂತೆ ಓದಲು ಈ ಸಂಸ್ಥೆಯನ್ನು ಆರಿಸಿಕೊಳ್ಳುತ್ತಿದ್ದಾರೆ. ಶಾಲೆಗಳಲ್ಲಿ ಬೆಳಗಿನಿಂದ ಸಂಜೆಯವರೆಗೆ ಬೇರೇನೂ ಚಟುವಟಿಕೆ, ಹವ್ಯಾಸ, ಆಟೋಟಗಳಲ್ಲಿ ತೊಡಗಲಾಗದೆ ಕೂರಬೇಕೆಂಬುದು ಮತ್ತು ಇಲ್ಲಿ ವಿಷಯಗಳ ಆಯ್ಕೆಯ ಅವಕಾಶಗಳು ಹೇರಳವಾಗಿರುವುದು ಇದಕ್ಕೆ ಕಾರಣ. ಆದರೆ ಇದರಲ್ಲಿ ಇನ್ನೂ ಕನ್ನಡ ಮಾಧ್ಯಮವನ್ನು ಜಾರಿಗೆ ತಂದಿಲ್ಲ. ಮಕ್ಕಳು ಉತ್ತರಗಳನ್ನು ಕನ್ನಡದಲ್ಲಿ ಬರೆಯಬಹುದು, ಆದರೆ ಪ್ರಶ್ನೆಪತ್ರಿಕೆಗಳನ್ನು ಒದಗಿಸುವುದಿಲ್ಲ. ಕನ್ನಡದಲ್ಲಿ ಪಠ್ಯಪುಸ್ತಕಗಳೂ ಇಲ್ಲ. ಈ ತಿಂಗಳು 10ನೇ ತರಗತಿ ಪಠ್ಯಪುಸ್ತಕಗಳು ಕನ್ನಡದಲ್ಲಿ ಬರುತ್ತವೆ ಎಂದು ಸಂಸ್ಥೆ ಹೇಳಿದೆ.

ಇದೇ ರೀತಿ ಕರ್ನಾಟಕ ಸರ್ಕಾರದ ಮುಕ್ತ ಶಾಲಾ ವ್ಯವಸ್ಥೆ ಇದೆ. ಖಾಸಗಿ ಶಾಲೆಗಳ ಶುಲ್ಕದ ಹಾವಳಿಯ ನಡುವೆ ಇವು ಉತ್ತಮ ಪರ್ಯಾಯ ಮಾರ್ಗಗಳಾಗಿವೆ ಮತ್ತು ಶಾಲೆಯ ಕೊಠಡಿಯೊಳಗೆ ಬಂದಿಯಾಗಲು ಬಯಸದ ಮಕ್ಕಳಿಗೆ ನಿಜವಾಗಲೂ ಅತ್ಯುತ್ತಮ ಆಯ್ಕೆಗಳಾಗಿವೆ.

ನಾಗಮಣಿ ಎಸ್.ಎನ್., ಬೆಂಗಳೂರು

ವೈಜಯಂತಿ!

ಅಸ್ತಮಿಸಿದ ತಾರೆ,
'ಅಭಿನಯ(ನವ) ಶಾರದೆ'
ಜಯಂತಿ:
ಚಿತ್ರರಂಗದ
ಉತ್ತುಂಗ
ವೈಜಯಂತಿ!

ಸಿ.ಪಿ.ಕೆ., ಮೈಸೂರು

ಮೆಚ್ಚಬೇಕಾದದ್ದು ಹೈಕಮಾಂಡ್ ಜಾಣ್ಮೆಯನ್ನಲ್ಲ!

'ಬಸವರಾಜ ಬೊಮ್ಮಾಯಿ ಅವರನ್ನು ಮುಖ್ಯಮಂತ್ರಿಯನ್ನಾಗಿ ಆಯ್ಕೆ ಮಾಡುವ ಮೂಲಕ ಬಿಜೆಪಿ ಹೈಕಮಾಂಡ್ ಜಾಣ್ಮೆ ಹಾಗೂ ಪ್ರಬುದ್ಧತೆಯನ್ನು ಪ್ರದರ್ಶಿಸಿದೆ' ಎಂದು ಶಿವಮೂರ್ತಿ ಮುರುಘಾ ಶರಣರು ಬಿಜೆಪಿಯ ಹೈಕಮಾಂಡನ್ನು ಕೊಂಡಾಡಿದ್ದಾರೆ (ಪ್ರ.ವಾ., ಜುಲೈ 29). ಬಿಜೆಪಿಯ ಹೈಕಮಾಂಡಿನ ಜಾಣ್ಮೆ ಮತ್ತು ಪ್ರಬುದ್ಧತೆಯನ್ನು ಕೊಂಡಾಡುವಂಥದ್ದೇನಿದೆ ಇಲ್ಲಿ ಎಂಬುದು ಅರ್ಥವಾಗುತ್ತಿಲ್ಲ. ಬದಲಿಗೆ 'ಮೂಗು ಹಿಡಿದರೆ ಬಾಯಿ ತೆರೆಯಲೇ ಬೇಕಾಗುತ್ತದೆ' ಎಂಬ ಲೋಕಾರೂಢಿಯ ಮಾತು ಹಾಗೂ ಸರಳ ಸತ್ಯವನ್ನು ಅರಿತು ಅದರಂತೆ ಬಿಜೆಪಿ ಹೈಕಮಾಂಡ್ ನಡೆದುಕೊಳ್ಳಲೇ ಬೇಕಾದಂಥ ಅನಿವಾರ್ಯವನ್ನು ಉಂಟುಮಾಡಿದ ಸಕಲ ಮಠಾಧೀಶರ ಜಾಣ್ಮೆ ಮತ್ತು ಬಲ್ಮೆಯನ್ನು ಎಷ್ಟು ಕೊಂಡಾಡಿದರೂ ಸಾಲದು!

ರಾಜಕೀಯದಲ್ಲಿ ಉನ್ನತ ಸ್ಥಾನಮಾನಗಳಿಗಾಗಿ ಹಾತೊರೆಯುವ ರಾಜಕಾರಣಿಗಳು ಸಾಮಾನ್ಯವಾಗಿ ಹೇಳುವ– 'ನಾನೇನೂ ಸನ್ಯಾಸಿಯಲ್ಲ' ಎಂಬ ಮಾತಿಗೆ ಸರಿಜೋಡಿಯಾಗಿ 'ನಾವೇನೂ ರಾಜಕಾರಣಿಗಳಲ್ಲ' ಎಂದು ಅವರುಗಳು ಹೇಳುವಂತೆಯೇ ಇಲ್ಲ. ಬದಲಿಗೆ ಮಠಾಧೀಶರುಗಳೂ ಬೇಕಾದರೆ ನಿಜವಾದ ಸನ್ಯಾಸಿಯ ಆದರ್ಶವಾದ 'ತರುತಲವಾಸ ಕರತಲ ಭಿಕ್ಷಾ' ರೀತಿಯ ಸನ್ಯಾಸಿಗಳು ನಾವಲ್ಲ' ಎಂದು ಘೋಷಿಸಬಹುದು.

ಎಲ್.ಆರ್.ಕಶ್ಯಪ್, ಬೆಂಗಳೂರು

ವಿಶ್ವವಿದ್ಯಾಲಯಗಳ ವಿಶ್ವರೂಪ!

'ಸುಣ್ಣ ನುಂಗುತ್ತಿರುವ ಗೋಡೆಗಳು' ಶೀರ್ಷಿಕೆಯ ಲೇಖನದಲ್ಲಿ (ಪ್ರ.ವಾ., ಜುಲೈ 30) ಸಬಿತಾ ಬನ್ನಾಡಿ ಅವರು ಉನ್ನತ ಶಿಕ್ಷಣ ತಲುಪಿರುವ ಅವನತಿಯ ವಿಶ್ವರೂಪವನ್ನು ಅನಾವರಣಗೊಳಿಸಿದ್ದಾರೆ. ನಮ್ಮ ಪ್ರಲಾಪಗಳು ಬೇವನ್ನು ಬಿತ್ತಿ ಮಾವನ್ನು ಬಯಸಿದಂತೆ ಆಗಿವೆ. ಯಾವುದೇ ಪ್ರಾಯೋಗಿಕವಾದ ಗುಣಮಟ್ಟದ ಮಾನದಂಡಗಳಿಲ್ಲದೆ, ಬಹುತೇಕ ಅಡ್ಡದಾರಿಗಳಲ್ಲಿ ಆಯ್ಕೆಯಾಗುವ ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರಿಂದ ಒಳ್ಳೆಯದನ್ನು, ಹೆಚ್ಚಿನದನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಈ ಹಿಂದೆ ಉನ್ನತ ಶಿಕ್ಷಣ ಸಚಿವರಾಗಿದ್ದ ಬಸವರಾಜ ರಾಯರಡ್ಡಿ ಅವರು ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಇಟಿ) ಮೂಲಕ ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರನ್ನು ನೇಮಕ ಮಾಡಲು ಮುಂದಡಿ ಇಟ್ಟಿದ್ದರು. ಪಟ್ಟಭದ್ರ ಹಿತಾಸಕ್ತಿಗಳು ಸ್ವಾಯತ್ತತೆಯ ನೆಪವೊಡ್ಡಿ ಇದನ್ನು ವಿರೋಧಿಸಿದರು. ಅದು ನನೆಗುದಿಗೆ ಬಿದ್ದಿತು.

ಪ್ರಸ್ತುತ ಕರ್ನಾಟಕದಲ್ಲಿ ಹೊಸ ಸರ್ಕಾರ ರಚನೆಯಾಗಿದೆ. ಈಗಲಾದರೂ ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರನ್ನು ಸಾಮಾನ್ಯ ಪ್ರವೇಶ ಪರೀಕ್ಷೆಯ ಮೂಲಕ ಆಯ್ಕೆ ಮಾಡಬೇಕಾಗಿದೆ. ಸಮರ್ಥರನ್ನು ಹೊರಗಿಟ್ಟು ಅಸಮರ್ಥರನ್ನು ಒಳಗೆ ತರುವುದು ಅತ್ಯಂತ ಹೇಯವಾದ ಕೆಲಸ. ದುರಂತವೆಂದರೆ, ಇದು ಅವ್ಯಾಹತವಾಗಿ ನಡೆದುಕೊಂಡು ಬಂದಿದೆ. ಒಂದು 'ಡಿ' ಗ್ರೂಪಿನ ನೌಕರಿ ಪಡೆಯಲು ಸಾಮಾನ್ಯ ಪ್ರವೇಶ ಪರೀಕ್ಷೆ ಇರುವಾಗ ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರಿಗೆ ಏಕಿಲ್ಲ?

ಗಿರೀಶ್ ಮತ್ತೇರ, ಹನುಮಂತದೇವರ ಕಣಿವೆ, ಹೊಳಲ್ಕೆರೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಭಾರತದ ಬಗಲಲ್ಲಿ ಚೀನಾ ರೈಲು

ಗಾಲ್ವನ್ ನದಿ ಕಣಿವೆಯಲ್ಲಿ ಎರಡೂ ದೇಶಗಳ ಸೈನಿಕರ ನಡುವೆ 2020ರ ಜೂನ್ 15ರಂದು ನಡೆದ ಸಂಘರ್ಷ, ಅದರಲ್ಲಿ ಭಾರತದ 20 ಯೋಧರ ಹತ್ಯೆಯು ಎರಡೂ ದೇಶಗಳ ನಡುವಣ ದ್ವಿಪಕ್ಷೀಯ ಸಂಬಂಧವನ್ನು ಇತ್ತೀಚಿನ ವರ್ಷಗಳಲ್ಲೇ ಪಾತಾಳಕ್ಕೆ ಕುಸಿಯುವಂತೆ ಮಾಡಿತು. 1988ರಲ್ಲಿ ಪ್ರಧಾನಿಯಾಗಿದ್ದ ರಾಜೀವ್ ಗಾಂಧಿ ಅವರು ಬೀಜಿಂಗ್‌ಗೆ ಭೇಟಿ ಕೊಟ್ಟ ಬಳಿಕ ಎರಡೂ ದೇಶಗಳ ನಡುವಣ ಸಂಬಂಧವು ಸುಧಾರಣೆಯ ಹಾದಿಗೆ ಬಂತು ಎನ್ನಲಾಗುತ್ತಿದೆ. ಆದರೆ, 2020ರ ಜೂನ್ 15ರ ಬಳಿಕ ಸಂಬಂಧವು ಹದಗೆಡುತ್ತಲೇ ಸಾಗಿದೆ.

ಗಾಲ್ವನ್ ಬಿಕ್ಕಟ್ಟಿನ ಸಂದರ್ಭದಲ್ಲಿ ಗಡಿಯತ್ತ ಸಾಗಿದ್ದ ಭಾರತೀಯ ಸೇನೆಯ ವಾಹನಗಳು

ಭಾರತ– ಚೀನಾ ನಡುವೆ 3,488 ಕಿ.ಮೀ. ಉದ್ದದ ಗಡಿ ಇದೆ. ಜಮ್ಮು–ಕಾಶ್ಮೀರ, ಹಿಮಾಚಲ ಪ್ರದೇಶ, ಉತ್ತರಾಖಂಡ, ಸಿಕ್ಕಿಂ ಮತ್ತು ಅರುಣಾಚಲ ಪ್ರದೇಶಗಳು ಚೀನಾ ಗಡಿಯಲ್ಲಿರುವ ಪ್ರದೇಶಗಳು. ಬಹುತೇಕ ಪ್ರದೇಶಗಳಲ್ಲಿ ಅಂತರರಾಷ್ಟ್ರೀಯ ಗಡಿಯ ವ್ಯಾಖ್ಯಾನ ನಿಖರವಾಗಿಲ್ಲ. ಇದು ಎರಡೂ ದೇಶಗಳ ನಡುವೆ ಆಗಾಗ ಸಂಘರ್ಷಕ್ಕೆ ಕಾರಣವಾಗುತ್ತಿದೆ. ಭಾರತದ ಗಡಿ ಸಮೀಪದಲ್ಲಿರುವ ನಿನ್ಷಿ ಪಟ್ಟಣದವರೆಗೆ ಬುಲೆಟ್ ರೈಲು ಸಂಚಾರವನ್ನು ಚೀನಾ ಆರಂಭಿಸಿದೆ. ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ರೈಲಿನಲ್ಲಿ ಇಲ್ಲಿಗೆ ಇತ್ತೀಚೆಗೆ ಭೇಟಿ ನೀಡಿದ್ದರು ಎಂಬುದು ಗಡಿ ಸಮಸ್ಯೆಯತ್ತ ಮತ್ತೆ ಗಮನ ಹರಿಸುವಂತೆ ಮಾಡಿದೆ.

ಆದರೆ, ಅತೃಪ್ತಿಗೆ ಕಾರಣ ಗಡಿ ವಿವಾದ ಮಾತ್ರ ಅಲ್ಲ ಎಂಬ ವಾದವೂ ಇದೆ. ಎರಡೂ ದೇಶಗಳು ಜಾಗತಿಕವಾಗಿ ಹೊಂದಿರುವ ಮಹತ್ವಾಕಾಂಕ್ಷೆ ಮತ್ತು ಪರಸ್ಪರ ಪೈಪೋಟಿಯೇ ಸಂಘರ್ಷಕ್ಕೆ ಮುಖ್ಯ ಕಾರಣ ಆಗುತ್ತಿದೆ ಎಂದು ಕಾರ್ನೆಗಿ ಇಂಡಿಯಾ ಸಂಸ್ಥೆಯ ಅಧ್ಯಯನವೊಂದು ಹೇಳಿದೆ.

2008ರ ಆರ್ಥಿಕ ಬಿಕ್ಕಟ್ಟಿನ ಬಳಿಕ ಚೀನಾವು ತನ್ನ ಜಾಗತಿಕ ಆಕಾಂಕ್ಷೆಯನ್ನು ಒಳಗೊಳ್ಳುವ ರೀತಿಯಲ್ಲಿ ವಿದೇಶ ನೀತಿಯನ್ನು ಮಾರ್ಪಡಿಸಿತು. ಜಾಗತಿಕ ಮಟ್ಟದಲ್ಲಿ ತನ್ನ ಪಾತ್ರದ ವಿಸ್ತರಣೆಯು ಭಾರತದ ಮೇಲೆ ಯಾವ ಪರಿಣಾಮ ಬೀರಬಹುದು ಎಂಬುದನ್ನು ಚೀನಾ ಗಣನೆಗೆ ತೆಗೆದುಕೊಳ್ಳಲಿಲ್ಲ.

ತನ್ನ ಹಿತಾಸಕ್ತಿಯನ್ನು ಚೀನಾ ದಮನ ಮಾಡಲು ಯತ್ನಿಸುತ್ತಿದೆ ಎಂದು ಭಾರತ ಭಾವಿಸಿತು. ತನ್ನ ಹಿತಾಸಕ್ತಿ ರಕ್ಷಣೆಗೆ ಅಗತ್ಯವಾದ ರೀತಿಯಲ್ಲಿ ವಿದೇಶ ನೀತಿಯನ್ನು ರೂಪಿಸಲು ತೊಡಗಿತು. ಅದರ ಪರಿಣಾಮವೇ 'ನೆರೆ ದೇಶಗಳೇ ಮೊದಲು' ನೀತಿ. ಕ್ವಾಡ್ ಕೂಟ ವಿಸ್ತರಣೆ, ಅಮೆರಿಕದ ಜತೆಗೆ ಹೆಚ್ಚಿನ ಸಹಕಾರ, ಹಿಂದೂ ಮಹಾಸಾಗರ – ಪೆಸಿಫಿಕ್ ಪ್ರದೇಶದಲ್ಲಿ ಚೀನಾದ ವಿರೋಧಿ ದೇಶಗಳ ಜತೆಗೆ ಭಾರತದ ಒಡನಾಟ ಹೆಚ್ಚಳವು ಎರಡೂ ದೇಶಗಳ ನಡುವೆ ಸೃಷ್ಟಿಯಾದ ಅಪನಂಬಿಕೆಯ ಪರಿಣಾಮಗಳು.

ತಾಲಿಬಾನ್ ಜತೆಗೆ ಸರಸ...

ಅಮೆರಿಕದ ಸೇನೆಯು ಅಫ್ಘಾನಿಸ್ತಾನದಿಂದ ಹೊರನಡೆದು ತಿಂಗಳು ಕಳೆದಿಲ್ಲ. ಆಗಲೇ ಚೀನಾವು ತಾಲಿಬಾನಿಗಳ ಜತೆ ಕೈಜೋಡಿಸಿದೆ. ಅಫ್ಘಾನಿಸ್ತಾನದಲ್ಲಿ ಬಂಡವಾಳ ಹೂಡಿ ಎಂದು ಚೀನಾಗೆ ತಾಲಿಬಾನಿಗಳು ನೀಡಿದ್ದ ಆಹ್ವಾನವನ್ನು ಚೀನಾ ಒಪ್ಪಿಕೊಂಡಿದೆ. ಚೀನಾದಲ್ಲಿ ಜುಲೈ 28ರಂದು ನಡೆದ ಸಭೆಯಲ್ಲಿ ತಾಲಿಬಾನ್ ಪ್ರತಿನಿಧಿಗಳು ಚೀನಾದ ವಿದೇಶಾಂಗ ಸಚಿವರ ಜತೆ ಮಾತುಕತೆ ನಡೆಸಿದ್ದಾರೆ.

ಅಫ್ಘಾನಿಸ್ತಾನದಲ್ಲಿ ಸರ್ಕಾರವನ್ನು ಉರುಳಿಸಿ, ಸಂಪೂರ್ಣ ಹಿಡಿತ ಸಾಧಿಸಲು ಮುಂದಾಗಿರುವ ತಾಲಿಬಾನಿಗಳಿಗೆ ದೇಶವನ್ನು ಮುನ್ನಡೆಸಲು ಆರ್ಥಿಕ ಬಲ ಬೇಕಿದೆ. ಇದಕ್ಕಾಗಿ ಹೊರಗಿನಿಂದ ಬಂಡವಾಳ ತರುವುದು ಅನಿವಾರ್ಯವಾಗಿದೆ. ಈ ಕಾರಣದಿಂದಲೇ ಅಪಾರ ಖನಿಜ ಸಂಪತ್ತು ಹೊಂದಿರುವ ಅಫ್ಘಾನಿಸ್ತಾನದಲ್ಲಿ ಬಂಡವಾಳ ಹೂಡಲು ತಾಲಿಬಾನಿಗಳು ಚೀನಾಗೆ ಆಹ್ವಾನ ನೀಡಿದ್ದರು. ದಶಕಗಳಿಂದಲೂ ಈ ನಿಕ್ಷೇಪಗಳ ಮೇಲೆ ಕಣ್ಣಿಟ್ಟಿದ್ದ ಚೀನಾ, ಅತ್ಯಂತ ಕಡಿಮೆ ಅವಧಿಯಲ್ಲಿ ಈ ಆಹ್ವಾನವನ್ನು ಪುರಸ್ಕರಿಸಿದೆ.

ಅಫ್ಘಾನಿಸ್ತಾನದಲ್ಲಿರುವ ಖನಿಜ ಸಂಪತ್ತಿನ ಬಗ್ಗೆ 2014ರಲ್ಲೇ ಚೀನಾ ಸಮೀಕ್ಷೆ ನಡೆಸಿ, ಹಲವು ನಿಕ್ಷೇಪಗಳನ್ನು ಗುರುತಿಸಿತ್ತು. ಇದರಲ್ಲಿ ಒಂದು ತೈಲ ಬಾವಿ ಘಟಕವನ್ನಷ್ಟೇ 25 ವರ್ಷಗಳ ಅವಧಿಗೆ ಗುತ್ತಿಗೆ ಪಡೆಯಲು ಚೀನಾಗೆ ಸಾಧ್ಯವಾಯಿತು. ಆದರೆ, ವಿವಿಧ ಕಾರಣಗಳಿಂದಾಗಿ ಬೇರೆ ಯಾವುದೇ ನಿಕ್ಷೇಪಗಳನ್ನು ಗುತ್ತಿಗೆ ಪಡೆಯುವಲ್ಲಿ ಚೀನಾ ವಿಫಲವಾಯಿತು. 2014ರಲ್ಲಿ ನಡೆಸಿದ್ದ ಸಮೀಕ್ಷೆ ಪ್ರಕಾರ ಅಫ್ಘಾನಿಸ್ತಾನದಲ್ಲಿ 6.6 ಕೋಟಿ ಟನ್ ತಾಮ್ರ, 220 ಕೋಟಿ ಟನ್ ಕಬ್ಬಿಣ ಮತ್ತು 15 ಲಕ್ಷ ಟನ್‌ನಷ್ಟು ಲಿಥಿಯಂ, ನಿಯೋಡಿಯಂ, ಸತು, ಚಿನ್ನ, ಅಲ್ಯೂಮಿನಿಯಂ, ಬೆಳ್ಳಿಯ ಅದಿರು ಇದೆ ಎಂದು ಅಂದಾಜಿಸಲಾಗಿತ್ತು. ಈ ಎಲ್ಲಾ ನಿಕ್ಷೇಪಗಳನ್ನು ಚೀನಾಗೆ ಗುತ್ತಿಗೆ ನೀಡುವುದಾಗಿ ತಾಲಿಬಾನ್ ಭರವಸೆ ನೀಡಿದೆ ಎನ್ನಲಾಗಿದೆ. ಈ ಕಾರಣದಿಂದಲೇ ಉಗ್ರ ಸಂಘಟನೆಗೂ ಕಾನೂನುಬದ್ಧ ಸರ್ಕಾರದ ಮಾನ್ಯತೆ ನೀಡಿ ಚೀನಾ ವಾಣಿಜ್ಯ ಮಾತುಕತೆ ನಡೆಸಿದೆ ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

ಇದರ ಜತೆಯಲ್ಲಿಯೇ ಚೀನಾವು ತನ್ನ ಪುರಾತನ 'ಸಿಲ್ಕ್ ರೂಟ್' ಅನ್ನು ಮರುಸ್ಥಾಪಿಸಲು ಯೋಜನೆ ಹಾಕಿಕೊಂಡಿದೆ. ಸಿಲ್ಕ್ ರೂಟ್‌ನ ಒಂದು ಮಾರ್ಗವು ಅಫ್ಘಾನಿಸ್ತಾನದ ಕಾರಕೋರಂ ಪರ್ವತ ಶ್ರೇಣಿಯ ಮೂಲಕ ಪಾಕಿಸ್ತಾನ ಮತ್ತು ಇರಾನ್‌ಗೆ ಸಂಪರ್ಕ ಕಲ್ಪಿಸುತ್ತದೆ. ಈ ಮಾರ್ಗವನ್ನು ಅಭಿವೃದ್ಧಿಪಡಿಸಲು ತಾಲಿಬಾನ್ ಒಪ್ಪಿಗೆ ನೀಡಿದೆ ಎನ್ನಲಾಗಿದೆ. ಹೀಗಾಗಿ ತಾಲಿಬಾನಿನ ಆಹ್ವಾನವನ್ನು ಪುರಸ್ಕರಿಸಿ, ಅಫ್ಘಾನಿಸ್ತಾನದಲ್ಲಿ ಬಂಡವಾಳ ಹೂಡಲು ಚೀನಾ ಮುಂದಾಗಿದೆ ಎನ್ನಲಾಗಿದೆ.

ತಾಲಿಬಾನ್‌ನಿಂದ ಬಿಡುಗಡೆಗೊಂಡ ಅಫ್ಘಾನಿಸ್ತಾನದ ಮರುನಿರ್ಮಾಣಕ್ಕೆ ಅಲ್ಲಿನ ಚುನಾಯಿತ ಸರ್ಕಾರದ ಜತೆಗೆ ಭಾರತ ಕೈಜೋಡಿಸಿತ್ತು. ಇದು ತಾಲಿಬಾನ್ ಆಕ್ರೋಶಕ್ಕೆ ಕಾರಣವಾಗಿತ್ತು. ಈಗ, ಅಫ್ಘಾನಿಸ್ತಾನವು ಮತ್ತೆ ತಾಲಿಬಾನ್ ಕೈಗೆ ಬಂದಿದೆ. ಭಾರತದ ಬಗ್ಗೆ ಅಸಮಾಧಾನ ಹೊಂದಿರುವ ಚೀನಾ ಮತ್ತು ತಾಲಿಬಾನ್ ಜತೆಯಾಗುವುದು ಭಾರತಕ್ಕೆ ಒಳ್ಳೆಯ ಸುದ್ದಿಯಂತೂ ಅಲ್ಲ ಎಂಬುದು ವಿಶ್ಲೇಷಕರ ಅಭಿಪ್ರಾಯ.

ಆಧಾರ: ಪಿಟಿಐ ಮತ್ತು ವಿವಿಧ ಮೂಲಗಳಿಂದ



ಗಡಿ ಗ್ರಾಮಗಳ ಅಭಿವೃದ್ಧಿ

ಟಿಬೆಟ್‌ನ ರಾಜಧಾನಿ ಲಾಹ್ಸಾದಿಂದ ಟಿಬೆಟ್-ಭಾರತ ಗಡಿಪಟ್ಟಣ ನಿನ್ಷಿ ನಡುವಣ ಬುಲೆಟ್ ರೈಲಿನ ಸಂಚಾರ ಕಳೆದ ವಾರವಷ್ಟೇ ಆರಂಭವಾಗಿದೆ. ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ಲಾಹ್ಸಾದಲ್ಲಿ ಈ ರೈಲಿಗೆ ಚಾಲನೆ ನೀಡಿದ್ದಾರೆ. ಭಾರತದ ಅರುಣಾಚಲ ಪ್ರದೇಶದ ಗಡಿಯಿಂದ ಕೆಲವೇ ಕಿ.ಮೀ. ದೂರದಲ್ಲಿರುವ ಈ ಪಟ್ಟಣಕ್ಕೆ, ಟಿಬೆಟ್‌ನ ಹಲವೆಡೆಯಿಂದ ರೈಲು ಸಂಚಾರವನ್ನು ಈ ಬುಲೆಟ್ ರೈಲು ಸುಗಮಗೊಳಿಸಿದೆ. ಭಾರತ-ಚೀನಾ ಗಡಿ ಸಂಘರ್ಷವನ್ನು ಗಮನದಲ್ಲಿ ಇರಿಸಿಕೊಂಡು ನೋಡುವುದಾದರೆ, ಚೀನಾ ತನ್ನ ಗಡಿಯಲ್ಲಿ ಪ್ರಾಬಲ್ಯವನ್ನು ಹೆಚ್ಚಿಸಿಕೊಂಡಿದೆ ಎಂದೇ ವಿಶ್ಲೇಷಿಸಲಾಗಿದೆ.

ಪೂರ್ವ ಲಡಾಖ್‌ನಲ್ಲಿ ಭಾರತ-ಚೀನಾ ಸೈನಿಕರ ಸಂಘರ್ಷ ನಡೆದ ನಂತರ ಗಡಿಯಲ್ಲಿ ಮೂಲಸೌಕರ್ಯವನ್ನು ಹೆಚ್ಚಿಸಲು ಚೀನಾ ಸರ್ಕಾರ ಕ್ರಮ ತೆಗೆದುಕೊಂಡಿದೆ. ಗಡಿ ಗ್ರಾಮಗಳ ಸಬಲೀಕರಣ ಎಂಬ ಹೊಸ ಯೋಜನೆಯನ್ನು ಚೀನಾ ಪ್ರಕಟಿಸಿದೆ. ಇದಕ್ಕಾಗಿ ಭಾರತ-ಚೀನಾ ಗಡಿಯಲ್ಲಿ 624 ಗ್ರಾಮಗಳನ್ನು ಚೀನಾ ಗುರುತಿಸಿದೆ. ಈ ಎಲ್ಲಾ ಗ್ರಾಮಗಳ ನಡುವೆ ಸಂಪರ್ಕಕ್ಕೆ ಲಾಹ್ಸಾ-ನಿನ್ಷಿ ಬುಲೆಟ್ ರೈಲು ಮಾರ್ಗವು ಕೊಂಡಿಯಾಗಿದೆ.

ಈ 624 ಗಡಿ ಗ್ರಾಮಗಳನ್ನು ಚೀನಾ ಗಡಿ ಠಾಣೆಗಳು ಎಂದು ವರ್ಗೀಕರಿಸಿದೆ. ಈ ಗ್ರಾಮಗಳಲ್ಲಿ ಒಂದೊಂದು ಭದ್ರತಾ ತುಕಡಿಯನ್ನು ನಿಯೋಜಿಸಿದೆ. ಜತೆಗೆ ತುರ್ತು ಸಂದರ್ಭದಲ್ಲಿ ಅತ್ಯಂತ ತ್ವರಿತವಾಗಿ ಈ ಗ್ರಾಮಗಳಿಗೆ ತಲುಪಲು ಸಾಧ್ಯವಾಗುವಂತೆ ರಸ್ತೆ-ರೈಲು ಮಾರ್ಗವನ್ನು ಅಭಿವೃದ್ಧಿಪಡಿಸುತ್ತಿದೆ. ಅದರಲ್ಲಿ ಲಾಹ್ಸಾ-ನಿನ್ಷಿ ಬುಲೆಟ್ ರೈಲು ಮಾರ್ಗವು ಪ್ರಧಾನವಾದದು.

ಲಾಹ್ಸಾ-ನಿನ್ಷಿ ಮಾರ್ಗದ ಬುಲೆಟ್ ರೈಲಿನಲ್ಲಿ ಪ್ರಯಾಣಿಕರ ಬೋಗಿಯ ಜತೆಗೆ, ಸರಕು ಸಾಗಣೆ ಬೋಗಿಯೂ ಇದೆ. ಲಾಹ್ಸಾದಿಂದ ನಿನ್ಷಿಗೆ ಸರಕುಸಾಗಣೆಯ ವೇಗವನ್ನು ಇದು ಮೂರುಪಟ್ಟು ಹೆಚ್ಚಿಸಿದೆ ಮತ್ತು ನಿನ್ಷಿ ಪಟ್ಟಣದ ಆರ್ಥಿಕ ಅಭಿವೃದ್ಧಿಗೆ ನೆರವಾಗಲಿದೆ ಎಂದು ನಿರೀಕ್ಷಿಸಲಾಗಿದೆ. ಟ್ರಕ್-ಸೇನಾ ಸಲಕರಣೆಗಳನ್ನು ಸಾಗಿಸಲು ಅನುಕೂಲವಾಗುವಂತೆ ಬೋಗಿಗಳನ್ನು ವಿನ್ಯಾಸ ಮಾಡಲಾಗಿದೆ.

ಲಾಹ್ಸಾದಿಂದ-ನಿನ್ಷಿ ನಡುವಣ ರಸ್ತೆ ಮಾರ್ಗದ ಪ್ರಯಾಣದ ಅವಧಿ 6.30 ಗಂಟೆ. ಬುಲೆಟ್ ರೈಲು ಈ ಪ್ರಯಾಣದ ಅವಧಿಯನ್ನು 2.20 ಗಂಟೆಗೆ ಇಳಿಸಿದೆ. ತುರ್ತು ಸಂದರ್ಭದಲ್ಲಿ ಚೀನಾದ ಸೈನಿಕರನ್ನು ಗಡಿ ಗ್ರಾಮಗಳಿಗೆ ಅತ್ಯಂತ ತ್ವರಿತವಾಗಿ ತಲುಪಿಸಲು ಈ ರೈಲು ಮಾರ್ಗವು ನೆರವಾಗಲಿದೆ. ಗಡಿ ಭದ್ರತೆ ದೃಷ್ಟಿಯಿಂದ ಈ ರೈಲು ಮಾರ್ಗವು ಅತ್ಯಂತ ಮಹತ್ವದ್ದು ಎನ್ನಲಾಗಿದೆ.

ಚೀನಾದ ಈ ಅಭಿವೃದ್ಧಿ ಕಾರ್ಯಗಳು ಭಾರತಕ್ಕೆ ದೊಡ್ಡ ಹಿನ್ನಡೆ ಎಂದೇ ವಿಶ್ಲೇಷಿಸಲಾಗದೆ. ಗಾಲ್ವನ್, ಲಡಾಖ್ ಸಂಘರ್ಷಗಳಂತಹ ಸಂದರ್ಭದಲ್ಲಿ ಚೀನಾವು ಸೇನೆಯನ್ನು ನಿಯೋಜಿಸಲು ಇಲ್ಲಿನ ರಸ್ತೆಗಳು ಮತ್ತು ಬುಲೆಟ್ ರೈಲು ಮಾರ್ಗವು ನೆರವಾಗಲಿವೆ. ಆದರೆ ಭಾರತವು ಅಷ್ಟೇ ತ್ವರಿತವಾಗಿ ಸೇನೆಯನ್ನು ನಿಯೋಜಿಸುವ ಮೂಲಸೌಕರ್ಯಗಳನ್ನು ಹೊಂದಿಲ್ಲ. ಇದು ಭಾರತಕ್ಕೆ ದೊಡ್ಡ ಹಿನ್ನಡೆ ಎಂದು ವಿಶ್ಲೇಷಿಸಲಾಗುತ್ತಿದೆ.

ಗಡಿ ರಾಜ್ಯಗಳ ನಾಜೂಕು ಸ್ಥಿತಿ

ಅಂತರರಾಷ್ಟ್ರೀಯ ಗಡಿಯು ಸೂಕ್ಷ್ಮವಾಗಿದ್ದಾಗ, ಗಡಿಗಳು ಹಾದು ಹೋಗಿರುವ ರಾಜ್ಯಗಳು ಹೆಚ್ಚು ಎಚ್ಚರದಲ್ಲಿ ಇರಬೇಕು. ಆದರೆ, ಚೀನಾದ ಜತೆಗೆ ಗಡಿ ಹಂಚಿಕೊಂಡಿರುವ ಈಶಾನ್ಯದ ರಾಜ್ಯಗಳ ನಡುವಣ ಗಡಿ ಸಮಸ್ಯೆ ಕಳವಳಕ್ಕೆ ಕಾರಣವಾಗಿದೆ.

ಅಸ್ಸಾಂ–ಮಿಜೋರಾಂ ರಾಜ್ಯಗಳ ನಡುವಣ ಗಡಿ ವಿವಾದವು ಹಿಂಸಾಚಾರ ಮತ್ತು ಆರು ಮಂದಿಯ ಸಾವಿಗೆ ಇತ್ತೀಚೆಗೆ ಕಾರಣ ಆಗಿತ್ತು. ಬೇರೊಂದು ದೇಶದ ಜತೆಗೆ ಗಡಿ ಹಂಚಿಕೊಂಡಿರುವ ರಾಜ್ಯಗಳು ಹೀಗೆ ಕಿತ್ತಾಟಕ್ಕೆ ಇಳಿದರೆ ಅದು ಆಂತರಿಕ ಭದ್ರತೆಗೆ ಬಹುದೊಡ್ಡ ಸವಾಲಾಗಬಹುದು ಎಂದು ವಿಶ್ಲೇಷಕರು ಹೇಳುತ್ತಾರೆ.

ಗಡಿಯನ್ನು ಸುರಕ್ಷಿತವಾಗಿ ಇರಿಸಿಕೊಳ್ಳುವ ವಿಚಾರದಲ್ಲಿ ಈಶಾನ್ಯ ರಾಜ್ಯಗಳು (ಅಸ್ಸಾಂ, ಮೇಘಾಲಯ, ಅರುಣಾಚಲ ಪ್ರದೇಶ, ತ್ರಿಪುರಾ, ನಾಗಾಲ್ಯಾಂಡ್, ಮಣಿಪುರ, ಮಿಜೋರಾಂ) ಬಹಳ ಮುಖ್ಯ. ಆದರೆ, ಈಶಾನ್ಯದ ಹಲವು ರಾಜ್ಯಗಳ ನಡುವೆ ಗಡಿ ವಿವಾದ ಇದೆ; ಆಂತರಿಕ ಕ್ಷೋಭೆಯು ವಿದೇಶಿ ಶಕ್ತಿಗಳಿಗೆ ಅನುಕೂಲಕರ ಪರಿಸ್ಥಿತಿ ನಿರ್ಮಿಸಿ-ಕೊಡುತ್ತದೆ.

ಈಶಾನ್ಯ ರಾಜ್ಯಗಳನ್ನು ಭಾರತದ ಜತೆ ಜೋಡಿಸುವ ಕೊಂಡಿಯಂತಹ ಒಂದು ಭಾಗ ಇದೆ. ಅದನ್ನು ಸಿಲಿಗುರಿ ಕಾರಿಡಾರ್ ಅಥವಾ ಕೋಳಿಯ ಕತ್ತು ಎನ್ನುತ್ತಾರೆ. ಈ ಭಾಗದ ಅಗಲವು 23 ಕಿ.ಮೀ. ಮಾತ್ರ. ಈ ಪ್ರದೇಶದ ಉತ್ತರಕ್ಕೆ ಚೀನಾ ಸ್ವಾಧೀನದಲ್ಲಿರುವ ಟಿಬೆಟ್ ಸ್ವಾಯತ್ತ ಪ್ರದೇಶವಿದೆ.

ಭಾರತ ಮತ್ತು ಚೀನಾದ ಸೇನೆಗಳ ನಡುವೆ ಸುದೀರ್ಘ ಮುಖಾಮುಖಿ ಉಂಟಾಗಿದ್ದ ದೋಕಲಾ ಪ್ರದೇಶವು ಸಿಲಿಗುರಿ ಕಾರಿಡಾರ್‌ಗೆ ಸಮೀಪದಲ್ಲಿಯೇ ಇದೆ.

ಹಾಗಾಗಿ, ಈಶಾನ್ಯ ರಾಜ್ಯಗಳ ಗಡಿ ವಿವಾದಗಳು ಬಿಕ್ಕಟ್ಟುಗಳಾದರೆ ಆಂತರಿಕ ಭದ್ರತೆಗೆ ತೊಡಕು ಎಂದು ತಜ್ಞರು ಹೇಳುತ್ತಾರೆ.

ಅಸ್ಸಾಂ – ಮಿಜೋರಾಂ ಸಂಘರ್ಷ ಶಾಂತಿಯುತ ಪರಿಹಾರಕ್ಕೆ ಕೇಂದ್ರ ಯತ್ನ

ಗಡಿ ವಿವಾದ; ಸಿಬಿಐ ತನಿಖೆ ಉದ್ದೇಶ ಇಲ್ಲ

ನವದೆಹಲಿ (ಪಿಟಿಐ): ಅಸ್ಸಾಂ-ಮಿಜೋರಾಂ ಗಡಿ ಸಂಘರ್ಷದ ತನಿಖೆಯನ್ನು ಸಿಬಿಐನಂತಹ ಸಂಸ್ಥೆಗಳಿಂದ ನಡೆಸುವ ಯಾವುದೇ ಉದ್ದೇಶವನ್ನು ಕೇಂದ್ರ ಸರ್ಕಾರ ಹೊಂದಿಲ್ಲ. ಗಡಿ ವಿವಾದವನ್ನು ಶಾಂತಿಯುತ ಮಾರ್ಗದಲ್ಲಿ ಪರಿಹರಿಸುವ ಉದ್ದೇಶ ಹೊಂದಿದೆ ಎಂದು ಮೂಲಗಳು ತಿಳಿಸಿವೆ.

ಸದ್ಯದ ಪರಿಸ್ಥಿತಿಯನ್ನು ಮತ್ತಷ್ಟು ಉಲ್ಬಣಗೊಳಿಸುವ ಯಾವುದೇ ನಿರ್ಧಾರ ತೆಗೆದುಕೊಳ್ಳಲು ಬಯಸುವುದಿಲ್ಲ ಎಂದು ಕೇಂದ್ರ ಸರ್ಕಾರದ ಇಬ್ಬರು ಹಿರಿಯ ಅಧಿಕಾರಿಗಳು ಹೇಳಿದ್ದಾರೆ. ಅಲ್ಲದೆ, ತನಿಖೆಗೆ ಯಾವುದೇ ರಾಜ್ಯ ಸರ್ಕಾರದಿಂದ ಮನವಿ ಬಂದಿಲ್ಲ ಎಂದು ತಿಳಿಸಿದ್ದಾರೆ.

ಗಡಿ ವಿವಾದವನ್ನು ಶಾಂತಿಯುತವಾಗಿ ಪರಿಹರಿಸುವ ಸಂಬಂಧ ಇಬ್ಬರು ಮುಖ್ಯಮಂತ್ರಿಗಳಾದ ಹಿಮಂತ ಬಿಸ್ವಾ ಶರ್ಮಾ ಮತ್ತು ಝೋರಾಮ್‌ಥಂಗಾ ಜೊತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ನಿರಂತರ ಸಂಪರ್ಕದಲ್ಲಿದ್ದಾರೆ ಎಂದು ಅವರು ಹೇಳಿದ್ದಾರೆ.

ಜುಲೈ 26ರಂದು ನಡೆದ ಹಿಂಸಾಚಾರದ ನಂತರ, ಅಸ್ಸಾಂ ಮತ್ತು ಮಿಜೋರಾಂ ಪೋಲಿಸರು ಪರಸ್ಪರರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಗಡಿ ಗುರುತಿಗೆ ನಿರ್ಧಾರ: ಘರ್ಷಣೆ ಮತ್ತು ಹಿಂಸಾಚಾರಕ್ಕೆ ಪದೇ ಪದೇ ಕಾರಣವಾಗುತ್ತಿರುವ ಗಡಿ ಸಂಘರ್ಷಕ್ಕೆ ಶಾಶ್ವತ ಪರಿಹಾರ ಒದಗಿಸಲು ಮುಂದಾಗಿರುವ ಕೇಂದ್ರ ಸರ್ಕಾರ, ಈಶಾನ್ಯ ರಾಜ್ಯಗಳ ಗಡಿಗಳನ್ನು ಉಪಗ್ರಹ ಚಿತ್ರಗಳ ಮೂಲಕ ಗುರುತಿಸಲಿದೆ.

ಉಪಗ್ರಹ ಚಿತ್ರಣದ ಮೂಲಕ ಅಂತರ್ ರಾಜ್ಯ ಗಡಿಗಳನ್ನು ಗುರುತಿಸುವ ಕಲ್ಪನೆಯನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಕೆಲವು ತಿಂಗಳ ಹಿಂದೆ ಪ್ರಸ್ತಾಪಿಸಿದ್ದರು. ಈಶಾನ್ಯ ಭಾಗದ ಅಂತರರಾಜ್ಯ ಗಡಿರೇಖೆಯನ್ನು ಮತ್ತು ಕಾಡುಗಳನ್ನು ವೈಜ್ಞಾನಿಕ ವಿಧಾನದಲ್ಲಿ ರೂಪಿಸಲು ಶಾ ಸೂಚಿಸಿದ್ದರು.

ಗಡಿ ಗುರುತು ಕಾರ್ಯವನ್ನು ಈಶಾನ್ಯ ಬಾಹ್ಯಾಕಾಶ ಅನ್ವಯ ಕೇಂದ್ರಕ್ಕೆ (ಎನ್‌ಇಎಸ್‌ಎಸಿ) ನೀಡಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಬಾಹ್ಯಾಕಾಶ ತಂತ್ರಜ್ಞಾನದ ನೆರವು ಒದಗಿಸುವ ಮೂಲಕ ಈಶಾನ್ಯ ಪ್ರದೇಶದ ಅಭಿವೃದ್ಧಿ ಪ್ರಕ್ರಿಯೆಯನ್ನು ಹೆಚ್ಚಿಸಲು ಎನ್‌ಇಎಸ್‌ಎಸಿ ಸಹಾಯ ಮಾಡುತ್ತಿದೆ.

ಮಾತುಕತೆಗೆ ಒಪ್ಪಿಗೆ

ಗೃಹ ಸಚಿವ ಅಮಿತ್ ಶಾ ಮತ್ತು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಜತೆಗಿನ ದೂರವಾಣಿ ಚರ್ಚೆಯಂತೆ ಅಸ್ಸಾಂ ಜತೆಗಿನ ಗಡಿ ಸಮಸ್ಯೆಯನ್ನು ಮಾತುಕತೆಯ ಮೂಲಕ ಪರಿಹರಿಸಲು ತಮ್ಮ ಸರ್ಕಾರ ಒಪ್ಪಿಕೊಂಡಿದೆ ಎಂದು ಮಿಜೋರಾಂ ಮುಖ್ಯಮಂತ್ರಿ ಝೋರಾಮ್‌ಥಂಗಾ ಅವರು ಭಾನುವಾರ ತಿಳಿಸಿದ್ದಾರೆ.

'ಗಡಿ ಸಂಘರ್ಷಕ್ಕೆ ಕೇಂದ್ರ ಸರ್ಕಾರದಿಂದ ಸೌಹಾರ್ದಯುತ ಪರಿಹಾರ ಸಿಗಲಿದೆ ಎಂದು ನಾನು ಆಶಿಸುತ್ತೇನೆ' ಎಂದು ಝೋರಾಮ್‌ಥಂಗಾ ಟ್ವೀಟ್ ಮಾಡಿದ್ದಾರೆ. ಪ್ರಧಾನಿ ನರೇಂದ್ರ ಮೋದಿ, ಅಮಿತ್ ಶಾ ಮತ್ತು ಮೇಘಾಲಯ, ನಾಗಾಲ್ಯಾಂಡ್, ಅರುಣಾಚಲ ಪ್ರದೇಶ, ಮಣಿಪುರ, ತ್ರಿಪುರ ಮತ್ತು ಸಿಕ್ಕಿಂ ಮುಖ್ಯಮಂತ್ರಿಗಳನ್ನು ತಮ್ಮ ಟ್ವೀಟ್‌ಗೆ ಟ್ಯಾಗ್ ಮಾಡಿದ್ದಾರೆ.

ಇದಕ್ಕೆ ಟ್ವೀಟ್ ಮೂಲಕ ಪ್ರತಿಕ್ರಿಯಿಸಿರುವ ಅಸ್ಸಾಂ ಮುಖ್ಯಮಂತ್ರಿ ಶರ್ಮಾ, 'ಕೇಂದ್ರವು ಸಮಸ್ಯೆಯನ್ನು ಪರಿಹರಿಸಲು ಮುಂದಾದರೆ ಮಾತುಕತೆಗೆ ಅಸ್ಸಾಂ ಸಿದ್ಧವಿದೆ. ಅಸ್ಸಾಂ ಯಾವಾಗಲೂ ಮಾತುಕತೆಯ ಪರವಾಗಿದೆ. ನಾವು ಯಾರ ಭೂಮಿಯನ್ನೂ ಆಕ್ರಮಿಸಿಕೊಳ್ಳಲು ಹೋಗಿಲ್ಲ. ನಾವು ಯಾವಾಗಲೂ ಶಾಂತಿಯನ್ನು ಬಯಸುತ್ತೇವೆ. ನಮ್ಮ ಉದ್ದೇಶವನ್ನು ಕೇಂದ್ರದ ಮುಂದಿಡುತ್ತೇವೆ. ಎರಡೂ ರಾಜ್ಯಗಳು ಭವಿಷ್ಯದ ದೃಷ್ಟಿಯಿಂದ ಹೇಗೆ ನಿರ್ಧಾರ ತೆಗೆದುಕೊಳ್ಳಬೇಕು ಎಂಬುದು ಇಲ್ಲಿ ಮುಖ್ಯ. ಹಿಂಸಾಚಾರ ಮರುಕಳಿಸುವುದು ಸರಿಯಲ್ಲ' ಎಂದು ಅಭಿಪ್ರಾಯಪಟ್ಟಿದ್ದಾರೆ.

'ಘಟನೆ ನಡೆದ ಜುಲೈ 26ರಂದು ಝೋರಾಮ್‌ಥಂಗಾ ಅವರಿಗೆ ಕನಿಷ್ಠ 12 ಬಾರಿ ಕರೆ ಮಾಡಿದ್ದೇನೆ. ಕ್ವಾರಂಟೈನ್ ಅವಧಿ ಮುಗಿದ ಬಳಿಕ ಅವರು ಕರೆ ಮಾಡುವುದಾಗಿ ಭರವಸೆ ನೀಡಿದ್ದಾರೆ' ಎಂದು ಶರ್ಮಾ ಹೇಳಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

'ಹೈದರಾಬಾದ್ ಮೂಲದ ಬಯೊಲಾಜಿಕಲ್ ಇ ಕಂಪನಿಯು ಮಕ್ಕಳಿಗೆ ನೀಡಲು ಅಭಿವೃದ್ಧಿಪಡಿಸುತ್ತಿರುವ ಕೋವಿಡ್ ಲಸಿಕೆಯ ಪರೀಕ್ಷಾರ್ಥ ಬಳಕೆಗೆ ಅನುಮತಿ ನೀಡಲು ಕೇಂದ್ರ ಸರ್ಕಾರ ನಿರಾಕರಿಸಿದೆ. ಈ ಲಸಿಕೆಯು ಮಕ್ಕಳಿಗೆ ಅಪಾಯಕಾರಿಯಾಗಿದೆ. ಮಕ್ಕಳ ಮೇಲೆ ಅಡ್ಡಪರಿಣಾಮ ಬೀರುವ ಕಾರಣದಿಂದಾಗಿ ಅನುಮತಿ ನೀಡಲು ಕೇಂದ್ರ ಸರ್ಕಾರ ನಿರಾಕರಿಸಿದೆ' ಎಂಬ ವಿವರ ಇರುವ ಸುದ್ದಿ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಮುಖ್ಯವಾಹಿನಿಯ ಕೆಲವು ಸುದ್ದಿ ವಾಹಿನಿಗಳೂ ಇಂತಹದ್ದೇ ಅರ್ಥ ಬರುವ ತಲೆಬರಹದಲ್ಲಿ ಸುದ್ದಿ ಪ್ರಕಟಿಸಿವೆ.

ಇದು ಸುಳ್ಳು ಸುದ್ದಿ ಎಂದು ಪಿಐಬಿ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. 'ಬಯೊಲಾಜಿಕಲ್ ಇ ಕಂಪನಿಯ ಕೋವಿಡ್ ಲಸಿಕೆಯ 3ನೇ ಹಂತದ ಕ್ಲಿನಿಕಲ್ ಟ್ರಯಲ್ ನಡೆಯುತ್ತಿದೆ. ಲಸಿಕೆಯ ಸುರಕ್ಷತೆ ಮತ್ತು ಪರಿಣಾಮದ ಬಗ್ಗೆ ಮತ್ತಷ್ಟು ದತ್ತಾಂಶ ನೀಡುವಂತೆ ಕೇಂದ್ರೀಯ ಔಷಧ ನಿಯಂತ್ರಕರು ಕಂಪನಿಗೆ ಸೂಚನೆ ನೀಡಿದ್ದಾರೆ. ಈ ದತ್ತಾಂಶಗಳನ್ನು ನೀಡಿದ ನಂತರ, ಲಸಿಕೆಯನ್ನು ಮಕ್ಕಳ ಮೇಲೆ ಪರೀಕ್ಷಾರ್ಥವಾಗಿ ಬಳಸಲು ಅನುಮತಿ ನೀಡುವ ಬಗ್ಗೆ ಪರಿಶೀಲನೆ ನಡೆಸಲಾಗುತ್ತದೆ ಎಂದು ಸರ್ಕಾರ ಹೇಳಿದೆ. ಈ ಸುದ್ದಿಗಳಲ್ಲಿ ಪ್ರಕಟವಾಗಿರುವಂತೆ ಈ ಲಸಿಕೆಯಿಂದ ಮಕ್ಕಳಿಗೆ ಅಪಾಯವಾಗುತ್ತದೆ ಎಂಬುದು ಸುಳ್ಳು ಸುದ್ದಿ' ಎಂದು ಪಿಐಬಿ ತನ್ನ ಫ್ಯಾಕ್ಟ್‌ಚೆಕ್‌ನಲ್ಲಿ ವಿವರಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ದಾಸತ್ವದ ಮುಕ್ತಿಯ ಬೆಲೆ

ಮುದುಕನ ಒರಟು ಮಾತುಗಳನ್ನು ಕೇಳಿ ವೆಸ್ಸಂತರ ಬೋಧಿಸತ್ವ, 'ಬ್ರಾಹ್ಮಣ, ನೀನು ನನ್ನ ಪ್ರಾಮಾಣಿಕತೆಯನ್ನು ಸಂದೇಹಿಸಬೇಡ. ನಾನೇ ಅವರನ್ನು ಹುಡುಕಿ ತಂದು ಒಪ್ಪಿಸುತ್ತೇನೆ. ನೀನು ನಿರಾಳವಾಗಿ ಕುಳಿತಿರು' ಎಂದು ಹೇಳಿ ಪರ್ಣಕುಟಿಯ ಹಿಂಭಾಗಕ್ಕೆ ಹೋಗಿ ಹುಡುಕಿದ. ಅಲ್ಲಿ ಕಾಣದಿದ್ದಾಗ ಅವರು ದಟ್ಟವಾದ ಕಾಡಿನಲ್ಲಿ ಹೋಗಿರಬಹುದೆಂದು ಭಾವಿಸಿದ. ಹಾಗೆ ಹುಡುಕುತ್ತ ಪುಷ್ಕರಿಣಿಯ ಬಳಿ ಬರುತ್ತಿರುವಾಗ ಹಸೀಮಣ್ಣಿನಲ್ಲಿ ಮಕ್ಕಳ ಪಾದಗಳು ಕೊಳದೆಡೆಗೆ ಹೋಗಿದ್ದನ್ನು ಗಮನಿಸಿ, ಅವರು ಹೆದರಿ ನೀರಿನಲ್ಲಿ ಅಡಗಿ ಕುಳಿತಿರಬಹುದೆಂದು ಊಹಿಸಿದ. 'ಮಕ್ಕಳೇ ಜಾಲೀ, ಕೃಷ್ಣಾಜಿನ' ಎಂದು ಕೂಗುತ್ತ ನೀರಿನೆಡೆಗೆ ಬಂದ. 'ಅಯ್ಯಾ ಮಗನೇ ಜಾಲಿ, ದಯವಿಟ್ಟು ಹೊರಗೆ ಬಾ. ನನ್ನ ಮಾತನ್ನು ನೀನು ನಡೆಸಬೇಕು. ನನ್ನ ಪಾರಮಿತವನ್ನು ಪೂರ್ಣಗೊಳಿಸು. ಅದರಿಂದ ನನ್ನ ಹೃದಯಕ್ಕೆ ತಂಪು ನೀಡು. ಭವಸಾಗರವನ್ನು ದಾಟಲು ನನ್ನ ನೌಕೆಗೆ ಸ್ಥಿರವಾದ ವಾಹನವಾಗು. ನಾನು ಜನನ ಮರಣ ಬಂಧನವನ್ನು ದಾಟಿ ಸದಾ ಲೋಕಕಲ್ಯಾಣ ಮಾಡುತ್ತೇನೆ', ಎಂದು ಕೇಳಿಕೊಂಡ.

ತಂದೆಯ ಮಾತುಗಳನ್ನು ಕೇಳಿದ ಜಾಲಿಕುಮಾರ, 'ನಾನು ಈ ಬ್ರಾಹ್ಮಣನ ದಾಸನಾದರೂ ಚಿಂತೆಯಿಲ್ಲ, ತಂದೆಯ ಮಾತುಗಳನ್ನು ಮೀರಲಾರೆ' ಎಂದು ಯೋಚಿಸಿ ತಲೆಯ ಮೇಲಿನ ಎಲೆಗಳನ್ನು ಸರಿಸಿಬಿಟ್ಟು, ನೀರಿನಿಂದ ಹೊರಗೆ ಬಂದ. ದಂಡೆಯ ಮೇಲೆ ನಿಂತಿದ್ದ ತಂದೆಯ ಪಾದಗಳ ಮೇಲೆ ಬಿದ್ದು, ಅವನ ಬಲಪಾದದ ಗೆಣ್ಣನ್ನು ಬಿಗಿಯಾಗಿ ಹಿಡಿದುಕೊಂಡು ಅಳತೊಡಗಿದ. ಬೋಧಿಸತ್ವ ಅವನನ್ನು ಎಬ್ಬಿಸಿ, ಆಲಂಗಿಸಿಕೊಂಡು, 'ಅಪ್ಪಾ, ನಿನ್ನ ತಂಗಿ ಎಲ್ಲಿ ಮಗೂ?' ಎಂದು ಕೇಳಿದ. 'ಅಪ್ಪಾ, ಆಕೆ ಭಯಗೊಂಡಿದ್ದಾಳೆ. ಭಯಗೊಂಡಾಗ ಪ್ರಾಣಿಗಳೂ ತಮ್ಮ ಆತ್ಮರಕ್ಷಣೆಗೆ ಪ್ರಯತ್ನಿಸುತ್ತವೆ' ಎಂದ. ಹಾಗಾದರೆ ಮಕ್ಕಳಿಬ್ಬರೂ ಪ್ರತಿಜ್ಞೆ ಮಾಡಿಕೊಂಡು ಅಡಗಿರಬೇಕು ಎಂದು ಈ ಬಾರಿ ಮಗಳನ್ನು ಕೂಗಿದ, 'ಅಮ್ಮಾ, ಕೃಷ್ಣಾಜಿನಾ, ದಯವಿಟ್ಟು ಹೊರಗೆ ಬಂದು ನನ್ನ ಪಾರಮಿತವನ್ನು ಪೂರ್ಣಗೊಳಿಸಲು ಅನುಕೂಲ ಮಾಡು. ನಾನು ಜನನ ಮರಣಗಳ ಬಂಧನದಿಂದ ಪಾರಾಗಬಯಸುತ್ತೇನೆ. ಲೋಕೋದ್ಧಾರ ನನ್ನ ಉದ್ದೇಶ'. ಅಣ್ಣನಂತೆ ತಂಗಿ ಕೃಷ್ಣಾಜಿನಳೂ ಕೊಳದಿಂದ ಮೇಲೆದ್ದು ಬಂದು ತಂದೆಯ ಎಡಪಾದವನ್ನು ಹಿಡಿದುಕೊಂಡು ಅಳತೊಡಗಿದಳು.

ಇಬ್ಬರೂ ಮಕ್ಕಳನ್ನು ತಬ್ಬಿಕೊಂಡು ಬೋಧಿಸತ್ವ ಗಟ್ಟಿಯಾಗಿ, ಬ್ರಾಹ್ಮಣನಿಗೆ ಕೇಳುವಂತೆ ಇಬ್ಬರ ಬೆಲೆಯನ್ನು ನಿಗದಿಮಾಡಿದ 'ಮಗೂ, ಜಾಲಿಕುಮಾರ, ನೀನು ಮುಂದೆ ಈ ಬ್ರಾಹ್ಮಣನ ದಾಸತ್ವದಿಂದ ಬಿಡುಗಡೆಯಾಗಬಯಸಿದರೆ, ಅವನಿಗೆ ಸಾವಿರ ನಿಕಷಗಳನ್ನು ಕೊಟ್ಟು ಮುಕ್ತನಾಗು. ನಿನ್ನ ತಂಗಿ ಕೃಷ್ಣಾಜಿನೆ ಪರಮ ಸುಂದರಿ. ಯಾವನಾದರೂ ನೀಚ ವ್ಯಕ್ತಿ, ಆಕೆಯ ರೂಪಕ್ಕೆ ಮರುಳಾಗಿ, ಈ ಬ್ರಾಹ್ಮಣನಿಗೆ ಎಷ್ಟಾದರೂ ಹಣಕೊಟ್ಟು ದಾಸತ್ವದಿಂದ ಮುಕ್ತಗೊಳಿಸಿ, ಆಕೆಯನ್ನು ಕಳಂಕಿತೆಯನ್ನಾಗಿ ಮಾಡಬಲ್ಲ. ನಿನ್ನ ತಂಗಿಯನ್ನು ದಾಸತ್ವದಿಂದ ಮುಕ್ತಗೊಳಿಸಬೇಕಾದರೆ 'ಎಲ್ಲ ನೂರು ವಸ್ತುಗಳನ್ನು' ಕೊಡಬೇಕು. ಅವು, ನೂರು ದಾಸರು, ನೂರು ದಾಸಿಯರು, ನೂರು ಆನೆಗಳು, ನೂರು ಕುದುರೆಗಳು ಹಾಗೂ ನೂರು ನಿಕಷಗಳು. ಇವುಗಳನ್ನು ದೊಡ್ಡ ರಾಜ ಮಾತ್ರ ನೀಡಿ, ದಾಸತ್ವದಿಂದ ಮುಕ್ತ ಮಾಡಿ, ಆಕೆಯ ಕೈ ಹಿಡಿಯಬಲ್ಲ' ಎಂದು ಘೋಷಿಸಿದ. ❖

ದಿನ ಭವಿಷ್ಯ

ಸೋಮವಾರ ಆಗಸ್ಟ್ 2, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಗ್ರೀಷ್ಮ ಋತು ಆಷಾಢ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಪುಷ್ಯ ನವಮೀ ಗಂ. 8-56 (ಬೆ. 9-47) ಸೋಮವಾರ ನಿತ್ಯ ನಕ್ಷತ್ರ ಕೃತ್ತಿಕ ಗಂ. 41-50 (ರಾ. 10-57) ವೃದ್ಧಿ ನಾಮ ಯೋಗ ಗಂ. 45-15 ಗರಜ ಕರಣ ಗಂ. 8-56 ವಿಷ ಗಂ. 8-42 ಅಮೃತ ಗಂ. 35-20 : ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00 : ಸೂರ್ಯೋದಯ: 6-09 ಸೂರ್ಯಾಸ್ತ: 6-43 ಅದೃಷ್ಟ ಸಂಖ್ಯೆ 5 9

ಮೇಷ: ವೈಯಕ್ತಿಕ ತೊಂದರೆಯಿಂದ ಮುಕ್ತರಾಗುವಿರಿ. ಆರ್ಥಿಕ ಸಮಸ್ಯೆಗಳು ಪರಿಹಾರ ಕಾಣುವವು. ಚಿನ್ನಾಭರಣ - ಸ್ಥಿರಾಸ್ತಿ ಖರೀದಿ ಸಾಧ್ಯತೆ. ಉದ್ಯೋಗದಲ್ಲಿ ಪ್ರಗತಿ. ಪತ್ನಿಯ ಆರೋಗ್ಯದಲ್ಲಿ ವ್ಯತ್ಯಯ ಸಾಧ್ಯತೆ.

ವೃಷಭ: ಪ್ರಾಪ್ತವಯಸ್ಕರಿಗೆ ಸೂಕ್ತ ಸಂಬಂಧ ಒರೆತು ವಿವಾಹ ನಿಶ್ಚಯ ಸಾಧ್ಯತೆ. ಕುಟುಂಬದ ಹಿರಿಯರ ಮನೋಭಿಲಾಷೆಗಳು ಈಡೇರುವವು. ಸಂಗಾತಿಯಿಂದ ಸಹಕಾರ. ಆರ್ಥಿಕವಾಗಿ ಅಭಿವೃದ್ಧಿಯಿಂದಾಗಿ ಸಂತೃಪ್ತಿ.

ಮಿಥುನ: ಪರಸ್ಪರ ಭಿನ್ನಾಭಿಪ್ರಾಯಗಳು ಪರಿಹಾರವಾಗಿ ಸುಖದಾಂಪತ್ಯ ಜೀವನಕ್ಕೆ ನಾಂದಿ. ಶುಭ ಸಮಾರಂಭಗಳಲ್ಲಿ ಭಾಗಿ. ಕೆಲಸ ಕಾರ್ಯಗಳಲ್ಲಿ ಆತುರತೆ ಬೇಡ. ವ್ಯವಹಾರದಲ್ಲಿ ಆರ್ಥಿಕ ನಷ್ಟ ಸಾಧ್ಯತೆ.

ಕರ್ಕಾಟಕ: ವಿದ್ಯಾರ್ಥಿಗಳಿಗೆ ಓದಿನಲ್ಲಿ ವಿಶೇಷ ಪ್ರಗತಿಯನ್ನು ಕಾಣಬಹುದು. ಮಾತಿನಿಂದ ಗೌರವ ಪ್ರಾಪ್ತವಾಗುವುದು. ಸರ್ಕಾರದಿಂದಾಗುವ ಕೆಲಸ ಕಾರ್ಯಗಳು ಸುಗಮವಾಗುವವು.

ಸಿಂಹ: ಅನಾವಶ್ಯಕ ಪ್ರಯಾಣದಿಂದಾಗಿ ಧನ ನಷ್ಟವಾಗುವುದು. ಮನರಂಜನಾ ಕಾರ್ಯಕ್ರಮದಲ್ಲಿ ಭಾಗಿ. ಪ್ರಿಯ ವ್ಯಕ್ತಿಗಳ ಆಗಮನ. ಮಕ್ಕಳ ಶ್ರೇಯೋಭಿವೃದ್ಧಿಯಿಂದಾಗಿ ಮಾನಸಿಕ ತೃಪ್ತಿ. ಸಂತೋಷದ ವಾತಾವರಣ.

ಕನ್ಯಾ: ಮಾತುಗಳಿಂದಾಗಿ ನಿಷ್ಠೂರಕ್ಕೊಳಗಾಗುವ ಸಾಧ್ಯತೆ. ಉದ್ಯೋಗಾಕಾಂಕ್ಷಿಗಳಿಗೆ ಉತ್ತಮ ಅವಕಾಶಗಳು ದೊರಕಲಿದೆ. ಉದ್ಯೋಗದಲ್ಲಿರುವವರಿಗೆ ಪದೋನ್ನತಿ ಅಥವಾ ಬದಲಾವಣೆ.

ತುಲಾ: ಹೊಸ ಸಂಬಂಧಿಗಳಿಂದ ಹೊಸ ಯೋಜನೆಗಳಿಗೆ ಉತ್ಸಾಹ ಮೂಡುವುದು. ಶುಭಕಾರ್ಯಗಳ ಸಂಕಲ್ಪ ಈಡೇರಿ ಸಂತಸ ಮೂಡುವುದು. ಅವಸರದ ನಿರ್ಧಾರಗಳು ಸೂಕ್ತವಲ್ಲ. ಮಹಿಳೆಯರಿಗೆ ಗೌರವ ಪ್ರಾಪ್ತಿ.

ವೃಶ್ಚಿಕ: ವೈಯಕ್ತಿಕ ಜೀವನದಲ್ಲಿ ಅಭಿವೃದ್ಧಿ ಕಂಡುಬರುವುದು. ಸಾಮಾಜಿಕ ಚಿಂತನೆಗಳಿಂದ ಗೌರವಾದರಗಳನ್ನು ಹೊಂದುವಿರಿ. ಕೃಷಿ ಕ್ಷೇತ್ರದಲ್ಲಿ ಧನ ಧಾನ್ಯಾಭಿವೃದ್ಧಿ ಕಂಡುಬರುವುದು. ಸಂಗಾತಿಯಿಂದ ಸಂತಸದ ಸುದ್ದಿ.

ಧನು: ಇಂದಿನ ಮಟ್ಟಿಗೆ ದೂರದ ಪ್ರಯಾಣಗಳನ್ನು ಮುಂದೂಡುವುದು ಸೂಕ್ತ. ಸಂಗಾತಿಯ ಸಹಕಾರದಿಂದಾಗಿ ಸಾಂಸಾರಿಕ ನೆಮ್ಮದಿ ದೊರಕುವುದು. ವಿವಾಹ ಸಂಬಂಧಗಳು ಕೂಡಿಬರಲಿವೆ. ಆಪ್ತರ ಆಗಮನ.

ಮಕರ: ಅನಾವಶ್ಯಕ ವ್ಯವಹಾರಗಳಲ್ಲಿ ತಲೆ ಹಾಕದಿರುವುದೇ ಉತ್ತಮ. ಸರ್ಕಾರಿ ನೌಕರಿಯಲ್ಲಿರುವವರಿಗೆ ಬಡ್ತಿ. ಹೊಸ ಯೋಜನೆಯನ್ನು ನಿರೂಪಿಸುವಲ್ಲಿ ಯಶಸ್ಸು.

ಕುಂಭ: ಸಾಮಾಜಿಕ ಕಾರ್ಯಕರ್ತರಿಗೆ ಇರಿಸುಮುರಿಸು ಎದುರಿಸಬೇಕಾದೀತು. ಮನೆಯಲ್ಲಿ ವಸ್ತ್ರಾಭರಣ ಖರೀದಿ ಸಾಧ್ಯತೆ. ಶತ್ರುಬಾಧೆ ಉಲ್ಬಣ ಸಾಧ್ಯತೆ. ಆರೋಗ್ಯದ ಬಗ್ಗೆ ಎಚ್ಚರ.

ಮೀನ: ಆರ್ಥಿಕ ವಿಷಯಗಳಲ್ಲಿ ತುಂಬಾ ಎಚ್ಚರಿಕೆ ಅಗತ್ಯ. ಸರ್ಕಾರಿ ನೌಕರರಿಗೆ ಕಾರ್ಯಗಳಲ್ಲಿ ಪ್ರಗತಿ ಉಂಟಾಗುವುದು. ಕುಟುಂಬದಲ್ಲಿ ಸೌಹಾರ್ದತೆ ಮೂಡಿ ಸಂತಸ ಮೂಡುವುದು.

ನಿಮ್ಮ ಜನ್ಮದಿನ 2-ಆಗಸ್ಟ್ ಇಂದು ಅತ್ಯಂತ ಶುಭದಾಯಕವಾಗಿದ್ದು, ಈ ವರ್ಷವು ನಿಮ್ಮ ಪಾಲಿಗೆ ಉತ್ತಮವಾಗಿದೆ. ಸದೃಢರೂ ಆಗಿದ್ದು, ಆರೋಗ್ಯ ಭಾಗ್ಯ ನಿಮ್ಮದಾಗಲಿದೆ. ಹಣಕಾಸಿನ ವ್ಯವಹಾರವು ಅನುಕೂಲಕರವಾಗಿರುವುದು. ದಾಂಪತ್ಯ ಜೀವನವು ಸುಖಕರವಾಗಿದ್ದು ಅನ್ಯೋನ್ಯತೆಯಿಂದ ಕೂಡಿರುವುದು.

ಪದಬಂಧ 4676

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಸಭೆಯ ಮುಖ್ಯಸ್ಥ (4)
3.ಒಳಮುಖವಾಗಿರುವ ಸ್ಥಿತಿ (4)
4.ಇದು ಮಿತಿಗೆ ಒಳಗಾದುದು (3)
5.ಬೇಡ ಇಲ್ಲಿದ್ದಾನೆ (4)
7.ರಜದಲ್ಲಿ ಖರೀದಿಸಿದ ಬೆಳ್ಳಿ (3)
9.ಕೃಷ್ಣನ ಸ್ನೇಹಿತ (3)
11.ಹೆಣ್ಣು ದುಂಬಿಯಿದು (4)
13.ಸಪ್ತಕುಲಗಳಲ್ಲಿ ಒಂದು (3)
14.ನಿಜವಲ್ಲದ ಸುದ್ದಿ (4)
15.ಈತ ಜೊತೆಗಾರ (4)

ಮೇಲಿಂದ ಕೆಳಕ್ಕೆ
1.ಮಂತ್ರಿ ಇಲ್ಲಿದ್ದಾನೆ (3)
2. ಪಾವತಿ ಪತ್ರವಿಲ್ಲಿ ತಿರುವುಮುರುವಾಗಿದೆ (3)
3.ವ್ಯತ್ಯಾಸ ಈ ತರ ಬಂದಿದೆಯಲ್ಲಾ? (3)
6.ಈ ರೀತಿ ಕೋಮಲವಾಗಿರು (5)
8.ಈತ ಬುದ್ಧಿ ಸ್ಥೈರ್ಯವಿಲ್ಲದವನು (5)
10.ಮಾತೆ ತೋರಿದ ಪ್ರೀತಿ (3)
11.ಇಂದ್ರಿಯ ನಿಗ್ರಹವು ಉಲ್ಟಾ ಕಾಣುತ್ತಿದೆ (3)
12.ದೊಡ್ಡ ಹಾರೆಯಿಲ್ಲಿ ಉಲ್ಟಾಪಲ್ಟಾ ಆಗಿಬಿಟ್ಟಿದೆ (3)



4675ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಬಡಗಿ 3.ಕಳಭ 5.ಲಾಭಬಡುಕ 6.ರಸ 8.ಆಸೆ 9.ವಾರ 10.ಟಆ 14.ನಯವಂಚಕ 15.ನಡುಕ 16.ರಿವಾಜು

ಮೇಲಿಂದ ಕೆಳಕ್ಕೆ: 1.ಬಲಾತ್ಕಾರ 2.ಗಿಲಾವು 3.ಕಕವ 4.ಭರವಸೆ 7.ಸಪೂರ 8.ಆರ್ಭಟ 9.ವಾತಾಯನ 11.ಆಜುಬಾಜು 12.ಶುನಕ 13.ಬಿಕರಿ

ಸುಡೊಕು 5062

7	5			1			8	
		6			9			7
4			7				9	6
	7			2	1			8
	6	4	9		8		7	
8		1				9		4
	8			9			4	
1		2				7		3
	4		1		7		2	

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5061 ಸುಡೊಕು

5	2	1	4	7	3	9	6	8
7	9	8	6	1	2	3	4	5
4	6	3	5	9	8	7	2	1
1	4	9	2	3	5	6	8	7
2	3	7	1	8	6	4	5	9
8	5	6	7	4	9	2	1	3
6	7	5	9	2	1	8	3	4
3	1	4	8	6	7	5	9	2
9	8	2	3	5	4	1	7	6

ಅಂಜನಾದ್ರಿ: ಆ.17ರವರೆಗೆ ಪ್ರವೇಶ ನಿಷೇಧ

ಗಂಗಾವತಿ (ಕೊಪ್ಪಳ ಜಿಲ್ಲೆ): ಕೊರೊನಾ 3ನೇ ಅಲೆ ಹರಡುವಿಕೆ ನಿಯಂತ್ರಿಸುವ ನಿಟ್ಟಿನಲ್ಲಿ ತಾಲ್ಲೂಕಿನ ಆನೆಗುಂದಿಯ ದೇವಸ್ಥಾನಕ್ಕೆ ಆಗಸ್ಟ್ 17ರವರೆಗೆ ಭಕ್ತರ ಪ್ರವೇಶ ನಿಷೇಧಿಸ ಅಂಜನಾದ್ರಿ ಲಾಗಿದೆ ಎಂದು ಉಪವಿಭಾಗಾಧಿಕಾರಿ ನಾರಾಯಣರೆಡ್ಡಿ ಕನಕರೆಡ್ಡಿ ತಿಳಿಸಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಪ್ರಥಮ ವರ್ಷದ ಪುಣ್ಯಸ್ಮರಣೆ



ಶ್ರೀ ಆರ್. ರಮೇಶ್‌ರೆಡ್ಡಿ
ಶ್ರೀರಾಮರೆಡ್ಡಿರವರ ಮಗ, ಕೈಕೊಂಡ್ರಹಳ್ಳಿ, ಬೆಂ.
ನಿಧನ: 02.08.2020

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷ ಕಳೆದರೂ ನಮ್ಮ ಹೃದಯಗಳಲ್ಲಿ ಪ್ರೀತಿ ಚೇತನವಾಗಿದ್ದೀರಿ. ನಿಮ್ಮ ಮಾರ್ಗದರ್ಶನವೇ ನಮಗೆ ನಿತ್ಯ ದಾರಿದೀಪವಾಗಿದೆ. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸುತ್ತೇವೆ.

ಸದಾ ನಿಮ್ಮ ನೆನಪಿನಲ್ಲಿರುವವರು:
ಶ್ರೀಮತಿ ಜಯಮ್ಮ ಮತ್ತು ಶ್ರೀ ರಾಮರೆಡ್ಡಿರವರು, ಮಕ್ಕಳು ಹಾಗೂ ಮೊಮ್ಮಕ್ಕಳು, ಶ್ರೀಮತಿ ನೀಲಮ್ಮ, ಮಕ್ಕಳು, ಸೊಸೆ, ಅಳಿಯ, ಮತ್ತು ಮೊಮ್ಮಕ್ಕಳು ಹಾಗೂ ಕುಟುಂಬದವರು ಶ್ರೀ ರಾಜಶೇಖರ್‌ರೆಡ್ಡಿರವರ ಕುಟುಂಬದವರು ಹಾಗೂ ಬಂಧು-ಮಿತ್ರರು

21ನೇ ವರ್ಷದ ಸವಿನೆನಪು



ವೈ ನಂಜಪ್ಪರೆಡ್ಡಿ
(ಪಾಳ್ಯದ ಕೃಷ್ಣಪ್ಪ ಕೋರಮಂಗಲ)

ನೀವು ನಮ್ಮನ್ನು ಅಗಲಿ ಇಪ್ಪತ್ತೊಂದು ವರ್ಷ ಕಳೆದರೂ ನಿಮ್ಮ ಸವಿನೆನಪು ನಮ್ಮಲ್ಲಿ ಚಿರಸ್ಮರಣೀಯವಾಗಿ ಉಳಿದಿದೆ. ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ಕರುಣಿಸಲೆಂದು ಭಗವಂತನಲ್ಲಿ ಸದಾ ಪ್ರಾರ್ಥಿಸುವ

ಮಕ್ಕಳು, ಮೊಮ್ಮಕ್ಕಳು ಮತ್ತು ಕುಟುಂಬ ವರ್ಗದವರು

LOOKING FOR JOB OPPORTUNITY

Refer Classifieds on Wednesday

LOOKING TO BUILD, BUY OR SELL A PROPERTY
Please refer Classifieds on Sunday

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಗುಣಮುಖರ ಸಂಖ್ಯೆಗಿಂತ ಹೊಸ ಪ್ರಕರಣಗಳ ಸಂಖ್ಯೆಯಲ್ಲಿ ಹೆಚ್ಚಳ

ಕೋವಿಡ್: ಸಕ್ರಿಯ ಪ್ರಕರಣ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 1,875 ಮಂದಿ ಕೋವಿಡ್ ಪೀಡಿತರಾಗಿರುವುದು ಭಾನುವಾರ ದೃಢಪಟ್ಟಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 24,144ಕ್ಕೆ ಏರಿಕೆಯಾಗಿದೆ.

ಕಳೆದೊಂದು ವಾರದಿಂದ ಗುಣಮುಖರ ಸಂಖ್ಯೆಗಿಂತ ಹೊಸ ಪ್ರಕರಣಗಳು ಅಧಿಕ ಸಂಖ್ಯೆಯಲ್ಲಿ ವರದಿಯಾಗುತ್ತಿವೆ. ಇದರಿಂದ ಸಕ್ರಿಯ ಪ್ರಕರಣ ಹೆಚ್ಚಳವಾಗಿದೆ. ಒಂದು ದಿನದ ಅವಧಿಯಲ್ಲಿ 1.55 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಶೇ 1.20ರಷ್ಟು ಸೋಂಕು ದೃಢ ಪ್ರಮಾಣ ವರದಿಯಾಗಿದೆ.

ರಾಜ್ಯದ 16 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ ಹಾಗೂ 8 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆಯಲ್ಲಿ ಹೊಸದಾಗಿ ಪ್ರಕರಣ ವರದಿಯಾಗಿಲ್ಲ. ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ



ದಕ್ಷಿಣ ಕನ್ನಡದಲ್ಲಿ 410, ಮೈಸೂರಿನಲ್ಲಿ 146 ಹಾಗೂ ಕೊಡಗಿನಲ್ಲಿ 83 ಪ್ರಕರಣಗಳು ಪತ್ತೆಯಾಗಿವೆ.

ಬೆಂಗಳೂರಿನಲ್ಲಿ 409 ಮಂದಿ ಸೋಂಕಿತರಾಗಿದ್ದಾರೆ. ಉಡುಪಿಯಲ್ಲಿ 162 ಹಾಗೂ ಹಾಸನದಲ್ಲಿ 108 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100ರ ಗಡಿಯೊಳಗೆ ವರದಿಯಾಗಿವೆ. ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 29.06 ಲಕ್ಷ ದಾಟಿದೆ. ಕೊರೊನಾ ಸೋಂಕಿತರಲ್ಲಿ 1,502 ಮಂದಿ ಚೇತರಿಸಿಕೊಂಡಿದ್ದಾರೆ. ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 28.46 ಲಕ್ಷ ದಾಟಿದೆ.

ಕೋವಿಡ್ ಪೀಡಿತರಲ್ಲಿ 25 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. 9 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ 8, ದಕ್ಷಿಣ ಕನ್ನಡದಲ್ಲಿ 6, ಹಾಸನದಲ್ಲಿ 3, ಕೋಲಾರ ಹಾಗೂ ಉತ್ತರ ಕನ್ನಡದಲ್ಲಿ ತಲಾ ಇಬ್ಬರು ಸಾವಿಗೀಡಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ.

ಮರಣ ಪ್ರಮಾಣ ದರವು ಶೇ 1.33ರಷ್ಟು ವರದಿಯಾಗಿದೆ. ಈವರೆಗೆ ಕೋವಿಡ್‌ನಿಂದ ಸಾವಿಗೀಡಾದವರ ಒಟ್ಟು ಸಂಖ್ಯೆ 36,587ಕ್ಕೆ ಏರಿಕೆಯಾಗಿದೆ.

ಎಚ್ಚರ ವಹಿಸಲು ಆರೋಗ್ಯ ಇಲಾಖೆ ಸೂಚನೆ

ಕೋವಿಡ್‌ಗೆ ಸಂಬಂಧಿಸಿದಂತೆ ಮುಂಜಾಗ್ರತಾ ಕ್ರಮಗಳನ್ನು ತಪ್ಪದೇ ಪಾಲಿಸುವ ಜತೆಗೆ, ಎಲ್ಲರೂ ಲಸಿಕೆ ಪಡೆದುಕೊಳ್ಳಬೇಕು ಎಂದು ಆರೋಗ್ಯ ಇಲಾಖೆ ಸೂಚಿಸಿದೆ.

ನೆರೆಯ ರಾಜ್ಯ ಕೇರಳದಲ್ಲಿ ಪ್ರಕರಣಗಳ ಸಂಖ್ಯೆ ಏರಿಕೆ ಕಂಡಿದೆ. ಹೀಗಾಗಿ, ರಾಜ್ಯದಲ್ಲಿ ಮೂರನೇ ಅಲೆ ಎದುರಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ತಜ್ಞರು ಸೂಚಿಸಿದ್ದಾರೆ. ಜನರು ಮುಖಗವಸು ಧರಿಸುವಿಕೆ ಸೇರಿದಂತೆ ವಿವಿಧ ನಿಯಮಗಳನ್ನು ಪಾಲಿಸುವ ಮೂಲಕ ಕೋವಿಡ್ ನಿಯಂತ್ರಣಕ್ಕೆ ಸಹಕರಿಸಬೇಕು ಎಂದು ಇಲಾಖೆ ಮನವಿ ಮಾಡಿದೆ.

‘ಅನಿವಾರ್ಯ ಇಲ್ಲದಿದ್ದಲ್ಲಿ ಹಿರಿಯ ನಾಗರಿಕರು ಮನೆಯಿಂದ ಹೊರಗಡೆ ಹೋಗಬಾರದು. ಮಧುಮೇಹ, ರಕ್ತದೊತ್ತಡದಂತಹ ಕಾಯಿಲೆಗಳಿದ್ದರೆ ತಪ್ಪದೇ ಔಷಧಗಳನ್ನು ಮುಂದುವರಿಸಬೇಕು. ಯಾವುದೇ ಅನಾರೋಗ್ಯ ಸಮಸ್ಯೆಗಳ ಲಕ್ಷಣಗಳು ಗೋಚರಿಸಿದಲ್ಲಿ ತಡಮಾಡದೆಯೇ ವೈದ್ಯರನ್ನು ಭೇಟಿ ಮಾಡಬೇಕು. ಊಹಾಪೋಹಗಳಿಗೆ ತಲೆಕೆಡಿಸಿಕೊಳ್ಳಬಾರದು’ ಎಂದು ತಿಳಿಸಿದೆ.

‘ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಪೌಷ್ಟಿಕ ಆಹಾರವನ್ನು ಸೇವಿಸಬೇಕು. ಕೈಗಳ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಹೊರಗಡೆ ತೆರಳಿದಾಗ ಮುಖ, ಮೂಗು, ಬಾಯಿ ಹಾಗೂ ಕಣ್ಣುಗಳನ್ನು ಮುಟ್ಟಿಕೊಳ್ಳಬಾರದು’ ಎಂದು ಹೇಳಿದೆ.

ಮಹಾರಾಷ್ಟ್ರದಲ್ಲಿ ಝೀಕಾ ಸೋಂಕು ಪ್ರಕರಣ ಪತ್ತೆ

ಪುಣೆ (ಪಿಟಿಐ): ಮಹಾರಾಷ್ಟ್ರದ ಮೊದಲ ಝೀಕಾ ವೈರಸ್ ಸೋಂಕು ಪ್ರಕರಣ ಪುಣೆಯ ಪುರಂದರ ತಾಲ್ಲೂಕಿನಲ್ಲಿ ಶುಕ್ರವಾರ ಪತ್ತೆಯಾಗಿದೆ.

ಬೆಲ್ಸಾರ್ ಗ್ರಾಮದ 50 ವರ್ಷದ ಮಹಿಳೆಗೆ ಸೋಂಕು ತಗುಲಿದ್ದು, ಆಕೆ ಈಗ ಸಂಪೂರ್ಣವಾಗಿ ಚೇತರಿಸಿಕೊಂಡಿದ್ದಾರೆ. ಮಹಿಳೆ ಮತ್ತು ಆಕೆಯ ಕುಟುಂಬಸ್ಥರಲ್ಲಿ ಈಗ ರೋಗದ ಯಾವ ಲಕ್ಷಣಗಳೂ ಇಲ್ಲ ಎಂದು ಮಹಾರಾಷ್ಟ್ರ ಆರೋಗ್ಯ ಇಲಾಖೆ ತಿಳಿಸಿದೆ. ಮಹಿಳೆಗೆ ಚಿಕೂನ್ ಗುನ್ಯಾ ಕೂಡ ಇತ್ತು ಎಂದು ಇಲಾಖೆ ಹೇಳಿದೆ.

ಸರ್ಕಾರಿ ವೈದ್ಯರ ತಂಡವು ಶನಿವಾರ ಬೆಲ್ಸಾರ್ ಗ್ರಾಮಕ್ಕೆ ಭೇಟಿ ನೀಡಿ ಸರಪಂಚರು ಮತ್ತು ಗ್ರಾಮ ಪಂಚಾಯಿತಿ ಸದಸ್ಯರನ್ನು ಸಂಪರ್ಕಿಸಿ, ರೋಗ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳುವಂತೆ ಸೂಚನೆ ನೀಡಿದ್ದಾರೆ.

ರಾಜ್ಯದಲ್ಲಿ ಝೀಕಾ ಪತ್ತೆಯಾಗಿದೆ ಎಂದು ನಾಗರಿಕರು ಆತಂಕ್ಕೆ ಒಳಗಾಗುವ ಅಗತ್ಯವಿಲ್ಲ ಎಂದೂ ಸರ್ಕಾರ ಹೇಳಿದೆ.

ಸೊಳ್ಳೆಯಿಂದ ಹರಡುವ ಈ ರೋಗವು ಕೇರಳದಲ್ಲಿ ಮೊದಲ ಬಾರಿಗೆ ಪತ್ತೆಯಾಗಿತ್ತು. ಈಗ ಮಹಾರಾಷ್ಟ್ರದಲ್ಲಿ ಪತ್ತೆಯಾಗಿದೆ.

ಕೇರಳದಲ್ಲಿ ಶನಿವಾರ ಹೊಸದಾಗಿ ಇಬ್ಬರಿಗೆ ಸೋಂಕು ತಗುಲಿದ್ದು, ಈ ಮೂಲಕ ಒಟ್ಟು ಸೋಂಕಿತರ ಸಂಖ್ಯೆ 63ಕ್ಕೆ ಏರಿಕೆಯಾಗಿದೆ.

ಫ್ಲಾರಿಡಾ: 21 ಸಾವಿರ ಹೊಸ ಪ್ರಕರಣಗಳು ಪತ್ತೆ

ಒರ್ಲಾಂಡೊ(ಅಮೆರಿಕ) (ಎಪಿ): ಫ್ಲಾರಿಡಾದಲ್ಲಿ ಶುಕ್ರವಾರ 21,683 ಹೊಸ ಕೋವಿಡ್ ಪ್ರಕರಣಗಳು ವರದಿಯಾಗಿವೆ. ಇದು ಪಿಡುಗು ಆರಂಭಗೊಂಡ ಬಳಿಕ ಫ್ಲಾರಿಡಾದಲ್ಲಿ ವರದಿಯಾದ ಅತಿ ಹೆಚ್ಚು ದೈನಂದಿನ ಪ್ರಕರಣವಾಗಿದೆ ಎಂದು ಫೆಡರಲ್ ಆರೋಗ್ಯ ಇಲಾಖೆ ಶನಿವಾರ ತಿಳಿಸಿದೆ.

ಅಮೆರಿಕದಲ್ಲಿ ಡೆಲ್ಟಾ ರೂಪಾಂತರ ತಳಿಯು ಹರಡುತ್ತಿದ್ದು, ಫ್ಲಾರಿಡಾ ರಾಜ್ಯವು ವೈರಸ್‌ನ ಹೊಸ ರಾಷ್ಟ್ರೀಯ ಕೇಂದ್ರ ಬಿಂದುವಾಗಿದೆ.

ರಾಜ್ಯದಲ್ಲಿ ಈ ವಾರ 409 ಮಂದಿ ಸೋಂಕಿನಿಂದ ಸಾವಿಗೀಡಾಗಿದ್ದಾರೆ. ಇದರೊಂದಿಗೆ ಮೃತರ ಸಂಖ್ಯೆಯು 39,000ಕ್ಕೆ ಏರಿಕೆಯಾಗಿದೆ. ಫ್ಲಾರಿಡಾದಲ್ಲಿ 12 ವರ್ಷಕ್ಕಿಂತ ಮೇಲ್ಪಟ್ಟ ಶೇಕಡ 60ರಷ್ಟು ಮಂದಿ ಲಸಿಕೆಯನ್ನು ಪಡೆದಿದ್ದಾರೆ.

‘ಕಳೆದ ವರ್ಷ ಕೋವಿಡ್ ಉತ್ತುಂಗದಲ್ಲಿದ್ದಾಗ ಆಸ್ಪತ್ರೆಯಲ್ಲಿ ಸೃಷ್ಟಿಯಾಗಿದ್ದ ಪರಿಸ್ಥಿತಿ ಈಗ ಮತ್ತೆ ಎದುರಾಗಿದೆ. ಕೋವಿಡ್ ರೋಗಿಗಳಿಗೆ ಸೌಲಭ್ಯಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಮುಂದಿನ ದಿನಗಳಲ್ಲಿ ತನ್ನ ಆಸ್ಪತ್ರೆಯಲ್ಲಿ ತುರ್ತು ಶಸ್ತ್ರಚಿಕಿತ್ಸೆಗಳನ್ನು ಮಾತ್ರ ನಡೆಸಲಾಗುವುದು’ ಎಂದು ಅಡ್ವೆಂಟ್‌ಹೆಲ್ತ್ ಹೇಳಿದೆ.

ಚೀನಾ: 18 ಪ್ರಾಂತ್ಯಗಳಲ್ಲಿ ಡೆಲ್ಟಾ ಪ್ರಕರಣ

ಬೀಜಿಂಗ್ (ಪಿಟಿಐ): ಕೊರೊನಾ ರೂಪಾಂತರ ತಳಿ ಡೆಲ್ಟಾ, ಚೀನಾದಲ್ಲಿ ತೀವ್ರತರ ಆತಂಕ ತಂದೊಡ್ಡಿದೆ. ಸದ್ಯ, ದೇಶದ 18 ಪ್ರಾಂತ್ಯಗಳಲ್ಲಿ ಡೆಲ್ಟಾ ಪ್ರಕರಣಗಳು ಪತ್ತೆಯಾಗಿವೆ. ರಾಜಧಾನಿ ಬೀಜಿಂಗ್‌ನಲ್ಲಿಯೂ ಅಧಿಕ ಸಂಖ್ಯೆಯ ಪ್ರಕರಣಗಳು ದೃಢಪಡುತ್ತಿವೆ.

ಕಳೆದ 10 ದಿನದಲ್ಲಿ ಸುಮಾರು 300ಕ್ಕೂ ಅಧಿಕ ಪ್ರಕರಣಗಳು ಪತ್ತೆಯಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

18 ಪ್ರಾಂತ್ಯಗಳ 27 ನಗರಗಳಲ್ಲಿ ಡೆಲ್ಟಾ ಪತ್ತೆಯಾಗಿದೆ. ರಾಜಧಾನಿ ಬೀಜಿಂಗ್‌ನಲ್ಲಿ ಎರಡು ಹೊಸ ಪ್ರಕರಣ ಪತ್ತೆಯಾಗಿವೆ. ದಕ್ಷಿಣ ಚೀನಾದ ಪ್ರವಾಸಿ ತಾಣ ಝೂಂಗಿಯಾಜೆಯಿಂದ ಬಂದಿದ್ದ ಕುಟುಂಬದ ಮೂವರಿಗೆ ಸೋಂಕು ತಗುಲಿದೆ ಎಂದರು.

ಪ್ರವಾಹದಿಂದ ರಕ್ಷಣೆ
ಉತ್ತರ ಪ್ರದೇಶದಲ್ಲಿ ಭಾರಿ ಮಳೆಯಿಂದಾಗಿ ಗಂಗಾನದಿಯಲ್ಲಿ ಪ್ರವಾಹ ಕಾಣಿಸಿಕೊಂಡಿದ್ದು, ಅಲಹಾಬಾದ್‌ನಲ್ಲಿ ನದಿತೀರದಲ್ಲಿರುವ ಹುಲ್ಲು ಚಾವಣಿಯ ಕೆಳಗೆ ಜನರು ಆಶ್ರಯ ಪಡೆದಿರುವುದು ಭಾನುವಾರ ಕಂಡು ಬಂತು — ಪಿಟಿಐ ಚಿತ್ರ

ಇಂದು ‘ಮದ್ರಾಸ್ ವಿಧಾನ ಪರಿಷತ್’ ಶತಮಾನೋತ್ಸವ

ಚೆನ್ನೈ: ಮದ್ರಾಸ್ ವಿಧಾನ ಪರಿಷತ್‌ನ (ಎಂಎಲ್‌ಸಿ) ಶತಮಾನೋತ್ಸವ ಕಾರ್ಯಕ್ರಮ ಸೋಮವಾರ (ಆಗಸ್ಟ್ 2) ಇಲ್ಲಿನ ವಿಧಾನಸಭೆಯಲ್ಲಿ ನಡೆಯಲಿದೆ.



ರಾಮನಾಥ ಕೋವಿಂದ್

ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಕಾರ್ಯಕ್ರಮವನ್ನು ಉದ್ಘಾಟಿಸುವರು. ಇದೇ ವೇಳೆ ಅವರು ಡಿಎಂಕೆ ವರಿಷ್ಠ ಹಾಗೂ ಐದು ಬಾರಿ ತಮಿಳುನಾಡಿನ ಮುಖ್ಯಮಂತ್ರಿಯಾಗಿದ್ದ ಎಂ.ಕರುಣಾನಿಧಿಯವರ ಭಾವಚಿತ್ರವನ್ನು ವಿಧಾನಸಭೆಯ ಸಭಾಭವನದಲ್ಲಿ ಅನಾವರಣಗೊಳಿಸುವರು.

1921ರ ಜನವರಿ 12ರಂದು ಮದ್ರಾಸ್ ವಿಧಾನಪರಿಷತ್ ಅಸ್ತಿತ್ವಕ್ಕೆ ಬಂತು. ಬ್ರಿಟಿಷ್ ಆಳ್ವಿಕೆಯ ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ಜಸ್ಟಿಸ್ ಪಾರ್ಟಿ ಆಗ ಮೊದಲ ಸರ್ಕಾರ ರಚಿಸಿತ್ತು. ಇದೇ ನಂತರದ ದಿನಗಳಲ್ಲಿ ಡಿಎಂಕೆ ಪಕ್ಷವಾಯಿತು.

ಕೆಲ ವರ್ಷಗಳ ನಂತರ ಆಗಿನ ಮದ್ರಾಸ್ ರಾಜ್ಯದ ವಿಧಾನಸಭೆ ಎಂದು ಕರೆಯಲಾದ ಮದ್ರಾಸ್ ವಿಧಾನ ಪರಿಷತ್, ಭಾಷಾವಾರು ಪ್ರಾಂತ್ಯಗಳ ರಚನೆ ನಂತರ ತಮಿಳುನಾಡು ವಿಧಾನಸಭೆಯಾಯಿತು.

ಕೋವಿಂದ್ ಅವರು ಮಂಗಳವಾರ ನೀಲಗಿರಿಗೆ ತೆರಳಿ, ನಾಲ್ಕು ದಿನಗಳ ಕಾಲ ಅಲ್ಲಿಯೇ ತಂಗುವರು. ಈ ಅವಧಿಯಲ್ಲಿ ಅವರು ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವರು ಎಂದು ಮೂಲಗಳು ತಿಳಿಸಿವೆ.

ಐತಿಹಾಸಿಕ ಮಹತ್ವ: ಮದ್ರಾಸ್ ವಿಧಾನ ಪರಿಷತ್‌ನಲ್ಲಿ ಹಲವು ಮಹತ್ವದ ಶಾಸನಗಳನ್ನು ಅಂಗೀಕರಿಸಲಾಗಿದೆ. ಹಿಂದೂ ಧಾರ್ಮಿಕ ದತ್ತಿ ಕಾಯ್ದೆ (1926), ದೇವದಾಸಿ ಪದ್ಧತಿ ನಿರ್ಮೂಲನೆ ಕಾಯ್ದೆ, ಬಡವರಿಗೆ ನಿವೇಶನಗಳನ್ನು ಉಚಿತವಾಗಿ ಹಂಚಿಕೆ ಮಾಡುವ ಕಾಯ್ದೆಗಳನ್ನು ಅಂಗೀಕರಿಸಿದ್ದು ಇದರ ಹೆಗ್ಗಳಿಕೆಯಾಗಿದೆ.

ತಮಿಳುನಾಡು: ಕಂಟೇನ್ಮೆಂಟ್‌ಗೆ ಸೂಚನೆ

ಚೆನ್ನೈ: ಕೋವಿಡ್-19 ಪ್ರಕರಣಗಳಲ್ಲಿ ಕಳೆದ ಕೆಲವು ದಿನಗಳಲ್ಲಿ ಅಲ್ಪ ಹೆಚ್ಚಳ ಕಾಣುತ್ತಿದ್ದು, ಅಗತ್ಯವಿದ್ದಲ್ಲಿ ಸ್ಥಳೀಯವಾಗಿ ಹೆಚ್ಚುವರಿ ನಿರ್ಬಂಧ ವಿಧಿಸಲು (ಕಂಟೇನ್ಮೆಂಟ್) ತಮಿಳುನಾಡು ಸರ್ಕಾರವು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಿದೆ.

ಈ ವಾರ ನಿಗದಿಯಾಗಿದ್ದ ಸ್ಥಳೀಯ ಉತ್ಸವಗಳಲ್ಲಿ ಜನದಟ್ಟಣೆ ತಪ್ಪಿಸಲು ರಾಜ್ಯದ ಹಲವು ಭಾಗಗಳಲ್ಲಿನ ಪ್ರಸಿದ್ಧ ದೇವಸ್ಥಾನಗಳನ್ನು ಮುಚ್ಚುವಂತೆ ಹಿಂದೂ ಧಾರ್ಮಿಕ ಮತ್ತು ದತ್ತಿ ಇಲಾಖೆ ಆದೇಶಿಸಿದೆ. ಜನದಟ್ಟಣೆಯ ಮಾರುಕಟ್ಟೆಗಳನ್ನು ಆಗಸ್ಟ್ 9ರವರೆಗೆ ಗ್ರೇಟರ್ ಚೆನ್ನೈ ಕಾರ್ಪೊರೇಷನ್ (ಜಿಸಿಸಿ) ಮುಚ್ಚಿದೆ. ಕೋವಿಡ್ ಎರಡನೇ ಅಲೆಯಲ್ಲಿ ಹೆಚ್ಚು ಹಾನಿಗೊಳಗಾಗಿದ್ದ ಕೊಯಮತ್ತೂರಿನಲ್ಲಿ ಹೆಚ್ಚುವರಿ ನಿರ್ಬಂಧಗಳನ್ನು ವಿಧಿಸಲಾಗಿದೆ.

‘ಜುಲೈ 28ರಂದು 1,756 ಹೊಸ ಪ್ರಕರಣ ದಾಖಲಾಗಿದ್ದವು. ಜುಲೈ 31ರಂದು ಹೊಸ ಪ್ರಕರಣಗಳ ಸಂಖ್ಯೆ 1,986ಕ್ಕೆ ಏರಿರುವುದು ಸರ್ಕಾರಕ್ಕೆ ಆತಂಕ ತಂದಿದೆ. ರಾಜ್ಯದಲ್ಲಿ ಸಡಿಲಿಕೆ ಜಾರಿಗೊಂಡ ಎರಡು ವಾರಗಳ ನಂತರ ಪ್ರಕರಣಗಳಲ್ಲಿ ನಿಧಾನಗತಿಯ ಏರಿಕೆ ಕಂಡಿದೆ. ಈ ಹೆಚ್ಚಳ ಅಲ್ಪವಾಗಿದ್ದರೂ, ನಾವು ಎಚ್ಚರ ತಪ್ಪುವಂತಿಲ್ಲ’ ಎಂದು ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಜೆ. ರಾಧಾಕೃಷ್ಣನ್ ತಿಳಿಸಿದದ್ದಾರೆ.

ಪ್ರವಾಹ: ತುರ್ತು ಕಾಮಗಾರಿಗೆ ₹ 660 ಕೋಟಿ

ಒಂದನೇ ಪುಟದಿಂದ

‘ಮಳೆ ಕಡಿಮೆಯಾದ ಬಳಿಕ ಸಂಪರ್ಕ ರಸ್ತೆ, ಸೇತುವೆಗಳ ಕಾಮಗಾರಿಗೆ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ (ಎನ್‌ಡಿಆರ್‌ಎಫ್) ನಿಯಮಗಳ ಪ್ರಕಾರ ₹ 150 ಕೋಟಿ ಖರ್ಚು ಮಾಡಲಾಗುವುದು. ಜಿಲ್ಲಾಧಿಕಾರಿಗಳ ಖಾತೆಯಲ್ಲಿ ಸುಮಾರು ₹ 700 ಕೋಟಿಗೂ ಹೆಚ್ಚು ಅನುದಾನ ಲಭ್ಯವಿದೆ’ ಎಂದು ಅವರು ವಿವರಿಸಿದರು.



ಬಸವರಾಜ ಬೊಮ್ಮಾಯಿ

‘ಮನೆ ಕಳೆದುಕೊಂಡವರಿಗೆ ತಕ್ಷಣದ ಪರಿಹಾರವಾಗಿ ₹ 10 ಸಾವಿರ ಬಿಡುಗಡೆ ಮಾಡಲಾಗಿದೆ. ಅಲ್ಲದೆ, ಕಾಳಜಿ ಕೇಂದ್ರಗಳನ್ನೂ ತೆರೆಯಲಾಗಿದೆ. ಮನೆ ಸಂಪೂರ್ಣ ಕಳೆದುಕೊಂಡವರಿಗೆ ₹ 5 ಲಕ್ಷ, ಭಾಗಶಃ ಹಾನಿಯಾಗಿದ್ದರೆ ₹ 3 ಲಕ್ಷ, ಅಲ್ಪ ಹಾನಿಯಾಗಿದ್ದರೆ ₹50 ಸಾವಿರ ನೀಡಲಾಗುತ್ತದೆ. ಕಳೆದ ವರ್ಷ ಮನೆ ಕಳೆದುಕೊಂಡು, ಕಟ್ಟಡ ನಿರ್ಮಾಣ ಪ್ರಗತಿಯಲ್ಲಿದ್ದರೆ ಅದಕ್ಕೆ ಬಾಕಿ ಇರುವ ಹಣವನ್ನು ಪಾವತಿಸಲು ಕೂಡಾ ಆದೇಶ ನೀಡಲಾಗಿದೆ’ ಎಂದು ಅವರು ತಿಳಿಸಿದರು.

ಹಿಂದಿನ ವರ್ಷದ ಪರಿಹಾರದ ಹಣವನ್ನೇ ಕೊಟ್ಟಿಲ್ಲ ಎಂಬ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, ‘ಪ್ರವಾಹ ಬಂದಾಗ ತಕ್ಷಣ ಸ್ಪಂದಿಸುವ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಈ ಹಿಂದೆ ಅವರು ಯಾವ ರೀತಿ ಮಾಡಿದ್ದಾರೆ ಎಂದು ಗೊತ್ತಿದೆ. ಮುಖ್ಯಮಂತ್ರಿ ಆಗಿದ್ದವರು ಸ್ವಲ್ಪ ಅರ್ಥ ಮಾಡಿಕೊಂಡು ಮಾತಾಡಬೇಕು’ ಎಂದರು. ಆರ್ಥಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಐಎಸ್‌ಎನ್ ಪ್ರಸಾದ್ ಸೇರಿದಂತೆ ಹಿರಿಯ ಅಧಿಕಾರಿಗಳು ಸಭೆಯಲ್ಲಿದ್ದರು.

ಅಂಕಿ–ಅಂಶಗಳು

13	ಪ್ರವಾಹ ಉಂಟಾದ ಜಿಲ್ಲೆ
13	ಸಾವಿಗೀಡಾದವರು
466	ತೊಂದರೆಗೆ ಒಳಗಾದ ಗ್ರಾಮಗಳು

6 ಜಿಲ್ಲೆಯಲ್ಲಷ್ಟೇ ಶೇ 50 ಮಂದಿಗೆ ಲಸಿಕೆ

ಒಂದನೇ ಪುಟದಿಂದ

ರಾಜ್ಯದಲ್ಲಿ ಕಳೆದ ಜ.16ರಿಂದ ಲಸಿಕಾ ಅಭಿಯಾನ ಪ್ರಾರಂಭವಾಗಿದ್ದು, ಈವರೆಗೆ ಶೇ 36.5ರಷ್ಟು ಮಂದಿ ಮಾತ್ರ ಒಂದು ಡೋಸ್ ಲಸಿಕೆ ಪಡೆದಿದ್ದಾರೆ. ಅವರಲ್ಲಿ ಶೇ 9.9ರಷ್ಟು ಮಂದಿ ಎರಡು ಡೋಸ್ ಲಸಿಕೆ ಪೂರ್ಣಗೊಳಿಸಿದ್ದಾರೆ. ಈವರೆಗೆ 3.06 ಕೋಟಿ ಡೋಸ್ ಲಸಿಕೆಯನ್ನು ವಿತರಿಸಲಾಗಿದೆ. 2.40 ಕೋಟಿ ಮಂದಿ ಮೊದಲ ಡೋಸ್ ಲಸಿಕೆ ಪಡೆದುಕೊಂಡಿದ್ದರೇ, 65.71 ಲಕ್ಷ ಮಂದಿ ಎರಡನೆ ಡೋಸ್ ಲಸಿಕೆಯನ್ನೂ ಪಡೆದಿದ್ದಾರೆ. ಕೇಂದ್ರ ಸರ್ಕಾರದಿಂದ ಬೇಡಿಕೆಯಷ್ಟು ಲಸಿಕೆ ಪೂರೈಕೆಯಾಗದಿರುವುದರಿಂದ ಕಳೆದೊಂದು ತಿಂಗಳಿನಿಂದ ಪ್ರತಿನಿತ್ಯ ಸರಾಸರಿ 2.5 ಲಕ್ಷ ಡೋಸ್‌ಗಳನ್ನು ವಿತರಿಸಲಾಗುತ್ತಿದೆ.

6 ಜಿಲ್ಲೆಗಳಲ್ಲಿ ಉತ್ತಮ ಫಲಿತಾಂಶ: ಈವರೆಗೆ ಲಸಿಕೆ ವಿತರಣೆಯನ್ನು ಆಧರಿಸಿ ಕೋವಿಡ್ ವಾರ್ ರೂಮ್ ವಿಶ್ಲೇಷಣೆ ಮಾಡಿದ್ದು, ಬೆಂಗಳೂರು ಸೇರಿದಂತೆ ಆರು ಜಿಲ್ಲೆಗಳಲ್ಲಿ ಮಾತ್ರ ಶೇ 50ಕ್ಕಿಂತ ಅಧಿಕ ಮಂದಿ ಲಸಿಕೆ ಪಡೆದುಕೊಂಡಿದ್ದಾರೆ. ಬೆಂಗಳೂರಿನಲ್ಲಿ ಶೇ 86.76, ಉಡುಪಿಯಲ್ಲಿ ಶೇ 62.55, ದಕ್ಷಿಣ ಕನ್ನಡದಲ್ಲಿ ಶೇ 55.91, ಮೈಸೂರಿನಲ್ಲಿ ಶೇ 55.59, ರಾಮನಗರದಲ್ಲಿ ಶೇ53.80 ಹಾಗೂ ಕೊಡಗಿನಲ್ಲಿ ಶೇ50.49 ರಷ್ಟು ಮಂದಿ ಲಸಿಕೆ ಪಡೆದುಕೊಂಡಿದ್ದಾರೆ. ಹಾವೇರಿಯಲ್ಲಿ ಶೇ 28.87ರಷ್ಟು ಮಂದಿ ಮಾತ್ರ ಈವರೆಗೆ ಲಸಿಕೆ ಹಾಕಿಸಿಕೊಂಡಿದ್ದಾರೆ. ಉತ್ತರ ಕರ್ನಾಟಕ ಭಾಗದ ಜಿಲ್ಲೆಗಳೇ ಹೆಚ್ಚಿನ ಸಂಖ್ಯೆಯಲ್ಲಿ ಶೇ 40ರ ಗಡಿಯೊಳಗೆ ಇವೆ.

‘ಜನಸಂಖ್ಯೆಗೆ ಅನುಗುಣವಾಗಿ ಲಸಿಕೆಯನ್ನು ಜಿಲ್ಲೆಗಳಿಗೆ ಹಂಚಿಕೆ ಮಾಡಲಾಗುತ್ತದೆ. ಕೆಲವು ಜಿಲ್ಲೆಗಳಲ್ಲಿ ಲಸಿಕೆ ಬಗ್ಗೆ ಜಾಗೃತಿ ಮೂಡಿಸಿದರೂ ಗ್ರಾಮೀಣ ಪ್ರದೇಶದವರು ಹಿಂದೇಟು ಹಾಕುತ್ತಿದ್ದಾರೆ. ಆದಷ್ಟು ಬೇಗ ಎಲ್ಲ 18 ವರ್ಷ ಮೇಲ್ಪಟ್ಟವರಿಗೆ ಕನಿಷ್ಠ ಒಂದು ಡೋಸ್ ಲಸಿಕೆಯನ್ನಾದರೂ ಒದಗಿಸಲು ಕಾರ್ಯಪ್ರವೃತ್ತರಾಗಿದ್ದೇವೆ’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.



ಪೆಗಾಸಸ್: ಸುಪ್ರೀಂ ಕೋರ್ಟ್‌ನಲ್ಲಿ ಆಗಸ್ಟ್ 5ರಂದು ವಿಚಾರಣೆ

ನವದೆಹಲಿ (ಪಿಟಿಐ): ಪೆಗಾಸಸ್ ಗೂಢಚರ್ಯೆ ವಿಷಯವನ್ನು ಸುಪ್ರೀಂ ಕೋರ್ಟ್‌ನ ಹಾಲಿ ಅಥವಾ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ಸ್ವತಂತ್ರ ನ್ಯಾಯಾಂಗ ತನಿಖೆಗೆ ಒಳಪಡಿಸಬೇಕು ಎಂದು ಹಿರಿಯ ಪತ್ರಕರ್ತರಾದ ಎನ್. ರಾಮ್ ಮತ್ತು ಶಶಿ ಕುಮಾರ್ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಸುಪ್ರೀಂಕೋರ್ಟ್ ಇದೇ 5ರಂದು ಕೈಗೆತ್ತಿಕೊಳ್ಳಲಿದೆ.

ಸುಪ್ರೀಂಕೋರ್ಟ್ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ವೇಳಾಪಟ್ಟಿಯ ಪ್ರಕಾರ, ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ, ನ್ಯಾಯಮೂರ್ತಿ ಸೂರ್ಯಕಾಂತ್ ಅವರನ್ನೊಳಗೊಂಡ ಪೀಠವು ಇದೇ 5ರಂದು ಈ ಅರ್ಜಿಯ ನಡೆಸಲಿದೆ. ಈ ಕುರಿತು ಸಲ್ಲಿಕೆಯಾಗಿರುವ ಮೂರು ಪ್ರತ್ಯೇಕ ಅರ್ಜಿಗಳ ವಿಚಾರಣೆಯೂ ಇದೇ ವೇಳೆ ನಡೆಯಲಿದೆ.

ಸರ್ಕಾರಿ ಸಂಸ್ಥೆಗಳೂ, ನಾಗರಿಕರು, ರಾಜಕಾರಣಿಗಳು ಸೇರಿದಂತೆ ಹಲವು ಖ್ಯಾತನಾಮರ ಮೇಲೆ ಇಸ್ರೇಲಿ ಕುತಂತ್ರಾಂಶವಾದ ಪೆಗಾಸಸ್ ಬಳಸಿ ಗೂಢಚರ್ಯೆ ನಡೆಸಲಾಗಿದೆ ಎಂದು ಮೂರು ಅರ್ಜಿಗಳಲ್ಲಿ ದೂರಲಾಗಿದ್ದು, ತನಿಖೆಗೆ ಮನವಿ ಮಾಡಲಾಗಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

★॥ಶ್ರೀಲಕ್ಷ್ಮಿ ನರಸಿಂಹಸ್ವಾಮಿ ಜ್ಯೋತಿಷ್ಯರು॥★ ಸ್ತ್ರೀ_ಪುರುಷ_ವಶೀಕರಣ, ಸಂಭೋಗ_ವಶೀಕರಣ,ಇನ್ನೂ ಯಾವುದೇ ಸಮಸ್ಯೆಗಳಿಗೆ 15 ನಿಮಿಷಗಳಲ್ಲಿ ಶಾಶ್ವತ ಪರಿಹಾರ. ರಾಘವೇಂದ್ರ ಗುರೂಜಿ. 7337678002

★ಅಂಭಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2ದಿನದಲ್ಲಿ ಪರಿಹಾರ.9886755306

★ಉಚಿತ ಭವಿಷ್ಯ★ ಖಚಿತ ಪರಿಹಾರ:ನಿಮ್ಮ ಸಮಸ್ಯೆಗಳು ಯಾವುದೇ ಇರಲಿ ಸ್ತ್ರೀವಶೀಕರಣ, ಪುರುಷವಶೀಕರಣ ಲೈಂಗಿಕ ಸಮಸ್ಯೆ,ನಿಮ್ಮ ಯಾವುದೇ ಸಮಸ್ಯೆಗಳಿದ್ದರು 100% ಶಾಶ್ವತ ಪರಿಹಾರ.ಮಂತ್ರಾಲಯ. ಪಂಡಿತ್.ಸಾಗರ್ ಶರ್ಮ.8217374106

★ಶ್ರೀಸಾಯಿಗುರು ಜ್ಯೋತಿಷ್ಯ★ ಸ್ತ್ರೀಪುರುಷ ವಶೀಕರಣ, ಗಂಡ ಹೆಂಡತಿ ಕಲಹ, ಸಂತಾನಭಾಗ್ಯ, ಇನ್ನಾವುದೇ ಎಲ್ಲಿಯೂ ಪರಿಹಾರ ಕಾಣದ ಎಷ್ಟೇಕಠಿಣವಾದ ಗುಪ್ತಸಮಸ್ಯೆಗಳಿಗೆ100% ಪರಿಹಾರ. 7829724990

ಸ್ತ್ರೀವಶೀಕರಣ, ಪುರುಷವಶೀಕರಣ ಪ್ರೀತಿಪ್ರೇಮ ಇಷ್ಟಪಟ್ಟವರು ನಿಮ್ಮಂತಾಗಲು 11ಗಂಟೆಗಳಲ್ಲಿ ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ಪರಿಹಾರ. 9845544363

ಉದ್ಯೋಗಾವಕಾಶ

General

ಇಂದೇ ಬೇಕಾಗಿದ್ದಾರೆ ಬೆಂಗಳೂರಿನ ಸುಪ್ರಸಿದ್ಧ ಕಂಪನಿಯಲ್ಲಿ ಆಫೀಸ್ ಕೆಲಸಮಾಡಲು ಯುವಕ/ಯುವತಿಯರು ಬೇಕಾಗಿದ್ದಾರೆ (SSLC to Any Degree Pass/Fail) ಸಂಬಳ 18,000/-ರಿಂದ 65,000/- ದವರೆಗೆ ವಸತಿಯೂಟದೊಂದಿಗೆ ಇಂದೇ ಸಂಪರ್ಕಿಸಿ: ಸುಪ್ರಿಯಾ- 9538032277, 9538075599

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600- 60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

100%ಬಂದ ದಿನವೇ ಕೆಲಸ (ಮಾರ್ಕೆಟಿಂಗ್‌ಅಲ್ಲ) ಬೆಂಗಳೂರಿನ Private Limitedಕಂಪನಿಗಳಲ್ಲಿ ಕೆಲಸಮಾಡಲು7th,SSLC,PUC, Degree,Diploma, ITI,BE(Pass/fail) ಆದಂತಹವರು 1684ಯುವಕರು ಪರ್ಮನೆಂಟ್ ಹುದ್ದೆಗಳಿಗೆ ತಕ್ಷಣ ಬೇಕಾಗಿದ್ದಾರೆ(ವಿದ್ಯಾರ್ಹತೆಯಿಲ್ಲದವರೂ) ವಸತಿಯೂಟದೊಂದಿಗೆ ESI/PF ನೊಂದಿಗೆ ಸಂಬಳ 13,615-24,815/- ಸಂಪರ್ಕಿಸಿ:9900917474, 9900476464

ತಕ್ಷಣ ಬೇಕಾಗಿದ್ದಾರೆ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿನ ಕಂಪನಿಗಳಿಗೆ ಹಾಗೂ ಆಫೀಸ್‌ಗಳಿಗೆ ಯುವಕ/ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ7th, SSLC,PUC,ITI Degree Pass/Fail ಆದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ಉಚಿತ ವಸತಿಯೂಟದೊಂದಿಗೆ ESI/PFನೊಂದಿಗೆ ಸಂಬಳ:16,500ರಿಂದ 45000/-ದವರೆಗೆ. 9538250222, 9538191333

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

ತಕ್ಷಣ ಬೇಕಾಗಿದ್ದಾರೆ ಬೆಂಗಳೂರು&ಕರ್ನಾಟಕದಾದ್ಯಂತ ಕಂಪನಿಗಳಿಗೆ, ಆಫೀಸ್‌ಗಳಿಗೆ,ಬ್ಯಾಂಕ್‌ಗಳಿಗೆ,ಶೋರೂಂಗಳಿಗೆಯಾವುದೇ ವಿದ್ಯಾರ್ಹತೆಯಿರುವ ವಿದ್ಯಾರ್ಹತೆಯಿಲದವರಿಗೂ ವಸತಿಯೂಟದೊಂದಿಗೆ ಸಂಬಳ+OT,17,200/- 47000/-.8884412822, 9986083666

ರಾವ್ ಸಂಸ್ಥೆಗೆ ವಯಸ್ಸಾದವರನ್ನು,ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂ ನರ್ಸ್‌ಗಳು, ಹುಡುಗಿಯರು ಬೇಕಾಗಿದ್ದಾರೆ.ಊಟ ವಸತಿಯಿದೆ. 10,000-15,000. 8951315839, 9880545002

TATA ಮೋಟರ್ಸ್, TOYOTA, ಬ್ರಿಟಾನಿಯಾ ಆನ್‌ಲೈನ್ ಕಂಪೆನಿಗಳಿಗೆ SSLC, PUC,Degree, ITI ನವರು ನೇರನೇಮಕಾತಿ 16,800- 56,000/- ವಸತಿಯೂಟವಿದೆ. 7204853296, 7204396011

ವಿಡಿಯೋಕಾನ್, TVS, ಟಯೋಟ, ಬ್ರಿಟಾನಿಯಾ ಕಂಪನಿಗಳಿಗೆ SSLC, PUC, ITI ನವರು ವಿದ್ಯಾರ್ಹತೆಯಿಲ್ಲದವರು ನೇರನೇಮಕಾತಿ ಸಂಬಳ: 16,600-56,000/- ವಸತಿಯೂಟವಿದೆ. 9611715755

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಮನೆಯಿಂದಲೇ ಕುಳಿತು ಫಾರಂನಲ್ಲಿ ಅಂಕಿಗಳು ತುಂಬುವ ಮೂಲಕ,ಗಳಿಸಿ 15,000-25,000/-. ಕೊರಿಯರ್ ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ. 9108059956, 9901929956

Marketing & Sales

REQUIRED MARKETING MANAGER/ OFFICER for Indias well known solar water heater manufacturing company for their Karnataka operations. Candidates with any graduation having experience in similar field may apply. Email to hr@sudarshansaur.com

Wanted

ಬಂದ ದಿನವೇ ಕೆಲಸ (ಮಾರ್ಕೆಟಿಂಗ್‌ಅಲ್ಲ) MNC ಕಂಪನಿಗಳಿಗೆ Primary,SSLC, PUC, ITI, any Degree Pass/Fail. ಯುವಕ, ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ. ESI/ PFನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ.15,000 86,000. 7259685221, 7760116548

ಖಾಸಗಿ ಬ್ಯಾಂಕ್ ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC, PUC, Degree ಸಂಬಳ 15000-28000 ಸಂಪರ್ಕಿಸಿರಿ 9980814578, 9980812378.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD
SELL, RENT, BUY PROPERTY THROUGH PROPERTY CLASSIFIEDS ADS IN DECCAN HERALD & PRAJAVANI NEWS PAPER
ಪ್ರಜಾವಾಣಿ ಕ್ಲಾಸಿಫೈಡ್ಸ್
BOOK YOUR CLASSIFIEDS ADS ONLINE
WWW.DHCLASSIFIEDS.COM
FOR MORE INFORMATION CONTACT 9880856233 | 9886213331
Email: santhoshkumar@deccanherald.co.in

ಕ್ಲಬ್‌ಹೌಸ್‌ನಲ್ಲಿ ಅಕಾಡೆಮಿಗಳ ಕಾರ್ಯವೈಖರಿಯ 'ಬಿಸಿ ವಿಮರ್ಶೆ' • ನೇಮಕದಲ್ಲಿ ಮಹಿಳಾ ಪ್ರಾತಿನಿಧ್ಯ ನಿರ್ಲಕ್ಷ್ಯ

'ಅಕಾಡೆಮಿಗಳು ಸ್ವಾಯತ್ತೆ ಉಳಿಸಿಕೊಳ್ಳಲಿ'



ಎನ್‌.ಆರ್‌. ವಿಶುಕುಮಾರ್

ಡಾ.ಬಿ.ವಿ. ವಸಂತಕುಮಾರ್



ಡಾ.ಎಲ್‌.ಎನ್‌. ಮುಕುಂದರಾಜ್

ಪ್ರೀತಿ ನಾಗರಾಜ್

ಡಾ.ಅಜಕ್ಕಳ ಗಿರೀಶ್ ಭಟ್

ಆಲದಮರ (ಪ್ರಜಾವಾಣಿ ಕ್ಲಬ್ ಹೌಸ್): 'ಅಕಾಡೆಮಿಗಳಿಗೆ ಸ್ವಾಯತ್ತತೆ ಇದೆ. ಆದರೆ ಅವುಗಳ ಸ್ವರೂಪ ಮತ್ತು ಕಾರ್ಯಶೈಲಿಯಲ್ಲಿ ಬದಲಾವಣೆಯಾಗಬೇಕಿದೆ. ಅಧ್ಯಕ್ಷರು, ಸದಸ್ಯರು ಈ ನಿಟ್ಟಿನಲ್ಲಿ ಗಟ್ಟಿಯಾಗಿ ನಿಂತರೆ ಯಾವ ಸರ್ಕಾರವೂ ಮೂಗು ತೂರಿಸುವುದಿಲ್ಲ.'

– ಇಂತಹ ಒಕ್ಕೊರಲಿನ ಅಭಿಪ್ರಾಯ ಮಾರ್ದನಿಸಿದ್ದು, 'ಪ್ರಜಾವಾಣಿ' ಕ್ಲಬ್ ಹೌಸ್‌ನ 'ಆಲದಮರ'ದ ಕಟ್ಟೆಯ ಕೆಳಗೆ. ನೂರಾರು ಕೇಳುಗರು ಇದಕ್ಕೆ ಕಿವಿಯಾದರು. ಅಕಾಡೆಮಿಗಳಿಗೆ ನೇಮಕದ ವಿಚಾರದಲ್ಲಿ ಲಿಂಗ ಅಸಮಾನತೆ ಉಂಟಾಗಿರುವುದೂ ಚರ್ಚೆಯ ಕಾವೇರಿಸಿತು.

'ಇತ್ತೀಚೆಗೆ ಅಕಾಡೆಮಿಗಳ ಮೌಲ್ಯ ಕುಸಿದಿದೆ. ಅಲ್ಲಿ ಅಧಿಕಾರದ 'ಮೊಳಕೆ' ಇರುತ್ತದೆ. ಮತ್ತೊಂದೆಡೆ ಅಕಾಡೆಮಿಗಳು ಸರ್ಕಾರಿ ಇಲಾಖೆಗಳ ಅಂಗಸಂಸ್ಥೆಗಳಾಗಿವೆ. ಸರ್ಕಾರದ ಲೋಗೊ ಬಳಸಿ ಕೆಲಸ ಮಾಡುವುದನ್ನು ಬಿಡಬೇಕು. ಅಧಿಕಾರಶಾಹಿ ಕೂಡ ಅವುಗಳ ಮೇಲೆ ಸವಾರಿ ಮಾಡಬಾರದು. ಸ್ವಾಯತ್ತವಾಗಿ ಕೆಲಸ ಮಾಡಲು ಬಿಡಬೇಕು' ಎಂದು ಚರ್ಚೆಗೆ ಪೀಠಿಕೆ ಹಾಕಿದರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿವೃತ್ತ ನಿರ್ದೇಶಕ ವಿಶುಕುಮಾರ್.

ಇದಕ್ಕೆ ಪ್ರತಿಕ್ರಿಯಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಬಿ.ವಿ. ವಸಂತಕುಮಾರ್, 'ಅಕಾಡೆಮಿಗಳಿಗೆ ನೇಮಕವಾಗುವವರು ಪಕ್ಷದ ಕಾರ್ಯಕರ್ತರಲ್ಲ. ಅವು ರಾಜಕೀಯ ಪುನರ್ವಸತಿ ಕೇಂದ್ರಗಳೂ ಅಲ್ಲ. ಅಧ್ಯಕ್ಷ, ಸದಸ್ಯರ ಕಾರ್ಯಶಕ್ತಿಯನ್ನು ದುರ್ಬಲಗೊಳಿಸುವುದು ಕಾರ್ಯಸಾಧುವಲ್ಲ. ಅವರು ಹಾದಿ ತಪ್ಪಿದಾಗ ಸರಿದಾರಿ ತೋರಿಸುವ ಕೆಲಸ ಮಾಡಬಹುದು. ಸಂಸ್ಕೃತಿ ಕಟ್ಟುವುದು ಎಂದರೆ ಕಟ್ಟಡ ಕಟ್ಟುವುದಲ್ಲ. ಜನರ ಹೃದಯ ಸಂಸ್ಕೃತಿ ಕಟ್ಟುವ ಕೆಲಸವಾಗಬೇಕಿದೆ. ಈ ನಿಟ್ಟಿನಲ್ಲಿ ಅಧಿಕಾರಶಾಹಿಯ ಮನೋಭಾವವೂ ಬದಲಾಗಬೇಕಿದೆ' ಎಂದು ಪ್ರತಿಪಾದಿಸಿದರು.

'ಪ್ರಸ್ತುತ ಎಡ–ಬಲ ಎಂಬುದು ರಹಸ್ಯವಾಗಿ ಉಳಿದಿಲ್ಲ. ಜನರಿಂದಲೇ ಸರ್ಕಾರ ರಚನೆಯಾಗುತ್ತದೆ. ಹಾಗಾಗಿ, ಅದು ಜನರ ಶತ್ರುವಲ್ಲ. ಅಧ್ಯಕ್ಷರು, ಸದಸ್ಯರು ಅಧಿಕಾರದಿಂದ ಕೆಳಗಿಳಿದ ಬಳಿಕ ಅವರ ಕಾರ್ಯವೈಖರಿಯ ಮೌಲ್ಯಮಾಪನವಾಗಬೇಕು' ಎಂದು ಅಭಿಪ್ರಾಯಪಟ್ಟರು.

ಸರ್ಕಾರ ಬದಲಾದ ತಕ್ಷಣ ಅಕಾಡೆಮಿಗಳ ಅಧ್ಯಕ್ಷರು, ಸದಸ್ಯರನ್ನು ಬದಲಾಯಿಸುವ ಪ್ರವೃತ್ತಿ ಕೊನೆಯಾಗಬೇಕಿದೆ ಎಂಬ ಅಭಿಪ್ರಾಯ ವ್ಯಕ್ತವಾಯಿತು. ಇದಕ್ಕೆ ಪ್ರತಿಕ್ರಿಯಿಸಿದ ಕುವೆಂಪು ಭಾಷಾ ಭಾರತಿ ಅಧ್ಯಕ್ಷ ಅಜಕ್ಕಳ ಗಿರೀಶ್ ಭಟ್, 'ಸರ್ಕಾರದ ಇಂತಹ ನಡೆಯಿಂದ ಅಕಾಡೆಮಿಗಳ ಯೋಜನೆಗಳು ಅಪೂರ್ಣವಾಗುತ್ತವೆ. ಅದರ ಮೂಲ ಆಶಯವೇ ಮೂಲೆಗೆ ಸರಿಯುತ್ತದೆ' ಎಂದು ಎಚ್ಚರಿಸಿದರು.

ಪ್ರಜಾವಾಣಿ ಆಲದಮರ

ಸರ್ಕಾರ, ಅಧಿಕಾರಶಾಹಿಯ ಹಸ್ತಕ್ಷೇಪದ ಬಗ್ಗೆ ಸಾಹಿತಿ ಎಲ್.ಎನ್. ಮುಕುಂದರಾಜ್ ಆಕ್ಷೇಪ ವ್ಯಕ್ತಪಡಿಸಿದರು. 'ಪರಂಪರೆಯ ಜೊತೆಗೆ ಅನುಸಂಧಾನ ನಡೆಸುವುದು ಅಕಾಡೆಮಿಗಳ ಕೆಲಸವಾಗಬೇಕು. ಇದರಲ್ಲಿ ಅಧಿಕಾರಸ್ಥರು ಮೂಗು ತೂರಿಸಬಾರದು. ಸರ್ಕಾರದ ಸೈದ್ಧಾಂತಿಕ ನಿಲುವು ಯಾವುದೇ ಇದ್ದರೂ ಅಕಾಡೆಮಿಗಳ ಕಾರ್ಯವ್ಯಾಪ್ತಿಗೆ ಕೈಹಾಕಬಾರದು' ಎಂದು ಆಶಿಸಿದರು.

ಅಕಾಡೆಮಿಗಳಿಗೆ ಸದಸ್ಯರ ಆಯ್ಕೆಯಲ್ಲೂ ಲಿಂಗತ್ವ ಅಸಮಾನತೆ ಇರುವುದರ ಬಗ್ಗೆ ಪತ್ರಕರ್ತೆ ಪ್ರೀತಿ ನಾಗರಾಜ್ ಚಾಟಿ ಬೀಸಿದರು. ಇದಕ್ಕೆ ಅವರು ಇತ್ತೀಚೆಗೆ ಕರ್ನಾಟಕ ಮಾಧ್ಯಮ ಅಕಾಡೆಮಿಗೆ ನಡೆದ ನೇಮಕವನ್ನು ಉದಾಹರಿಸಿದರು. 'ಅಕಾಡೆಮಿಗಳು ಸಾಮಾನ್ಯರ ಧ್ವನಿಯಾಗಬೇಕಿದೆ. ಆದರೆ, ಮಹಿಳಾ ಪ್ರಾತಿನಿಧ್ಯದ ಬಗ್ಗೆ ನಿರ್ಲಕ್ಷ್ಯ ತೋರುತ್ತಿರುವುದು ಅಕ್ಷಮ್ಯ. ಇದಕ್ಕೆ ಕೊನೆ ಇಲ್ಲವೇ' ಎಂದು ಪ್ರಶ್ನಿಸಿದರು.

ಸಾಹಿತಿಗಳಾದ ಕೃಷ್ಣೇಗೌಡ ಟಿ.ಎಲ್., ಆಕೃತಿ ಗುರುಪ್ರಸಾದ್, ಡಿ.ಎಸ್. ಚೌಗಲೆ, ರೇಣುಕಾರಾಧ್ಯ, ಪಿಚ್ಚಳ್ಳಿ ಶ್ರೀನಿವಾಸ್, ಆರ್. ಜಿ. ಹಳ್ಳಿ ನಾಗರಾಜ್ ಸೇರಿದಂತೆ ಹಲವರು ಚರ್ಚೆಯಲ್ಲಿ ಪಾಲ್ಗೊಂಡಿದ್ದರು.

ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ ಅವರು ಸಾಂಸ್ಕೃತಿಕ ಕೇಂದ್ರಗಳು ರಾಜಕೀಯ ಪುನರ್ವಸತಿ ಕೇಂದ್ರಗಳಾಗುತ್ತಿರುವ ಬಗ್ಗೆ ಗಮನ ಸೆಳೆದರು. 'ಅಕಾಡೆಮಿಗಳ ಸ್ವಾಯತ್ತತೆ ಕಾಪಾಡುವಲ್ಲಿ ಜಿ.ಎಸ್. ಶಿವರುದ್ರಪ್ಪ ಅಗ್ರಪಂಕ್ತಿ ಹಾಕಿಕೊಟ್ಟಿದ್ದಾರೆ. ರಾಜಕಾರಣಿಗಳು ತಮಗೆ ಸಂಸ್ಕೃತಿ, ಭಾಷೆ ಬಗ್ಗೆ ಅಪಾರ ಜ್ಞಾನವಿದೆ ಎಂದುಕೊಂಡಿರುತ್ತಾರೆ. ಕಲ್ಚರಲ್ ಸೆಂಟರ್‌ಗಳಲ್ಲಿ ಅವರು ಸಾಂಸ್ಕೃತಿಕ ಪುನರ್ವಸತಿ ಪಡೆಯುತ್ತಾರೆ. ಇಂತಹ ಸೆಂಟರ್‌ಗಳಿಗೆ ಸಾವಿರಾರು ಕೋಟಿ ಹಣವೂ ಸಿಗುತ್ತದೆ. ಆದರೆ, ಅಕಾಡೆಮಿಗಳು ಅತ್ಯಂತ ಕಡಿಮೆ ಹಣ ಪಡೆಯುತ್ತಿವೆ' ಎಂದರು.

'ಇ-ರುಪಿ' ಎಂದರೆ...

ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಸಂಜೆ ಬಿಡುಗಡೆ ಮಾಡಲಿರುವ 'ಇ-ರುಪಿ'ಯನ್ನು ಭಾರತೀಯ ರಾಷ್ಟ್ರೀಯ ಪೇಮೆಂಟ್ಸ್ ಕಾರ್ಪೊರೇಷನ್ (ಎನ್‌ಪಿಸಿಐ) ಅಭಿವೃದ್ಧಿಪಡಿಸಿದೆ. ಎನ್‌ಪಿಸಿಐನ ಯುಪಿಐ ಪ್ಲಾಟ್‌ಫಾರಂ ಅನ್ನು ಆಧರಿಸಿ ಇದನ್ನು ಅಭಿವೃದ್ಧಿಪಡಿಸಲಾಗಿದೆ

- ಆರ್ಥಿಕ ಸೇವೆಗಳ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಸಹಯೋಗದೊಂದಿಗೆ ಇದನ್ನು ಅಭಿವೃದ್ಧಿಪಡಿಸಲಾಗಿದೆ
- ಇದೊಂದು ಡಿಜಿಟಲ್ ಪಾವತಿ ಸಲಕರಣೆಯಾಗಿದೆ. ಫಲಾನುಭವಿಗಳ ಮೊಬೈಲ್‌ಗೆ ಕ್ಯುಆರ್ ಕೋಡ್ ಅಥವಾ ಎಸ್‌ಎಂಎಸ್ ಆಧರಿತ ಇ-ವೋಚರ್ ರೂಪದಲ್ಲಿ ಇದನ್ನು ನೀಡಲಾಗುತ್ತದೆ
- ಸೇವಾದಾರರಿಗೆ ಶುಲ್ಕ ಪಾವತಿ ವೇಳೆ ಯಾವುದೇ ರೀತಿಯ ಡೆಬಿಟ್ ಕಾರ್ಡ್, ಡಿಜಿಟಲ್ ಪಾವತಿ ಅಪ್ಲಿಕೇಷನ್ ಅಥವಾ ಇಂಟರ್ನೆಟ್ ಬ್ಯಾಂಕಿಂಗ್ ಇಲ್ಲದೆಯೂ ಈ ಇ-ವೋಚರ್‌ಗಳನ್ನು ಬಳಸಬಹುದಾಗಿದೆ
- ಇದು ಪ್ರಿ-ಪೇಯ್ಡ್ ಸ್ವರೂಪದ ವೋಚರ್ ಆಗಿದೆ
- ಕೇಂದ್ರ ಸರ್ಕಾರದ ವಿವಿಧ ಕಲ್ಯಾಣ ಕಾರ್ಯಕ್ರಮಗಳನ್ನು ಒದಗಿಸಲು ಇ-ರುಪಿಯನ್ನು ಬಳಸಿಕೊಳ್ಳಬಹುದಾಗಿದೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಕಾರ್ಯಕ್ರಮಗಳಲ್ಲಿ, ಕ್ಷಯ ನಿರ್ಮೂಲನೆ ಕಾರ್ಯಕ್ರಮ, ಆಯುಷ್ಮಾನ್ ಕಾರ್ಯಕ್ರಮ, ರಸಗೊಬ್ಬರಗಳ ಸಹಾಯಧನಗಳಲ್ಲಿ ಈ ಇ-ವೋಚರ್ ಅನ್ನು ಬಳಸಬಹುದಾಗಿದೆ
- ಇ-ರುಪಿಯನ್ನು ಈ ಯೋಜನೆಗಳಲ್ಲಿ ಹೇಗೆ ಬಳಸಬಹುದು ಎಂಬುದರ ಮಾಹಿತಿಯನ್ನು ಸರ್ಕಾರವು ಇನ್ನಷ್ಟೇ ನೀಡಬೇಕಿದೆ

ಆಧಾರ: ಪಿಐಬಿ

ಮುಂದಿನ ವರ್ಷ ಉತ್ತರ ಪ್ರದೇಶ ವಿಧಾನಸಭೆಗೆ ಚುನಾವಣೆ: ಶಾ ಸುಳಿವು

'ಹಿಂದುತ್ವವೇ ಪ್ರಧಾನ ಕಾರ್ಯಸೂಚಿ'

ಪ್ರಜಾವಾಣಿ ವಾರ್ತೆ

ಲಖನೌ: ಮುಂದಿನ ವರ್ಷ ಉತ್ತರ ಪ್ರದೇಶ ವಿಧಾನಸಭೆಗೆ ನಡೆಯಲಿರುವ ಚುನಾವಣೆಯಲ್ಲಿ ಹಿಂದುತ್ವವೇ ಪಕ್ಷದ ಪ್ರಧಾನ ಕಾರ್ಯಸೂಚಿಯಾಗಿರಲಿದೆ ಎಂಬ ಸುಳಿವನ್ನು ಕೇಂದ್ರ ಗೃಹ ಸಚಿವ ಹಾಗೂ ಬಿಜೆಪಿಯ ಮಾಜಿ ಅಧ್ಯಕ್ಷ ಅಮಿತ್ ಶಾ ಭಾನುವಾರ ನೀಡಿದ್ದಾರೆ.

ಲಖನೌದಲ್ಲಿ ಇನ್‌ಸ್ಟಿಟ್ಯೂಟ್ ಆಫ್ ಫೋರೆನ್ಸಿಕ್ ಸೈನ್ಸ್, ಮಿರ್ಜಾಪುರದಲ್ಲಿ ವಿಂಧ್ಯವಾಸಿನಿ ಕಾರಿಡಾರ್‌ಗೆ ಶಿಲಾನ್ಯಾಸ ನೆರವೇರಿಸಿದ ನಂತರ ನಡೆದ ಕಾರ್ಯಕ್ರಮಗಳಲ್ಲಿನ ಅವರ ಭಾಷಣದಲ್ಲಿ, ರಾಜ್ಯದ ಪ್ರಮುಖ ಧಾರ್ಮಿಕ ತಾಣಗಳ ಅಭಿವೃದ್ಧಿಗೆ ಬಿಜೆಪಿ ಸರ್ಕಾರ ಕೈಗೊಂಡ ಕ್ರಮಗಳನ್ನೇ ಪ್ರಸ್ತಾಪಿಸಿದ್ದು ಈ ಮಾತಿಗೆ ಪುಷ್ಟಿ ನೀಡುವಂತಿತ್ತು.

'ರಾಮ ಮಂದಿರಕ್ಕೆ ಸಂಬಂಧಿಸಿ, ಬಿಜೆಪಿ ತಾನು ನೀಡಿದ್ದ ಭರವಸೆಯನ್ನು ಈಡೇರಿಸಿದೆ. ಅಯೋಧ್ಯೆಯಲ್ಲಿ ಶೀಘ್ರವೇ ಭವ್ಯ ರಾಮಮಂದಿರ ನಿರ್ಮಾಣವಾಗಲಿದೆ. ಈ ಉದ್ದೇಶಕ್ಕಾಗಿ ಕಳೆದ 500 ವರ್ಷಗಳಿಂದ ನಾವು ಹೋರಾಟ ಮಾಡುತ್ತಿದ್ದೆವು' ಎಂದು ಮಿರ್ಜಾಪುರದಲ್ಲಿ ಹೇಳಿದರು.



ಅಮಿತ್ ಶಾ

'ಕೃಷ್ಣನ ಆರಾಧಕರಿಗೆ ಪವಿತ್ರ ಸ್ಥಳವಾದ ಬ್ರಿಜಭೂಮಿ, ರಾಮ ಚಿತ್ರಕೂಟದಲ್ಲಿ ಹಲವು ವರ್ಷಗಳನ್ನು ಕಳೆದಿದ್ದು, ಇದರ ಅಭಿವೃದ್ಧಿಗೆ ಹಿಂದಿನ ಸರ್ಕಾರಗಳು ಏಕೆ ಕ್ರಮಕೈಗೊಳ್ಳಲಿಲ್ಲ' ಎಂದೂ ಅವರು ಪ್ರಶ್ನಿಸಿದರು.

'ಹಿಂದಿನ ಸರ್ಕಾರಗಳು ಮತಬ್ಯಾಂಕ್ ರಾಜಕಾರಣವನ್ನೇ ಮಾಡಿದವು ಹೊರತಾಗಿ, ಹಿಂದೂ ಧಾರ್ಮಿಕ ತಾಣಗಳತ್ತ ಗಮನ ಹರಿಸಲಿಲ್ಲ' ಎಂದು ಅವರು ಹೇಳಿದರು.

'ಕಾನೂನು ಸುವ್ಯವಸ್ಥೆ: ಉತ್ತರ ಪ್ರದೇಶ ನಂ. 1'

ಲಖನೌ (ಪಿಟಿಐ): 'ಕಾನೂನು ಮತ್ತು ಸುವ್ಯವಸ್ಥೆ ರಕ್ಷಣೆಯ ದೃಷ್ಟಿಯಿಂದ ಉತ್ತರ ಪ್ರದೇಶವು ದೇಶದಲ್ಲಿಯೇ ಉನ್ನತ ಸ್ಥಾನದಲ್ಲಿದೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಶ್ಲಾಘಿಸಿದ್ದಾರೆ. ಉತ್ತರ ಪ್ರದೇಶವು 2022ರಲ್ಲಿ ಸಾರ್ವತ್ರಿಕ ಚುನಾವಣೆಗೆ ಸಜ್ಜಾಗುತ್ತಿರುವ ಹೊತ್ತಿನಲ್ಲಿಯೇ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರಿಗೆ ಈ ಶ್ಲಾಘನೆ ವ್ಯಕ್ತವಾಗಿದೆ. 'ಬಿಜೆಪಿ ಸರ್ಕಾರಗಳು ಕಡುಬಡವರ ಅಭಿವೃದ್ಧಿಗಾಗಿ ಕೆಲಸ ಮಾಡುತ್ತಿವೆ' ಎಂದರು.

'2019ರ ಹಿಂದಿನ ಆರು ವರ್ಷಗಳಲ್ಲಿಯೂ ಉತ್ತರಪ್ರದೇಶಕ್ಕೆ ಸಾಕಷ್ಟು ಬಾರಿ ಬಂದಿದ್ದೇನೆ. ಆಗಿನ ಸ್ಥಿತಿಯೂ ಗೊತ್ತಿದೆ. ಆಗ ರಾಜ್ಯದ ಪಶ್ಚಿಮ ಭಾಗದಲ್ಲಿ ಭೀತಿಯ ವಾತಾವರಣವಿದ್ದು, ಜನರು ವಲಸೆ ಹೋಗುತ್ತಿದ್ದರು. ಮಹಿಳೆಯರಿಗೆ ಸುರಕ್ಷತೆ ಇರಲಿಲ್ಲ. ಭೂಮಾಫಿಯಾದ ಪ್ರಾಬಲ್ಯವಿತ್ತು. ಹಾಡಹಗಲೇ ಗುಂಡಿನ ದಾಳಿ, ಹಿಂಸಾಚಾರ ಘಟನೆಗಳು ನಡೆಯುತ್ತಿದ್ದವು' ಎಂದರು.

'2017ರಲ್ಲಿ ಬಿಜೆಪಿಯು ಉತ್ತರ ಪ್ರದೇಶ ಅಭಿವೃದ್ಧಿಯ ಭರವಸೆ ನೀಡಿತ್ತು. ಈಗ ಕಾನೂನು ಮತ್ತು ಸುವ್ಯವಸ್ಥೆಯ ದೃಷ್ಟಿಯಿಂದ ಯೋಗಿ ಆದಿತ್ಯನಾಥ ಮತ್ತು ಅವರ ತಂಡ ಕೈಗೊಂಡ ಕ್ರಮಗಳ ಬಗ್ಗೆ ನನಗೆ ಹೆಮ್ಮೆಯಿದೆ' ಎಂದು ಹೇಳಿದರು.

ಸಂಸತ್ತಿನ ಹೊರಗೆ ಮೀಸಲಾತಿ ಘೋಷಣೆ: ಪ್ರಧಾನಿ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ನವದೆಹಲಿ: ವೈದ್ಯಕೀಯ ಕೋರ್ಸ್‌ಗಳ ಅಖಿಲ ಭಾರತ ಕೋಟಾದಲ್ಲಿ ಮೀಸಲಾತಿ ನೀಡುವಂತಹ ನೀತಿ ನಿರ್ಧಾರವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಘೋಷಿಸಿದ್ದಾರೆ. ಸಂಸತ್ ಅಧಿವೇಶನ ನಡೆಯುತ್ತಿರುವ ಸಂದರ್ಭದಲ್ಲಿ ಈ ನಿರ್ಧಾರವನ್ನು ಸಂಸತ್ತಿನ ಹೊರಗೆ ಪ್ರಕಟಿಸಿರುವುದು ಸರಿಯಲ್ಲ ಎಂದು ಆರ್‌ಎಸ್‌ಪಿ ಸಂಸದ ಎನ್.ಕೆ. ಪ್ರೇಮಚಂದ್ರನ್ ಅವರು ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರಿಗೆ ದೂರು ನೀಡಿದ್ದಾರೆ.

ಮೋದಿ ಅವರ ಈ ನಡೆ ಸಂಸತ್ತಿಗೆ ಮತ್ತು ಹಲವಾರು ದಶಕಗಳಿಂದ ಪಾಲಿಸಿಕೊಂಡು ಬಂದಿರುವ ಸಂಸತ್ತಿನ ಶಿಷ್ಟಾಚಾರಕ್ಕೆ ಅಗೌರವ ತೋರಿದಂತಿದೆ. ಹಾಗಾಗಿ ಅವರ ವಿರುದ್ಧ ಕ್ರಮ ಜರುಗಿಸಬೇಕು ಎಂದು ಅವರು ದೂರಿನಲ್ಲಿ ಕೋರಲಾಗಿದೆ.

ಸಂಸತ್ತು ಮತ್ತು ಅದರ ಪರಂಪರೆಗೆ ಪ್ರತಿಯೊಬ್ಬರೂ ಗೌರವ ಸಲ್ಲಿಸಬೇಕು. ಯಾರು ಸಂಸತ್ತಿನ ವಿಚಾರದಲ್ಲಿ ಅಶಿಸ್ತಿನ ನಡುವಳಿಕೆಯನ್ನು ತೋರುತ್ತಾರೊ ಅವರನ್ನು ಗುರುತಿಸಿ ಕ್ರಮ ಜರುಗಿಸಬೇಕು ಎಂದಿದ್ದಾರೆ. ವೈದ್ಯಕೀಯ, ದಂತ ವೈದ್ಯಕೀಯದ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳಲ್ಲಿ ಇತರ ಹಿಂದುಳಿದ ವರ್ಗಗಳಿಗೆ (ಒಬಿಸಿ) ಶೇ 27ರಷ್ಟು ಮತ್ತು ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ (ಎಡಬ್ಲ್ಯುಎಸ್) ಶೇ 10ರಷ್ಟು ಮೀಸಲಾತಿಯನ್ನು ಪ್ರಧಾನಿ ಟ್ವಿಟರ್‌ನಲ್ಲಿ ಕಳೆದ ವಾರ ಪ್ರಕಟಿಸಿದ್ದರು.

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಗಿರಣಿಗಳಿಂದಲೇ ಎಂಎಸ್‌ಪಿ ಭತ್ತ ನಾಪತ್ತೆ!

ಒಂದನೇ ಪುಟದಿಂದ

ಬೆಂಬಲ ಬೆಲೆ ಖರೀದಿ ಕೇಂದ್ರವಾಗಿ ಕಾರ್ಯನಿರ್ವಹಿಸಿದ್ದ ಪಾಂಡವಪುರದ ಎಂ.ಆರ್. ರೈಸ್ ಮಿಲ್ 2020ರ ಡಿಸೆಂಬರ್ 1ರಿಂದ 2021ರ ಮಾರ್ಚ್ 31ರವರೆಗೆ 30,562 ಕ್ವಿಂಟಲ್ ಭತ್ತವನ್ನು ರೈತರಿಂದ ಖರೀದಿಸಿತ್ತು. ಈ ಬಾಬ್ತು 818 ರೈತರಿಗೆ ಬೆಂಬಲ ಬೆಲೆ ಯೋಜನೆಯಡಿ ₹ 5.76 ಕೋಟಿ ಹಣ ಪಾವತಿಸಲಾಗಿತ್ತು.

8,277 ಕ್ವಿಂಟಲ್ ಭತ್ತದ ಬಾಬ್ತು ಅಕ್ಕಿಯನ್ನು ಎಂ.ಆರ್. ರೈಸ್ ಮಿಲ್ ಪೂರೈಸಿದೆ. ಉಳಿದ 22,285 ಕ್ವಿಂಟಲ್ ಭತ್ತವನ್ನು ಗಿರಣಿಯ ಮಾಲೀಕರ ಕುಟುಂಬದವರು ಕದ್ದು ಮಾರಾಟ ಮಾಡಿರುವುದು ಜೂನ್ 27ರಂದು ಆಹಾರ ಇಲಾಖೆಯ ಅಧಿಕಾರಿಗಳು ಜಂಟಿ ತಪಾಸಣೆ ನಡೆಸಿದಾಗ ಪತ್ತೆಯಾಗಿದೆ.

ಗಿರಣಿ ಮಾಲೀಕರಾದ ಝುರೀನ್ ತಾಜ್ ಮತ್ತು ಇತರ ನಾಲ್ವರ ವಿರುದ್ಧ ಜೂನ್ 30ರಂದು ಎಫ್‌ಐಆರ್ ದಾಖಲಿಸಲಾಗಿದೆ.

ಪಡಿತರ ಅಕ್ಕಿ ಪತ್ತೆ: ಪಡಿತರ ಧಾನ್ಯ ಕಳ್ಳಸಾಗಣೆ ತಡೆಗೆ ಆಹಾರ ಇಲಾಖೆ ನೇಮಿಸಿರುವ ರಾಜ್ಯ ಮಟ್ಟದ ತನಿಖಾ ದಳದ ಮುಖ್ಯಸ್ಥರಾದ ಇಲಾಖೆಯ ಜಂಟಿ ನಿರ್ದೇಶಕ ಡಾ.ಕೆ. ರಾಮೇಶ್ವರಪ್ಪ ನೇತೃತ್ವದ ತಂಡ ಜುಲೈ 18ರಂದು ಮೈಸೂರು ಜಿಲ್ಲೆಯ ಟಿ. ನರಸೀಪುರದ ವೀರಭದ್ರೇಶ್ವರ ರೈಸ್ ಮಿಲ್‌ಗೆ ಭೇಟಿನೀಡಿ ತಪಾಸಣೆ ನಡೆಸಿದೆ. ಎಂಎಸ್‌ಪಿ ಅಡಿಯಲ್ಲಿ ಖರೀದಿಸಿದ್ದ ಭತ್ತವನ್ನು ಹಲ್ಲಿಂಗ್‌ಗಾಗಿ ದಾಸ್ತಾನು ಮಾಡಿರುವ ಈ ಮಿಲ್‌ನಲ್ಲಿ 643.71 ಕ್ವಿಂಟಲ್‌ನಷ್ಟು ಪಡಿತರ ಅಕ್ಕಿ ಪತ್ತೆಯಾಗಿದೆ.

ಎಂಎಸ್‌ಪಿ ಭತ್ತ ಹಲ್ಲಿಂಗ್ ಮಾಡಿ ಪರಿವರ್ತಿತ ಅಕ್ಕಿ ನೀಡುವ ಬದಲಿಗೆ ಅನ್ನಭಾಗ್ಯ ಅಕ್ಕಿಯನ್ನೇ ಕಾಳಸಂತೆಯ ಮೂಲಕ ಖರೀದಿಸಿ ಪುನಃ ಪಡಿತರ ಚೀಟಿದಾರರಿಗೆ ವಿತರಿಸಲು ಹುನ್ನಾರ ನಡೆಸಿರುವ ಆರೋಪದಡಿ ಅಕ್ಕಿ ಗಿರಣಿ ಮಾಲೀಕ ವಿಜಯಶಂಕರ್ ಎಚ್.ಎನ್. ವಿರುದ್ಧ ಟಿ. ನರಸೀಪುರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ.

ರಾಜ್ಯದಲ್ಲಿ ಎಂಎಸ್‌ಪಿ ಅಡಿಯಲ್ಲಿ 2.06 ಲಕ್ಷ ಟನ್ ಭತ್ತ ಖರೀದಿಸಲಾಗಿತ್ತು. ಅಕ್ಕಿ ಗಿರಣಿಗಳಿಂದಲೇ ಭತ್ತ ಮತ್ತು ಅಕ್ಕಿಯ ಕಳ್ಳಸಾಗಣೆ ಕುರಿತು ತನಿಖಾ ದಳಕ್ಕೆ ದೂರುಗಳು ಬರುತ್ತಿದ್ದು, ರಾಜ್ಯದಾದ್ಯಂತ ತಪಾಸಣೆಗೆ ನಿರ್ಧರಿಸಲಾಗಿದೆ ಎಂದು ಆಹಾರ ಇಲಾಖೆಯ ಮೂಲಗಳು ತಿಳಿಸಿವೆ.

ಪೌಷ್ಟಿಕ ಆಹಾರ ಸೇವಿಸಿ

ಹಳಿಗೆ ಮರಳಿದ ತೆರಿಗೆ ವರಮಾನ ಸಂಗ್ರಹ

ಜಿಎಸ್‌ಟಿ: ಜುಲೈನಲ್ಲಿ ₹ 1.16 ಲಕ್ಷ ಕೋಟಿ ಸಂಗ್ರಹ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮೂಲಕ ಜುಲೈನಲ್ಲಿ ₹ 1.16 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿದೆ. 2020ರ ಜುಲೈನಲ್ಲಿ ಸಂಗ್ರಹ ಆಗಿದ್ದ ಮೊತ್ತಕ್ಕೆ ಹೋಲಿಸಿದರೆ ಶೇಕಡ 33ರಷ್ಟು ಏರಿಕೆ ಆಗಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಇದು ಎರಡನೇ ಅತಿ ಹೆಚ್ಚಿನ ವರಮಾನ ಸಂಗ್ರಹ. ಏಪ್ರಿಲ್‌ನಲ್ಲಿ ದಾಖಲೆಯ ₹ 1.41 ಲಕ್ಷ ಕೋಟಿ ತೆರಿಗೆ ಸಂಗ್ರಹ ಆಗಿತ್ತು.

ಆರ್ಥಿಕ ವ್ಯವಸ್ಥೆಯು ಅತ್ಯಂತ ವೇಗವಾಗಿ ಚೇತರಿಕೆ ಕಾಣುತ್ತಿದೆ ಎನ್ನುವುದನ್ನು ಜುಲೈ ತಿಂಗಳ ತೆರಿಗೆ ಸಂಗ್ರಹ ಪ್ರಮಾಣವು ಸೂಚಿಸುತ್ತಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯವು ಭಾನುವಾರ ಹೇಳಿದೆ.

2020ರ ಜುಲೈನಲ್ಲಿ ₹ 87,422 ಕೋಟಿ ಸಂಗ್ರಹ ಆಗಿತ್ತು. 2021ರ ಜೂನ್‌ನಲ್ಲಿ ಆಗಿದ್ದ ತೆರಿಗೆ ಸಂಗ್ರಹವು ₹ 92,849 ಕೋಟಿ.

ಈ ವರ್ಷದ ಜುಲೈನಲ್ಲಿ ಸಂಗ್ರಹ ಆಗಿರುವ ಒಟ್ಟಾರೆ ಮೊತ್ತದಲ್ಲಿ ಕೇಂದ್ರ ಜಿಎಸ್‌ಟಿ ₹ 22,197 ಕೋಟಿ, ರಾಜ್ಯ ಜಿಎಸ್‌ಟಿ ₹ 28,541 ಕೋಟಿ, ಸಮಗ್ರ ಜಿಎಸ್‌ಟಿ ₹ 57,864 ಕೋಟಿ ಹಾಗೂ ಸೆಸ್ ₹ 7,790 ಕೋಟಿಗಳಷ್ಟಿದೆ.

ಮೇ ತಿಂಗಳವರೆಗೂ ನಿರಂತರ ಎಂಟು ತಿಂಗಳಿನಿಂದ ಜಿಎಸ್‌ಟಿ ಸಂಗ್ರಹವು ₹ 1 ಲಕ್ಷ ಕೋಟಿಯ ಗಡಿಯನ್ನು ದಾಟಿತ್ತು. ಜೂನ್‌ನಲ್ಲಿ ₹ 1 ಲಕ್ಷ ಕೋಟಿಗಿಂತಲೂ ಕಡಿಮೆ ಆಗಿತ್ತು. ಜೂನ್‌ನಲ್ಲಿ ಸಂಗ್ರಹ ಆಗಿರುವ ವರಮಾನವು ಮೇ ತಿಂಗಳಿನಲ್ಲಿ ಆಗಿರುವ ವಾಣಿಜ್ಯ–ವಹಿವಾಟುಗಳಿಗೆ ಸಂಬಂಧಿಸಿದ್ದಾಗಿದೆ. ಕೋವಿಡ್‌ನಿಂದಾಗಿ ಬಹುತೇಕ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು ಮೇ ತಿಂಗಳಿನಲ್ಲಿ ಸಂಪೂರ್ಣ ಅಥವಾ ಭಾಗಶಃ ಲಾಕ್‌ಡೌನ್ ಹೇರಿದ್ದವು. ಈ ಕಾರಣದಿಂದಾಗಿ ಜೂನ್‌ನ ವರಮಾನದಲ್ಲಿ ಇಳಿಕೆ ಆಗಿತ್ತು ಎಂದು ಸಚಿವಾಲಯವು ಹೇಳಿದೆ.

ಜೂನ್‌ನಲ್ಲಿ ಲಾಕ್‌ಡೌನ್ ನಿರ್ಬಂಧಗಳು ಸಡಿಲ ಆಗಿದ್ದರಿಂದ ಜುಲೈನಲ್ಲಿ ಜಿಎಸ್‌ಟಿ ಸಂಗ್ರಹವು ಮತ್ತೆ ₹ 1 ಲಕ್ಷ ಕೋಟಿಯ ಗಡಿಯನ್ನು ದಾಟಿದೆ. ಮುಂಬರುವ ತಿಂಗಳುಗಳಲ್ಲಿಯೂ ಇದೇ ರೀತಿಯಲ್ಲಿ ತೆರಿಗೆ ಸಂಗ್ರಹ ಆಗುವ ನಿರೀಕ್ಷೆ ಇದೆ ಎಂದು ಸಚಿವಾಲಯದ ಪ್ರಕಟಣೆ ತಿಳಿಸಿದೆ.

'ತೆರಿಗೆ ಸಂಗ್ರಹಗಳಲ್ಲಿನ ಹೆಚ್ಚಳವು ಜೂನ್‌ನಲ್ಲಿ ಆರ್ಥಿಕ ಚಟುವಟಿಕೆಗಳು ಪುನರಾರಂಭ ಆಗಿರುವುದನ್ನು ಸೂಚಿಸುತ್ತಿದೆ. ಮುಂಬರುವ ತಿಂಗಳುಗಳಲ್ಲಿ ಇನ್ನೂ ಹೆಚ್ಚಿನ ತೆರಿಗೆ ಸಂಗ್ರಹದ ನಿರೀಕ್ಷೆಯನ್ನು ಮೂಡಿಸಿದೆ' ಎಂದು ಡೆಲಾಯ್ಟ್ ಇಂಡಿಯಾದ ಹಿರಿಯ ನಿರ್ದೇಶಕ ಎಂ.ಎಸ್. ಮಣಿ ಹೇಳಿದ್ದಾರೆ.

ದೇಶವು ಕೋವಿಡ್‌ನ ಮೂರನೇ ಅಲೆಯನ್ನು ತಡೆಯಲು ಸಾಧ್ಯವಾದರೆ, ಜಿಎಸ್‌ಟಿ ಸಂಗ್ರಹ ಇನ್ನಷ್ಟು ಹೆಚ್ಚಾಗಲಿದೆ ಎಂದು ಶಾರ್ದೂಲ್ ಅಮರ್‌ಚಂದ್ ಮಂಗಲ್ ದಾಸ್ ಆ್ಯಂಡ್ ಕಂಪನಿಯ ಪಾಲುದಾರ ರಜತ್ ಬೋಸ್ ಹೇಳಿದ್ದಾರೆ.

ಜಿಎಸ್‌ಟಿ ಸಂಗ್ರಹದ ವಿವರ (ಕೋಟಿಗಳಲ್ಲಿ)



'ಎಂಎಫ್' ಹೂಡಿಕೆ ನಿಜಕ್ಕೂ ಅಗತ್ಯವೇ?

ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

'ನಿಶ್ಚಿತ ಠೇವಣಿ (ಎಫ್.ಡಿ.), ಪಿಪಿಎಫ್, ಇಪಿಎಫ್, ರಾಷ್ಟ್ರೀಯ ಉಳಿತಾಯ ಪ್ರಮಾಣಪತ್ರ (ಎನ್‌ಎಸ್‌ಸಿ), ಮನಿ ಬ್ಯಾಕ್ ವಿಮಾ ಪಾಲಿಸಿಗಳಲ್ಲಿ ಹಣ ತೊಡಗಿಸಿದ್ದೇನೆ. ಹೀಗಿದ್ದರೂ, ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವುದು ಅಗತ್ಯವೇ' ಎಂದು ಸ್ನೇಹಿತರೊಬ್ಬರು ಪ್ರಶ್ನಿಸಿದರು. ಈ ಗೊಂದಲ ಅವರದ್ದಷ್ಟೇ ಅಲ್ಲ. ಬಹಳಷ್ಟು ಜನರಿಗೆ ಹೂಡಿಕೆ ಮಾಡುವಾಗ ಈ ಪ್ರಶ್ನೆ ಎದುರಾಗುತ್ತದೆ. ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ನಿಜಕ್ಕೂ ಅಗತ್ಯವೇ ಎನ್ನುವ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಪ್ರಯತ್ನ ಮಾಡೋಣ.

ಬೆಲೆ ಏರಿಕೆ ಮತ್ತು ಮ್ಯೂಚುವಲ್ ಫಂಡ್: ಮೊನ್ನೆ ಮೊನ್ನೆವರೆಗೆ ₹ 80ರ ಆಸುಪಾಸಿನಲ್ಲಿದ್ದ ಪೆಟ್ರೋಲ್ ಬೆಲೆ ಈಗ ₹ 100ರ ಗಡಿ ದಾಟಿ ಮುನ್ನುಗ್ಗುತ್ತಿದೆ. ₹ 75ರ ಸಮೀಪದಲ್ಲಿದ್ದ ಅಡುಗೆ ಎಣ್ಣೆಯ ಬೆಲೆ ₹ 175ಕ್ಕೆ ಏರಿಕೆಯಾಗಿದೆ. ಅಂದರೆ ಅಗತ್ಯ ವಸ್ತುಗಳ ಬೆಲೆ ನಿರಂತರವಾಗಿ ಏರಿಕೆಯಾಗುತ್ತಿದೆ. ಆದರೆ ಬೆಲೆ ಏರಿಕೆಗೆ ಅನುಗುಣವಾಗಿ ನಿಮ್ಮ ಹೂಡಿಕೆಗಳು ಲಾಭ ತಂದುಕೊಡುತ್ತಿಲ್ಲ. ಎಫ್.ಡಿ.ಯಲ್ಲಿ ಹೂಡಿಕೆ ಮಾಡಿದರೆ ಹೆಚ್ಚೆಂದರೆ ಶೇಕಡ 6ರಿಂದ ಶೇ 7ರಷ್ಟು ಬಡ್ಡಿ ಲಾಭ ಸಿಗುತ್ತಿದೆ. ಪಿಪಿಎಫ್‌ನಲ್ಲಿ ಹೂಡಿಕೆ ಮಾಡಿದರೆ ಗರಿಷ್ಠ ಶೇ 8ರಷ್ಟು ಲಾಭ (ಚಕ್ರಬಡ್ಡಿ ಸೇರಿ) ಲಭಿಸುತ್ತಿದೆ.

ಇನ್ನು ರಿಯಲ್ ಎಸ್ಟೇಟ್‌ನಲ್ಲಿ ಹೂಡಿಕೆ ಮಾಡಬೇಕು ಅಂದರೆ ದೊಡ್ಡ ಮೊತ್ತದ ಬಂಡವಾಳ ಹೊಂದಿಸುವ ಜೊತೆಗೆ ನೋಂದಣಿ ಖರ್ಚು, ದಲ್ಲಾಳಿ ಕಮಿಷನ್ ಭರಿಸಬೇಕು, ಆಸ್ತಿ ಮಾರಾಟ ಮಾಡುವಾಗ ಬಂಡವಾಳ ವೃದ್ಧಿ ತೆರಿಗೆ ಕಟ್ಟಬೇಕು. ಚಿನ್ನದ ಮೇಲೆ ಹೂಡಿಕೆ ಅಂದರೆ ಮೇಕಿಂಗ್ ಚಾರ್ಜಸ್‌ನ ಹೊರೆ ಹೊರಬೇಕು. ಮನಿ ಬ್ಯಾಕ್ ವಿಮಾ ಪಾಲಿಸಿಗಳಲ್ಲಿ ದೀರ್ಘಾವಧಿಯಲ್ಲಿ ಸಿಗುವ ಲಾಭ ಶೇ 3ರಿಂದ ಶೇ 4 ಮಾತ್ರ. ಇಷ್ಟೆಲ್ಲ ಮಿತಿಗಳಿರುವಾಗ ಸರಳವಾಗಿರುವ, ಮೇಲಿನ ಎಲ್ಲಾ ಹೂಡಿಕೆಗಳಿಗಿಂತಲೂ ಹೆಚ್ಚು ಲಾಭ ತಂದುಕೊಡುವ ಸಾಮರ್ಥ್ಯವಿರುವ ಹೂಡಿಕೆ ಯಾವುದು ಅಂದರೆ ಅದು ಮ್ಯೂಚುವಲ್ ಫಂಡ್. ದೀರ್ಘಾವಧಿಯಲ್ಲಿ ಲಾರ್ಜ್ ಕ್ಯಾಪ್ ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಿಗೆ ಶೇ 12ರಿಂದ ಶೇ 13ರಷ್ಟು ಲಾಭ ತಂದುಕೊಡುವ ಸಾಮರ್ಥ್ಯವಿದೆ. ಆದರೆ ನೆನಪಿಡಿ, ಇಲ್ಲಿ ಪಿಪಿಎಫ್, ಇಪಿಎಫ್, ಎಫ್.ಡಿ.ಗಳಲ್ಲಿ ಸಿಗುವಂತೆ ಇಂತಿಷ್ಟೇ ಲಾಭ ಸಿಗುತ್ತದೆ ಎನ್ನುವ ಖಾತರಿಯಿಲ್ಲ. ಮ್ಯೂಚುವಲ್ ಫಂಡ್ ಮೇಲಿನ ಹೂಡಿಕೆಗಳು ಮಾರುಕಟ್ಟೆ ರಿಸ್ಕ್ ಒಳಗೊಂಡಿರುತ್ತವೆ.

10.26 ಕೋಟಿ ಖಾತೆಗಳು: ನಿಮಗೆ ಗೊತ್ತಾ? ಭಾರತದಲ್ಲಿ ಈವರೆಗೆ ಸುಮಾರು 10.26 ಕೋಟಿ ಮ್ಯೂಚುವಲ್ ಫಂಡ್ ಖಾತೆಗಳಲ್ಲಿ ಹಣ ಹೂಡಿಕೆ ಆಗಿದೆ. 2020-21ರಲ್ಲಿ 81 ಲಕ್ಷ ಖಾತೆಗಳು ಮ್ಯೂಚುವಲ್ ಫಂಡ್ ಜಗತ್ತಿಗೆ ಸೇರಿಕೊಂಡಿವೆ. 2021-22ನೇ ಸಾಲಿನಲ್ಲಿ ಈ ಸಂಖ್ಯೆ ಮತ್ತಷ್ಟು ಏರಿಕೆಯಾಗುವ ನಿರೀಕ್ಷೆಯಿದೆ. ಅಂದರೆ ಮ್ಯೂಚುವಲ್ ಫಂಡ್ ಹೂಡಿಕೆಗಳು ಇತ್ತೀಚೆಗೆ ಎಷ್ಟು ವೇಗವಾಗಿ ಬೆಳೆಯುತ್ತಿವೆ ಎಂದು ಅಂದಾಜು ಮಾಡಿಕೊಳ್ಳಿ.

ಅಗತ್ಯಕ್ಕೆ ತಕ್ಕಂತಹ ಹೂಡಿಕೆ: ಬೇರೆ ಹೂಡಿಕೆಗಳು ಪ್ಲೇಟ್ ಮೀಲ್ಸ್ ತರಹ, ಅವರು ಏನು ಬಡಿಸುತ್ತಾರೋ ಅದನ್ನು ಉಣ್ಣಬೇಕು. ಮ್ಯೂಚುವಲ್ ಫಂಡ್ ಒಂದು ರೀತಿ ಬಫೆ ತರಹ. ನಿಮಗೆ ಏನು ಬೇಕೋ ಅದನ್ನು ಆಯ್ಕೆ ಮಾಡಿಕೊಳ್ಳಬಹುದು. ಹೌದು, ನಿಮ್ಮ ಹಣಕಾಸಿನ ಅಗತ್ಯಕ್ಕೆ ತಕ್ಕಂತೆ ಹಲವಾರು ಹೂಡಿಕೆ ಆಯ್ಕೆಗಳು ಇಲ್ಲಿವೆ. ನಿಮಗೆ ಬೇಕಾದಾಗ ಹಣ ಸಿಗುವಂತಿರಬೇಕು ಅಂದರೆ ಲಿಕ್ವಿಡ್ ಫಂಡ್ ಹೂಡಿಕೆ ಸೂಕ್ತ. 6–8 ತಿಂಗಳ ಅವಧಿಯಲ್ಲಿ ಹೂಡಿಕೆ ಮೊತ್ತ ಬೇಕಾಗಬಹುದು ಅಂದರೆ ಅಲ್ಟ್ರಾ ಶಾರ್ಟ್ ಟರ್ಮ್ ಡೆಟ್ ಫಂಡ್ ಪರಿಗಣಿಸಬಹುದು. 3-5 ವರ್ಷಗಳಲ್ಲಿ ಹಣ ಬೇಕಾಗಿದ್ದರೆ ಕನ್ಸರ್ವೇಟಿವ್ ಬ್ಯಾಲೆನ್ಸ್ಡ್ ಫಂಡ್ ಸರಿ ಹೊಂದುತ್ತದೆ. ನಿವೃತ್ತಿಗಾಗಿ ಹೂಡಿಕೆ ಮಾಡುತ್ತೀರಿ ಎಂದಾದರೆ, ಈಕ್ವಿಟಿ ಮ್ಯೂಚುವಲ್ ಫಂಡ್ ಆಯ್ದುಕೊಳ್ಳಬಹುದು.

ಹಲವು ಅನುಕೂಲಗಳು: ಮ್ಯೂಚುವಲ್ ಫಂಡ್‌ಗಳನ್ನು ವೃತ್ತಿಪರ ಫಂಡ್ ಮ್ಯಾನೇಜರ್ ನಿರ್ವಹಿಸುತ್ತಾರೆ. ಹಾಗಾಗಿ ಮಾರುಕಟ್ಟೆಯ ಏರಿಳಿತಗಳ ಬಗ್ಗೆ ನೀವು ತಲೆಕೆಡಿಸಿಕೊಳ್ಳಬೇಕಿಲ್ಲ. ಕೆಲವು ಫಂಡ್‌ಗಳನ್ನು ಹೊರತುಪಡಿಸಿದರೆ, ಬಹಳಷ್ಟು ಫಂಡ್‌ಗಳಲ್ಲಿ ಲಾಕ್ ಇನ್ ಪಿರಿಯಡ್ (ಹಣ ಹಿಂದಕ್ಕೆ ಪಡೆಯಲು ನಿರ್ಬಂಧ ಇರುವ ಅವಧಿ) ಇಲ್ಲದಿರುವುದರಿಂದ ಬೇಕಾದಾಗ ಹಣ ಪಡೆಯಬಹುದು. ಫಂಡ್ ಮ್ಯಾನೇಜರ್ ನಿಮ್ಮ ಹಣವನ್ನು ಹತ್ತಾರು ಕಂಪನಿಗಳಲ್ಲಿ ತೊಡಗಿಸುವ ಕಾರಣ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ವೈವಿಧ್ಯ ಸಾಧ್ಯವಿದೆ.

ವಿಮೆ ಹೂಡಿಕೆಗಳಲ್ಲಿ ಶೇ 30ರಿಂದ ಶೇ 40ರಷ್ಟು ಕಮಿಷನ್ ಇರುತ್ತದೆ. ಎಫ್.ಡಿ.ಯನ್ನು ಅವಧಿಗೆ ಮೊದಲೇ ತೆಗೆದರೆ ಶುಲ್ಕ ಹಾಕುತ್ತಾರೆ ಅಥವಾ ಕಡಿಮೆ ಬಡ್ಡಿ ಕೊಡುತ್ತಾರೆ. ಆದರೆ ಶೂನ್ಯ ಕಮಿಷನ್ನಿನ ಡೈರೆಕ್ಟ್ ಮ್ಯೂಚುವಲ್ ಫಂಡ್ ಯೋಜನೆಗಳಲ್ಲಿ ಒಟ್ಟು ಲಾಭಾಂಶದ ಶೇ 0.5ರಿಂದ ಶೇ 1.5ರಷ್ಟು ಮಾತ್ರ ಶುಲ್ಕ ಇರುತ್ತದೆ. ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು ಮ್ಯೂಚುವಲ್ ಫಂಡ್‌ಗಳನ್ನು ನಿಯಂತ್ರಿಸುವುದರಿಂದ ಮೋಸಕ್ಕೆ ಅವಕಾಶವಿಲ್ಲ.

(ಲೇಖಕ: ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)

ಸತತ ಎರಡನೇ ವಾರ ಕುಸಿದ ಷೇರುಪೇಟೆ

ಷೇರುಪೇಟೆ ಸೂಚ್ಯಂಕಗಳು ಸತತ ಎರಡನೇ ವಾರ ಕುಸಿತ ದಾಖಲಿಸಿವೆ. 52,586 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 0.73ರಷ್ಟು ಇಳಿದಿದೆ. 15,763 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 0.58ರಷ್ಟು ತಗ್ಗಿದೆ. ಬಿಎಸ್‌ಇ ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 1.3ರಷ್ಟು ಜಿಗಿದರೆ, ಮಿಡ್ ಕ್ಯಾಪ್ ಸೂಚ್ಯಂಕ ಶೇ 0.29ರಷ್ಟು ಏರಿಕೆಯಾಗಿದೆ.

ಜಾಗತಿಕ ವಿದ್ಯಮಾನಗಳ ಜೊತೆ ತ್ರೈಮಾಸಿಕ ಫಲಿತಾಂಶಗಳು ಮಾರುಕಟ್ಟೆ ಲೆಕ್ಕಾಚಾರಕ್ಕೆ ಅನುಗುಣವಾಗಿ ಬಾರದಿರುವ ಕಾರಣ ಸೂಚ್ಯಂಕಗಳು ಕುಸಿದಿವೆ. ವಲಯವಾರು ಪ್ರಗತಿಯಲ್ಲಿ ನಿಫ್ಟಿ ಲೋಹ ವಲಯ ಶೇ 8ರಷ್ಟು ಹೆಚ್ಚಳ ಕಂಡಿದೆ. ಮಾಧ್ಯಮ ಮತ್ತು ಐ.ಟಿ. ವಲಯ ತಲಾ ಶೇ 2ರಷ್ಟು ಏರಿಕೆಯಾಗಿವೆ. ನಿಫ್ಟಿ ಇಂಧನ ಮತ್ತು ವಾಹನ ವಲಯ ಶೇ 1.5ರಿಂದ ಶೇ 3ರಷ್ಟು ಇಳಿಕೆ ಕಂಡಿವೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 10,825.21 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ₹ 8,206.32 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಏರಿಕೆ–ಇಳಿಕೆ: ನಿಫ್ಟಿಯಲ್ಲಿ ಹಿಂಡಾಲ್ಕೊ ಶೇ 13ರಷ್ಟು, ಟಾಟಾ ಸ್ಟೀಲ್ ಶೇ 12ರಷ್ಟು, ಸನ್ ಫಾರ್ಮಾ ಶೇ 11ರಷ್ಟು, ಬಜಾಜ್ ಫಿನ್‌ಸರ್ವ್ ಶೇ 8ರಷ್ಟು, ಟೆಕ್ ಮಹೀಂದ್ರ ಶೇ 7ರಷ್ಟು ಏರಿಕೆಯಾಗಿವೆ. ಡಿಆರ್‌ಎಲ್ ಶೇ 13ರಷ್ಟು, ಎಕ್ಸಿಸ್ ಬ್ಯಾಂಕ್ ಶೇ 6ರಷ್ಟು, ಮಾರುತಿ ಸುಜುಕಿ ಶೇ 4ರಷ್ಟು, ಏಷ್ಯನ್ ಪೇಂಟ್ಸ್ ಶೇ 4ರಷ್ಟು ಮತ್ತು ಕೋಟಕ್ ಬ್ಯಾಂಕ್ ಶೇ 4ರಷ್ಟು ಕುಸಿದಿವೆ.

ಮುನ್ನೋಟ: ಆಗಸ್ಟ್ 4ರಿಂದ 6ರವರೆಗೆ ಆರ್‌ಬಿಐ ಹಣಕಾಸು ಸಮಿತಿ ಸಭೆ ಇದೆ. ಈ ವಾರ ಮಹೀಂದ್ರ ಆ್ಯಂಡ್ ಮಹೀಂದ್ರ, ಅದಾನಿ ಪೋರ್ಟ್ಸ್, ಅದಾನಿ ಪವರ್, ಅದಾನಿ ಗ್ರೀನ್, ಟಾಟಾ ಕನ್ಸ್ಯೂಮರ್, ಎಚ್‌ಡಿಎಫ್‌ಸಿ, ಡಾಬರ್, ಗೇಲ್, ಇಂಡಿಗೊ ಪೇಂಟ್ಸ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ.

ಕೋವಿಡ್ ಲಸಿಕೆ: ಸಿಎಸ್‌ಆರ್ ಅಡಿ ಪರಿಗಣನೆ

ನವದೆಹಲಿ (ಪಿಟಿಐ): ಕಂಪನಿಗಳು ತಮ್ಮ ನೌಕರರು, ಅವರ ಕುಟುಂಬದ ಸದಸ್ಯರಿಗೆ ಮಾತ್ರವಲ್ಲದೆ ಬೇರೆ ಯಾವುದೇ ವ್ಯಕ್ತಿಗೆ ಕೋವಿಡ್ ಲಸಿಕೆ ನೀಡಲು ಮಾಡುವ ವೆಚ್ಚವನ್ನು ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ಅಡಿ ಪರಿಗಣಿಸಲಾಗುವುದು ಎಂದು ಕೇಂದ್ರ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಹೇಳಿದೆ.

ಕೋವಿಡ್–19ಕ್ಕೆ ಸಂಬಂಧಿಸಿದಂತೆ ಮಾಡುವ ವೆಚ್ಚಗಳನ್ನು ಸಿಎಸ್‌ಆರ್ ಅಡಿ ಪರಿಗಣಿಸಲಾಗುತ್ತದೆ ಎಂದು ಸಚಿವಾಲಯವು 2020ರ ಮಾರ್ಚ್‌ನಲ್ಲಿ ಹೇಳಿತ್ತು. ಈಗ, ತಮ್ಮ ನೌಕರರು, ನೌಕರರ ಕುಟುಂಬದವರಿಗೆ ಮಾತ್ರವಲ್ಲದೆ ಯಾವುದೇ ವ್ಯಕ್ತಿಗೆ ಕೋವಿಡ್ ಲಸಿಕೆಗಾಗಿ ಮಾಡುವ ವೆಚ್ಚವನ್ನು ಸಿಎಸ್‌ಆರ್ ಅಡಿ ಪರಿಗಣಿಸಲಾಗುತ್ತದೆ ಎಂದು ಸ್ಪಷ್ಟಪಡಿಸಿದೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ವಾರ್ಷಿಕ ರಿಟರ್ನ್ಸ್: ಬೇಕಿಲ್ಲ ಲೆಕ್ಕ ಪರಿಶೋಧಕರ ಪ್ರಮಾಣಪತ್ರ

ನವದೆಹಲಿ (ಪಿಟಿಐ): ವಾರ್ಷಿಕ ವಹಿವಾಟು ಮೊತ್ತವು ₹ 5 ಕೋಟಿಗಿಂತ ಹೆಚ್ಚು ಇರುವ ಉದ್ಯಮಗಳು ತಮ್ಮ ವಾರ್ಷಿಕ ಜಿಎಸ್‌ಟಿ ವಿವರಗಳನ್ನು ತಾವೇ ಪ್ರಮಾಣೀಕರಿಸಬಹುದು ಎಂದು ಪರೋಕ್ಷ ತೆರಿಗೆ ಮತ್ತು ಕಸ್ಟಮ್ಸ್‌ನ ಕೇಂದ್ರೀಯ ಮಂಡಳಿಯು (ಸಿಬಿಐಸಿ) ಹೇಳಿದೆ.

ಈ ಜಿಎಸ್‌ಟಿ ವಿವರಗಳಿಗೆ ಕಂಪನಿಗಳು ಲೆಕ್ಕ ಪರಿಶೋಧಕರಿಂದ ಪ್ರಮಾಣೀಕರಣ ನೀಡಬೇಕಿಲ್ಲ ಎಂದು ಸಿಬಿಐಸಿ ಸ್ಪಷ್ಟಪಡಿಸಿದೆ.

ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯ ಅಡಿಯಲ್ಲಿ 2020–21ನೇ ಸಾಲಿಗೆ ₹ 2 ಕೋಟಿಯ ವರೆಗಿನ ವಾರ್ಷಿಕ ವಹಿವಾಟು ಹೊಂದಿರುವವರನ್ನು ಹೊರತುಪಡಿಸಿ, ಉಳಿದೆಲ್ಲ ಉದ್ಯಮಗಳು ವಾರ್ಷಿಕ ರಿಟರ್ನ್ಸ್ ಜಿಎಸ್‌ಟಿಆರ್–9/9ಎ ಸಲ್ಲಿಸುವುದು ಕಡ್ಡಾಯ.

₹ 5 ಕೋಟಿಗಿಂತ ಅಧಿಕ ವಾರ್ಷಿಕ ವಹಿವಾಟು ನಡೆಸುವವರು ಜಿಎಸ್‌ಟಿಆರ್–9ಸಿ ಮೂಲಕ ಸಮನ್ವಯ ವರದಿ ಸಲ್ಲಿಸಬೇಕು. ಲೆಕ್ಕ ಪರಿಶೋಧಕರು ಆಡಿಟ್ ಮಾಡಿದ ನಂತರ ಈ ವರದಿಯನ್ನು ಪ್ರಮಾಣೀಕರಿಸಬೇಕಿತ್ತು. ಇದಕ್ಕೆ ಸಂಬಂಧಿಸಿದಂತೆ 'ಸಿಬಿಐಸಿ'ಯು ಜಿಎಸ್‌ಟಿ ನಿಯಮದಲ್ಲಿ ತಿದ್ದುಪಡಿ ತಂದಿದ್ದು, ಲೆಕ್ಕ ಪರಿಶೋಧಕರ ನೆರವಿಲ್ಲದ ವಹಿವಾಟುದಾರರು ತಾವೇ ಪ್ರಮಾಣೀಕರಿಸಲು ಅವಕಾಶ ಕಲ್ಪಿಸಿದೆ. ಈ ಕುರಿತು ಭಾನುವಾರ ಅಧಿಸೂಚನೆ ಹೊರಡಿಸಿದೆ.

'ವಾರ್ಷಿಕ ರಿಟರ್ನ್ಸ್ ಸಲ್ಲಿಸುವಾಗ ಉದ್ದೇಶಪೂರ್ವಕ ಮತ್ತು ಉದ್ದೇಶಪೂರ್ವಕವಲ್ಲದ ತಪ್ಪುಗಳಾದಲ್ಲಿ ಇಲಾಖೆಯ ಪರಿಶೀಲನೆಯ ವೇಳೆ ಸಮಸ್ಯೆಗಳು ಎದುರಾಗಬಹುದು' ಎಂದು ಎಎಂಆರ್‌ಜಿ ಆ್ಯಂಡ್ ಅಸೋಸಿಯೇಟ್ಸ್‌ನ ಹಿರಿಯ ಪಾಲುದಾರ ರಜತ್ ಮೋಹನ್ ಹೇಳಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹450
12 ಮೊಟ್ಟೆಗೆ	₹60

ಮೈಸೂರು

100 ಮೊಟ್ಟೆಗೆ	₹450

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)

₹256-478

ದ್ವಿತಳಿ (ಬಿ.ವಿ)

₹270-512

ಅಂತರ ಕಾಯ್ದುಕೊಳ್ಳಿ

ಸಾಬೂನಿನಿಂದ ಕೈ ತೊಳೆಯುತ್ತಿರಿ

ಜುಲೈನಲ್ಲಿ ವಾಹನ ಮಾರಾಟ ಹೆಚ್ಚಳ

ನವದೆಹಲಿ (ಪಿಟಿಐ): ಪ್ರಮುಖ ಕಂಪನಿಗಳ ಪ್ರಯಾಣಿಕ ವಾಹನಗಳ ಮಾರಾಟವು ಜುಲೈನಲ್ಲಿ ಏರಿಕೆ ಕಂಡಿದೆ. ಮಾರುತಿ ಸುಜುಕಿ ಇಂಡಿಯಾ ಕಂಪನಿಯ ಜುಲೈ ತಿಂಗಳ ಮಾರಾಟವು ಶೇಕಡ 50ರಷ್ಟು ಹೆಚ್ಚಾಗಿದ್ದು 1.61 ಲಕ್ಷಕ್ಕೆ ತಲುಪಿದೆ. ಹಿಂದಿನ ವರ್ಷದ ಜುಲೈನಲ್ಲಿ 1.08 ಲಕ್ಷ ವಾಹನಗಳನ್ನು ಮಾರಾಟ ಮಾಡಿತ್ತು. ದೇಶಿ ಮಾರಾಟವು ಶೇ 39ರಷ್ಟು ಏರಿಕೆ ಆಗಿದೆ ಎಂದು ಕಂಪನಿಯು ತಿಳಿಸಿದೆ.

ಟಾಟಾ ಮೋಟರ್ಸ್ ಕಂಪನಿಯ ದೇಶಿ ಮಾರಾಟವು ಶೇ 92ರಷ್ಟು ಹೆಚ್ಚಾಗಿದ್ದು 51,981ಕ್ಕೆ ತಲುಪಿದೆ. ಪ್ರಯಾಣಿಕ ವಾಹನ ಮಾರಾಟವು 15,012ರಿಂದ 30,185ಕ್ಕೆ ಏರಿಕೆ ಆಗಿದೆ. ವಾಣಿಜ್ಯ ವಾಹನಗಳ ಮಾರಾಟವು ಹಿಂದಿನ ವರ್ಷದ ಜುಲೈಗೆ ಹೋಲಿಸಿದರೆ ಈ ಬಾರಿಯ ಜುಲೈನಲ್ಲಿ ಶೇ 81ರಷ್ಟು ಹೆಚ್ಚಾಗಿದೆ.

ಹುಂಡೈ ಮೋಟರ್ ಇಂಡಿಯಾ ಕಂಪನಿಯ ಒಟ್ಟಾರೆ ಮಾರಾಟ ಶೇ 46ರಷ್ಟು ಹೆಚ್ಚಾಗಿದ್ದು 60,249 ವಾಹನಗಳನ್ನು ಮಾರಾಟ ಮಾಡಿದೆ. ದೇಶಿ ಮಾರಾಟವು ಶೇ 26ರಷ್ಟು ಹೆಚ್ಚಾಗಿದೆ ಎಂದು ಕಂಪನಿ ಹೇಳಿದೆ.

ಹೋಂಡಾ ಕಾರ್ಸ್ ಇಂಡಿಯಾ ಕಂಪನಿಯ ದೇಶಿ ಮಾರಾಟ ಶೇ 12ರಷ್ಟು ಹೆಚ್ಚಾಗಿದೆ. ನಿಸಾನ್ ಇಂಡಿಯಾ ಕಂಪನಿಯ ಮಾರಾಟವು 784ರಿಂದ 4,259ಕ್ಕೆ ಏರಿಕೆ ಆಗಿದೆ. ಎಂಜಿ ಮೋಟರ್ ಇಂಡಿಯಾ ಕಂಪನಿಯು 4,225 ವಾಹನಗಳನ್ನು ಮಾರಾಟ ಮಾಡಿದೆ. ಹಿಂದಿನ ವರ್ಷದ ಜುಲೈಗೆ ಹೋಲಿಸಿದರೆ ಎರಡು ಪಟ್ಟು ಹೆಚ್ಚಾಗಿದೆ ಎಂದು ಕಂಪನಿ ತಿಳಿಸಿದೆ.

ಸ್ಕೋಡಾ ಆಟೊ ಇಂಡಿಯಾ ಕಂಪನಿಯ ಮಾರಾಟವು ಮೂರುಪಟ್ಟು ಹೆಚ್ಚಾಗಿದ್ದು 3,080ಕ್ಕೆ ತಲುಪಿದೆ. ಹಿಂದಿನ ವರ್ಷದ ಜುಲೈನಲ್ಲಿ 922 ವಾಹನಗಳನ್ನು ಮಾರಾಟ ಮಾಡಿತ್ತು.

ಪೇಟಿಎಂನಿಂದ 20 ಸಾವಿರ ಜನರ ನೇಮಕ

ನವದೆಹಲಿ (ಪಿಟಿಐ): ಡಿಜಿಟಲ್ ಪಾವತಿ ಮತ್ತು ಹಣಕಾಸು ಸೇವಾ ಕಂಪನಿ ಪೇಟಿಎಂ, ಮಾರಾಟ ವಿಭಾಗದಲ್ಲಿ 20 ಸಾವಿರ ಜನರನ್ನು ನೇಮಕ ಮಾಡಿಕೊಳ್ಳುವ ಪ್ರಕ್ರಿಯೆ ಆರಂಭಿಸಿದೆ ಎಂದು ಮೂಲಗಳು ತಿಳಿಸಿವೆ.

ಡಿಜಿಟಲ್ ತಂತ್ರಜ್ಞಾನ ಅಳವಡಿಕೆಯ ಕುರಿತು ವರ್ತಕರಲ್ಲಿ ತಿಳಿವಳಿಕೆ ಮೂಡಿಸಲು ಈ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ. ಪೇಟಿಎಂನ ನೇಮಕಾತಿ ಜಾಹೀರಾತಿನ ಪ್ರಕಾರ, ಫೀಲ್ಡ್ ಸೇಲ್ಸ್ ಎಕ್ಸಿಕ್ಯುಟಿವ್ ಆಗಿ ನೇಮಕ ಆಗುವವರು ವೇತನ ಮತ್ತು ಕಮಿಷನ್ ರೂಪದಲ್ಲಿ ತಿಂಗಳಿಗೆ ₹ 35 ಸಾವಿರ ಗಳಿಸುವ ಅವಕಾಶ ಸಿಗಲಿದೆ.

100 ಮೀ. ಓಟ: ಅಮೆರಿಕದ ಫ್ರೆಡ್ ಕಾರ್ಲಿಗೆ ಬೆಳ್ಳಿ ಪದಕ; ಮತ್ತೆ ಕಂಚು ಗೆದ್ದ ಕೆನಡಾದ ಆ್ಯಂಡ್ರೆ ಡಿ ಗ್ರಸಿ

ಹೊನಲು ಬೆಳಕಿನಲ್ಲಿ ಜೇಕಬ್ಸ್ ಮಿಂಚು

ಟೋಕಿಯೊ (ರಾಯಿಟರ್ಸ್): ಬೆಳಕು–ನೆರಳಿನಾಟದಲ್ಲಿ ರಂಗಭೂಮಿಯಂತೆ ಗೋಚರವಾದ ಒಲಿಂಪಿಕ್ ಕ್ರೀಡಾಂಗಣದ ಟ್ರ್ಯಾಕ್‌ನಲ್ಲೂ ನಾಟಕೀಯ ಫಲಿತಾಂಶ ಹೊರಬಿದ್ದಿತು. ಸ್ಪ್ರಿಂಟ್ ಮಿಂಚು ಉಸೇನ್ ಬೋಲ್ಟ್ ನಂತರ 100 ಮೀಟರ್ ಓಟದ ರಾಜ ಯಾರು ಎಂಬ ಕುತೂಹಲ ತಣಿಸಿದ ಇಟಲಿಯ ಲ್ಯಾಮಂಟ್ ಮಾರ್ಸೆಲ್ ಜೇಕಬ್ಸ್ ಚಿನ್ನಕ್ಕೆ ಮುತ್ತಿಟ್ಟರು.

ಭಾನುವಾರ ರಾತ್ರಿ ಜೇಕಬ್ಸ್ 9.80 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಒಲಿಂಪಿಕ್ ಚಾಂಪಿಯನ್ ಆಗುವುದರ ಜೊತೆಯಲ್ಲಿ ಯುರೋಪ್‌ನ ಹೊಸ ದಾಖಲೆಯನ್ನೂ ಬರೆದರು. ಅಮೆರಿಕದ ಫ್ರೆಡ್ ಕಾರ್ಲಿ 9.84 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಬೆಳ್ಳಿ ಪದಕ ಗಳಿಸಿದರು. ಕಂಚಿನ ಪದಕ ಕೆನಡಾದ ಆ್ಯಂಡ್ರೆ ಡಿ ಗ್ರಸಿ (9.89) ಪಾಲಾಯಿತು. 2016ರ ರಿಯೊ ಒಲಿಂಪಿಕ್ಸ್‌ನಲ್ಲೂ ಅವರು ಕಂಚಿನ ಪದಕ ಗೆದ್ದಿದ್ದರು.

ಕ್ರೀಡಾಂಗಣದ ಹೊನಲು ಬೆಳಕನ್ನು ನಂದಿಸಿ 12 ಪ್ರೊಜೆಕ್ಟರ್‌ಗಳಲ್ಲಿ ಜಗತ್ತಿನ ತ್ರಿ–ಡಿ ಚಿತ್ರಗಳನ್ನು ಟೋಕಿಯೊದ ಆಗಸದತ್ತ ಬಿಂಬಿಸಿ, ಅದರ ಬೆನ್ನಲ್ಲೇ ಅಥ್ಲೀಟ್‌ಗಳನ್ನು ಪರಿಚಯಿಸಲಾಗಿತ್ತು. ನಂತರ ಹೊನಲು ಬೆಳಕನ್ನು ಚೆಲ್ಲಲಾಯಿತು.

ಜೇಕಬ್ಸ್ ಲೇನ್ ಮೂರರಲ್ಲಿ ಸಜ್ಜಾಗಿದ್ದರು. ಅತ್ಯುತ್ತಮ ಆರಂಭ ಕಂಡ ಅವರು ಅದೇ ಲಯವನ್ನು ಉಳಿಸಿಕೊಂಡು ಮುನ್ನುಗ್ಗಿದರು. ಸ್ವಲ್ಪ ಮೊದಲು ಹೈಜಂಪ್‌ನಲ್ಲಿ ಚಿನ್ನ ಗೆದ್ದಿದ್ದ ಇಟಲಿಯ ಗ್ಯಾನ್ ಮಾರ್ಕೊ ತಂಬೆರಿ ಅಂತಿಮ ಗೆರೆ ಬಳಿ ಜೇಕಬ್ಸ್ ಅವರನ್ನು ಅಪ್ಪಿಕೊಂಡರು. ಇಬ್ಬರೂ ಸಂಭ್ರಮಿಸಿದರು.

2004ರಿಂದ ಒಲಿಂಪಿಕ್ಸ್‌ನ 100 ಮತ್ತು 200 ಮೀಟರ್ಸ್ ಓಟದ ಟ್ರ್ಯಾಕ್‌ನಲ್ಲಿ ಜಮೈಕಾದ ಉಸೇನ್ ಬೋಲ್ಟ್ ಪ್ರಾಬಲ್ಯವಿತ್ತು. ಮೂರು ಒಲಿಂಪಿಕ್ಸ್‌ಗಳಲ್ಲಿ ಚಿನ್ನ ಗೆದ್ದಿದ್ದ ಅವರ ನಿವೃತ್ತಿ ನಂತರ ನಡೆ ಯುತ್ತಿರುವ ಮೊದಲ ಒಲಿಂಪಿಕ್ಸ್ ಇದು. ಜಮೈಕಾದವರು ಇಲ್ಲದ ಟ್ರ್ಯಾಕ್: 2000ರ ನಂತರ ಇದೇ ಮೊದಲ ಬಾರಿ ಜಮೈಕಾದ ಅಥ್ಲೀಟ್‌ಗಳಿಲ್ಲದೆ 100 ಮೀಟರ್ಸ ಓಟದ ಸ್ಪರ್ಧೆ ನಡೆಯಿತು. ಉಸೇನ್ ಬೋಲ್ಟ್ ಗೆಳೆಯ ಯೊಹಾನ್ ಬ್ಲೇಕ್ ಸೆಮಿಫೈನಲ್‌ನಲ್ಲಿ ಅನರ್ಹಗೊಂಡಿದ್ದರು.

ಚಿನ್ನ ಗೆದ್ದ ಗಾಂಗ್

ಮಹಿಳೆಯರ ಶಾಟ್‌ಪಟ್‌ನಲ್ಲಿ ವೈಯಕ್ತಿಕ ಶ್ರೇಷ್ಠ ಪ್ರದರ್ಶನ ನೀಡಿದ ಗಾಂಗ್ ಲಿಜಿಯಾವೊ ಅವರು ಚೀನಾಗೆ ಚಿನ್ನ ಗೆದ್ದುಕೊಟ್ಟರು. ಫೈನಲ್‌ನಲ್ಲಿ ಅವರು 20.58 ಮೀಟರ್ಸ್ ದೂರ ಎಸೆದರು. ವೈವಿಧ್ಯಮಯ ಸಂಭ್ರಮಾಚರಣೆಯ ಸಾಮಾಜಿಕ ತಾಣಗಳಲ್ಲಿ ಸುದ್ದಿಯಾಗಿದ್ದ ಅಮೆರಿಕದ ರಾವೆನ್ ಸಾಂಡರ್ಸ್ ಬೆಳ್ಳಿ ಗೆದ್ದುಕೊಂಡರೆ ನ್ಯೂಜಿಲೆಂಡ್‌ನ ವಲೆರಿ ಆ್ಯಡಮ್ಸ್ ಕಂಚು ಗೆದ್ದರು. ಮ್ಯಾಡಿಸನ್ (18.98) ಮತ್ತು ಸಾರಾ (18.88) ವೈಯಕ್ತಿಕ ಶ್ರೇಷ್ಠ ಸಾಧನೆ ಮಾಡಿದರು.



ಮಾರ್ಸೆಲ್ ಜೇಕಬ್ಸ್ ಸಂಭ್ರಮ –ಎಎಫ್‌ಪಿ ಚಿತ್ರ

100 ಮೀಟರ್ಸ್ ಓಟದ ಸ್ಪರ್ಧೆಯ ವಿಜೇತರ ವಿವರ			
ಅಥ್ಲೀಟ್	ಪದಕ	ಕಾಲ (ಸೆ)	ಲೇನ್
ಜೇಕಬ್ಸ್	ಚಿನ್ನ	9.80	3
ಫ್ರೆಡ್ ಕಾರ್ಲಿ	ಬೆಳ್ಳಿ	9.84	5
ಆ್ಯಂಡ್ರೆ ಗ್ರಸಿ	ಕಂಚು	9.89	9



ಯುಲಿಮರ್ ವಿಶ್ವ ದಾಖಲೆ

ಮಹಿಳೆಯರ ಟ್ರಿಪಲ್ ಜಂಪ್‌ನಲ್ಲಿ ವೆನೆಜುವೆಲಾದ ಯುಲಿಮರ್ ರೋಜಾಸ್ ವಿಶ್ವ ದಾಖಲೆಯೊಂದಿಗೆ (15.67 ಮೀಟರ್ಸ್) ಚಿನ್ನ ಗಳಿಸಿದರು.

ಪೋರ್ಚುಗಲ್‌ನ ಪ್ಯಾಟ್ರಿಸಿಯಾ ಮಮೋನಾ (15.01 ಮೀ) ಬೆಳ್ಳಿ ಮತ್ತು ಸ್ಪೇನ್‌ನ ಅನಾ ಪೆಲೆಟಿರೊ (14.87 ಮೀ) ಕಂಚು ಗೆದ್ದರು.

ಕತಾರ್‌ನ ಎಸ್ಸಾ ಮುತಾಸ್ ಬರ್ಶಿಮ್ ಪುರುಷರ ಹೈಜಂಪ್‌ನಲ್ಲಿ ಚಿನ್ನ ಗೆದ್ದರು. 2.37 ಮೀಟರ್ಸ್ ಎತ್ತರದ ಸಾಧನೆ ಮಾಡಿದ ಅವರು ಇಟಲಿಯ ಗ್ಯಾನ್‌ಮಾರ್ಕೊ ತಂಬೆರಿ ಅವರೊಂದಿಗೆ ಚಿನ್ನದ ಸಂಭ್ರಮ ಹಂಚಿಕೊಂಡರು. ಬೆಲಾರಸ್‌ನ ಮ್ಯಾಕ್ಸಿಮ್ ನೆಡಾಸೆಕು ಕಂಚಿನ ಪದಕ ಗೆದ್ದರು.

ಶಾಟ್‌ಪಟ್	
ರವೇನ್ ಸಾಂಡರ್ಸ್ 19.79 ಮೀಟರ್ಸ್	
ಗಾಂಗ್ ಲಿಜಿಯಾವೊ 20.58 ಮೀಟರ್ಸ್	ವಲೇರಿ ಆ್ಯಡಮ್ಸ್ 19.62 ಮೀಟರ್ಸ್

ಗಾಂಗ್ ಲಿಜಿಯಾವೊ –ರಾಯಿಟರ್ಸ್ ಚಿತ್ರ

ಸತೀಶ್ ಕುಮಾರ್ (ಎಡ) ಮತ್ತು ಜಲೊಲವ್ ನಡುವಿನ ಪೈಪೋಟಿ –ರಾಯಿಟರ್ಸ್ ಚಿತ್ರ

ಪ್ರತಿಭಟನೆಯ ಪಂಚ್!

ಟೋಕಿಯೊ (ರಾಯಿಟರ್ಸ್): ಬಾಕ್ಸಿಂಗ್ ರಿಂಗ್ ಭಾನುವಾರ ಭರ್ಜರಿ ಪ್ರಹಾರ ಮತ್ತು ನಾಟಕೀಯ ಸನ್ನಿವೇಶಗಳಿಗೆ ಸಾಕ್ಷಿಯಾಯಿತು. ಘಾನಾ 50 ವರ್ಷಗಳಲ್ಲಿ ಮೊದಲ ಪದಕದ ಸಂಭ್ರಮದಲ್ಲಿ ಮಿಂದರೆ ಫ್ರಾನ್ಸ್‌ನ ಬಾಕ್ಸರ್ ಪ್ರತಿಭಟನೆ ಮಾಡಿದರು.

ಸೂಪರ್ ಹೆವಿವೇಟ್ ವಿಭಾಗದ ಬೌಟ್ ಸಂದರ್ಭಧಲ್ಲಿ ಫ್ರಾನ್ಸ್‌ನ ಮೌರಾದ್ ಅಲೀವ್ ರಿಂಗ್‌ನಲ್ಲಿ ಧರಣಿ ನಡೆಸಿದರು. ಎದುರಾಳಿಗೆ ತಲೆ ಡಿಚ್ಚಿ ಹೊಡೆದದ್ದಕ್ಕಾಗಿ ರೆಫರಿ ಅನರ್ಹಗೊಳಿಸಿದ್ದು ಅವರ ಕೋಪಕ್ಕೆ ಕಾರಣ.

ಮಾಸ್ಕೊದಲ್ಲಿ ಜನಿಸಿ ಫ್ರಾನ್ಸ್‌ನಲ್ಲಿ ಬೆಳೆದ ಮೌರಾದ್ ಬೌಟ್‌ನಿಂದ ಅನರ್ಹಗೊಂಡ ನಂತರ ಮೌತ್ ಗಾರ್ಡ್ ತೆಗೆದು ಎಸೆದು, ಅಸಹ್ಯ ಹಾವಭಾವ ತೋರಿ ಟಿವಿ ಕ್ಯಾಮರಾಮನ್ ಮೇಲೆ ಪಂಚ್ ಮಾಡಿದ್ದರು. ಅವರ ಎದುರಾಳಿ ಬ್ರಿಟನ್‌ನ ಫ್ರೇಜರ್ ಕ್ಲಾರ್ಕ್ ಗಾಯಗೊಂಡರೂ ಜಯ ಸಾಧಿಸಿದರು.

ಸ್ಯಾಮ್ಯುಯಲ್ ಟಕ್ಕಿ, ಕೊಲಂಬಿಯಾದ ಸೀಬರ್ ಅವಿಲಾ ಎದುರು ಗೆದ್ದು ಪದಕವನ್ನು ಖಚಿತ ಮಾಡಿಕೊಂಡರು. ಈ ಮೂಲಕ ಬಾಕ್ಸಿಂಗ್‌ನಲ್ಲಿ ಅರ್ಧಶತಮಾನದ ಪದಕದ ಬರ ನೀಗಿಸಿದರು. 1992ರಲ್ಲಿ ಫುಟ್‌ಬಾಲ್‌ನಲ್ಲಿ ಕಂಚು ಗೆದ್ದ ನಂತರ ದೇಶಕ್ಕೆ ದೊರೆಯಲಿರುವ ಒಟ್ಟಾರೆ ಮೊದಲ ಪದಕವೂ ಆಗಲಿದೆ ಇದು.

ಚೇವಾನ್ ಕ್ಲಾರ್ಕ್ (ಎಡ) ಮತ್ತು ಮೌರಾದ್ ಅಲೀವ್ –ರಾಯಿಟರ್ಸ್ ಚಿತ್ರ

ರಕ್ತಚೆಲ್ಲಿದ ಸತೀಶ್‌ಗೆ ನಿರಾಸೆ

ವಿಶ್ವ ಚಾಂಪಿಯನ್, ಉಜ್ಬೆಕಿಸ್ತಾನದ ಬಖೊದಿರ್ ಜಲೊಲೊವ್ ಎದುರಿನ ಕ್ವಾರ್ಟರ್ ಫೈನಲ್ ಬೌಟ್‌ನಲ್ಲಿ ಕಣ್ಣಿನ ಅಂಚು ಹರಿದು ರಕ್ತ ಚೆಲ್ಲಿದರೂ ದಿಟ್ಟತನದಿಂದ ಕಾದಾಡಿದ ಭಾರತದ ಸತೀಶ್ ಕುಮಾರ್ ಸೋತು ಹೊರಬಿದ್ದರು. 91 + ಕೆಜಿ ವಿಭಾಗದಲ್ಲಿ ಅವರು 0–5ರಲ್ಲಿ ಎದುರಾಳಿಗೆ ಮಣಿದರು. ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಗಾಯ ಗೊಂಡಿದ್ದ ಅವರು ಭಾನುವಾರ ರಿಂಗ್‌ಗೆ ಬರುವಾಗಲೇ ಹಣೆ ಮತ್ತು ಗಲ್ಲಕ್ಕೆ ಸ್ಟಿಚ್ ಹಾಕಿಸಿಕೊಂಡಿದ್ದರು. ಬಖೊದಿರ್ ಜಲೊಲೊವ್ ವಿರುದ್ಧ ಮತ್ತಷ್ಟು ಗಾಯಗೊಂಡರು. ಸೂಪರ್ ಹೆವಿವೇಟ್ ವಿಭಾಗದಲ್ಲಿ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡ ಭಾರತದ ಮೊದಲ ಬಾಕ್ಸರ್ ಆಗಿದ್ದಾರೆ ಅವರು.

ಫವಾದ್ ಮಿರ್ಜಾ– ಪಿಟಿಐ ಚಿತ್ರ

ಫವಾದ್‌ಗೆ ಫೈನಲ್ ನಿರೀಕ್ಷೆ

ಟೋಕಿಯೊ (ಪಿಟಿಐ): ಭಾರತದ ಈಕ್ವೆಸ್ಟ್ರಿಯನ್ ಪಟು ಫವಾದ್ ಮಿರ್ಜಾ ಅವರು ಕ್ರೀಡಾಕೂಟದಲ್ಲಿ ಉತ್ತಮ ಸಾಮರ್ಥ್ಯ ತೋರಿದರು. ಕ್ರಾಸ್ ಕಂಟ್ರಿ ಸ್ಪರ್ಧೆಯ ಬಳಿಕ 22ನೇ ಸ್ಥಾನ ಗಳಿಸಿದ ಅವರು ಫೈನಲ್ ತಲುಪುವ ನಿರೀಕ್ಷೆ ಮೂಡಿಸಿದ್ದಾರೆ. ಭಾನುವಾರದ ಸ್ಪರ್ಧೆಯಲ್ಲಿ ಅವರಿಗೆ 11.20 ಪೆನಾಲ್ಟಿ ಪಾಯಿಂಟ್ಸ್ ನೀಡಲಾಯಿತು.

ಸೋಮವಾರ ನಡೆಯುವ ವೈಯಕ್ತಿಕ ಶೋ ಜಂಪಿಂಗ್ ಅರ್ಹತಾ ಸುತ್ತುಗಳಲ್ಲಿ ಉತ್ತಮ ಸಾಮರ್ಥ್ಯ ತೋರಿದರೆ, ಬೆಂಗಳೂರಿನ ಮಿರ್ಜಾ ಅವರು ಅಗ್ರ 25 ಈಕ್ವೆಸ್ಟ್ರಿಯನ್ ಪಟುಗಳಲ್ಲಿ ಸ್ಥಾನ ಗಳಿಸಲಿದ್ದಾರೆ. ಆ ಮೂಲಕ ಅದೇ ದಿನ ಸಂಜೆ ನಡೆಯುವ ಫೈನಲ್‌ಗೆ ಪ್ರವೇಶ ಪಡೆಯಲಿದ್ದಾರೆ.

ಸಿ ಫಾರೆಸ್ಟ್ ಕ್ರಾಸ್ ಕಂಟ್ರಿ ಕೋರ್ಸ್‌ನಲ್ಲಿ ನಡೆದ ಸವಾಲಿನ ಇವೆಂಟಿಂಗ್ ಸ್ಪರ್ಧೆಯಲ್ಲಿ ಸಿನೊರ್ ಮೆಡಿಕಾಟ್ ಕುದುರೆಯೊಂದಿಗೆ ಮಿರ್ಜಾ ಗಮನಸೆಳೆದರು. ಎಂಟು ನಿಮಿಷಗಳಲ್ಲಿ ಅವರು ಕ್ರಾಸ್ ಕಂಟ್ರಿ ರನ್ ಪೂರ್ಣಗೊಳಿಸಿದರು. ಸದ್ಯ ಅವರ ಬಳಿ ಒಟ್ಟು 39.20 ಪೆನಾಲ್ಟಿ ಪಾಯಿಂಟ್‌ಗಳಿವೆ. ಈಕ್ವೆಸ್ಟ್ರಿಯನ್‌ನ ವೈಯಕ್ತಿಕ ಇವೆಂಟಿಂಗ್ ಕ್ರಾಸ್‌ಕಂಟ್ರಿಯಲ್ಲಿ ಭಾಗವಹಿಸುವವರು ಟೈಮ್ ಪೆನಾಲ್ಟಿ ತಪ್ಪಿಸಲು ಸ್ಪರ್ಧೆಯನ್ನು 7 ನಿಮಿಷ 45 ಸೆಕೆಂಡುಗಳಲ್ಲಿ ಪೂರ್ಣಗೊಳಿಸಬೇಕು. ಪೆನಾಲ್ಟಿ ಪಾಯಿಂಟ್ ಕಡಿಮೆಯಾದಷ್ಟೂ ಸವಾರನ ಸ್ಥಾನಏರಿಕೆಯಾಗುತ್ತದೆ.

ಭಾನುವಾರ ಕ್ರಾಸ್‌ಕಂಟ್ರಿ ಸ್ಪರ್ಧೆಗಳ ಅಂತ್ಯಕ್ಕೆ ಗ್ರೇಟ್ ಬ್ರಿಟನ್ ಆಲಿವರ್ ಟೌನೆಂಡ್ (ಕುದುರೆ: ಬ್ಯಾಲಗ್‌ಮೋರ್ ಕ್ಲಾಸ್) ಮೊದಲ ಸ್ಥಾನದಲ್ಲಿದ್ದರು. ಅವರದೇ ದೇಶದ ಲೌರಾ ಕೊಲೆಟ್ (ಲಂಡನ್ 52) ಮೂರನೇ ಸ್ಥಾನ ಮತ್ತು ಜರ್ಮನಿಯ ಜುಲಿಯಾ ಕ್ರಾಜೆವಸ್ಕಿ (ಅಮಂಡ್ ಡಿ ಬಿನೆವಲ್ಲಿ) ಎರಡನೇ ಸ್ಥಾನದಲ್ಲಿದ್ದರು

39.20 ಫವಾದ್ ಬಳಿಯಿರುವ ಒಟ್ಟು ಪೆನಾಲ್ಟಿ ಪಾಯಿಂಟ್ಸ್:

22 ಕ್ರಾಸ್‌ಕಂಟ್ರಿ ರೇಸ್ ಅಂತ್ಯಕ್ಕೆ ಗಳಿಸಿದ ಸ್ಥಾನ

ಸ್ಪರ್ಧಾ ಸಮಯ

ಸಮಯ	ಸ್ಪರ್ಧೆ
ಆರ್ಟಿಸ್ಟಿಕ್ ಜಿಮ್ನಾಸ್ಟಿಕ್ಸ್	
ಮಧ್ಯಾಹ್ನ 1.30	ಪುರುಷರ ರಿಂಗ್ಸ್ ವಿಭಾಗದ ಫೈನಲ್
ಮಧ್ಯಾಹ್ನ 2.27	ಮಹಿಳೆಯರ ಫ್ಲೋರ್ ಎಕ್ಸರ್‌ಸೈಜ್ ಫೈನಲ್
ಮಧ್ಯಾಹ್ನ 3.21	ಪುರುಷರ ವಾಲ್ಟ್ ಫೈನಲ್
ಅಥ್ಲೆಟಿಕ್ಸ್	
ಬೆಳಿಗ್ಗೆ 6.50	ಪುರುಷರ ಲಾಂಗ್‌ಜಂಪ್ ಫೈನಲ್
ಬೆಳಿಗ್ಗೆ 7 ಗಂಟೆ	ಮಹಿಳೆಯರ 200 ಮೀ. ಓಟ ಮೊದಲ ಸುತ್ತಿನ ಹೀಟ್ಸ್ (ದ್ಯುತಿ ಚಾಂದ್)
ಬೆಳಿಗ್ಗೆ 8.20	ಪುರುಷರ 100 ಮೀ. ಹರ್ಡಲ್ಸ್ ಫೈನಲ್
ಮಧ್ಯಾಹ್ನ 3.55	ಮಹಿಳೆಯರ 200 ಮೀ. ಓಟ ಸೆಮಿಫೈನಲ್
ಸಂಜೆ 4.30	ಮಹಿಳೆಯರ ಡಿಸ್ಕಸ್ ಥ್ರೊ ಫೈನಲ್ (ಕಮಲ್‌ಪ್ರೀತ್ ಕೌರ್)
ಸಂಜೆ 5.45	ಪುರುಷರ 3000 ಮೀ. ಸ್ಟೀಪಲ್‌ಚೇಸ್ ಫೈನಲ್
ಸಂಜೆ 6.10	ಮಹಿಳೆಯರ 5000 ಮೀ. ಫೈನಲ್
ಬ್ಯಾಡ್ಮಿಂಟನ್	
ಬೆಳಿಗ್ಗೆ 10.20	ಪುರುಷರ ಸಿಂಗಲ್ಸ್ ಫೈನಲ್
ಸಂಜೆ 5.20	ಮಹಿಳಾ ಡಬಲ್ಸ್ ಫೈನಲ್
ಈಕ್ವೆಸ್ಟ್ರಿಯನ್	
ಮಧ್ಯಾಹ್ನ 1.30	ಇವೆಂಟಿಂಗ್ ಜಂಪಿಂಗ್ ತಂಡ ವಿಭಾಗದ ಫೈನಲ್
ಸಂಜೆ 5.15	ಇವೆಂಟಿಂಗ್ ವೈಯಕ್ತಿಕ ವಿಭಾಗದ ಫೈನಲ್
ಶೂಟಿಂಗ್	
ಬೆಳಿಗ್ಗೆ 8 ಗಂಟೆ	ಪುರುಷರ 50 ಮೀ. ರೈಫಲ್ 3 ಪೊಸಿಷನ್ಸ್ ಅರ್ಹತಾ ಸುತ್ತು (ಸಂಜೀವ್ ರಜಪೂತ್, ಐಶ್ವರಿಪ್ರತಾಪ್ ಸಿಂಗ್)
ಬೆಳಿಗ್ಗೆ 11 ಗಂಟೆ	ಪುರುಷರ 25 ಮೀ. ರ‍್ಯಾಪಿಡ್ ಫೈರ್ ಪಿಸ್ತೂಲ್ ಫೈನಲ್
ಮಧ್ಯಾಹ್ನ 1.20	ಪುರುಷರ 50 ಮೀ. ರೈಫಲ್ 3 ಪೊಸಿಷನ್ಸ್ ಫೈನಲ್
ಕುಸ್ತಿ	
ಸಂಜೆ 4ರಿಂದ	ಪುರುಷರ ಗ್ರೀಕೊ ರೋಮನ್ 60 ಕೆಜಿ, 130 ಕೆಜಿ ವಿಭಾಗದ ಫೈನಲ್ ಬೌಟ್‌ಗಳು
ಸಂಜೆ 5.20	ಮಹಿಳೆಯರ ಫ್ರೀಸ್ಟೈಲ್ 76 ಕೆಜಿ ವಿಭಾಗದ ಫೈನಲ್
ಹಾಕಿ (ಮಹಿಳಾ ತಂಡ)	
ಬೆಳಿಗ್ಗೆ 8.30	ಕ್ವಾರ್ಟರ್‌ಫೈನಲ್ (ಭಾರತ–ಆಸ್ಟ್ರೇಲಿಯಾ)

(ಆವರಣದಲ್ಲಿ ಭಾರತದ ಸ್ಪರ್ಧಿಗಳು)

ಭಾರತೀಯ ಕಾಲಮಾನ | ಲೈವ್ ಸೋನಿ ನೆಟ್‌ವರ್ಕ್

ಲಾರೆಲ್ ಹಬಾರ್ಡ್ ಚಿನ್ನದ ಕನಸು



ಟೋಕಿಯೊ (ರಾಯಿಟರ್ಸ್): ನ್ಯೂಜಿಲೆಂಡ್‌ನ ಲಿಂಗಪರಿವರ್ತಿತ ವೇಟ್‌ಲಿಫ್ಟರ್ ಲಾರೆಲ್ ಹಬಾರ್ಡ್ ಪದಕದ ಗುರಿಯೊಂದಿಗೆ ಸೋಮವಾರ ಕಣಕ್ಕೆ ಇಳಿಯುವರು. 43 ವರ್ಷದ ಅವರು ಅರ್ಹತಾ ಸುತ್ತಿನಲ್ಲಿ 285 ಕೆಜಿ ಭಾರ ಎತ್ತಿದ್ದಾರೆ. ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳುತ್ತಿರುವ ಮೊದಲ ಲಿಂಗಪರಿವರ್ತಿತ ಅಥ್ಲೀಟ್ ಆಗಿರುವ ಅವರು ಮಹಿಳೆಯರ ಸೂಪರ್ ಹೆವಿವೇಟ್ ವಿಭಾಗದ ಫೈನಲ್‌ನಲ್ಲಿ ಸೆಣಸುವರು.

ಪುರುಷನಾಗಿದ್ದ ಲಾರೆಲ್ ಎಂಟು ವರ್ಷಗಳ ಹಿಂದೆ ಲಿಂಗ ಮತ್ತು ಹೆಸರು ಬದಲಿಸಿಕೊಂಡಿದ್ದರು. ಈ ವರ್ಷ ಅವರಿಗೆ ಸ್ಪರ್ಧಿಸಲು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ಅನುಮತಿ ನೀಡಿತ್ತು.

ಪದಕ ಪಟ್ಟಿ				
ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಚೀನಾ	24	14	13	51
ಅಮೆರಿಕ	20	23	16	59
ಜಪಾನ್	17	5	9	31
ಆಸ್ಟ್ರೇಲಿಯಾ	14	3	14	31
ಆರ್‌ಒಸಿ*	12	19	13	44
ಭಾರತ (59ನೇ ಸ್ಥಾನ)	0	1	1	2

* ರಷ್ಯಾದ ಕ್ರೀಡಾಪಟುಗಳು ಒಲಿಂಪಿಕ್ ಸಮಿತಿಯ ಹೆಸರಿನಲ್ಲಿ ಸ್ಪರ್ಧಿಸುತ್ತಿದ್ದಾರೆ.

ಎಮಾ ಮಕಿಯಾನಗೆ ಏಳು; ಕೆಲೆಬ್ ಡ್ರೆಸೆಲ್‌ಗೆ 5 ಪದಕ; ಅಮೆರಿಕ, ಆಸ್ಟ್ರೇಲಿಯಾ ದಾಖಲೆ

ಮಿನುಗಿದ ಬಂಗಾರದ ಮೀನುಗಳು

ಟೋಕಿಯೊ (ರಾಯಿಟರ್ಸ್): ಸ್ಪ್ರಿಂಟ್‌ನಲ್ಲಿ 'ಡಬಲ್' ಸಾಧನೆಯೊಂದಿಗೆ ಒಟ್ಟು ಏಳು ಪದಕಗಳನ್ನು ಕೊರಳಿಗೆ ಹಾಕಿಕೊಂಡ ಆಸ್ಟ್ರೇಲಿಯಾದ ಎಮಾ ಮಕಿಯಾನ ಅವರು ಒಲಿಂಪಿಕ್ಸ್‌ನಲ್ಲಿ ಹೊಸ ದಾಖಲೆ ಬರೆದರು. ಒಂದೇ ಒಲಿಂಪಿಕ್ಸ್‌ನ ಈಜಿನಲ್ಲಿ ಅತ್ಯಧಿಕ ಪದಕಗಳನ್ನು ಗೆದ್ದ ಮಹಿಳಾ ಎಂಬ ಖ್ಯಾತಿ ಅವರ ಮುಡಿಯೇರಿತು.

ಅಮೆರಿಕದ ಕೆಲೆಬ್ ಡ್ರೆಸೆಲ್ ಪುರುಷರ ವಿಭಾಗದಲ್ಲಿ ಪಾರುಪತ್ಯ ಮೆರೆದರು. ಅವರು ಒಟ್ಟು ಐದು ಪದಕತಮ್ಮದಾಗಿಸಿಕೊಂಡರು. ಡ್ರೆಸೆಲ್ ಅವರನ್ನು ಒಳಗೊಂಡ ಅಮೆರಿಕ ತಂಡ ಪುರುಷರ ಮೆಡ್ಲೆ ರಿಲೆಯಲ್ಲಿ ಅಮೆರಿಕ ವಿಶ್ವ ದಾಖಲೆಯ ಸಾಧನೆ ಮಾಡಿತು. ದೂರ ಅಂತರದಲ್ಲಿ ಮತ್ತೊಮ್ಮೆ ತಮ್ಮ ಸಾಮರ್ಥ್ಯ ಸಾಬೀತು ಮಾಡಿದ ರಾಬರ್ಟ್ ಫಿಂಕ್ 1500 ಮೀಟರ್ಸ್ ಫ್ರೀಸ್ಟೈಲ್‌ನಲ್ಲಿ ಚಾಂಪಿಯನ್ ಆಗುವುದರೊಂದಿಗೆ 'ಚಿನ್ನ ಡಬಲ್'ನೊಂದಿಗೆ ಸಂಭ್ರಮಿಸಿದರು. 800 ಮೀಟರ್ಸ್‌ನ ಚಿನ್ನವೂ ಅವರ ಪಾಲಾಗಿತ್ತು. ಅಮೆರಿಕ ಒಟ್ಟು 11 ಪದಕಗಳನ್ನು ಗೆದ್ದುಕೊಂಡಿತು.

> **ಈ ಹಿಂದೆ ಸಾಧನೆ ಮಾಡಿದವರನ್ನು ಆಗಾಗ ನೆನಪಿಸಿಕೊಳ್ಳುತ್ತೇನೆ. ಅವರು ಸಾಗಿಬಂದ ಹಾದಿಯೇ ನನಗೆ ಪ್ರೇರಣೆ. ಹಾಗೆಂದು ಬರೀ ಪದಕಗಳನ್ನು ಗೆದ್ದವರನ್ನು ಮಾತ್ರ ಅನುಸರಿಸುವುದರಿಲ್ಲ.**
> **ಎಮಾ ಮಕಿಯಾನ**

> **ನಾನು ಈಗ ಆತ್ಮಗೌರವದಿಂದ ಪುಳಕಿತನಾಗಿದ್ದೇನೆ. ಕ್ರೀಡಾಕೂಟಕ್ಕೆ ಬರುವಾಗ ಮತ್ತು ಇಲ್ಲಿ ಪಾಲ್ಗೊಳ್ಳುವಾಗ ಸ್ವಲ್ಪ ಅಳುಕು ಇತ್ತು. ಈಗ ನಿರಾಳವಾಗಿದ್ದೇನೆ. ಮುಂದೆ ಇನ್ನಷ್ಟು ಸಾಧನೆ ಮಾಡುವ ಹುರುಪು ತುಂಬಿದೆ.**
> **ಕೆಲೆಬ್ ಡ್ರೆಸೆಲ್**

ಐದು ಪದಕಗಳೊಂದಿಗೆ ಭಾನುವಾರ ಈಜುಕೊಳದತ್ತ ಬಂದ ಎಮಾ ಮೆಕ್ಯಾನ್ 50 ಮೀಟರ್ಸ್ ಫ್ರೈಸ್ಟೈಲ್ ಮತ್ತು ಮಹಿಳೆಯರ 4x100 ಮೀಟರ್ಸ್ ಮೆಡ್ಲೆಯಲ್ಲಿ ಚಿನ್ನದ ಪದಕ ಗೆದ್ದುಕೊಂಡರು. ಇದರೊಂದಿಗೆ ಆಸ್ಟ್ರೇಲಿಯಾ ಒಟ್ಟು ಒಂಬತ್ತು ಚಿನ್ನದ ಪದಕಗಳನ್ನು ಗಳಿಸಿತು. ಇದು, ಒಲಿಂಪಿಕ್ಸ್‌ನಲ್ಲಿ ಆ ದೇಶದ ಶ್ರೇಷ್ಠ ಸಾಧನೆಯಾಗಿದೆ. ಭಾನುವಾರ 4x100 ಮೀಟರ್ಸ್ ಮೆಡ್ಲೆ ರಿಲೆಯಲ್ಲಿ ಆಸ್ಟ್ರೇಲಿಯಾ ಒಲಿಂಪಿಕ್ ದಾಖಲೆಯನ್ನೂ ಮುರಿಯಿತು. ನಾಲ್ಕು ಚಿನ್ನ ಗೆದ್ದ ಬ್ರಿಟನ್ ಒಟ್ಟು ಎಂಟು ಪದಕಗಳೊಂದಿಗೆ ರಾಷ್ಟ್ರೀಯ ದಾಖಲೆ ಮಾಡಿತು.

ಒಲಿಂಪಿಕ್ಸ್ ಈಜಿನಲ್ಲಿ ದಾಖಲೆ ಬರೆದಿರುವ ಮೈಕೆಲ್ ಫೆಲ್ಪ್ಸ್, ಮಾರ್ಕ್ ಸ್ಪಿಟ್ಸ್ ಮತ್ತು ಮ್ಯಾಟ್ ಬಿಯಾಂಡಿ ಅವರ ಸಾಧನೆ ನೆನಪಿಸಿದ ಮೆಕ್ಯಾನ್ ಒಂದೇ ಒಲಿಂಪಿಕ್ಸ್‌ನ ಯಾವುದೇ ಕ್ರೀಡೆಯಲ್ಲಿ ಅತ್ಯಧಿಕ ಪದಕ ಗೆದ್ದ ರಷ್ಯಾದ ಜಿಮ್ನಾಸ್ಟ್ ಮರಿಯಾ ಗೊರೊಕೊವಸ್ಕಯ ದಾಖಲೆಗೂ ಸಮನಾಗಿ ನಿಂತರು. ಮರಿಯಾ 1952ರ ಒಲಿಂಪಿಕ್ಸ್‌ನಲ್ಲಿ ಏಳು ಪದಕ ಗಳಿಸಿದ್ದರು.

ಕೆಲೆಬ್ ಡ್ರೆಸೆಲ್ –ರಾಯಿಟರ್ಸ್ ಚಿತ್ರ



ಎಮಾ ಮೆಕ್ಯಾನ್ –ರಾಯಿಟರ್ಸ್ ಚಿತ್ರ

ಕೊನೆಯ ದಿನದ ಫಲಿತಾಂಶಗಳು

ಪುರುಷರು: 50 ಮೀಟರ್ಸ್ ಫ್ರೀಸ್ಟೈಲ್: ಕೆಲೆಬ್ ಡ್ರೆಸೆಲ್ (ಅಮೆರಿಕ)–1. ಕಾಲ: 21.07 ಸೆ, ಫ್ಲಾರೆಂಟ್ ಮನಾಡೊ (ಫ್ರಾನ್ಸ್)–2, ಬ್ರೂನೊ ಫ್ರಾಟಸ್ (ಬ್ರೆಜಿಲ್)–3; 1500 ಮೀ ಫ್ರೀಸ್ಟೈಲ್: ರಾಬರ್ಟ್ ಫಿಂಕ್ (ಅಮೆರಿಕ)–1. ಕಾಲ: 14 ನಿ 39.65ಸೆ, ಮೈಕೆಲೊ ರೊಮಾಂಚುಕ್ (ಉಕ್ರೇನ್)–2, ಫ್ಲೋರಿಯಾನ್ ವೆಲ್‌ಬ್ರೆಕ್ (ಜರ್ಮನಿ)–3; 4x100 ಮೀಟರ್ಸ್ ಮೆಡ್ಲೆ ರಿಲೆ: ಅಮೆರಿಕ–1 ಕಾಲ: 3 ನಿ 26.78 (ವಿಶ್ವ ದಾಖಲೆ; **ಹಿಂದಿನ ದಾಖಲೆ:** ಅಮೆರಿಕ, ರೋಮ್‌ನಲ್ಲಿ 2009. ಕಾಲ:3 ನಿ 27.28ಸೆ), ಬ್ರಿಟನ್ –2 (ಯುರೋಪಿಯನ್ ದಾಖಲೆ), ಇಟಲಿ–3.

ಮಹಿಳೆಯರು: 50 ಮೀಟರ್ಸ್ ಫ್ರೀಸ್ಟೈಲ್: ಎಮಾ ಮಕಿಯಾನ (ಆಸ್ಟ್ರೇಲಿಯಾ)–1. ಕಾಲ: 23.81 ಸೆ, ಸಾರಾ ಸೋಸ್ಟ್ರೆಮ್ (ಸ್ವೀಡನ್)–2, ಪೆರ್ನಿಲಿ ಬ್ಲೂಮ್ (ಡೆನ್ಮಾರ್ಕ್)–3; 4x100 ಮೀಟರ್ಸ್ ಮೆಡ್ಲೆ ರಿಲೆ: ಆಸ್ಟ್ರೇಲಿಯಾ–1. ಕಾಲ: 3 ನಿ 51.60ಸೆ (ಒಲಿಂಪಿಕ್ ದಾಖಲೆ; ಹಿಂದಿನ ದಾಖಲೆ: ಅಮೆರಿಕ, 2012ರಲ್ಲಿ. ಕಾಲ: 3 ನಿ 52.05 ಸೆ), ಅಮೆರಿಕ–2, ಕೆನಡಾ–3.

ತಂದೆಯ ಕನಸಿಗೆ ಬಣ್ಣ ತುಂಬಿದ ಗಾಲ್ಫರ್

ಕವಾಗೊಯ್, ಜಪಾನ್ (ಎಎಫ್‌ಪಿ): ನಾಲ್ಕು ದಶಕಗಳ ಹಿಂದೆ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳುವ ಕನಸು ಹೊತ್ತುಕೊಂಡು ತರಬೇತಿಗೆ ಹೊರಟ್ಟಿದ್ದ ಅಪ್ಪ ಅಪಘಾತದಲ್ಲಿ ತೀವ್ರ ಗಾಯಗೊಂಡು ಹಾಸಿಗೆ ಹಿಡಿದಿದ್ದರು. ಅಂದು ಅವರು ಕಂಡ ಕನಸು ಈಗ ಮಗ ಕ್ಸಾಂಡರ್ ಶಫಿಲಿ ಮೂಲಕ ನನಸಾಯಿತು.

ಕಸುಮಿಗಸೆಕಿ ಕಂಟ್ರಿ ಕ್ಲಬ್‌ನಲ್ಲಿ ನಡೆದ ಒಲಿಂಪಿಕ್ಸ್ ಗಾಲ್ಫ್‌ನಲ್ಲಿ ಚಿನ್ನ ಗೆದ್ದ ಅಮೆರಿಕದ ಕ್ಸಾಂಡರ್ ಪದಕವನ್ನು ತಂದೆಗೆ ಅರ್ಪಿಸಿದರು. ಸ್ಲೊವಾಕಿಯಾದ ರೋರಿ ಸಬಟಿನಿ ಅವರ ಪ್ರಬಲ ಪೈಪೋಟಿಯನ್ನು ಮೆಟ್ಟಿನಿಂತು ಅಮೋಘ ಆಟ ಪ್ರದರ್ಶಿಸಿದ ಕ್ಸಾಂಡರ್ ಗೆದ್ದು ಸಂಭ್ರಮಿಸಿದರು.

ಕ್ಸಾಂಡರ್ ತಂದೆ ಡೆಕಾಥ್ಲೀಟ್ ಆಗಿದ್ದರು. 40 ವರ್ಷಗಳ ಹಿಂದೆ ಒಲಿಂಪಿಕ್ಸ್ ಸಿದ್ಧತೆಯ ಸಂದರ್ಭದಲ್ಲಿ ಕಾರು ಅಪಘಾತದಲ್ಲಿ ದೇಹದ ವಿವಿಧ ಭಾಗಗಳಲ್ಲಿ ಗಾಯಗಳಾಗಿದ್ದವು. ಎಡಗಣ್ಣಿಯ ದೃಷ್ಟಿ ಕಳೆದುಹೋಗಿತ್ತು.

ಭಾನುವಾರ ಬೆಳ್ಳಿ ಪದಕದ ಭರವಸೆಯೊಂದಿಗೆ ಕಣಕ್ಕೆ ಇಳಿದಿದ್ದ ಸ್ಥಳೀಯ ಗಾಲ್ಫರ್ ಹಿಡೆಕಿ ಮತ್ಸುಯಾಮ ನಿರಾಸೆಗೊಂಡರು. ಸಬಟಿನಿ ರೋರಿ ಬೆಳ್ಳಿ ಗೆದ್ದರೆ ಥೈವಾನ್‌ನ ಸಿ.ಟಿ.ಪನ್ ಕಂಚು ಗಳಿಸಿದರು.



ಕ್ಸಾಂಡರ್ ಶಫಿಲಿ –ರಾಯಿಟರ್ಸ್ ಚಿತ್ರ



ಪಿ.ವಿ. ಸಿಂಧು

ಚೀನಾ ಆಟಗಾರ್ತಿಯನ್ನು ಮಣಿಸಿದ ಭಾರತದ ತಾರೆ: ಅಪ್ಪನ ಸಲಹೆ, ಮಗಳ ಸಾಧನೆ

ಸಿಂಧು ಕೈತಪ್ಪದ ಕಂಚು

ಮುಖ್ಯಾಂಶಗಳು

- ಸತತ ಎರಡನೇ ಒಲಿಂಪಿಕ್ಸ್‌ನಲ್ಲಿ ಪದಕ ಜಯಿಸಿದ ಸಿಂಧು
- ಮಹಿಳೆಯರ ಬ್ಯಾಡ್ಮಿಂಟನ್‌ಗೆ 3ನೇ ಒಲಿಂಪಿಕ್ ಪದಕ

ಸಾಧನೆ

ವಿಶ್ವ ಚಾಂಪಿಯನ್‌ಷಿಪ್		
2019	ಬಾಸೆಲ್	ಚಿನ್ನ
2017	ಗ್ಲಾಸ್ಗೊ	ಬೆಳ್ಳಿ
2018	ನಾನ್‌ಜಿಂಗ್	ಬೆಳ್ಳಿ
2013	ಕೋಪನ್ ಹೇಗನ್	ಕಂಚು
2014	ಗ್ವಾಂಗ್‌ಜು	ಕಂಚು

ಟೋಕಿಯೊ(ಪಿಟಿಐ): 'ಸೋಲು ಮರೆತು, ಮುಂದಿನ ಹೊಸದಾಗಿ ಆರಂಭಿಸು' ಎಂದು ತಮ್ಮ ತಂದೆ ರಮಣ ಹೇಳಿದ ಮಾತನ್ನು ಪುಸರ್ಲಾ ವೆಂಕಟ ಸಿಂಧು ಅಕ್ಷರಶಃ ಪಾಲಿಸಿದರು.

ಭಾನುವಾರ ಸಂಜೆ ಕೋಟಿ ಕೋಟಿ ಭಾರತೀಯರ ನಿರೀಕ್ಷೆಯನ್ನು ಸಿಂಧು ಹುಸಿ ಮಾಡಲಿಲ್ಲ. ಕಂಚಿನ ಪದಕ ಗೆದ್ದು ಸಂತಸದ ಹೊನಲು ಹರಿಸಿದರು. ಎರಡು ಒಲಿಂಪಿಕ್ಸ್‌ಗಳಲ್ಲಿ ಪದಕ ಜಯಿಸಿದ ಭಾರತದ ಏಕೈಕ ಮಹಿಳಾ ಕ್ರೀಡಾಪಟುವೆನಿಸಿಕೊಂಡರು. ಶನಿವಾರ ಸೆಮಿಫೈನಲ್‌ನಲ್ಲಿ ಚೀನಾ ತೈಪೆಯ ತೈ ಜು ಯೀಂಗ್ ಎದುರು ಸೋತಿದ್ದರು. ಆಗ ಹೈದರಾಬಾದ್‌ನಲ್ಲಿರುವ ಅವರ ತಂದೆ ರಮಣ ಅವರು, 'ಸೋಲು ಮರೆತುಬಿಡು. ಮುಂದಿನ ಪಂದ್ಯದಲ್ಲಿ ಹೊಸ ಹುಮ್ಮಸಿನಿಂದ ಆಡು. ಮತ್ತೆ ಆರಂಭವೆಂದು ಭಾವಿಸಿ ಆಡು' ಎಂದು ಮಾಧ್ಯಮಗಳ ಮೂಲಕ ಸಂದೇಶ ನೀಡಿದ್ದರು.

ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಅಮೋಘ ಹುರುಪಿನಿಂದ ಆಡಿದ ಸಿಂಧು 21–13, 21–15ರಿಂದ ಚೀನಾದ ಹೀ ಬಿಂಗ್ ಜಿಯಾವೊ ವಿರುದ್ಧ ಜಯಿಸಿದರು. ಚಿನ್ನದ ನಿರೀಕ್ಷೆಯೊಂದಿಗೆ ಟೋಕಿಯೊಗೆ ತೆರಳಿದ್ದ ಸಿಂಧು ಖಾಲಿ ಕೈಯಲ್ಲಿ ಮರಳುತ್ತಿಲ್ಲವೆಂಬ ಸಮಾಧಾನವನ್ನು ತಮ್ಮ ಅಭಿಮಾನಿಗಳಿಗೆ ನೀಡಿದರು.

ಇದರೊಂದಿಗೆ ಒಲಿಂಪಿಕ್ ಕೂಟದಲ್ಲಿ ಎರಡು ಪದಕ ಜಯಿಸಿದ ಭಾರತದ ಏಕೈಕ ಮಹಿಳಾ ಕ್ರೀಡಾಪಟುವಾದರು. ಒಟ್ಟಾರೆ ಈ ಸಾಧನೆ ಮಾಡಿದ ಎರಡನೇ ಅಥ್ಲೀಟ್ ಆದರು. ಕುಸ್ತಿಯಲ್ಲಿ ಸುಶೀಲ್ ಕುಮಾರ್ (2008 ಮತ್ತು 2012) ಮಾತ್ರ ಎರಡು ಒಲಿಂಪಿಕ್ ಪದಕಗಳನ್ನು ಜಯಿಸಿದ ಸಾಧನೆ ಮಾಡಿದ್ದಾರೆ.

ಇದಲ್ಲದೇ ಮಹಿಳೆಯರ ಬ್ಯಾಡ್ಮಿಂಟನ್‌ನಲ್ಲಿ ಎರಡನೇ ಕಂಚಿನ ಪದಕ ಗೆದ್ದ ಸಾಧನೆಯೂ ಅವರದ್ದಾಯಿತು. 2012ರಲ್ಲಿ ಸೈನಾ ನೆಹ್ವಾಲ್ ಕಂಚಿನ ಪದಕ ಪಡೆದಿದ್ದರು. 2016ರ ರಿಯೊ ಒಲಿಂಪಿಕ್ಸ್‌ನಲ್ಲಿ ಸಿಂಧು ಬೆಳ್ಳಿ ಪದಕ ಜಯಿಸಿದ್ದರು.

ವಿಶ್ವ ಚಾಂಪಿಯನ್ ಸಿಂಧು ಬಿಂಗ್ ಜಿಯಾವೊ ವಿರುದ್ಧದ ಪಂದ್ಯದಲ್ಲಿ ಆರಂಭದಿಂದಲೇ ಅಟ್ಯಾಕಿಂಗ್ ಆಗಿ ಆಡಿದರು. ಮೊದಲ ಗೇಮ್‌ನಲ್ಲಿ 4–0 ಮುನ್ನಡೆ ಗಳಿಸಿದರು. ಆದರೆ ನಂತರ ತಿರುಗೇಟು ನೀಡಿದ ಚೀನಾ ಆಟಗಾರ್ತಿ 5–5 ರ ಸಮಬಲ ಸಾಧಿಸುವಲ್ಲಿ ಯಶಸ್ವಿಯಾದರು. ಗಟ್ಟಿ ಮನೋಬಲ ಮತ್ತು ಛಲದಿಂದ ಆಡಿದ ಸಿಂಧು, ವಿರಾಮಕ್ಕೆ 11–8ರ ಮುನ್ನಡೆ ಕಾಯ್ದುಕೊಂಡರು.

ನಂತರದ ಆಟದಲ್ಲಿ ಚೆಂದದ ರ್‍ಯಾಲಿ, ಕ್ರಾಸ್‌ಕೋರ್ಟ್ ಸ್ಮ್ಯಾಷ್‌ಗಳ ರಸದೌತಣ ನೀಡಿದ ಸಿಂಧು 10 ಅಂಕಗಳನ್ನು ಬುಟ್ಟಿಗೆ ಹಾಕಿಕೊಂಡರು. ಎದುರಾಳಿಗೆ ಕೇವಲ ಐದು ಅಂಕಗಳನ್ನು ಬಿಟ್ಟುಕೊಟ್ಟರು.

ಎರಡನೇ ಗೇಮ್‌ನಲ್ಲಿ ತೀವ್ರ ಪೈಪೋಟಿ ನೀಡಿದ ಚೀನಾದ ಆಟಗಾರ್ತಿಗೆ ದಿಟ್ಟ ತಿರುಗೇಟು ನೀಡಿದರು. ತಮ್ಮ ಕೋಚ್ ಪಾರ್ಕ್ ಟೆ ಸಾಂಗ್ ಅವರ ಸೂಚನೆಗಳನ್ನು ಚಾಚೂ ತಪ್ಪದೇ ಜಾರಿಗೊಳಿಸಿದರು. ಪದಕವನ್ನು ಕೊರಳಿಗೆ ಹಾಕಿಕೊಂಡರು.

ಚೆನ್ ಯೂಫಿಗೆ ಚಿನ್ನ

ಟೋಕಿಯೊ (ಪಿಟಿಐ): ಕ್ಷಣಕ್ಷಣಕ್ಕೂ ಕುತೂಹಲ ಕೆರಳಿಸಿದ್ದ ಮಹಿಳೆಯರ ಬ್ಯಾಡ್ಮಿಂಟನ್ ಸಿಂಗಲ್ಸ್ ಫೈನಲ್‌ನಲ್ಲಿ ಚೀನಾದ ಚೆನ್ ಯೂಫಿ ಗೆದ್ದು, ಚಿನ್ನದ ಪದಕ ಗಳಿಸಿದರು.

ಭಾನುವಾರ ನಡೆದ ಪಂದ್ಯದಲ್ಲಿ ಯೂಫಿ 21–18, 19–21, 21–18ರಿಂದ ಚೀನಾ ತೈಪೆಯ ತೈ ಜು ಯಿಂಗ್ ಎದುರು ಜಯಿಸಿದರು.

49 ವರ್ಷಗಳ ನಂತರ ನಾಲ್ಕರ ಘಟ್ಟ ಪ್ರವೇಶಿಸಿದ ಪುರುಷರ ಹಾಕಿ ತಂಡ

ಮನಪ್ರೀತ್ ಬಳಗದ ಸಾಧನೆ

ಟೋಕಿಯೊ (ಪಿಟಿಐ): ಭಾರತದ ಕ್ರೀಡಾಪ್ರೇಮಿಗಳ ಪಾಲಿಗೆ ಭಾನುವಾರ ಸಂಜೆಯು ಸಂಭ್ರಮ ತಂದಿತು.

ಒಲಿಂಪಿಕ್ ಕೂಟದಲ್ಲಿ ಭಾರತ ಪುರುಷರ ಹಾಕಿ ತಂಡವು ಸೆಮಿಫೈನಲ್‌ಗೆ ಲಗ್ಗೆ ಇಟ್ಟಿತು. 49 ವರ್ಷಗಳ ನಂತರ ಭಾರತವು ಈ ಸಾಧನೆ ಮಾಡಿತು.

ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಭಾರತವು 3–1 ಗೋಲುಗಳಿಂದ ಗ್ರೇಟ್ ಬ್ರಿಟನ್ ವಿರುದ್ಧ ಜಯಿಸಿತು. ಇದರೊಂದಿಗೆ ಪದಕ ಜಯಿಸುವ ನಿರೀಕ್ಷೆಯನ್ನು ಮೂಡಿಸಿತು.

1972ರ ಮ್ಯೂನಿಚ್ ಒಲಿಂಪಿಕ್‌ನಲ್ಲಿ ಭಾರತ ತಂಡವು ಸೆಮಿಫೈನಲ್ ಸೋತಿತ್ತು. ಮೂರನೇ ಸ್ಥಾನದ ಪಂದ್ಯದಲ್ಲಿ ಜಯಿಸಿ ಕಂಚಿನ ಪದಕ ಪಡೆದಿತ್ತು. 1980ರಲ್ಲಿ ಮಾಸ್ಕೋ ಒಲಿಂಪಿಕ್ಸ್‌ನಲ್ಲಿ ಭಾರತವು ಚಿನ್ನ ಗೆದ್ದಿತ್ತು. ಆದರೆ, ಆ ಕೂಟದಲ್ಲಿ ಕೇವಲ ಆರು ತಂಡಗಳು ಸ್ಪರ್ಧಿಸಿದ್ದವು. ಅದರಿಂದಾಗಿ ಸೆಮಿಫೈನಲ್ ಇರಲಿಲ್ಲ.

ಕಳೆದ 41 ವರ್ಷಗಳಲ್ಲಿ ಪದಕದ ಬರ ಎದುರಿಸಿದ ಭಾರತ ಹಾಕಿ ಕ್ರೀಡೆಗೆ ಈ ಬಾರಿ ಪದಕ ಜಯದ ಭರವಸೆ ಮೂಡಿಸುವಲ್ಲಿ ಮನಪ್ರೀತ್ ಸಿಂಗ್ ನಾಯಕತ್ವದ ತಂಡವು ಯಶಸ್ವಿ ಆಯಿತು. ಎಂಟರ ಘಟ್ಟದ ಪಂದ್ಯದಲ್ಲಿ ದಿಲ್‌ಪ್ರೀತ್ ಸಿಂಗ್ (7ನೇ ನಿಮಿಷ), ಗುರ್ಜಂತ್ ಸಿಂಗ್ (16ನೇ ನಿಮಿಷ) ಮತ್ತು ಹಾರ್ದಿಕ್ ಸಿಂಗ್ (57ನೇ ನಿಮಿಷ) ಗೋಲು ಗಳಿಸಿ ಗೆಲುವಿನ ರೂವಾರಿಗಳಾದರು.

45ನೇ ನಿಮಿಷದಲ್ಲಿ ಬ್ರಿಟನ್‌ನ ಸ್ಯಾಮ್ ವಾರ್ಡ್ ಅವರು ಒಂದು ಗಳಿಸಿದರು. ಆದರೆ ನಂತರದ ಪ್ರಯತ್ನಗಳನ್ನು ತಡೆಯುವಲ್ಲಿ ಭಾರತದ ರಕ್ಷಣಾ ಪಡೆ ಯಶಸ್ವಿಯಾಯಿತು. ಅಲ್ಲದೇ ಗೋಲ್‌ಪೋಸ್ಟ್‌ಗೆ ಪಿ.ಆರ್. ಶ್ರೀಜೇಶ್ ಗಟ್ಟಿಗೋಡೆಯಾಗಿ ನಿಂತರು.

ಮಂಗಳವಾರ ನಡೆಯಲಿರುವ ಸೆಮಿಫೈನಲ್‌ನಲ್ಲಿ ಭಾರತ ತಂಡವು, ವಿಶ್ವ ಚಾಂಪಿಯನ್ ಬೆಲ್ಜಿಯಂ ವಿರುದ್ಧ ಆಡಲಿದೆ.

ಭಾರತ ತಂಡದ ಆಟಗಾರರ ಸಂಭ್ರಮ —ರಾಯಿಟರ್ಸ್ ಚಿತ್ರ

ರಾಣಿ ಬಳಗಕ್ಕೆ ಕಠಿಣ ಸವಾಲು: ನಾಲ್ಕು ದಶಕಗಳಲ್ಲಿ ಇದೇ ಮೊದಲ ಸಲ ಹಾಕಿ ಕ್ವಾರ್ಟರ್‌ಫೈನಲ್ ತಲುಪಿರುವ ಭಾರತ ಮಹಿಳಾ ತಂಡವು ಸೋಮವಾರ ಆಸ್ಟ್ರೇಲಿಯಾ ಎದುರು ಕಣಕ್ಕಿಳಿಯಲಿದೆ.

ರಾಣಿ ರಾಂಪಾಲ್ ಬಳಗವು ಗುಂಪು ಹಂತದಲ್ಲಿ ಆರು ಪಾಯಿಂಟ್ ಗಳಿಸಿ ಎಂಟರ ಘಟ್ಟಕ್ಕೆ ಪ್ರವೇಶಿಸಿತು. ಕಳೆದ ಪಂದ್ಯದಲ್ಲಿ ಹ್ಯಾಟ್ರಿಕ್ ಗೋಲು ಗಳಿಸಿದ್ದ ವಂದನಾ ಕಟಾರಿಯಾ ಭರವಸೆ ಮೂಡಿಸಿರುವ ಆಟಗಾರ್ತಿಯಾಗಿದ್ದಾರೆ. ಗೋಲ್‌ಕೀಪರ್ ಸವಿತಾ ಕೂಡ ಉತ್ತಮವಾಗಿ ಆಡುತ್ತಿದ್ದಾರೆ.

ಸೆಮಿಯಲ್ಲಿ ಜರ್ಮನಿ – ಆಸ್ಟ್ರೇಲಿಯಾ ಮುಖಾಮುಖಿ

ಟೋಕಿಯೊ (ಪಿಟಿಐ): ಬಲಿಷ್ಠ ಆಸ್ಟ್ರೇಲಿಯಾ ಮತ್ತು ಜರ್ಮನಿ ತಂಡಗಳು ಪುರುಷರ ಹಾಕಿ ಸ್ಪರ್ಧೆಯ ಸೆಮಿಫೈನಲ್‌ನಲ್ಲಿ ಮುಖಾಮುಖಿಯಾಗಲಿವೆ.

ಭಾನುವಾರ ನಡೆದ ಮೊದಲ ಕ್ವಾರ್ಟರ್ ಫೈನಲ್ ಹಣಾಹಣಿಯಲ್ಲಿ ಜರ್ಮನಿ 3–1 ಗೋಲುಗಳಿಂದ ಅರ್ಜೆಂಟೀನಾವನ್ನು ಪರಾಭವಗೊಳಿಸಿತು. ಆ ಮೂಲಕ ಒಲಿಂಪಿಕ್ಸ್‌ನಲ್ಲಿ ಸತತ ಐದನೇ ಬಾರಿ ನಾಲ್ಕರ ಘಟ್ಟ ಪ್ರವೇಶಿಸಿದ ಸಾಧನೆ ಮಾಡಿತು.

2016ರ ರಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆದ್ದ ಸಾಧನೆ ಮಾಡಿದ್ದ ಅರ್ಜೆಂಟೀನಾ ತಂಡ ಈ ಪಂದ್ಯದಲ್ಲಿ ಸಂಪೂರ್ಣವಾಗಿ ಮಂಕಾಯಿತು. 'ಬಿ' ಗುಂಪಿನಲ್ಲಿ ಎರಡನೇ ಸ್ಥಾನ ಪಡೆದು ಎಂಟರ ಘಟ್ಟಕ್ಕೆ ಅರ್ಹತೆ ಪಡೆದಿದ್ದ ಜರ್ಮನಿ ತಂಡವು ಎದುರಾಳಿಗಳ ವಿರುದ್ಧ ಪೂರ್ಣ ಪ್ರಾಬಲ್ಯ ಮೆರೆಯಿತು.

ಜರ್ಮನಿ ಪರ ಲುಕಾಸ್ ವಿಂಡ್‌ಫೆಡರ್ 19 ಮತ್ತು 48ನೇ ನಿಮಿಷಗಳಲ್ಲಿ ಚೆಂಡನ್ನು ಗುರಿ ಸೇರಿಸಿದರು. ಟಿಮ್ ಹರ್ಜ್‌ಬ್ರಚ್ 40ನೇ ನಿಮಿಷದಲ್ಲಿ ಕೈಚಳಕ ತೋರಿದರು. ಅರ್ಜೆಂಟೀನಾ ತಂಡದ ಶುಟ್ ಕ್ಯಾಸಿಲಾ 52ನೇ ನಿಮಿಷದಲ್ಲಿ ಗೋಲು ದಾಖಲಿಸಿದರು.

ವಿದಾಯದ ಪಂದ್ಯ: ಇದು ಅರ್ಜೆಂಟೀನಾ ತಂಡದ ಅನುಭವಿ ಗೋಲ್‌ಕೀಪರ್ ಯುವಾನ್ ವಿವಾಲ್ಡಿ ಅವರ ವೃತ್ತಿಬದುಕಿನ ಕೊನೆಯ ಪಂದ್ಯವಾಗಿತ್ತು.

'ಇದು ನನ್ನ ವೃತ್ತಿ ಬದುಕಿನ ಅಂತಿಮ ಪಂದ್ಯ. ಸುದೀರ್ಘ ಕಾಲ ದೇಶಕ್ಕಾಗಿ ಆಡಿದ್ದೇನೆ. ಅದನ್ನೆಲ್ಲಾ ನೆನಪಿಸಿಕೊಂಡರೆ ಹೆಮ್ಮೆಯಾಗುತ್ತದೆ' ಎಂದು 42 ವರ್ಷ ವಯಸ್ಸಿನ ಯುವಾನ್ ಹೇಳಿದರು.

ಆಸ್ಟ್ರೇಲಿಯಾ ಜಯಭೇರಿ: ರೋಚಕತೆ ಪಡೆದುಕೊಂಡಿದ್ದ ಎರಡನೇ ಕ್ವಾರ್ಟರ್ ಫೈನಲ್‌ನಲ್ಲಿ ಆಸ್ಟ್ರೇಲಿಯಾ ತಂಡ ಗೆಲುವಿನ ಸಿಹಿ ಸವಿಯಿತು.

ಕಾಂಗರೂ ನಾಡಿನ ತಂಡವು ಶೂಟೌಟ್‌ನಲ್ಲಿ 3–0ರಿಂದ ನೆದರ್ಲೆಂಡ್ಸ್ ತಂಡವನ್ನು ಮಣಿಸಿತು.

ಪಂದ್ಯದಲ್ಲಿ ನೆದರ್ಲೆಂಡ್ಸ್ ತಂಡ ಆಸ್ಟ್ರೇಲಿಯಾಕ್ಕೆ ಪ್ರಬಲ ಪೈಪೋಟಿ ಒಡ್ಡಿತು. ಹೀಗಾಗಿ ನಿಗದಿತ ಅವಧಿಯಲ್ಲಿ ಉಭಯ ತಂಡಗಳೂ ತಲಾ ಎರಡು ಗೋಲು ಗಳಿಸಿದವು. ವಿಜೇತರನ್ನು ನಿರ್ಧರಿಸಲು ಶೂಟೌಟ್ ಮೊರೆ ಹೋಗಲಾಯಿತು. ಆಸ್ಟ್ರೇಲಿಯಾ ತಂಡದ ಗೋಲ್‌ಕೀಪರ್ ಆ್ಯಂಡ್ರ್ಯೂ ಚಾರ್ಟರ್, ನೆದರ್ಲೆಂಡ್ಸ್ ಆಟಗಾರರ ನಾಲ್ಕು ಪ್ರಯತ್ನಗಳನ್ನು ವಿಫಲಗೊಳಿಸಿ ಗೆಲುವಿನ ರೂವಾರಿಯಾದರು.

ನೆದರ್ಲೆಂಡ್ಸ್ ವಿರುದ್ಧ ಗೆದ್ದ ಬಳಿಕ ಆಸ್ಟ್ರೇಲಿಯಾ ಆಟಗಾರರು ಸಂಭ್ರಮಿಸಿದರು—ರಾಯಿಟರ್ಸ್ ಚಿತ್ರ

ಕುಸ್ತಿ: ದಾಖಲೆಯ ಮೇಲೆ ಲೊಪೆಜ್ ಕಣ್ಣು

ಟೋಕಿಯೊ (ರಾಯಿಟರ್ಸ್): ಕ್ಯೂಬಾದ ಮಿಜಾಯಿನ್ ಲೊಪೆಜ್ ನ್ಯೂನೆಜ್ ಅವರು ಗ್ರೀಕೊ ರೋಮನ್ ಕುಸ್ತಿಯಲ್ಲಿ ಸತತ ನಾಲ್ಕನೇ ಬಾರಿ ಒಲಿಂಪಿಕ್ಸ್ ಚಾಂಪಿಯನ್ ಆಗುವತ್ತ ದಾಪುಗಾಲಿಟ್ಟರು. ಕಳೆದ ಮೂರು ಕೂಟಗಳಲ್ಲಿ ಸೂಪರ್ ಹೆವಿವೇಟ್ ವಿಭಾಗದಲ್ಲಿ ಚಿನ್ನದ ಪದಕ ಗೆದ್ದಿರುವ ಅವರು ಭಾನುವಾರ ಇಲ್ಲಿ ಫೈನಲ್ ತಲುಪಿದ್ದಾರೆ.

ಮಕುಹಾರಿ ಮೆಸ್ಸೆ ಹಾಲ್‌ನಲ್ಲಿ ಎದುರಾಳಿಗಳಿಗೆ ಒಂದೂ ಪಾಯಿಂಟ್ಸ್ ಬಿಟ್ಟುಕೊಡದೆ ಮೂರು ಬೌಟ್ ಜಯಿಸಿ, ಪ್ರಶಸ್ತಿ ಸುತ್ತಿಗೆ ಲಗ್ಗೆಯಿಟ್ಟರು. 130 ಕೆಜಿ ವಿಭಾಗದ ಸೆಮಿಫೈನಲ್ ಹಣಾಹಣಿಯಲ್ಲಿ ಟರ್ಕಿಯ ರಿಜಾ ಕಯಾಲ್ಪ್ ಅವರನ್ನು 2–0ಯಿಂದ ಚಿತ್ ಮಾಡಿದ ಕ್ಯೂಬಾದ ಪೈಲ್ವಾನ, ಇದಕ್ಕೂ ಮೊದಲು ನಡೆದ ಎರಡು ಸುತ್ತುಗಳಲ್ಲಿ ಎದುರಾಳಿಗಳಿಗೆ ಭಾರಿ ಅಂತರದಿಂದ ಸೋಲುಣಿಸಿದ್ದರು.

ಮೊದಲ ಬೌಟ್‌ನಲ್ಲಿ 9–0ಯಿಂದ ರುಮೇನಿಯಾದ ಅಲಿನ್ ಅಲೆಕ್ಸುಕ್ ಸಿರಾರ್ಜು ಎದುರು, ಎರಡನೇ ಬೌಟ್‌ನಲ್ಲಿ 8–0ಯಿಂದ ಇರಾನ್‌ನ ಅಮಿನ್ ಮಿರ್ಜಾಜದೇಹ್ ವಿರುದ್ಧ ಜಯಭೇರಿ ಮೊಳಗಿಸಿದರು.

ಟೋಕಿಯೊ ಕೂಟದಲ್ಲಿ ಚಿನ್ನ ಗೆದ್ದರೆ ಲೊಪೆಜ್, ನಾಲ್ಕು ಒಲಿಂಪಿಕ್ಸ್‌ಗಳಲ್ಲಿ ಚಾಂಪಿಯನ್ ಆದ ಮೊದಲ ಪುರುಷ ಕುಸ್ತಿಪಟು ಎನಿಸಿಕೊಳ್ಳಲಿದ್ದಾರೆ. ಜಪಾನ್‌ನ ಫ್ರೀಸ್ಟೈಲ್ ಕುಸ್ತಿಪಟು ಕವೊರಿ ಇಚೊ ಅವರು ವೈಯಕ್ತಿಕ ವಿಭಾಗದಲ್ಲಿ ಸತತ ನಾಲ್ಕು ಒಲಿಂಪಿಕ್ಸ್‌ಗಳಲ್ಲಿ ಚಿನ್ನ ಗೆದ್ದ ಮೊದಲ ಮಹಿಳೆ ಎನಿಸಿಕೊಂಡಿದ್ದಾರೆ. ಫೈನಲ್‌ನಲ್ಲಿ 38 ವರ್ಷದ ಲೊಪೆಜ್, ಜಾರ್ಜಿಯಾದ ಇಯಾಕೊಬಿ ಕಜಾಜ ಅವರನ್ನು ಎದುರಿಸಲಿದ್ದಾರೆ. ಸೋಮವಾರ ಈ ಬೌಟ್ ನಿಗದಿಯಾಗಿದೆ.

ಲೊಪೆಜ್ ಅವರು 2008ರ ಬೀಜಿಂಗ್, 2012ರ ಲಂಡನ್ ಮತ್ತು 2016ರ ರಿಯೊ ಕೂಟಗಳಲ್ಲಿ ಚಿನ್ನದ ಪದಕ ತಮ್ಮದಾಗಿಸಿಕೊಂಡಿದ್ದಾರೆ.

ಕ್ಯೂಬಾದ ಮಿಜಾಯಿನ್ ಲೊಪೆಜ್ ನ್ಯೂನೆಜ್— ಎಎಫ್‌ಪಿ

ಸತತ ಎರಡು ಒಲಿಂಪಿಕ್ಸ್‌ನಲ್ಲಿ ಪದಕ ಜಯಿಸಿದ ಭಾರತದ ಮೊದಲ ಮಹಿಳೆ ಪಿ.ವಿ. ಸಿಂಧು. ಅವರು ತಮ್ಮ ಬದ್ಧತೆ, ಶ್ರದ್ಧೆ ಮತ್ತು ಪರಿಶ್ರಮದಿಂದ ಈ ನೂತನ ಮೈಲುಗಲ್ಲು ನಿರ್ಮಿಸಿದ್ದಾರೆ. ಅಭಿನಂದನೆಗಳು.
ರಾಮನಾಥ ಕೋವಿಂದ್, ರಾಷ್ಟ್ರಪತಿ

ಪಿ.ವಿ.ಸಿಂಧು ಭಾರತದ ಹೆಮ್ಮೆ. ಅವರು ಶ್ರೇಷ್ಠ ಒಲಿಂಪಿಯನ್‌ಗಳಲ್ಲಿ ಒಬ್ಬರು. ಕಂಚಿನ ಪದಕ ಜಯಿಸಿದ ಸಿಂಧು ತಮ್ಮ ಅಮೋಘ ಆಟದಿಂದ ನಾವೆಲ್ಲರೂ ಹೆಮ್ಮೆಯಿಂದ ಬೀಗುವಂತೆ ಮಾಡಿದ್ದಾರೆ. ಅಭಿನಂದನೆಗಳು
ನರೇಂದ್ರ ಮೋದಿ, ಪ್ರಧಾನಮಂತ್ರಿ

ಅದ್ಭುತ ಸಿಂಧುಗೆ ಅಭಿನಂದನೆಗಳು. ಸತತ ಎರಡನೇ ಬಾರಿ ಒಲಿಂಪಿಕ್ ಪದಕ ಜಯಿಸಿರುವುದು ಆಕೆ ಮಾಡಿದ ಕಠಿಣ ಪರಿಶ್ರಮಕ್ಕೆ ಸಿಕ್ಕ ಫಲ. ತಂಡದ ಕೋಚ್ ಮತ್ತು ನೆರವು ಸಿಬ್ಬಂದಿಯ ಕಾರ್ಯ ಶ್ಲಾಘನೀಯ.
ಪಿ. ಗೋಪಿಚಂದ್
ರಾಷ್ಟ್ರೀಯ ಬ್ಯಾಡ್ಮಿಂಟನ್ ಕೋಚ್

ಜಿಮ್ನಾಸ್ಟಿಕ್ಸ್: ಚಿನ್ನಕ್ಕೆ ಮುತ್ತಿಟ್ಟ ಡೊಲ್ಗೊಪ್ಯಾಟ್

ಟೋಕಿಯೊ (ಎಪಿ): ಆರ್ಟೆಮ್ ಡೊಲ್ಗೊಪ್ಯಾಟ್ ಅವರು ಆರ್ಟಿಸ್ಟಿಕ್ ಜಿಮ್ನಾಸ್ಟಿಕ್ಸ್ ವಿಭಾಗದಲ್ಲಿ ಇಸ್ರೇಲ್‌ಗೆ ಮೊದಲ ಚಿನ್ನದ ಪದಕ ಗೆದ್ದುಕೊಟ್ಟರು. ಭಾನುವಾರ ನಡೆದ ಪುರುಷರ ವೈಯಕ್ತಿಕ ಫ್ಲೋರ್ ಎಕ್ಸರ್‌ಸೈಜ್ ವಿಭಾಗದ ಫೈನಲ್‌ನಲ್ಲಿ ಸ್ಪೇನ್‌ನ ರೇಡೆರ್ಲಿ ಜಪಾಟ ಅವರನ್ನು ಕೂದಲೆಳೆ ಅಂತರದಿಂದ ಹಿಂದಿಕ್ಕಿ ಅಗ್ರಸ್ಥಾನ ಗಳಿಸಿದರು.

ಪ್ರಶಸ್ತಿ ಸುತ್ತಿನ ಸ್ಪರ್ಧೆಯಲ್ಲಿ ಡೊಲ್ಗೊಪ್ಯಾಟ್ ಮತ್ತು ಜಪಾಟ ಇಬ್ಬರೂ ತಲಾ 14.9333 ಪಾಯಿಂಟ್ಸ್ ಕಲೆಹಾಕಿದ್ದರು. ಆದರೆ ಜಪಾಟ ಅವರಿಗಿಂತ ಡೊಲ್ಗೊಪ್ಯಾಟ್ ಅವರು ಸೆಟ್ ಸ್ವಲ್ಪ ಕಷ್ಟಕರವಾಗಿತ್ತು. ಹೀಗಾಗಿ ಅವರಿಗೆ ಚಿನ್ನದ ಪದಕ ಒಲಿಯಿತು.

ಒಲಿಂಪಿಕ್ಸ್‌ನಲ್ಲಿ ಇಸ್ರೇಲ್ ಗೆದ್ದ ಕೇವಲ ಎರಡನೇ ಚಿನ್ನದ ಪದಕವಿದು. 2004ರ ಅಥೆನ್ಸ್ ಕೂಟದ ಪುರುಷರ ಸೇಲ್‌ಬೋರ್ಡ್ ವಿಭಾಗದಲ್ಲಿ ಗಾಲ್ ಫ್ರಿಡ್ಮನ್ ಚಿನ್ನ ಗೆದ್ದುಕೊಂಡಿದ್ದರು.

ಚೀನಾದ ಕ್ಷಿಯಾವೊ ರೂಟಾಂಗ್ ಕಂಚಿನ ಪದಕ ಪದಕ ತಮ್ಮದಾಗಿಸಿಕೊಂಡರು. ಟೋಕಿಯೊ ಕ್ರೀಡಾಕೂಟದಲ್ಲಿ ಇದು ಅವರಿಗೆ ಮೂರನೇ ಪದಕ. ಪುರುಷರ ಆಲ್ ಅರೌಂಡ್ ವಿಭಾಗದಲ್ಲಿ ಬೆಳ್ಳಿ ಹಾಗೂ ತಂಡ ವಿಭಾಗದಲ್ಲಿ ಕಂಚಿನ ಪದಕವನ್ನು ಅವರು ಗೆದ್ದಿದ್ದರು.

ಚಿನ್ನ ಗೆದ್ದ ರೆಬೆಕಾ: ಮಹಿಳೆಯರ ವಾಲ್ಟ್ ವಿಭಾಗದ ಚಿನ್ನದ ಪದಕವು ಬ್ರೆಜಿಲ್‌ನ ರೆಬೆಕಾ ಆ್ಯಂಡ್ರಾಡೆ ಅವರಿಗೆ ಒಲಿಯಿತು. ಫೈನಲ್ಸ್‌ನಲ್ಲಿ ಅವರು 15.083 ಸ್ಕೋರ್ ಗಳಿಸಿದರು. ಅಮೆರಿಕದ ಮೈಕಾಲ್ಯ ಸ್ಕಿನ್ನರ್ (14.916) ಬೆಳ್ಳಿ ಮತ್ತು ದಕ್ಷಿಣ ಕೊರಿಯಾದ ಸಿಜಿಯೊಂಗ್ ಯೊ (14.733) ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಆರ್ಟೆಮ್ ಡೊಲ್ಗೊಪ್ಯಾಟ್– ರಾಯಿಟರ್ಸ್ ಚಿತ್ರ

ನಾಳೆ ಭಾರತದ ಪೈಲ್ವಾನರ ಅಭಿಯಾನ

ಭಾರತದ ಕುಸ್ತಿಪಟುಗಳ ಅಭಿಯಾನ ನಾಳೆಯಿಂದ ಆರಂಭವಾಗಲಿದೆ. ಮಹಿಳೆಯರ 62 ಕೆಜಿ ವಿಭಾಗದ ಫ್ರೀಸ್ಟೈಲ್‌ನಲ್ಲಿ ಸೋನಮ್ ಮಲಿಕ್ ಮಂಗಳವಾರ ಕಣಕ್ಕಿಳಿಯಲಿದ್ದಾರೆ. ದೇಶದ ಏಳು ಮಂದಿ ಕುಸ್ತಿಪಟುಗಳು ಪದಕಗಳ ಬೇಟೆಗೆ ಸಜ್ಜಾಗಿದ್ದಾರೆ. ರಿಯೊ ಒಲಿಂಪಿಕ್ಸ್‌ನಲ್ಲೂ ಇಷ್ಟೇ ಮಂದಿ ಅಂಗಣಕ್ಕಿಳಿದಿದ್ದರು.

ಕಳೆದ ಕಾಮನ್‌ವೆಲ್ತ್ ಗೇಮ್ಸ್, ಏಷ್ಯನ್ ಗೇಮ್ಸ್‌ನಲ್ಲಿ ಪದಕಗಳ ಸಾಧನೆ ಮಾಡಿರುವ ಬಜರಂಗ್ ಪೂನಿಯಾ (65 ಕೆಜಿ ವಿಭಾಗ) ಮತ್ತು ವಿನೇಶಾ ಪೋಗಟ್ (53 ಕೆಜಿ) ಅವರ ಮೇಲೆ ಹೆಚ್ಚಿನ ನಿರೀಕ್ಷೆ ಇದೆ.

ಪುರುಷರ ವಿಭಾಗದಲ್ಲಿ ರವಿಕುಮಾರ್ ದಹಿಯಾ (57ಕೆಜಿ), ದೀಪಕ್ ಪುನಿಯಾ (86 ಕೆಜಿ) ಮತ್ತು ಮಹಿಳೆಯರ ವಿಭಾಗದಲ್ಲಿ ಅನ್ಶು ಮಲಿಕ್ (57 ಕೆಜಿ), ಸೀಮಾ ಬಿಸ್ಲಾ (50 ಕೆಜಿ) ಕಣದಲ್ಲಿರುವ ಇನ್ನುಳಿದ ಸ್ಪರ್ಧಿಗಳು.

ಪೈಲ್ವಾನರ ನೆರವಿಗೆ ಟೆನಿಸ್ ತಂಡದ ಫಿಸಿಯೊ: ಟೇಬಲ್ ಟೆನಿಸ್ ತಂಡದೊಂದಿಗೆ ತೆರಳಿದ್ದ ಫಿಸಿಯೊ ಆನಂದ್ ದುಬೆ ಅವರಿಗೆ ಕುಸ್ತಿ ತಂಡದೊಂದಿಗೆ ಕಾರ್ಯನಿರ್ವಹಿಸಲು ಭಾರತ ಒಲಿಂಪಿಕ್ಸ್ ಸಮಿತಿ (ಐಒಎ) ಮನವಿ ಮಾಡಿದೆ. ಹೀಗಾಗಿ ಭಾರತಕ್ಕೆ ಮರಳಲು ಸಜ್ಜಾಗಿದ್ದ ಅವರಿಗೆ ಟೋಕಿಯೊದಲ್ಲೇ ಉಳಿದುಕೊಂಡು ಕುಸ್ತಿಪಟುಗಳಿಗೆ ನೆರವಾಗುವಂತೆ ತಿಳಿಸಲು ರಾಷ್ಟ್ರೀಯ ಟೆನಿಸ್ ಫೆಡರೇಷನ್‌ಗೆ ಐಒಎ ಕೋರಿದೆ.



ಸೋನಮ್ ಮಲಿಕ್ (ಕೆಂಪು ಪೋಷಾಕು) —ಪಿಟಿಐ ಚಿತ್ರ

ಜ್ವೆರೆವ್ ಚಿನ್ನದ ಸಾಧನೆ

ಟೋಕಿಯೊ (ರಾಯಿಟರ್ಸ್): ಯುವ ಟೆನಿಸ್ ಆಟಗಾರ ಅಲೆಕ್ಸಾಂಡರ್ ಜ್ವೆರೆವ್ ಭಾನುವಾರ ಟೋಕಿಯೊ ಅಂಗಳದಲ್ಲಿ ಚಿನ್ನದ ಸಂಭ್ರಮ ಆಚರಿಸಿದರು.

ಪುರುಷರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ 6–3, 6–1 ನೇರ ಸೆಟ್‌ಗಳಿಂದ ರಷ್ಯಾ ಒಲಿಂಪಿಕ್ ಸಮಿತಿಯ (ಆರ್‌ಒಸಿ) ಕರೆನ್ ಕಚಾನೊವ್ ಅವರನ್ನು ಮಣಿಸಿದರು. ಇದರೊಂದಿಗೆ ಈ ಸಾಧನೆ ಮಾಡಿದ ಜರ್ಮನಿಯ ಮೊದಲ ಆಟಗಾರ ಎಂಬ ಹಿರಿಮೆ ತಮ್ಮದಾಗಿಸಿಕೊಂಡರು.

ವಿಶ್ವ ರ‍್ಯಾಂಕಿಂಗ್‌ನಲ್ಲಿ ಐದನೇ ಸ್ಥಾನದಲ್ಲಿರುವ ಜ್ವೆರೆವ್, ಸೆಮಿಫೈನಲ್‌ನಲ್ಲಿ ವಿಶ್ವದ ಅಗ್ರಮಾನ್ಯ ಆಟಗಾರ ನೊವಾಕ್ ಜೊಕೊವಿಚ್‌ಗೆ ಆಘಾತ ನೀಡಿದ್ದರು. ಹೀಗಾಗಿ ಕರೆನ್ ವಿರುದ್ಧವೂ ವಿಶ್ವಾಸದಿಂದಲೇ ಹೋರಾಡಿದರು. ಮಿಂಚಿನ ಸರ್ವ್ ಹಾಗೂ ರಿಟರ್ನ್‌ಗಳ ಮೂಲಕ ಎದುರಾಳಿಯನ್ನು ಕಂಗೆಡಿಸಿದರು.

ಮೊದಲ ಸೆಟ್‌ನಲ್ಲಿ ಜ್ವೆರೆವ್‌ಗೆ ಅಲ್ಪ ಪ್ರತಿರೋಧ ಒಡ್ಡಿದ ಕರೆನ್, ಎರಡನೇ ಸೆಟ್‌ನಲ್ಲಿ ಮಂಕಾದರು. ತಾವು ಮಾಡಿದ ಸರ್ವ್‌ಗಳನ್ನು ಉಳಿಸಿಕೊಳ್ಳಲೂ ವಿಫಲರಾದರು.

ಚಿನ್ನದ ಪದಕದೊಂದಿಗೆ ಅಲೆಕ್ಸಾಂಡರ್ ಜ್ವೆರೆವ್ ಸಂಭ್ರಮ —ರಾಯಿಟರ್ಸ್ ಚಿತ್ರ

ಬ್ರೆಜಿಲ್‌ನ ಆ್ಯಂಡ್ರಾಡೆ ರೆಬೆಕಾ – ರಾಯಿಟರ್ಸ್ ಚಿತ್ರ



ಟೋಕಿಯೊ ಒಲಿಂಪಿಕ್ಸ್‌ನ ಜಿಮ್ನಾಸ್ಟಿಕ್ಸ್‌ನ ಮಹಿಳೆಯರ ಅನ್‌ಈವನ್ ಬಾರ್ಸ್ ವಿಭಾಗದ ಫೈನಲ್‌ನಲ್ಲಿ ಚಿನ್ನ ಗೆದ್ದ ಬೆಲ್ಜಿಯಂನ ನಿನಾ ಡೆರ್ವೀಲ್ —ಎಎಫ್‌ಪಿ ಚಿತ್ರ

ರಾಷ್ಟ್ರೀಯ ಜೂನಿಯರ್ ಚಾಂಪಿಯನ್‌ಷಿಪ್: ಮಹಾರಾಷ್ಟ್ರಕ್ಕೆ ಎರಡನೇ ಸ್ಥಾನ

ಹರಿಯಾಣ ಬಾಕ್ಸರ್‌ಗಳ ಪ್ರಾಬಲ್ಯ

ಮುಖ್ಯಾಂಶಗಳು

- 10 ವಿಭಾಗಗಳಲ್ಲಿ ಚಿನ್ನ ಗಳಿಸಿದ ಹರಿಯಾಣ
- ಮೂರನೇ ಸ್ಥಾನಕ್ಕೆ ದೆಹಲಿ ಬಾಕ್ಸರ್‌ಗಳು
- 48 ಕೆಜಿ ವಿಭಾಗದಲ್ಲಿ ವಿಷು ರಾಠಿಗೆ ಅಗ್ರಸ್ಥಾನ

ಸೋನೆಪತ್ (ಪಿಟಿಐ): ಹರಿಯಾಣದ ಬಾಕ್ಸರ್‌ಗಳು ಇಲ್ಲಿ ನಡೆಯುತ್ತಿರುವ ಜೂನಿಯರ್ ಬಾಲಕಿಯರ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಪ್ರಾಬಲ್ಯ ಮೆರೆದರು. 10 ವಿಭಾಗಗಳಲ್ಲಿ ಚಿನ್ನ ಗಳಿಸಿದ ಹರಿಯಾಣ ತಂಡದವರು ಮೊದಲ ಸ್ಥಾನದಲ್ಲಿದ್ದು ಎಂಟು ಪದಕ ಗೆದ್ದಿರುವ ಮಹಾರಾಷ್ಟ್ರ ಎರಡನೇ ಸ್ಥಾನದಲ್ಲಿದೆ.

ದೇಶಿ ಬಾಕ್ಸಿಂಗ್‌ನಲ್ಲಿ ತಮ್ಮ ಶಕ್ತಿಯನ್ನ ಮತ್ತೊಮ್ಮೆ ಸಾಬೀತು ಮಾಡಿದ ಹರಿಯಾಣದ ಬಾಕ್ಸರ್‌ಗಳು ಮೂರು ಬೆಳ್ಳಿ ಪದಕಗಳನ್ನು ಕೂಡ ತಮ್ಮದಾಗಿಸಿಕೊಂಡರು. ಕಳೆದ ವಾರ ನಡೆದಿದ್ದ ಯೂತ್ ಮಹಿಳಾ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಹರಿಯಾಣ ಅಗ್ರಸ್ಥಾನ ಗಳಿಸಿತ್ತು.

ಭಾನುವಾರ ನಡೆದ 46 ಕೆಜಿ ವಿಭಾಗದಲ್ಲಿ ಮುಸ್ಕಾನ್ ಜಾರ್ಖಂಡ್‌ನ ಅನು ವಿರುದ್ಧ 4–0ಯಿಂದ ಗೆದ್ದು ಹಾಲಿ ಚಾಂಪಿಯನ್ನರ ಪದಕ ಗೆಲ್ಲುವ ಅಭಿಯಾನಕ್ಕೆ ನಾಂದಿ ಹಾಡಿದರು. ಮಹಿ ರಾಘವ್ ನಿರೀಕ್ಷೆಯನ್ನು ಹುಸಿಗೊಳಿಸಲಿಲ್ಲ. ಅವರು ಆರ್ಷದೀಪ್ ಕೌರ್ ಎದುರು ಏಕಪಕ್ಷೀಯ ಗೆಲುವು ಸಾಧಿಸಿದರು.

48 ಕೆಜಿ ವಿಭಾಗದಲ್ಲಿ ವಿಷು ರಾಠಿ, 52 ಕೆಜಿ ವಿಭಾಗದಲ್ಲಿ ತನು, 54 ಕೆಜಿ ವಿಭಾಗದಲ್ಲಿ ಆರಜು, 57 ಕೆಜಿ ವಿಭಾಗದಲ್ಲಿ ಅಂಚಲ್ ಸೈನಿ, 70 ಕೆಜಿ ವಿಭಾಗದಲ್ಲಿ ರುದ್ರಿಕಾ, 75 ಕೆಜಿ ವಿಭಾಗದಲ್ಲಿ ಪ್ರಾಂಜಲ್ ಯಾದವ್, 80 ಕೆಜಿ ವಿಭಾಗದಲ್ಲಿ ಸಂಜನ ಮತ್ತು 80+ ಕೆಜಿ ವಿಭಾಗದಲ್ಲಿ ಕೀರ್ತಿ ಅವರು ಹರಿಯಾಣಕ್ಕೆ ಚಿನ್ನ ತಂದುಕೊಟ್ಟರು.

50 ಕೆಜಿ ವಿಭಾಗದಲ್ಲಿ ನೇಹಾ, 60 ಕೆಜಿ ವಿಭಾಗದಲ್ಲಿ ಕನಿಷ್ಕ ಮಾನ್, 66 ಕೆಜಿ ವಿಭಾಗದಲ್ಲಿ ಸ್ನೇಹ ಚಿನ್ನದ ಪದಕದ ಬೌಟ್‌ಗಳಲ್ಲಿ ಸೋಲನುಭವಿಸಿದರು.

ಮಹಾರಾಷ್ಟ್ರದ ದೇವಿಕಾ ಘೋರ್ಪಡೆ 50 ಕೆಜಿ ವಿಭಾಗದಲ್ಲಿ ಚಿನ್ನ ಗಳಿಸಿದರು. ಯೋಗಿನಿ ಪಾಟೀಲ್ (52 ಕೆಜಿ) ಮತ್ತು ಕಾಂಚನ (80+ ಕೆಜಿ) ಬೆಳ್ಳಿ ಪದಕ ಗೆದ್ದರು. ಸಿದ್ರಾ ಶೇಕ್ (46 ಕೆಜಿ), ಸೃಷ್ಟಿ ರಸ್ಕರ್ (57 ಕೆಜಿ), ಸ್ವಪ್ನ ಚವಾಣ್ (60 ಕೆಜಿ), ಅದಿತಿ (66 ಕೆಜಿ) ಮತ್ತು ರುತುಜಾ ತೊಂಬರೆ (80 ಕೆಜಿ) ಕಂಚಿನ ಪದಕ ಗೆದ್ದುಕೊಂಡರು. ದೆಹಲಿ ಮೂರನೇ ಸ್ಥಾನ ಗಳಿಸಿತು.

ಭಾರತಕ್ಕೆ ಕಠಿಣ ಸವಾಲೊಡ್ಡುವ ವಿಶ್ವಾಸ: ಜ್ಯಾಕ್ ಲೀಚ್

ಲಂಡನ್ (ಪಿಟಿಐ): ಭಾರತದ ವಿರುದ್ಧ ನಡೆಯಲಿರುವ ಐದು ಟೆಸ್ಟ್‌ಗಳ ಸರಣಿಯಲ್ಲಿ ತಮ್ಮ ತಂಡವು ಅಮೋಘ ಆಟವಾಡಲಿದೆ ಎಂದು ಇಂಗ್ಲೆಂಡ್ ತಂಡದ ಸ್ಪಿನ್ನರ್ ಜ್ಯಾಕ್ ಲೀಚ್ ಹೇಳಿದ್ದಾರೆ.

ಹೋದ ಫೆಬ್ರುವರಿ–ಮಾರ್ಚ್‌ನಲ್ಲಿ ಇಂಗ್ಲೆಂಡ್ ತಂಡವು ಭಾರತದಲ್ಲಿ ಪ್ರವಾಸ ಮಾಡಿದಾಗ ಲೀಚ್ ಒಟ್ಟು 18 ವಿಕೆಟ್‌ಗಳನ್ನು ಗಳಿಸಿದ್ದರು.

‘ಭಾರತದಲ್ಲಿ ಮಾಡಿರುವ ಸಾಧನೆಯು ನನ್ನಲ್ಲಿ ಅಪಾರ ಆತ್ಮವಿಶ್ವಾಸ ಮೂಡಿಸಿದೆ. ಭಾರತದ ಆಟಗಾರರ ಎದುರು ಚೆನ್ನಾಗಿ ಬೌಲಿಂಗ್ ಮಾಡಬಲ್ಲೆ’ಎಂದು ಲೀಚ್ ಸುದ್ದಿಗಾರರ ಮುಂದೆ ವಿಶ್ವಾಸ ವ್ಯಕ್ತಪಡಿಸಿದರು.

‘ಪಿಚ್ ಸ್ವಲ್ಪ ನೆರವು ಕೊಡುವಂತಿದ್ದರೆ, ನಮ್ಮ ಕೌಶಲಕ್ಕೆ ಸ್ವಲ್ಪ ಮಟ್ಟಿಗಾದರೂ ಹೊಂದಿಕೊಳ್ಳುವಂತಿದ್ದರೆ ಬ್ಯಾಟ್ಸ್‌ಮನ್‌ಗಳನ್ನು ಕಟ್ಟಿಹಾಕುವುದು ಸುಲಭವಾಗಲಿದೆ’ ಎಂದರು.

‘ಭಾರತದಂತಹ ಬಲಿಷ್ಠ ಕ್ರಿಕೆಟ್ ತಂಡದ ಎದುರು ಐದು ಟೆಸ್ಟ್ ಪಂದ್ಯಗಳನ್ನು ಆಡುವುದು ದೊಡ್ಡ ಸವಾಲಿನ ಕೆಲಸ. ನಮ್ಮ ಸಾಮರ್ಥ್ಯದ ಅರಿವು ಈ ಸರಣಿಯಲ್ಲಿ ನಮಗೇ ಆಗಲಿದೆ’ ಎಂದರು.

‘ತಂಡದಲ್ಲಿ ನಿರಂತರ ಸ್ಥಾನ ಕಾಯ್ದುಕೊಳ್ಳಲು ಸ್ಥಿರ ಪ್ರದರ್ಶನ ತೋರುವತ್ತ ನನ್ನ ಚಿತ್ತವಿದೆ. ಅದಕ್ಕಾಗಿ ಬಹಳಷ್ಟು ಪರಿಶ್ರಮದೊಂದಿಗೆ ಹೊಸ ತಂತ್ರಗಳನ್ನು ಕಲಿತು ಅಭ್ಯಾಸ ಮಾಡುತ್ತಿದ್ದೇನೆ’ ಎಂದರು.

ಮಾನಸಿಕ ಒತ್ತಡ ನಿರ್ವಹಣೆಯ ಕುರಿತು ಮಾತನಾಡಿದ ಅವರು, ‘ ಚಿಕ್ಕ ಚಿಕ್ಕ ಕೆಲಸಗಳನ್ನು ಗಮನವಿಟ್ಟು ಸಂಪೂರ್ಣ ಏಕಾಗ್ರತೆಯೊಂದಿಗೆ ಮಾಡುತ್ತೇನೆ. ಸದ್ಯ ಭಾರತದ ಸರಣಿಯ ಮೇಲೆ ಹೆಚ್ಚು ಗಮನ ಹರಿಸಿದ್ದೇನೆ‘ ಎಂದು ಹೇಳಿದರು.

2017–19ರಲ್ಲಿ 14ರಿಂದ 18 ವಯಸ್ಸಿನೊಳಗಿನ 24,568 ಮಕ್ಕಳ ಆತ್ಮಹತ್ಯೆ

ನವದೆಹಲಿ (ಪಿಟಿಐ): 2017–19ರಲ್ಲಿ 14 ರಿಂದ 18 ವಯಸ್ಸಿನೊಳಗಿನ 13,325 ಬಾಲಕಿಯರು ಸೇರಿದಂತೆ 24,568 ಮಕ್ಕಳು ಆತ್ಮಹತ್ಯೆಗೆ ಶರಣಾಗಿದ್ದಾರೆ. ಇದರಲ್ಲಿ 4,000 ಕ್ಕೂ ಹೆಚ್ಚು ಮಕ್ಕಳು ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿದ್ದಾರೆ ಎಂಬ ಕಾರಣಕ್ಕೆ ಆತ್ಯಹತ್ಯೆ ಮಾಡಿಕೊಂಡಿದ್ದಾರೆ ಎಂದು ಸರ್ಕಾರದ ಅಂಕಿಅಂಶಗಳು ಹೇಳಿವೆ.

ಇತ್ತೀಚೆಗೆ ಸಂಸತ್ತಿನಲ್ಲಿ ಮಂಡಿಸಲಾದ ಮಕ್ಕಳ ಆತ್ಮಹತ್ಯೆಗೆ ಕುರಿತಾದ ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋದ (ಎನ್‌ಸಿಆರ್‌ಬಿ) ಅಂಕಿಅಂಶದಿಂದ ಈ ವಿಷಯ ಗೊತ್ತಾಗಿದೆ.

2017ರಲ್ಲಿ 14–18ರೊಳಗಿನ 8,029 ಮಕ್ಕಳು ಆತ್ಮಹತ್ಯೆಗೆ ಶರಣಾಗಿದ್ದರೆ, 2018ಕ್ಕೆ ಈ ಸಂಖ್ಯೆಯು 8,162 ಮತ್ತು 2019ಕ್ಕೆ 8,377ಕ್ಕೆ ಏರಿಕೆಯಾಗಿದೆ. ಮಧ್ಯಪ್ರದೇಶದಲ್ಲಿ ಅತಿ ಹೆಚ್ಚು ಮಕ್ಕಳ ಆತ್ಮಹತ್ಯೆ ಪ್ರಕರಣಗಳು ವರದಿಯಾಗಿವೆ.

ರಾಜ್ಯ ‘ಎ’ ಡಿವಿಷನ್ ಬ್ಯಾಸ್ಕೆಟ್‌ಬಾಲ್: ಮಂಗಳೂರು ತಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ಯುತ್ತಮ ಆಟವಾಡಿದ ಮಂಗಳೂರು ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡವು ಪ್ರೊ. ಪರಪ್ಪ ಸ್ಮಾರಕ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ ‘ಎ’ ಡಿವಿಷನ್ ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಪಂದ್ಯಗಳಲ್ಲಿ ಜಯ ಗಳಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಮೊದಲ ಪಂದ್ಯದಲ್ಲಿ ಮಂಗಳೂರು ಬಿಬಿಸಿ ತಂಡವು ಪ್ರನ್ವಿಲ್ ಗಳಿಸಿದ 22 ಹಾಗೂ ಅಶ್ವಿಜ್ ಅವರ 17 ಪಾಯಿಂಟ್ಸ್ ನೆರವಿನಿಂದ ಬಿಎಸ್‌ಎನ್‌ಎಲ್ ತಂಡವನ್ನು 71–49ರಿಂದ ಮಣಿಸಿತು. ಬಿಎಸ್‌ಎನ್‌ಎಲ್ ಪರ ಅಭಿನವ್ 15 ಮತ್ತು ರಾಹುಲ್ 13 ಪಾಯಿಂಟ್ಸ್ ಕಲೆಹಾಕಿದರು.

ಮತ್ತೊಂದು ಪಂದ್ಯದಲ್ಲಿ ಮಂಗಳೂರು ತಂಡವು 90–48ರಿಂದ ರಾಜ್‌ಮಹಲ್ ಬಿಸಿ ಎದುರು ಜಯಭೇರಿ ಮೊಳಗಿಸಿತು. ವಿಜೇತ ತಂಡದ ಪರ ಅಶ್ವಿಜ್ 40 ಮತ್ತು ಜೇಮ್ಸ್ 23 ಪಾಯಿಂಟ್ಸ್ ಗಳಿಸಿದರು. ರಾಜ್‌ಮಹಲ್ ತಂಡದ ಕಾರ್ತಿಕ್ (24 ಪಾಯಿಂಟ್ಸ್) ಮತ್ತು ರಮೇಶ್ (12) ಮಿಂಚಿದರು.

ರೈಸಿಂಗ್ ಸ್ಟಾರ್ ಮೈಸೂರು ತಂಡವು ಕಣಕ್ಕಿಳಿಯದ ಕಾರಣ ರಾಜಮಹಲ್ ಬಿಸಿ ಮತ್ತು ಬಿಎಸ್‌ಎನ್‌ಎಲ್ ತಂಡಗಳಿಗೆ ವಾಕ್‌ಓವರ್ ಸಿಕ್ಕಿತು.

ಬುಡಾಪೆಸ್ಟ್‌ನಲ್ಲಿ ಭಾನುವಾರ ನಡೆದ ಹಂಗೇರಿಯನ್ ಫಾರ್ಮುಲಾ ಒನ್ ಗ್ರ್ಯಾನ್‌ಪ್ರಿಯಲ್ಲಿ ಪ್ರಶಸ್ತಿ ವಿಜೇತ ಫ್ರಾನ್ಸ್‌ನ ಎಸ್ತೆಬಾನ್ ಒಕಾನ್ (ಎಡದಿಂದ ಮೂರನೆಯವರು), ಎರಡನೇ ಸ್ಥಾನ ಗಳಿಸಿದ ಜರ್ಮನಿಯ ಸೆಬಾಸ್ಟಿಯನ್ ವೆಟಲ್, ತಂತ್ರಜ್ಞ, ಮೂರನೇ ಸ್ಥಾನ ಗಳಿಸಿದ ಲೂಯಿಸ್ ಹ್ಯಾಮಿಲ್ಟನ್– ಎಎಫ್‌ಪಿ ಚಿತ್ರ

ಬ್ಲ್ಯಾಕ್ ಪ್ಯಾಂಥರ್ಸ್ ತಂಡಕ್ಕೆ ಜಯ

ಬೆಂಗಳೂರು: ಅಮೋಘ ಆಟವಾಡಿದ ಬ್ಲ್ಯಾಕ್ ಪ್ಯಾಂಥರ್ಸ್ ತಂಡದವರು ಕೆಎಸ್‌ಎಫ್‌ಎ–ಬಿಡಿಎಫ್‌ಎ ಸಿ ಡಿವಿಷನ್ ನಾಕೌಟ್ ಫುಟ್‌ಬಾಲ್ ಟೂರ್ನಿಯಲ್ಲಿ ಭರ್ಜರಿ ಜಯ ಗಳಿಸಿದರು. ಭಾನುವಾರ ನಡೆದ ಪಂದ್ಯದಲ್ಲಿ ಆ ತಂಡವು 4–1ರಿಂದ ಶಾಂತಿನಗರ ಎಫ್‌ಸಿ ಎದುರು ಜಯಿಸಿತು.

ಎದುರಾಳಿ ತಂಡದ ಪವನ್ ಅವರು ಪಂದ್ಯದ ಎರಡನೇ ನಿಮಿಷದಲ್ಲಿ ಉಡುಗೊರೆ ಗೋಲು ನೀಡುವುದರೊಂದಿಗೆ ಬ್ಲ್ಯಾಕ್ ಪ್ಯಾಂಥರ್ಸ್ ತಂಡವು ಖಾತೆ ತೆರೆಯಿತು. ವಿಜೇತ ತಂಡದ ಪ್ರವೇಶ್ (10ನೇ ನಿಮಿಷ), ಲುಮಿನ್ ರೊಮಾರಿಯೊ (31ನೇ ನಿಮಿಷ) ಮತ್ತು ವಾಂಗ್ (41ನೇ ನಿಮಿಷ) ಗೋಲು ದಾಖಲಿಸಿದರು. ಶಾಂತಿನಗರ ತಂಡದ ಪರ ಅಜಯ್ (50ನೇ ನಿಮಿಷ) ಗೋಲು ದಾಖಲಿಸಿದರು.

ಮತ್ತೊಂದು ಪಂದ್ಯದಲ್ಲಿ ಬೆಂಗಳೂರು ಸೂಪರ್ ಸ್ಟ್ರೈಕರ್ ತಂಡವು 4–1ರಿಂದ ಮರ್ಫಿ ಟೌನ್ ಎಫ್‌ಸಿಯನ್ನು ಮಣಿಸಿತು. ವಿಜೇತ ತಂಡದ ದಿನೇಶ್ (12 ಮತ್ತು 53ನೇ ನಿಮಿಷ) ಎರಡು ಗೋಲು ಹೊಡೆದರು. ಪ್ರತಿಭನ್ (28ನೇ ನಿ.) ಹಾಗೂ ಯಶವಂತ್ (50ನೇ ನಿ.) ಕಾಲ್ಚಳಕ ತೋರಿದರು.

ಇನ್ನೊಂದು ಪಂದ್ಯದಲ್ಲಿ ಮಹೇಶ್ ಎಫ್‌ಸಿ ತಂಡವು 2–1ರಿಂದ ಸ್ಪೋರ್ಟ್ಸ್‌ಹುಡ್ ಎದುರು ಜಯಿಸಿತು.

ಬಿಸಿಸಿಐ ಕಾರ್ಯನಿರ್ವಹಣಾಧಿಕಾರಿ: ಶೀಘ್ರ ನೇಮಕ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಗೆ ಶೀಘ್ರವೇ ನೂತನ ಕಾರ್ಯನಿರ್ವಹಣಾಧಿಕಾರಿಯನ್ನು ನೇಮಿಸಲಾಗುತ್ತದೆ ಎಂದು ಮಂಡಳಿಯ ಮೂಲಗಳು ಭಾನುವಾರ ತಿಳಿಸಿವೆ. ರಾಹುಲ್ ಜೊಹ್ರಿ ಅವರಿಂದ ತೆರವಾದ ಸ್ಥಾನಕ್ಕೆ ನೇಮಕ ನಡೆಯಲಿದೆ.

ಪೂರ್ಣಪ್ರಮಾಣದ ಕಾರ್ಯನಿರ್ವಹಣಾಧಿಕಾರಿ ಹುದ್ದೆಗೆ ನೇಮಕ ಸೇರಿದಂತೆ ಹಲವು ವಿಷಯಗಳನ್ನು ಚರ್ಚಿಸುವ ಸಂಬಂಧ ಬಿಸಿಸಿಐ ಪದಾಧಿಕಾರಿಗಳ ಸಭೆ ಭಾನುವಾರ ನಡೆಯಿತು. ಸಭೆಯಲ್ಲಿ ಅಧ್ಯಕ್ಷ ಸೌರವ್ ಗಂಗೂಲಿ, ಕಾರ್ಯದರ್ಶಿ ಜಯ್ ಶಾ, ಉಪಾಧ್ಯಕ್ಷ, ರಾಜೀವ್ ಶುಕ್ಲಾ, ಖಜಾಂಚಿ ಅರುಣ್ ಧುಮಾಲ್, ಜಂಟಿ ಕಾರ್ಯದರ್ಶಿ ಜಯೇಶ್ ಜಾರ್ಜ್ ಭಾಗವಹಿಸಿದ್ದರು.

ಸದ್ಯ, ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕಾರ್ಯಚಟುವಟಿಕೆಗಳ ಮುಖ್ಯಸ್ಥರಾಗಿರುವ ಹೇಮಂಗ್ ಅಮಿನ್ ಅವರು ಬಿಸಿಸಿಐಗೆ ಹಂಗಾಮಿ ಕಾರ್ಯನಿರ್ವಹಣಾಧಿಕಾರಿ ಆಗಿದ್ದಾರೆ.

ಪ್ರಜಾವಾಣಿ

ಕ್ಯಾಚ್ ಇಟ್.. ಕ್ರೀಡಾ ಕಥೆಗಳು

ಮೀರಾಬಾಯಿ ಚಾನು ಮತ್ತು ಅಮ್ಮನ ಪ್ರೀತಿ

ಟೋಕಿಯೊ ಒಲಿಂಪಿಕ್ಸ್ ಬೆಳ್ಳಿಪದಕ ವಿಜೇತ ಮೀರಾಬಾಯಿ 13 ವರ್ಷಗಳ ಹಿಂದೆಯೇ ವೇಟ್‌ಲಿಫ್ಟಿಂಗ್ ಬಿಟ್ಟುಬಿಡಲು ಯೋಚಿಸಿದ್ದರು. ಆದರೆ, ಅವರ ತಾಯಿ ಕೊಟ್ಟ ಪರಿಹಾರವೇನು ಗೊತ್ತೆ?

ಇಲ್ಲಿದೆ ನೋಡಿ...

QR ಕೋಡ್ ಸ್ಕ್ಯಾನ್ ಮಾಡಿ

ಮಧ್ಯಪ್ರದೇಶ: ಭಾರಿಮಳೆ– 6 ಜನರ ಸಾವು

ನವದೆಹಲಿ (ಪಿಟಿಐ): ಮಧ್ಯಪ್ರದೇಶದಲ್ಲಿ ಭಾನುವಾರ ಭಾರಿ ಮಳೆಯಾಗಿದೆ. ಮನೆಗಳು ಕುಸಿತದ ಎರಡು ಪ್ರತ್ಯೇಕ ಘಟನೆಗಳಲ್ಲಿ 6 ಜನರು ಮೃತಪಟ್ಟು, ನಾಲ್ವರು ಗಾಯಗೊಂಡಿದ್ದಾರೆ.

ರಾಜಸ್ಥಾನದಲ್ಲಿ ಸಹ ಪ್ರವಾಹ ಪರಿಸ್ಥಿತಿ ಉಂಟಾಗಿದೆ. ಈ ಎರಡು ರಾಜ್ಯಗಳಲ್ಲಿ ಸೋಮವಾರ ಭಾರಿ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಎಚ್ಚರಿಸಿದೆ. ಈ ಹಿನ್ನೆಲೆಯಲ್ಲಿ ‘ರೆಡ್ ಅಲರ್ಟ್’ ಘೋಷಿಸಲಾಗಿದೆ.

ಬೆದರಿಕೆಯ ಮಾತು ಸಹಿಸುವುದಿಲ್ಲ: ಠಾಕ್ರೆ

ಮುಂಬೈ (ಪಿಟಿಐ): ‘ಬೆದರಿಕೆಯ ಮಾತುಗಳನ್ನು ನಾವು ಎಂದಿಗೂ ಸಹಿಸುವುದಿಲ್ಲ. ಅದಕ್ಕೆ ತಕ್ಕುದಾದ ರೀತಿಯಲ್ಲಿಯೇ ಪ್ರತ್ಯುತ್ತರ ಕೊಡುತ್ತೇವೆ’ ಎಂದು ಮಹಾರಾಷ್ಟ್ರದ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರು ಹೇಳಿದ್ದಾರೆ.

ಅಗತ್ಯ ಬಿದ್ದರೆ ಮುಂಬೈ ಸೆಂಟ್ರಲ್‌ನಲ್ಲಿ ಇರುವ ಶಿವಸೇನಾದ ಕೇಂದ್ರ ಕಚೇರಿ ಸೇನಾ ಭವನ್ ಅನ್ನೂ ಕೆಡವಲಾಗುವುದು ಎಂಬುದಾಗಿ ಬಿಜೆಪಿ ಶಾಸಕ ಪ್ರಸಾದ್ ಲಾಡ್ ಹೇಳಿದ್ದರು ಎನ್ನಲಾಗಿದೆ. ಅವರ ಹೇಳಿಕೆಗೆ ಠಾಕ್ರೆ ಕಠಿಣವಾಗಿ ಪ್ರತಿಕ್ರಿಯಿಸಿದ್ದಾರೆ. ನಂತರ, ಮಾತನಾಡಿರುವ ಲಾಡ್, ‘ನನ್ನ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಲಾಗಿದೆ’ ಎಂದು ವಿಷಾದಿಸಿದ್ದಲ್ಲದೇ, ತಮ್ಮ ಹೇಳಿಕೆಯನ್ನು ವಾಪಸ್ ಪಡೆದಿದ್ದಾರೆ.

ಲಾಡ್ ಅವರು ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕ ದೇವೇಂದ್ರ ಫಡಣವೀಸ್ ಅವರ ಆಪ್ತವಲಯದಲ್ಲಿ ಗುರುತಿಸಿಕೊಂಡಿದ್ದಾರೆ.

‘ದಬಾಂಗ್’ ಚಿತ್ರದ ‘ತಪ್ಪಡ್ ಸೇ ಡರ್ ನಹೀ ಲಗ್ತಾ’ ಎಂಬ ಸಂಭಾಷಣೆ ಉಲ್ಲೇಖಿಸಿರುವ ಉದ್ಧವ್, ‘ಕಪಾಳಕ್ಕೆ ಹೊಡೆದರೆ ನಾವು ಹೆದರುವುದಿಲ್ಲ. ಹೊಡೆದವರು ನೆಲಕಚ್ಚುವಂತೆ ಪ್ರತಿಯಾಗಿ ಕಪಾಳಕ್ಕೆ ಬಾರಿಸುತ್ತೇವೆ’ ಎಂದು ಹೇಳಿದ್ದಾರೆ.

ವಸತಿ ಪುನರ್ವಸತಿ ಯೋಜನೆಗಳ ಸಂದರ್ಭದಲ್ಲಿ ಮರಾಠಿ ಸಂಸ್ಕೃತಿಯನ್ನು ರಕ್ಷಿಸಬೇಕು. ಮರಾಠಿ ಸಂಸ್ಕೃತಿಯ ಇತಿಹಾಸದಲ್ಲಿ ಸಂಯುಕ್ತ ಮಹಾರಾಷ್ಟ್ರ ಆಂದೋಲನದಲ್ಲಿ ಹೋರಾಡಿದವರ ಹೆಜ್ಜೆಗಳಿವೆ’ ಎಂದರು.

ಭಾರತಕ್ಕೆ ವಿಶ್ವಸಂಸ್ಥೆ ಭದ್ರತಾ ಮಂಡಳಿಯ ಅಧ್ಯಕ್ಷ ಸ್ಥಾನ

ಜೈಶಂಕರ್

ನವದೆಹಲಿ (ಪಿಟಿಐ): ‘ಭಾರತ ಎಂದಿಗೂ ಮಿತಭಾಷಿಯಾಗಿದ್ದು, ಮಾತುಕತೆಗೆ ಆದ್ಯತೆ ನೀಡಲಿದೆ ಹಾಗೂ ಅಂತರಾಷ್ಟ್ರೀಯ ಕಾಯ್ದೆಯನ್ನು ಮುಖ್ಯವಾಗಿ ಪ್ರತಿಪಾದಿಸಲಿದೆ’ ಎಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ಭಾನುವಾರ ಹೇಳಿದರು.

ಆಗಸ್ಟ್ ತಿಂಗಳಿಗೆ ಅನ್ವಯಿಸಿ ಭಾರತ ವಿಶ್ವಸಂಸ್ಥೆ ಭದ್ರತಾ ಮಂಡಳಿಯ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡ ಬಳಿಕ ಅವರು ಈ ಮಾತು ಹೇಳಿದರು. ಅಂತರರಾಷ್ಟ್ರೀಯ ಮಟ್ಟದಲ್ಲಿ ಶಾಂತಿ ಸ್ಥಾಪನೆ ಹಾಗೂ ಭದ್ರತೆಯ ದೃಷ್ಟಿಯಿಂದ ಜವಾಬ್ದಾರಿಯುತವಾಗಿ, ಸೇರ್ಪಡೆಯುಕ್ತ ಪರಿಹಾರಕ್ರಮಗಳ ಜಾರಿಗೆ ಒತ್ತು ನೀಡಲಾಗುವುದು ಎಂದೂ ಭಾರತವು ಭರವಸೆ ನೀಡಿದೆ.

‘ವಿಶ್ವಸಂಸ್ಥೆ ಭದ್ರತಾ ಮಂಡಳಿಯ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡ ಸಂದರ್ಭದಲ್ಲಿ ಸದಸ್ಯ ರಾಷ್ಟ್ರಗಳಲ್ಲಿ ಉತ್ಪಾದಕತೆ ವೃದ್ಧಿಯನ್ನು ಭಾರತ ನಿರೀಕ್ಷಿಸಲಿದೆ’ ಎಂದು ಜೈಶಂಕರ್ ಅವರು ಟ್ವೀಟ್ ಮಾಡಿದ್ದಾರೆ.

ವಿದೇಶಾಂಗ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ, ‘ಇದೊಂದು ಸ್ಮರಣಾರ್ಹ ದಿನ’ ಎಂದು ಬಣ್ಣಿಸಿದ್ದಾರೆ. ವಿಶ್ವಸಂಸ್ಥೆ ಭದ್ರತಾ ಮಂಡಳಿಯ ಶಾಶ್ವತಯೇತರ ಸದಸ್ಯನಾಗಿ ಇದು ಭಾರತದ ಏಳನೇ ಅವಧಿಯಾಗಿದೆ.

ಪ್ರಧಾನಿ ಅಧ್ಯಕ್ಷತೆ?: ಭಾರತದ ಅಧ್ಯಕ್ಷತೆಯಲ್ಲಿ ವಿಶ್ವಸಂಸ್ಥೆ ಭದ್ರತಾ ಮಂಡಳಿಯ ಮೊದಲ ಸಭೆ ಆ. 9ರಂದು ನಡೆಯಲಿದ್ದು, ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆ ವಹಿಸುವ ಸಂಭವವಿದೆ.

ವರ್ಚ್ಯುಯೆಲ್ ಸ್ವರೂಪದಲ್ಲಿ ನಡೆಯುವ ಮೊದಲ ಸಭೆ ಅಧ್ಯಕ್ಷತೆಯನ್ನು ಪ್ರಧಾನಿಯವರೇ ವಹಿಸಬಹುದು ಎಂದು ಹಿಂದೆ ಭಾರತದ ಶಾಶ್ವತ ಪ್ರತಿನಿಧಿಯಾಗಿದ್ದ ಸಯ್ಯದ್ ಅಕ್ಬರುದ್ದೀನ್ ಟ್ವೀಟ್ ಮಾಡಿದ್ದಾರೆ.

ನಿಗದಿತ ಅವಧಿಗೆ ನಡೆಯದ ಸಂಸತ್ ಕಲಾಪ: ₹133 ಕೋಟಿ ತೆರಿಗೆ ಹಣ ವ್ಯರ್ಥ

ನವದೆಹಲಿ: ವಿರೋಧ ಪಕ್ಷಗಳ ತೀವ್ರ ಪ್ರತಿಭಟನೆಗಳ ಹಿನ್ನೆಲೆಯಲ್ಲಿ ಸಂಸತ್‌ನ ಮುಂಗಾರು ಅಧಿವೇಶನವು ಅತ್ಯಲ್ಪ ಅವಧಿಗೆ ಸೀಮಿತಗೊಂಡಿದೆ. ಹೀಗಾಗಿ ₹133 ಕೋಟಿ ರೂಪಾಯಿ ತೆರಿಗೆದಾರರ ಹಣ ನಷ್ಟವಾಗಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಜುಲೈ 19ರಂದು ಆರಂಭವಾದ ಮುಂಗಾರು ಅಧಿವೇಶನದಲ್ಲಿ ಕಾಂಗ್ರೆಸ್ ಸೇರಿದಂತೆ ವಿರೋಧ ಪಕ್ಷಗಳು ಪೆಗಾಸಸ್ ಸೇರಿದಂತೆ ಹಲವು ಸಮಸ್ಯೆಗಳನ್ನು ಮುಂದಿಟ್ಟು ಸಂಸತ್‌ನಲ್ಲಿ ಪ್ರತಿಭಟನೆ ನಡೆಸುತ್ತಿವೆ. ಹೀಗಾಗಿ ಒಟ್ಟು 107 ಗಂಟೆಗಳ ಅಧಿವೇಶನವು ಕೇವಲ 18ಗಂಟೆಗಳಿಗೆ ಸೀಮಿತವಾಗಿದೆ. ಈವರೆಗೆ 89 ಗಂಟೆಗಳ ಅಧಿವೇಶನ ಅವಧಿ ವ್ಯರ್ಥವಾಗಿದೆ. ಆಗಸ್ಟ್ 13ರಂದು ಅಧಿವೇಶನ ಅಂತ್ಯಗೊಳ್ಳಲಿದೆ.

ಅಧಿಕೃತ ಮೂಲಗಳು ಹಂಚಿಕೊಂಡ ವಿವರಗಳ ಪ್ರಕಾರ, ರಾಜ್ಯಸಭೆಯು ನಿಗದಿತ ಸಮಯದ ಶೇ. 21ರಷ್ಟು ಕಾರ್ಯನಿರ್ವಹಿಸಿದ್ದರೆ, ಲೋಕಸಭೆಯಲ್ಲಿ ಶೇಕಡಾ 13 ಕ್ಕಿಂತ ಕಡಿಮೆ ಅವಧಿಗೆ ಕಲಾಪ ನಡೆದಿದೆ.

‘ಲೋಕಸಭೆಯು ಒಟ್ಟು 54 ಗಂಟೆಗಳಲ್ಲಿ ಕೇವಲ ಏಳು ಗಂಟೆಗಳ ಕಾಲ ಮಾತ್ರ ಕಾರ್ಯನಿರ್ವಹಿಸಿದೆ. ರಾಜ್ಯಸಭೆಯು 53 ಗಂಟೆಗಳಲ್ಲಿ 11 ಗಂಟೆ ನಡೆದಿದೆ. ನಿರೀಕ್ಷಿತ ಅವಧಿಗೆ ಅಧಿವೇಶನ ನಡೆಯದ ಹಿನ್ನೆಲೆಯಲ್ಲಿ ಸರ್ಕಾರದ ಬೊಕ್ಕಸಕ್ಕೆ 133 ಕೋಟಿಗೂ ಹೆಚ್ಚು ನಷ್ಟಕ್ಕೆ ಉಂಟಾಗಿದೆ.

ಕಲಾಪ ಸಾಂಗವಾಗಿ ನಡೆಯದೇ ಇರುವುದಕ್ಕೆ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳು ಪರಸ್ಪರ ದೂಷಿಸಿಕೊಂಡಿವೆ.

ಬಹಾವಲಪುರದ ‘ಸುರಕ್ಷಿತ ತಾಣ’ದಲ್ಲಿ ಮಸೂದ್ ಅಜರ್’



ಮಸೂದ್ ಅಜರ್

ನವದೆಹಲಿ (ಪಿಟಿಐ): ಹಲವಾರು ಭಯೋತ್ಪಾದನಾ ಕೃತ್ಯಗಳಿಗೆ ಸಂಬಂಧಿಸಿ ಭಾರತಕ್ಕೆ ಬೇಕಾಗಿರುವ ಉಗ್ರ ಮಸೂದ್ ಅಜರ್, ಪಾಕಿಸ್ತಾನದ ಬಹಾವಲಪುರದ ಜನನಿಬಿಡ ಪ್ರದೇಶದಲ್ಲಿ ವಾಸಿಸುತ್ತಿದ್ದಾನೆ ಎಂದು ಹಿಂದಿ ಸುದ್ದಿವಾಹಿನಿ ‘ಟೈಮ್ಸ್ ನೌ ನವಭಾರತ್’ ವರದಿ ಮಾಡಿದೆ.

ಇದೇ ಕಾರಣಕ್ಕಾಗಿ, ಒಸಾಮ ಬಿನ್ ಲಾಡೆನ್ ಹತ್ಯೆಗಾಗಿ ಅಮೆರಿಕ ನಡೆಸಿದಂಥ ಕಾರ್ಯಾಚರಣೆ ಈಗ ಸಾಧ್ಯವಿಲ್ಲ ಎಂದು ವಾಹಿನಿ ವರದಿ ಮಾಡಿದೆ.

‘ಬಹಾವಲಪುರದಲ್ಲಿ ಅಜರ್ ಎರಡು ಮನೆಗಳನ್ನು ಹೊಂದಿದ್ದಾನೆ. ಉಸ್ಮಾನ್–ಒ–ಅಲಿ ಮಸೀದಿ ಪಕ್ಕ ಒಂದು ಮನೆ ಇದ್ದರೆ, ಮತ್ತೊಂದು ಮನೆ ನ್ಯಾಷನಲ್ ಆರ್ಥೋಪೆಡಿಕ್ ಆ್ಯಂಡ್ ಜನರಲ್ ಹಾಸ್ಪಿಟಲ್ ಪಕ್ಕ ಇದೆ. ಸೈನಿಕರು ಈತನ ಮನೆಗೆ ಕಾವಲಿದ್ದಾರೆ. ಈ ಬಗ್ಗೆ ಖಚಿತವಾದ ದೃಶ್ಯ ಸಾಕ್ಷ್ಯಗಳು ತಮಗೆ ದೊರೆತಿವೆ’ ಎಂದು ಚಾನೆಲ್ ಹೇಳಿದೆ.

ಮಣಿಪುರ ಕಾಂಗ್ರೆಸ್‌ನ ಮಾಜಿ ಅಧ್ಯಕ್ಷ ಬಿಜೆಪಿಗೆ

ನವದೆಹಲಿ: ಮಣಿಪುರದ ಕಾಂಗ್ರೆಸ್‌ನ ಮಾಜಿ ಅಧ್ಯಕ್ಷ ಗೋವಿಂದಾಸ್ ಕೋಂಥೂಜಾಮ್ ಅವರು ಭಾನುವಾರ ಬಿಜೆಪಿಗೆ ಸೇರ್ಪಡೆಯಾದರು. ದೆಹಲಿಯ ಬಿಜೆಪಿ ಪ್ರಧಾನ ಕಚೇರಿಯಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಮಣಿಪುರ ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್, ರಾಜ್ಯಸಭಾ ಸಂಸದ ಅನಿಲ್ ಬಲೂನಿ ಮತ್ತು ರಾಜ್ಯದ ಉಸ್ತುವಾರಿ ಸಂಬಿತ್ ಪಾತ್ರಾ ಅವರ ಸಮ್ಮುಖದಲ್ಲಿ ಗೋವಿಂದಾಸ್ ಬಿಜೆಪಿಗೆ ಸೇರಿದ್ದಾರೆ.

ಅನಿಲ ಹೊರಸೂಸುವಿಕೆ: ನಿಗದಿತ ಗಡುವಿನೊಳಗೆ ವರದಿ ಸಲ್ಲಿಸದ ಭಾರತ

ಬರ್ಲಿನ್ (ಎಪಿ): ಹಸಿರು ಮನೆ ಅನಿಲ ಹೊರಸೂಸುವಿಕೆ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಕೈಗೊಳ್ಳುವ ಹೊಸ ಯೋಜನೆಗಳ ಕುರಿತ ವರದಿಯನ್ನು ಚೀನಾ ಮತ್ತು ಭಾರತ ದೇಶಗಳು ನಿಗದಿತ ಗಡುವಿನೊಳಗೆ ಸಲ್ಲಿಸುವಲ್ಲಿ ವಿಫಲವಾಗಿವೆ ಎಂದು ವಿಶ್ವಸಂಸ್ಥೆಯ ಹವಾಮಾನ ಬದಲಾವಣೆಯ ಏಜೆನ್ಸಿ ತಿಳಿಸಿದೆ.

ವಿಶ್ವದ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಈ ಎರಡೂ ದೇಶಗಳು ಭೂಮಿಯ ತಾಪಮಾನ ಕಡಿಮೆಗೊಳಿಸುವುದಕ್ಕೆ ಪೂರಕವಾಗಿ ತಮ್ಮ ಪರಿಷ್ಕೃತ ಗುರಿಗಳನ್ನು ಸಲ್ಲಿಸುವಲ್ಲಿ ವಿಫಲವಾಗಿವೆ ಎಂದು ಅದು ಶನಿವಾರ ತಿಳಿಸಿದೆ.

ವಿಶ್ವದಲ್ಲಿ ಅತಿ ಹೆಚ್ಚು ಅನಿಲ ಹೊರಸೂಸುವಿಕೆ ಹೊಂದಿರುವ ದೇಶ ಚೀನಾ ಆಗಿದ್ದರೆ, ಅಮೆರಿಕ ಎರಡು ಮತ್ತು ಭಾರತ ಮೂರನೇ ಸ್ಥಾನದಲ್ಲಿದೆ. ಅಮೆರಿಕ ಏಪ್ರಿಲ್‌ನಲ್ಲಿ ತನ್ನ ಹೊಸ ಗುರಿಯ ಯೋಜನೆಗಳ ವರದಿಯನ್ನು ಸಲ್ಲಿಸಿದೆ.

ಭದ್ರತಾ ತಾಣಗಳ ಮೇಲೆ ದಾಳಿ ಪಾಕ್‌ನ ಇಬ್ಬರು ಯೋಧರ ಸಾವು

ಪೆಶಾವರ (ಪಿಟಿಐ): ಇಲ್ಲಿನ ದಕ್ಷಿಣ ಮತ್ತು ಉತ್ತರ ವಾಜಿರಿಸ್ತಾನದ ಜಿಲ್ಲೆಗಳಲ್ಲಿ ಮೂರು ಭದ್ರತಾ ತಾಣಗಳ ಮೇಲೆ ಉಗ್ರರು ಗುಂಡುಹಾರಿಸಿದ್ದು, ಪಾಕ್‌ನ ಇಬ್ಬರು ಯೋಧರು ಮೃತಪಟ್ಟಿದ್ದಾರೆ. ಇತರೆ ಒಂಬತ್ತು ಮಂದಿ ಗಾಯಗೊಂಡಿದ್ದಾರೆ.

ದಕ್ಷಿಣ ವಾಜಿರಿಸ್ತಾನದ ಶಾವಾಲ್ ವಲಯದಲ್ಲಿ ಮೊದಲಿಗೆ ದಾಳಿ ನಡೆದಿದ್ದು, ಒಬ್ಬ ಯೋಧ ಮೃತಪಟ್ಟು ಇತರೆ ಇಬ್ಬರು ಗಾಯಗೊಂಡರು. ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಡಾನ್ ಪತ್ರಿಕೆ ವರದಿ ಮಾಡಿದೆ. ದಕ್ಷಿಣ ವಾಜಿರಿಸ್ತಾನದ ಜಿಲ್ಲೆಯ ಎರಡು ಕಡೆ ದಾಳಿ ನಡೆದಿದ್ದು ಒಬ್ಬ ಯೋಧರು ಮೃತಪಟ್ಟಿದ್ದು, ಇತರೆ ಏಳು ಮಂದಿ ಗಾಯಗೊಂಡರು. ವರದಿ ಪ್ರಕಾರ, ಸುಧಾರಿತ ಸ್ಫೋಟಕ ಸಾಧನವನ್ನು ಬಳಸಲಾಗಿತ್ತು. ಲಾಧಾ ಬಳಿ ಭದ್ರತಾ ಸಿಬ್ಬಂದಿ ಕೂಡಾ ಪ್ರತಿರೋಧ ತೋರಿ ಗುಂಡು ಹಾರಿಸಿದರು ಎಂದು ತಿಳಿಸಿವೆ.